ಗುರುವಾರ, ಏಪ್ರಿಲ್ 30, 2026| ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಮಳೆಯಿಂದ ರಕ್ಷಣೆ



ಮಳೆಯಿಂದ ರಕ್ಷಣೆ ಪಡೆಯಲು ಅಸ್ಸಾಂನ ಮೋರಿಗಾಂವ್ ಜಿಲ್ಲೆಯಲ್ಲಿ ಬಾಳೆ ಎಲೆಯನ್ನೇ ತಲೆ ಮೇಲೆ ಹಿಡಿದುಕೊಂಡ ವ್ಯಕ್ತಿ

ಮೊದಲ ಮತ



ನಾದಿಯಾದಲ್ಲಿ ಮೊದಲ ಬಾರಿಗೆ ಮತ ಚಲಾಯಿಸಿದ ಮತದಾರರೊಬ್ಬರು ತಮ್ಮ ಬೆರಳಿಗೆ ಹಚ್ಚಿದ ಶಾಯಿ ಪ್ರದರ್ಶಿಸಿದರು



DB
Siggnature
Finest Cardamom Seeds
New Pack
GOLD & SILVER
Finest Cardamom Seeds
A Premium Product from Dilbagh
www.dbsiggnature.com
A Premium Product from Dilbagh

f prajavani.net prajavani | ಗುರುವಾರ, ಏಪ್ರಿಲ್ 30, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 119 | ಪುಟ 16 | www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ



ರಿಕೆಲ್ಟನ್ ಶತಕ ಸೊಬಗು

ಮುಂಬೈ ಇಂಡಿಯನ್ಸ್ ತಂಡದ ರಿಯಾನ್ ರಿಕೆಲ್ಟನ್ (ಅಜೇಯ 123; 55ಎಸೆತ, 4X10, 6X8) ಬುಧವಾರ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಎದುರು ಶತಕ ಗಳಿಸಿದರು

ಸೆನ್ಸೆಕ್ಸ್ 77,496 | ನಿಫ್ಟಿ 24,177 | $/₹ 93.16

ಸಮೀಕ್ಷೆ ಭವಿಷ್ಯ: ಬಂಗಾಳದಲ್ಲಿ ಜಿದ್ದಾಜಿದ್ದಿ, ತಮಿಳುನಾಡು–ಅಸ್ಸಾಂನಲ್ಲಿ ಯಥಾಸ್ಥಿತಿ

ನವದೆಹಲಿ: ವಿವಿಧ ಕಾರಣಗಳಿಂದಾಗಿ ದೇಶದ ಗಮನ ಸೆಳೆದಿದ್ದ ಐದು ರಾಜ್ಯಗಳ ವಿಧಾನಸಭೆ ಚುನಾವಣೆಗಳ ಮತದಾನೋತ್ತರ ಸಮೀಕ್ಷೆಗಳು ಬುಧವಾರ ಹೊರಬಿದ್ದಿವೆ. ಪಶ್ಚಿಮ ಬಂಗಾಳದಲ್ಲಿ 4 ಸಮೀಕ್ಷೆಗಳು ಬಿಜೆಪಿಗೆ ಸರಳ ಬಹುಮತ ನೀಡಿದ್ದರೆ, ಒಂದು ಸಂಸ್ಥೆ ನಡೆಸಿದ ಸಮೀಕ್ಷೆ ಟಿಎಂಸಿ ಮತ್ತೆ ಅಧಿಕಾರ ಹಿಡಿಯಲಿದೆ ಎಂದು ಭವಿಷ್ಯ ನುಡಿದಿದೆ. ಅಸ್ಸಾಂನಲ್ಲಿ ಮತ್ತೊಮ್ಮೆ ಕಮಲ ಅರಳಲಿದೆ ಎಂದು ಬಹುತೇಕ ಸಮೀಕ್ಷೆಗಳು ಭವಿಷ್ಯ ನುಡಿದಿದ್ದರೆ, ಕೇರಳದಲ್ಲಿ ಜನರು ಈ ಬಾರಿ ಯುಡಿಎಫ್‌ಗೆ ಮಣೆ ಹಾಕಲಿರುವುದು ನಿಚ್ಚಳ ಎಂದು ಹೇಳಿವೆ. ತಮಿಳುನಾಡಿನಲ್ಲಿ ಮತ್ತೊಮ್ಮೆ ಡಿಎಂಕೆ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ ಎಂದು ಬಹುತೇಕ ಸಮೀಕ್ಷೆಗಳು ಹೇಳಿವೆ.

ಪಶ್ಚಿಮ ಬಂಗಾಳ, ಒಟ್ಟು ಸ್ಥಾನ–294 (148)

ಸಂಸ್ಥೆ	ಟಿಎಂಸಿ	ಬಿಜೆಪಿ	ಕಾಂಗ್ರೆಸ್	ಎಡಪಕ್ಷ	ಇತರರು
ಪಿ–ಮಾರ್ಕ್	118-138	150-175	0	0	2-6
ಮ್ಯಾಟ್ರಿಜ್	125-140	146-161	0	0	6-10
ಪೀಪಲ್ಸ್ ಪಲ್ಸ್	177-187	95-110	1-3	0-1	0
ಚಾಣಕ್ಯ ಸ್ಟ್ರಾಟಜೀಸ್	130-140	150-160	0	0	6-10
ಪೋಲ್ ಡೈರಿ	99-127	142-171	3-5	2-3	0-1

ತಮಿಳುನಾಡು, ಒಟ್ಟು ಸ್ಥಾನ–234 (118)

ಸಂಸ್ಥೆ	ಡಿಎಂಕೆ+	ಎಐಎಡಿಎಂಕೆ+	ಟಿವಿಕೆ	ಇತರರು
ಪಿ–ಮಾರ್ಕ್	125-145	65-85	16-26	1-6
ಮ್ಯಾಟ್ರಿಜ್	122-132	87-110	10-12	0-6
ಪೀಪಲ್ಸ್ ಪಲ್ಸ್	125-145	65-80	18-24	2-6
ಚಾಣಕ್ಯ ಸ್ಟ್ರಾಟಜೀಸ್	145-160	50-65	0	18-26
ಆ್ಯಕ್ಸಿಸ್ ಮೈಇಂಡಿಯಾ	92-110	22-32	98-120	0

ಪುದುಚೆರಿ, ಒಟ್ಟು ಸ್ಥಾನ–30 (16)

ಸಂಸ್ಥೆ	ಬಿಜೆಪಿ+	ಕಾಂಗ್ರೆಸ್+	ಇತರರು
ಆ್ಯಕ್ಸಿಸ್ ಮೈಇಂಡಿಯಾ	16-20	6-8	3-7
ಪೀಪಲ್ಸ್ ಪಲ್ಸ್	16-19	10-12	1-2

ಪುದುಚೆರಿಯಲ್ಲಿ ಎನ್‌ಡಿಎ ಎರಡನೇ ಬಾರಿ ಗದ್ದುಗೆ ಏರಲಿದೆ ಎಂದು ಸಮೀಕ್ಷೆಗಳು ಹೇಳಿವೆ

ಕೇರಳ, ಒಟ್ಟು ಸ್ಥಾನ–140 (71)

ಸಂಸ್ಥೆ	ಎಲ್‌ಡಿಎಫ್	ಯುಡಿಎಫ್	ಬಿಜೆಪಿ+	ಇತರರು
ಪಿ–ಮಾರ್ಕ್	62-69	71-79	1-4	0-3
ಮ್ಯಾಟ್ರಿಜ್	60-65	70-75	3-5	2-4
ಪೀಪಲ್ಸ್ ಪಲ್ಸ್	55-65	75-85	0-3	0
ಆ್ಯಕ್ಸಿಸ್ ಮೈಇಂಡಿಯಾ	49-62	78-90	0-3	0
ಜೆವಿಸಿ	52-61	72-84	3-7	0

ಅಸ್ಸಾಂ, ಒಟ್ಟು ಸ್ಥಾನ–126 (64)

ಸಂಸ್ಥೆ	ಬಿಜೆಪಿ+	ಕಾಂಗ್ರೆಸ್+	ಇತರರು
ಪಿ–ಮಾರ್ಕ್	82-94	30-40	1-5
ಮ್ಯಾಟ್ರಿಜ್	85-95	25-32	6-12
ಪೀಪಲ್ಸ್ ಪಲ್ಸ್	68-72	22-26	19-28
ಆ್ಯಕ್ಸಿಸ್ ಮೈಇಂಡಿಯಾ	88-100	24-36	0-3
ಪೋಲ್ ಡೈರಿ	86-101	15-26	3-7

● ಸರಳ ಬಹುಮತ

ಏಳು ಜನರ ಜೀವ ತೆಗೆದ ಕಾಂಪೌಂಡ್

ಬೆಂಗಳೂರಿನ ಬೌರಿಂಗ್ ಆಸ್ಪತ್ರೆಯ ಬಳಿ ದುರಂತ, 9 ಮಂದಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಸಿಲಿಗೆ ಕಾದು ಬೆಂದು ಹೋದಂತಿದ್ದ ಬೆಂಗಳೂರಿಗೆ ತಂಪು ಸೂಸುವಂತೆ ಭೋರ್ಗರೆದು ಸುರಿದ ಮಳೆಯ ಸಡಗರವೇ ಮಣ್ಣುಪಾಲಾಗುವಂತೆ ನಡೆದ ಮಹಾ ದುರ್ಘಟನೆ ಒಂದು ಹೆಣ್ಣು ಕೂಸು ಸೇರಿದಂತೆ ಏಳು ಜನರ ಜೀವವನ್ನೇ ಬಲಿ ಪಡೆಯಿತು.

ಬೀದಿ ಬದಿ ಬಟ್ಟೆಯೋ, ಚಪ್ಪಲಿಯೋ ಮಕ್ಕಳ ಆಟಿಕೆಯನ್ನೋ ಮಾರಿ ಬದುಕು ಕಟ್ಟಿಕೊಂಡವರು ಮಳೆಯ ಆರ್ಭಟದ ಅರಿವಿಲ್ಲದೇ ಆಸರೆಗಾಗಿ ಗೋಡೆಗೆ ಕಟ್ಟಿದ ಟಾರ್ಪಲ್ ನೆಚ್ಚಿಕೊಂಡರು. ಇಷ್ಟು ದಿನ ಬೆನ್ನುಮೂಳೆಯಂತೆ ನೆರವಿಗೆ ನಿಂತಿದ್ದ ಶಿವಾಜಿನಗರದ ಬಸ್ ನಿಲ್ದಾಣದ ಪಕ್ಕದಲ್ಲಿರುವ ಬೌರಿಂಗ್ ಆಸ್ಪತ್ರೆಯ ಗೋಡೆಯೇ ಪ್ರಾಣವನ್ನು ತೆಗೆಯಿತು. ಬುಧವಾರ ಸಂಜೆ ನಡೆದ ಈ ದುರಂತದಲ್ಲಿ ಒಂಬತ್ತು ಮಂದಿ ಗಾಯಗೊಂಡಿದ್ದಾರೆ.

ಮೃತ ವ್ಯಾಪಾರಿಗಳ ಕುಟುಂಬಸ್ಥರನ್ನು ಮಳೆಯು ಕಣ್ಣೀರಿನಲ್ಲಿ ಮುಳುಗಿಸಿತು. ದುರಂತದಲ್ಲಿ ಮೃತಪಟ್ಟವರಲ್ಲಿ ಬೆಂಗಳೂರಿನ ಮೂವರು, ಕೇರಳದ ಇಬ್ಬರು, ಅಸ್ಸಾಂ ಹಾಗೂ ಉತ್ತರ ಪ್ರದೇಶದ ತಲಾ ಒಬ್ಬರು ಸೇರಿದ್ದಾರೆ.

▶10

ಮಳೆ ನಡುವೆ ವಿದ್ಯುತ್ ಆಘಾತ: ಇಬ್ಬರ ಸಾವು

ಯಾರಬ್ ನಗರ ಹಾಗೂ ಬನ್ನೇರುಘಟ್ಟ ರಸ್ತೆಯ ವೇಗಾ ಸಿಟಿ ಮಾಲ್ ಬಳಿ ಬುಧವಾರ ಸಂಜೆ ಸುರಿದ ಧಾರಾಕಾರ ಮಳೆ ವೇಳೆ ವಿದ್ಯುತ್ ಆಘಾತದಿಂದ ಇಬ್ಬರು ಮೃತಪಟ್ಟಿದ್ದಾರೆ.

ಯಾರಬ್ ನಗರದಲ್ಲಿ ವಿದ್ಯುತ್ ಆಘಾತದಿಂದ ವಿದ್ಯಾರ್ಥಿ ಸೈಯದ್ ಸೂಫಿಯಾನ್ ಮೃತಪಟ್ಟಿದ್ದಾನೆ.

▶3B

ಬದುಕು ಕೊಟ್ಟ ಗೋಡೆಯೇ ಜೀವ ಕಸಿದಾಗ...

● ಜಯಸಿಂಹ ಆರ್.

ಬೆಂಗಳೂರು: 'ಬದುಕು ಕಟ್ಟಿಕೊಟ್ಟ ಗೋಡೆಯೇ ಜೀವ ಕಿತ್ತುಕೊಂಡು ಬಿಟ್ಟಿತು'...

ನಗರದ ಶಿವಾಜಿನಗರದ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯ ಹಿಂಭಾಗದ ಗೋಡೆ ಕುಸಿದ ಘಟನೆಯಲ್ಲಿ, ಸ್ವಲ್ಪದರಲ್ಲೇ ಬದುಕುಳಿದ ಸುಲೇಮಾನ್‌ಖಾನ್ (78) ಅವರ ಮಾತಿದು.

ಬೌರಿಂಗ್ ಆಸ್ಪತ್ರೆಯ ಹಿಂಭಾಗದಲ್ಲಿ ರುವ ಮೀನಾಕ್ಷಿ ಗುಡಿ ಬೀದಿ ಸದಾ ಗಿಜಿಗುಡುವ ಸ್ಥಳ. ಒಂದೆಡೆ ರಸೆಲ್ ಮಾರ್ಕೆಟ್, ಸೇಂಟ್ ಬೆಸಿಲಿಕಾ ಚರ್ಚ್, ಗುಜರಿ ಬೀದಿಗೆ ಸಂಪರ್ಕ ಕಲ್ಪಿಸುವ ಮೀನಾಕ್ಷಿ ಗುಡಿ ಬೀದಿಯಲ್ಲಿ ಖರೀದಿಗೆ ಸಿಗದಿರುವ ವಸ್ತುವೇ ಇಲ್ಲ.

▶10



ಬೆಂಗಳೂರಿನಲ್ಲಿ ಬುಧವಾರ ಸಂಜೆ ಸುರಿದ ಧಾರಾಕಾರ ಮಳೆಗೆ ಶಿವಾಜಿನಗರದ ಬೌರಿಂಗ್ ಆಸ್ಪತ್ರೆಯ ಶವಾಗಾರ ಬಳಿಯ ಕಾಂಪೌಂಡ್ ಕುಸಿಯಿತು. ಜೆಸಿಬಿ ಯಂತ್ರ ಬಳಸಿ ಅವಶೇಷಗಳನ್ನು ತೆರವು ಮಾಡಲಾಯಿತು ಚಿತ್ರ:ಪುಷ್ಕರ್ ವಿ.

ತಲಾ ₹5 ಲಕ್ಷ ಪರಿಹಾರ, ಗೋಡೆ ಕುಸಿತದ ತನಿಖೆ

ಕಾಂಪೌಂಡ್ ಕುಸಿತದಿಂದ ಮೃತಪಟ್ಟವರ ಕುಟುಂಬಕ್ಕೆ ತಲಾ ₹5 ಲಕ್ಷ ಪರಿಹಾರ ನೀಡಲಾಗುವುದು ಮತ್ತು ಕುಸಿತದ ಕಾರಣಗಳನ್ನು ಪತ್ತೆ ಹಚ್ಚಲು ತನಿಖೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಅವರು, ಬಳಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳನ್ನು ಭೇಟಿ ಮಾಡಿ ಅವರ ಅಳಲು ಆಲಿಸಿದರು.

▶10

₹30 ಲಕ್ಷ ಲಂಚ: ಕೆಐಎಡಿಬಿ ಉಪವಿಭಾಗಾಧಿಕಾರಿ ಸೆರೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಭೂಸ್ವಾಧೀನಕ್ಕೆ ಒಳಪಟ್ಟ ಜಮೀನಿಗೆ ಸಂಬಂಧಿಸಿದ ವ್ಯಾಜ್ಯವೊಂದರಲ್ಲಿ ವಾದಿಗಳ ಪರವಾಗಿ ಆದೇಶ ನೀಡಲು ₹15 ಲಕ್ಷ ಲಂಚ ಪಡೆಯುತ್ತಿದ್ದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ವಿಶೇಷ ಉಪ ವಿಭಾಗಾಧಿಕಾರಿ (ಉತ್ತರ) ನಾಗಪ್ರಶಾಂತ್ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ನಗರದ ಯಲಹಂಕ ಸಮೀಪದ ಅಟ್ಟೂರು ನಿವಾಸಿ ರವಿಕುಮಾರ್. ಎಲ್ ಎಂಬುವವರ ಜಮೀನಿನ ಸ್ವಾಧೀನಕ್ಕೆ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಅಧಿಸೂಚನೆ ಹೊರಡಿಸಿತ್ತು. ಆ ಜಮೀನಿನ ಒಡೆತನಕ್ಕೆ ಸಂಬಂಧಿಸಿದಂತೆ ಮಂಡಳಿಯಲ್ಲಿ ತಕರಾರು ಅರ್ಜಿ ಸಲ್ಲಿಕೆಯಾಗಿತ್ತು.

ಆ ಪ್ರಕರಣದಲ್ಲಿ ರವಿಕುಮಾರ್ ಪರವಾಗಿ ಆದೇಶ ನೀಡಲು ನಾಗಪ್ರಶಾಂತ್ ಅವರು ₹30 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ರವಿಕುಮಾರ್ ಅವರು ಈ ಮೊದಲೇ ₹15 ಲಕ್ಷವನ್ನು ನಾಗಪ್ರಶಾಂತ್ ಅವರ ಚಾಲಕ (ಹೊರಗುತ್ತಿಗೆ) ಕುಮಾರ್ ಅವರಿಗೆ ನೀಡಿದ್ದರು. ಜತೆಗೆ ಲೋಕಾಯುಕ್ತ ಪೊಲೀಸರಿಗೆ ದೂರು ಸಲ್ಲಿಸಿದ್ದರು. ಲೋಕಾಯುಕ್ತ ಎಸ್‌ಪಿ ಶಿವಪ್ರಕಾಶ್ ದೇವರಾಜ್ ಅವರ ಮಾರ್ಗದರ್ಶನದಲ್ಲಿ ಪೊಲೀಸ್ ಅಧಿಕಾರಿಗಳು ಕಾರ್ಯಾಚರಣೆ ರೂಪಿಸಲಾಗಿತ್ತು.

ಅದರಂತೆ ರವಿ ಅವರು, ನಾಗಪ್ರಶಾಂತ್ ಅವರ ಚಾಲಕ ಕುಮಾರ್ ಅವರಿಗೆ ಬುಧವಾರ ಮತ್ತೆ ₹15 ಲಕ್ಷ ನೀಡಿದ್ದರು. ಇದೇ ವೇಳೆ ದಾಳಿ ನಡೆಸಿ, ಇಬ್ಬರನ್ನೂ ಬಂಧಿಸಲಾಯಿತು. ಆರೋಪಿಗಳು ಒಟ್ಟು ₹30 ಲಕ್ಷ ಪಡೆದಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಹಣವನ್ನು ವಶಕ್ಕೆ ಪಡೆದಿದ್ದು, ತನಿಖೆ ಮುಂದುವರಿಸಲಾಗಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಕುಲಪತಿ ಫಲಕಕ್ಕೆ ಮಸಿ

ಶಿವಮೊಗ್ಗ: ಡಿಜಿಟಲ್ ಮೌಲ್ಯಮಾಪನ ಅವೈಜ್ಞಾನಿಕವಾಗಿದೆ. ಇದರಿಂದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಅನುತ್ತೀರ್ಣರಾಗುತ್ತಿದ್ದಾರೆ. ಹಾಗೂ ಪದವಿ ಪರೀಕ್ಷೆಗಳ ಫಲಿತಾಂಶ ಪ್ರಕಟಣೆ ಹಾಗೂ ಪ್ರಮಾಣಪತ್ರ ವಿತರಣೆಯಲ್ಲಿ ವಿಳಂಬವಾಗುತ್ತಿದೆ ಎಂದು ಆರೋಪಿಸಿ ಎನ್‌ಎಸ್‌ಯುಐ ಸಂಘಟನೆ ನೇತೃತ್ವದಲ್ಲಿ ಶಂಕರಘಟ್ಟದ ಕುವೆಂಪು ವಿ.ವಿ ಆವರಣದಲ್ಲಿ ನಡೆದ ಪ್ರತಿಭಟನೆ ಹಿಂಸೆಗೆ ತಿರುಗಿತು.

ವಿವರ ▶5

ಹೊರರಾಜ್ಯದ ವಾಹನಕ್ಕೆ ತೆರಿಗೆ

ಬೆಂಗಳೂರು: ಬೇರೆ ರಾಜ್ಯಗಳಲ್ಲಿ ನೋಂದಣಿಯಾಗಿ ರಾಜ್ಯದಲ್ಲಿ ಕಾರ್ಯನಿರ್ವಹಿಸುವ ವಾಹನಗಳಿಗೆ ರಾಜ್ಯದಲ್ಲೂ ತೆರಿಗೆ ವಿಧಿಸಲು ಅವಕಾಶ ಕಲ್ಪಿಸುವ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧಾರಣೆ (ತಿದ್ದುಪಡಿ) ಕಾಯ್ದೆ ಜಾರಿಗೆ ಸರ್ಕಾರ ಮುಂದಾಗಿದೆ. ಈ ಉದ್ದೇಶಕ್ಕಾಗಿ ತರಲಾದ ಕಾಯ್ದೆಗೆ ಬುಧವಾರ ಅಧಿಸೂಚನೆ ಹೊರಡಿಸಲಾಗಿದೆ.

ವಿವರ ▶10

ವಿದ್ಯುತ್ ಬೇಡಿಕೆ ಹೆಚ್ಚಳ

ಬೆಂಗಳೂರು: ರಾಜ್ಯದಲ್ಲಿ ಬೇಸಿಗೆ ತಾಪಮಾನ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ. ಇದರಿಂದಾಗಿ ವಿದ್ಯುತ್ ಬಳಕೆಯ ಜತೆಗೆ ಬೇಡಿಕೆಯೂ ಅನಿರೀಕ್ಷಿತ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ. ಸೋಮವಾರ (ಏ. 27) ಮಧ್ಯಾಹ್ನ 3 ಗಂಟೆ ವೇಳೆಗೆ ವಿದ್ಯುತ್ ಬೇಡಿಕೆ ಪ್ರಮಾಣ 18 ಸಾವಿರ ಮೆಗಾವಾಟ್ ದಾಟಿದೆ. ಇದು 19 ಸಾವಿರ ಮೆಗಾವಾಟ್ ತಲುಪುವ ಸಾಧ್ಯತೆಯಿದೆ.

ವಿವರ ▶5

ಚಿನಕುರುಳಿ ಪ್ರಕಾಶ್ ಶೆಟ್ಟಿ



ಬುದ್ಧಿವಂತರಾಗಿ: ಇರಾನ್‌ಗೆ ಸಲಹೆ

ಬಂದೂಕು ಹಿಡಿದ ಚಿತ್ರ ಹಂಚಿಕೊಂಡ ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್(ಎಪಿ): ಪಶ್ಚಿಮ ಏಷ್ಯಾ ಯುದ್ಧವನ್ನು ಸಂಪೂರ್ಣವಾಗಿ ನಿಲ್ಲಿಸಿ, ಶಾಂತಿ ಸ್ಥಾಪಿಸುವ ನಿಟ್ಟಿನಲ್ಲಿನ ಪ್ರಯತ್ನಗಳು ಮುಂದುವರಿದಿರುವ ನಡುವೆಯೇ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್‌ಗೆ ಬುಧವಾರ ಸಲಹೆ ರವಾನಿಸಿದ್ದಾರೆ.

'ಅಣ್ವಸ್ತ್ರ ನಿಷೇಧ ಒಪ್ಪಂದಕ್ಕೆ ಹೇಗೆ ಸಹಿ ಹಾಕಬೇಕು ಎಂಬುದು ಅವರಿಗೆ ಗೊತ್ತಿಲ್ಲ. ಆದಷ್ಟು ಬೇಗ ಅವರು ಬುದ್ಧಿವಂತರಾಗಿ, ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು' ಎಂದು ಅವರು ತಮ್ಮ ಒಡೆತನದ ಸಾಮಾಜಿಕ ಮಾಧ್ಯಮ 'ಟ್ರೂಥ್ ಸೋಷಿಯಲ್'ನಲ್ಲಿ ಬರೆದುಕೊಂಡಿದ್ದಾರೆ.



ಡೊನಾಲ್ಡ್ ಟ್ರಂಪ್ ಹಂಚಿಕೊಂಡ ಚಿತ್ರ

ತಾವು ಬಂದೂಕೊಂದನ್ನು ಹಿಡಿದಿರುವ ಚಿತ್ರವನ್ನು ಕೂಡ ಈ ಪೋಸ್ಟ್‌ನೊಂದಿಗೆ ಟ್ರಂಪ್ ಹಂಚಿಕೊಂಡಿದ್ದಾರೆ.

ಹೊರ್ಮುಜ್ ಜಲಸಂಧಿಯನ್ನು ಮತ್ತೆ ಮುಕ್ತಗೊಳಿಸುವ ಸಂಬಂಧ ಇರಾನ್‌ನ ಇತ್ತೀಚಿನ ಪ್ರಸ್ತಾವವನ್ನು ಈಗಾಗಲೇ ಟ್ರಂಪ್ ತಿರಸ್ಕರಿಸಿದ್ದಾರೆ. ಜತೆಗೆ, ತನ್ನ ಅಣ್ವಸ್ತ್ರ ಕಾರ್ಯಕ್ರಮವನ್ನು ಕೈಬಿಡುವವರೆಗೂ ಇರಾನ್‌ನ ಬಂದರುಗಳ ಮೇಲೆ ವಿಧಿಸಿರುವ ದಿಗ್ಬಂಧನವನ್ನು ಮುಂದುವರಿಸಲು ಟ್ರಂಪ್ ಉದ್ದೇಶಿಸಿದ್ದಾರೆ ಎಂದು 'ವಾಲ್‌ಸ್ಟ್ರೀಟ್ ಜರ್ನಲ್' ವರದಿ ಮಾಡಿದೆ.

ಸೌಜನ್ಯಾ ಕೊಲೆ ಪ್ರಕರಣ– ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ಕೋರ್ಟ್

ಹೊಸ ತನಿಖೆ: ಅಭಿಪ್ರಾಯ ಕೇಳಿದ 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಧರ್ಮಸ್ಥಳದ ಸೌಜನ್ಯಾ ಮೇಲಿನ ಅತ್ಯಾಚಾರ ಹಾಗೂ ಕೊಲೆ ಪ್ರಕರಣದ ಮರು ತನಿಖೆ ನಡೆಸುವಂತೆ ಕೋರಿ ಸಲ್ಲಿಸಲಾದ ಅರ್ಜಿಗೆ ಸಂಬಂಧಿಸಿದಂತೆ ತೆಗೆದುಕೊಳ್ಳಲಿರುವ ಪ್ರಸ್ತಾವಿತ ಕ್ರಮಗಳ ಕುರಿತು ವಿವರವಾದ ವರದಿ ಸಲ್ಲಿಸುವಂತೆ ಕರ್ನಾಟಕ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಬುಧವಾರ ನಿರ್ದೇಶನ ನೀಡಿದೆ.

'ಪ್ರಕರಣದ ಮರು ತನಿಖೆಗೆ ಆದೇಶಿಸಬೇಕು ಹಾಗೂ ಪ್ರಕರಣದಿಂದ ಆರೋಪಿ ಸಂತೋಷ್ ರಾವ್ ಅವರನ್ನು ಖುಲಾಸೆಗೊಳಿಸಿದ ಸಿಬಿಐ ವಿಶೇಷ ನ್ಯಾಯಾಲಯದ ಆದೇಶವನ್ನು ರದ್ದುಪಡಿಸಬೇಕು' ಎಂದು ಕೋರಲಾಗಿದ್ದ ಪ್ರತ್ಯೇಕ ಅರ್ಜಿಗಳನ್ನು ಹೈಕೋರ್ಟ್ ವಜಾಗೊಳಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಸೌಜನ್ಯಾ ತಾಯಿ ಕುಸುಮಾವತಿ ಗೌಡ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಹಾಗೂ ವಿನೋದ್ ಚಂದ್ರನ್ ಅವರ ಪೀಠವು, 'ಇಂತಹ ಗಂಭೀರ ಪ್ರಕರಣದಲ್ಲಿ ನೀವು ಇಷ್ಟೊಂದು ನಿರಾಸಕ್ತಿ ತೋರುವುದು ಸರಿಯಲ್ಲ' ಎಂದು ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತು. ನೋಟಿಸ್ ನೀಡಿ ಪ್ರತಿಕ್ರಿಯೆ ಸಲ್ಲಿಸಲು ಈ ಹಿಂದೆಯೇ ಸಾಕಷ್ಟು ಕಾಲಾವಕಾಶ ನೀಡಿದ್ದರೂ ವಿವರವಾದ ವರದಿ ಸಲ್ಲಿಸಲು ವಿಳಂಬ ಮಾಡಿದ್ದು ಏಕೆ' ಎಂದು ಪೀಠ ಪ್ರಶ್ನಿಸಿತು.

'ಈ ಪ್ರಕರಣವನ್ನು ಆರಂಭದಲ್ಲಿ ಸಿಐಡಿ ತನಿಖೆ ನಡೆಸಿತ್ತು. ನಂತರ ಸಿಬಿಐ ತನಿಖೆ ನಡೆಸಿ ಆರೋಪಪಟ್ಟಿ ಸಲ್ಲಿಸಿತ್ತು' ಎಂದು ಕರ್ನಾಟಕದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಆವಿಷ್ಕಾರ್ ಸಿಂಘ್ವಿ ಅವರಿಗೆ ನಿರ್ದೇಶನ ನೀಡಿತು.

'ಈ ಪ್ರಕರಣವನ್ನು ಮತ್ತೊಮ್ಮೆ ಪರಿಶೀಲಿಸಲು ವಿಶೇಷ ತನಿಖಾ ದಳ (ಎಸ್‌ಐಟಿ) ರಚಿಸಬಹುದೇ ಎಂಬ ಬಗ್ಗೆ ಪ್ರಮಾಣಪತ್ರ ಸಲ್ಲಿಸಬೇಕು ಎಂದು ನಾವು ಬಯಸುತ್ತಿದ್ದೇವೆ. ಇತರ ಆರೋಪಿಗಳ ಪಾತ್ರಗಳನ್ನು ಪರಿಶೀಲಿಸುವ ಅವಕಾಶ ಇತ್ತು. ಈ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವನ್ನು ತಿಳಿಸಬೇಕು' ಎಂದು ಪೀಠವು ರಾಜ್ಯ ಸರ್ಕಾರಕ್ಕೆ ಸೂಚಿಸಿತು.

ಪ್ರಕರಣದ ಬಗ್ಗೆ ಸಿಬಿಐ ಮತ್ತೆ ತನಿಖೆ ನಡೆಸಬೇಕು ಎಂದು ಅರ್ಜಿದಾರರ ಪರ ವಕೀಲರು ಕೋರಿದರು. 'ಘಟನೆ ನಡೆದಿದ್ದು 2012ರಲ್ಲಿ. ಸಿಬಿಐ ತನಿಖೆಗೆ 2013ರಲ್ಲಿ ಹಸ್ತಾಂತರಿಸಲಾಗಿತ್ತು' ಎಂದು ಪೀಠ ಹೇಳಿತು.

'ಸಂತ್ರಸ್ತೆಗೆ ಸೇರಿದ ವಸ್ತುಗಳನ್ನು ಸಂರಕ್ಷಿಸಿ ಇಡಲಾಗಿದೆ. ಡಿಎನ್‌ಎ ಪರೀಕ್ಷೆ ನಡೆಸಿದರೆ ಸತ್ಯಾಂಶ ಬಯಲಿಗೆ ಬರಲಿದೆ. ನಿಜವಾದ ಆರೋಪಿಗಳು ಬೇರೆ ವ್ಯಕ್ತಿಗಳು ಎಂದು ವಿಚಾರಣಾ ನ್ಯಾಯಾಲಯವೂ ಹೇಳಿದೆ' ಎಂದು ಅರ್ಜಿದಾರರ ಪರ ವಕೀಲರು ವಾದಿಸಿದರು.

ಈ ಪ್ರಕರಣವನ್ನು ಜುಲೈ 14ರಂದು ಪರಿಗಣಿಸಲು ನ್ಯಾಯಪೀಠ ನಿರ್ಧರಿಸಿತು. 'ಉಜಿರೆಯ ಎಸ್‌ಡಿಎಂ ಕಾಲೇಜಿನ ವಿದ್ಯಾರ್ಥಿನಿ ಸೌಜನ್ಯಾ ಮೇಲೆ 2012ರಲ್ಲಿ ಅತ್ಯಾಚಾರ ನಡೆಸಿ ಕೊಲೆ ಮಾಡಲಾಗಿದೆ' ಎಂಬ ಆರೋಪದ ಈ ಪ್ರಕರಣವನ್ನು ಬೆಳ್ತಂಗಡಿ ಠಾಣಾ ಪೊಲೀಸರು ಪ್ರಾಥಮಿಕವಾಗಿ ತನಿಖೆ ನಡೆಸಿದ್ದರು.

ಸಾಕ್ಷಿಗಳಿಗೆ ರಕ್ಷಣೆ ನೀಡಿ: ಪೀಠ ತಾಕೀತು



ಪ್ರಕರಣದ ಎಲ್ಲ ಸಾಕ್ಷಿಗಳಿಗೆ ಕೂಡಲೇ ರಕ್ಷಣೆ ನೀಡಬೇಕೆಂದು ಕರ್ನಾಟಕ ಸರ್ಕಾರಕ್ಕೆ ಪೀಠ ತಾಕೀತು ಮಾಡಿದೆ. ಸಂತ್ರಸ್ತರ ಕುಟುಂಬದ ಪರವಾಗಿ ಹಾಜರಾದ ಹಿರಿಯ ವಕೀಲರಾದ ಶೋಭಾ ಗುಪ್ತಾ, ಆನಂದ್ ಸಂಜಯ್ ಎಂ. ನುಲಿ ಮತ್ತು ಶೇಖರ್ ಜಿ ದೇವಸ, 'ಪ್ರಕರಣದ ಹಲವಾರು ಸಾಕ್ಷಿಗಳು ನಿಗೂಢವಾಗಿ ಮೃತಪಟ್ಟಿದ್ದಾರೆ' ಎಂದರು. ಆಗ ಪೀಠವು, ಸಾಕ್ಷಿಗಳಿಗೆ ರಕ್ಷಣೆ ಒದಗಿಸುವಂತೆ ಸರ್ಕಾರಕ್ಕೆ ಸೂಚಿಸಿತು.

ಸೂರ್ಯೋದಯ: 6.00 ಸೂರ್ಯಾಸ್ತ : 6:34 ಚಂದ್ರೋದಯ: ಸಂ. 4:43 ಚಂದ್ರಾಸ್ತ: ಬೆ. 4:08 | ಬುಧವಾರದ ಉಷ್ಣಾಂಶ : ಗರಿಷ್ಠ 37° ಕನಿಷ್ಠ 24°

ಗುರುವಾರದ ಉಷ್ಣಾಂಶ 36° ಗರಿಷ್ಠ 20° ಕನಿಷ್ಠ | ಶುಕ್ರವಾರ 35° : 21° | ಶನಿವಾರ 35° : 21° | ಭಾನುವಾರ 35° : 23°

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಮಾನ್ಯ ಮಳೆಯಾಗುವ ಸಾಧ್ಯತೆ ಇದೆ

ಬನಶಂಕರಿ: ಸ್ಕೈವಾಕ್ ಜತೆ ಮೇಲ್ಸೇತುವೆ

ವೃತ್ತಾಕಾರದ ಬದಲು 'ಎಲ್' ಆಕಾರದ ಸ್ಕೈವಾಕ್; ದಟ್ಟಣೆ ನಿಯಂತ್ರಣಕ್ಕೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬನಶಂಕರಿ ದೇವಸ್ಥಾನ ಸಮೀಪದ ಹೊರವರ್ತುಲ ರಸ್ತೆ ಜಂಕ್ಷನ್‌ನಲ್ಲಿ ಸ್ಕೈವಾಕ್ ಜೊತೆಗೆ ಮೇಲ್ಸೇತುವೆಯನ್ನು ನಿರ್ಮಿಸುವ ಸ್ಥಳೀಯರ ಒತ್ತಾಯಕ್ಕೆ ಸ್ಪಂದನೆ ದೊರೆತಿದೆ.


ಬನಶಂಕರಿ ದೇವಸ್ಥಾನದ ಜಂಕ್ಷನ್‌ನಲ್ಲಿ ವೃತ್ತಾಕಾರದ ಸ್ಕೈವಾಕ್ ಯೋಜನೆಯನ್ನು ಬದಲಿಸಿ, ಮೇಲ್ಸೇತುವೆ ನಿರ್ಮಿಸಲು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚಿಸಿದ್ದಾರೆ.

ದೇವಸ್ಥಾನ ಸಮಿತಿ ಸದಸ್ಯರು ಹಾಗೂ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರ ಮನವಿಗೆ ಸ್ಪಂದಿಸಿರುವ ಶಿವಕುಮಾರ್, 'ಬನಶಂಕರಿ ದೇವಾಲಯ ಜಂಕ್ಷನ್‌ನಲ್ಲಿ ವಾಹನಗಳ ಸಂಚಾರ ದಟ್ಟಣೆ ಹೆಚ್ಚಾಗಿರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿದೆ. ಈ ಜಂಕ್ಷನ್‌ನಲ್ಲಿ ಸುಗಮ ಸಂಚಾರಕ್ಕೆ ಅನುವಾಗುವಂತೆ ಮೇಲ್ಸೇತುವೆ ಹಾಗೂ ಸ್ಕೈವಾಕ್ ನಿರ್ಮಾಣ ಮಾಡಬೇಕು. ಇದನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಜಿಬಿಎ ಮುಖ್ಯ ಆಯುಕ್ತ, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದು ನಿರ್ದೇಶಿಸಿದ್ದಾರೆ.

ಬನಶಂಕರಿ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ಉಂಟಾಗುತ್ತಿರುವ ಬಗ್ಗೆ ಸ್ಥಳ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ, ಕನಕಪುರ ರಸ್ತೆ–ಬನಶಂಕರಿ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ನಿವಾರಿಸಲು 2.5 ಕಿ.ಮೀ ಮೇಲ್ಸೇತುವೆ ನಿರ್ಮಾಣ ಮಾಡಲು ಡಿ.ಕೆ. ಶಿವಕುಮಾರ್ ಅವರು ಅಂದಿನ ಬಿಬಿಎಂಪಿ ಅಧಿಕಾರಿಗಳಿಗೆ 2023ರ ಆಗಸ್ಟ್ 19ರಂದು ಸೂಚಿಸಿದ್ದರು.

ಬಿಎಂಆರ್‌ಸಿಎಲ್‌ನಿಂದ ಬನಶಂಕರಿ ಜಂಕ್ಷನ್‌ನಲ್ಲಿ ₹45 ಕೋಟಿ ವೆಚ್ಚದಲ್ಲಿ ಸ್ಕೈವಾಕ್ ನಿರ್ಮಿಸಲಾಗುತ್ತದೆ ಎಂದು ನಮ್ಮ ಮೆಟ್ರೊ ಅಧಿಕಾರಿಗಳು ಆಗ ಮಾಹಿತಿ ನೀಡಿದ್ದರು. ಆದರೆ, ಅಷ್ಟೊಂದು ವೆಚ್ಚ ಮಾಡಿದರೂ ಅದರಿಂದ ಸಂಚಾರ ದಟ್ಟಣೆ ಕಡಿಮೆಯಾಗುವುದಿಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿತ್ತು. ಇದನ್ನು ಪರಿಗಣನೆಗೆ ತೆಗೆದುಕೊಳ್ಳದೆ, ವೃತ್ತಾಕಾರದ ಸ್ಕೈವಾಕ್ ನಿರ್ಮಿಸಲು ಬಿಎಂಆರ್‌ಸಿಎಲ್ ಮುಂದಾಗಿ, ಟೆಂಡರ್ ಕರೆದಿದೆ. ಇದಕ್ಕೆ ಬನಶಂಕರಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಹಾಗೂ ಸ್ಥಳೀಯರಿಂದ ವಿರೋಧ ವ್ಯಕ್ತವಾಗಿತ್ತು.

ಸ್ಥಳೀಯರ ಮನವಿಗೆ ಸ್ಪಂದಿಸಿದ ಸಚಿವ ರಾಮಲಿಂಗಾರೆಡ್ಡಿ ಅವರು, ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದು ಮೇಲ್ಸೇತುವೆ ನಿರ್ಮಿಸುವಂತೆ ಮನವಿ ಮಾಡಿದ್ದರು. 'ಪ್ರಜಾವಾಣಿ'ಯಲ್ಲಿ ಮಾರ್ಚ್ 26ರಂದು ಪ್ರಕಟವಾಗಿದ್ದ 'ಬನಶಂಕರಿ ಮೇಲ್ಸೇತುವೆ ಅತ್ಯಗತ್ಯ' ಸುದ್ದಿಯನ್ನು ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ಪ್ರಸ್ತಾಪಿಸಿದ್ದರು. ಅದಕ್ಕೆ ಉತ್ತರಿಸಿದ್ದ ಡಿ.ಕೆ. ಶಿವಕುಮಾರ್, ಮೇಲ್ಸೇತುವೆ ನಿರ್ಮಿಸುವ ಭರವಸೆ ನೀಡಿದ್ದರು. ಅದರಂತೆ, ಪತ್ರ ಬರೆದು ಅಧಿಕಾರಿಗಳಿಗೆ ನಿರ್ದೇಶಿಸಿದ್ದಾರೆ.



2023ರಲ್ಲಿ ಸಿದ್ಧವಾಗಿದ್ದ ಮೇಲ್ಸೇತುವೆ ನಕ್ಷೆ

ರಥೋತ್ಸವಕ್ಕೆ ಸ್ಕೈವಾಕ್ ಅಡ್ಡಿ

'ಬನಶಂಕರಿ ಜಂಕ್ಷನ್‌ನಲ್ಲಿ ಬಿಎಂಆರ್‌ಸಿಎಲ್ ಯೋಜಿಸಿರುವ ವೃತ್ತಾಕಾರದ ಸ್ಕೈವಾಕ್ ನಿರ್ಮಿಸಿದರೆ, ಇತಿಹಾಸ ಪ್ರಸಿದ್ಧ ಬನಶಂಕರಿ ರಥೋತ್ಸವಕ್ಕೆ ಅಡ್ಡಿಯಾಗಲಿದೆ. ಈಗಾಗಲೇ ನಮ್ಮ ಮೆಟ್ರೊ ನಿಲ್ದಾಣದ ಸುತ್ತಮುತ್ತ ವ್ಯಾಪಾರಿಗಳಿಂದ ತೀವ್ರ ತೊಂದರೆ ಆಗುತ್ತಿದ್ದು, ಯಾವಾಗಲೂ ತ್ಯಾಜ್ಯ ಇರುತ್ತದೆ. ಇನ್ನು ಸ್ಕೈವಾಕ್ ನಿರ್ಮಾಣವಾದರೆ ಸಂಕಷ್ಟ ಹೆಚ್ಚಾಗಲಿದೆ. ಹೀಗಾಗಿ ಇಲ್ಲಿ ಸ್ಕೈವಾಕ್ ಬೇಡ. ಅದನ್ನು ನಿರ್ಮಿಸಲು ಮುಂದಾದರೆ ಹೋರಾಟ ಮಾಡುತ್ತೇವೆ' ಎಂದು ಬನಶಂಕರಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಸದಸ್ಯ ಬಾಲಾಜಿ ಯಾದವ್ ಹೇಳಿದರು.


ಮೇ 5ರಂದು ಸಭೆ

ಬನಶಂಕರಿ ದೇವಸ್ಥಾನ ಜಂಕ್ಷನ್‌ನಲ್ಲಿ ಸಾರ್ವಜನಿಕರಿಗೆ ಅನುವಾಗುವಂತೆ ಸುಗಮ ಸಂಚಾರಕ್ಕಾಗಿ ಮೇಲ್ಸೇತುವೆ ಹಾಗೂ ಸ್ಕೈವಾಕ್ ನಿರ್ಮಿಸುವ ಕುರಿತಂತೆ ಚರ್ಚೆ ನಡೆಸಲು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಮೇ 5ರಂದು ಅಧಿಕಾರಿಗಳ ಸಭೆ ಕರೆದಿದ್ದಾರೆ.

ಜಿಬಿಎ ಮುಖ್ಯ ಆಯುಕ್ತ, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ, ಬೆಂಗಳೂರು ದಕ್ಷಿಣ ನಗರ ಪಾಲಿಕೆ ಆಯುಕ್ತ, ಬೆಂಗಳೂರು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಅವರಿಗೆ ಸಭೆಗೆ ಬರುವಂತೆ ಪತ್ರ ಬರೆದಿದ್ದಾರೆ.

ಸಾಂಸ್ಕೃತಿಕ ಮುನ್ನೋಟ

2ಕ್ಕೆ ಗಾಯನ-ಸನ್ಮಾನ



ಪರಮೇಶ್ವರ ಹೆಗಡೆ

ಬೆಂಗಳೂರು: ಸಪ್ತಕ ಬೆಂಗಳೂರು ಸಂಸ್ಥೆಯು ಮೇ 2ರಂದು ಸಂಜೆ 5 ಗಂಟೆಗೆ ಮಲ್ಲೇಶ್ವರದ ಸೇವಾ ಸದನದಲ್ಲಿ ಗಾಯನ–ಸನ್ಮಾನ–ಗಾಯನ ಕಾರ್ಯಕ್ರಮ ಹಮ್ಮಿಕೊಂಡಿದೆ. ಚೈತನ್ಯ ಭಟ್ಟ ಅವರಿಂದ ಗಾಯನ, ವಿಘ್ನೇಶ ಕಾಮತ ಅವರಿಂದ ತಬಲಾ ಹಾಗೂ ಮಧುಸೂದನ ಭಟ್ಟ ಅವರಿಂದ ಹಾರ್ಮೋನಿಯಂ ವಾದನ ನಡೆಯಲಿದೆ. ಇದೇ ವೇಳೆ ಹಿಂದೂಸ್ತಾನಿ ಶಾಸ್ತ್ರೀಯ ಗಾಯಕ ಪಂಡಿತ ಪರಮೇಶ್ವರ ಹೆಗಡೆ ಅವರನ್ನು ಗೌರವಿಸಲಾಗುತ್ತದೆ ಬಳಿಕ, ಭಾರತಿ ಪ್ರತಾಪ ಅವರಿಂದ ಗಾಯನ ನಡೆಯಲಿದೆ. ತಬಲಾದಲ್ಲಿ ಜಗದೀಶ ಕುರ್ತಕೋಟಿ ಹಾಗೂ ಹಾರ್ಮೋನಿಯಂನಲ್ಲಿ ಅಶ್ವಿನ್ ವಾಲ್ವಾಲ್ಕರ್ ಸಾಥ್ ನೀಡಲಿದ್ದಾರೆ.

ನೃತ್ಯ–ನಾಟಕ ಪ್ರದರ್ಶನ

ಬೆಂಗಳೂರು: ಅಂತರರಾಷ್ಟ್ರೀಯ ನೃತ್ಯ ದಿನಾಚರಣೆ ಪ್ರಯುಕ್ತ ಸೃಷ್ಟಿ ಸಂಸ್ಥೆಯು ರೋಟರಿ ಡಿಸ್ಟ್ರಿಕ್ಟ್ 3191ರ ಸಹಯೋಗದಲ್ಲಿ ಮೇ 2 ಮತ್ತು ಮೇ 3ರಂದು ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ಮಾಯಾರಾವ್ ನೃತ್ಯೋತ್ಸವ ಹಮ್ಮಿಕೊಂಡಿದೆ.



ಪ್ರತಿಭಾ ಪ್ರಹ್ಲಾದ್

2ರಂದು ಸಂಜೆ 4ಗಂಟೆಯಿಂದ ನೃತ್ಯ ಕಾರ್ಯಕ್ರಮ ಪ್ರಾರಂಭ ವಾಗಲಿದೆ. ಸಂಜೆ 7 ಗಂಟೆಗೆ ಶಿವ ತಾಂಡವ ನೃತ್ಯ ರೂಪಕ ಪ್ರದರ್ಶನ ಕಾಣಲಿದೆ. 3ರಂದು ಸಂಜೆ 5.30ರಿಂದ ಕಾರ್ಯಕ್ರಮ ಆರಂಭವಾಗಲಿದ್ದು, 6.15ರಿಂದ ಪ್ರತಿಭಾ ಪ್ರಹ್ಲಾದ್ ಅವರಿಂದ ಭರತನಾಟ್ಯ ಪ್ರದರ್ಶನ ನಡೆಯಲಿದೆ. 7.15ರಿಂದ ಬಿ.ಜಯಶ್ರೀ ನಿರ್ದೇಶನದಲ್ಲಿ 'ಕರಿಮಾಯಿ' ನೃತ್ಯ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ಚಿಗುರು ರಂಗೋತ್ಸವ

ಬೆಂಗಳೂರು: ಭಾಗವತರು ಸಾಂಸ್ಕೃತಿಕ ಸಂಘಟನೆಯು ಮೇ 1ರಿಂದ ಮೇ 3ರವರೆಗೆ ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ಯುವ ನಿರ್ದೇಶಕರ 'ಚಿಗುರು ರಂಗೋತ್ಸವ' ಹಮ್ಮಿಕೊಂಡಿದೆ.

ಮೂರು ದಿನವೂ ಸಂಜೆ 7.15ರಿಂದ ನಾಟಕಗಳು ಪ್ರದರ್ಶನ ಕಾಣಲಿವೆ. ಮೇ 1ರಂದು ರಾಘವೇಂದ್ರ ಜೆ. ಅವರ ನಿರ್ದೇಶನದಲ್ಲಿ ಅಭಿನಯ ತರಂಗ ತಂಡವು 'ತಾರಾ' ನಾಟಕ ಪ್ರದರ್ಶಿಸಲಿದೆ. ಮೇ 2ರಂದು ಚೈತಾಲಿ ದಾಸ್ ಅವರ ನಿರ್ದೇಶನದಲ್ಲಿ ರಂಗ ಶಾರೀರ ತಂಡದಿಂದ 'ಪ್ರೀತಿಯಿಂದ' ನಾಟಕ ಹಾಗೂ ಮೇ 3ರಂದು ಗಗನ್ ಪ್ರಸಾದ್ ಅವರ ನಿರ್ದೇಶನದಲ್ಲಿ ಸ್ಪಷ್ಟ ಥಿಯೇಟರ್‌ನಿಂದ 'ಲೆಕ್ಕಕ್ಕುಂಟು ಆಟಕ್ಕಿಲ್ಲ' ನಾಟಕ ಪ್ರದರ್ಶನ ಆಯೋಜಿಸಲಾಗಿದೆ.



'ತಾರಾ' ನಾಟಕದ ದೃಶ್ಯ

ನಾಟಕ ಪ್ರದರ್ಶನ

ಬೆಂಗಳೂರು: ರಂಗರಥ ಭಾರತೀಯ ಪ್ರದರ್ಶನ ಕಲಾ ಸಂಸ್ಥೆ ಹಾಗೂ ಕಲಾಪ್ರೇಮಿ ಫೌಂಡೇಷನ್ ಜಂಟಿಯಾಗಿ ಮೇ 3ರಂದು ಸಂಜೆ 4 ಹಾಗೂ 7 ಗಂಟೆಗೆ ಮಲ್ಲೇಶ್ವರದಲ್ಲಿರುವ ಸೇವಾ ಸದನ ಸಭಾಂಗಣದಲ್ಲಿ 'ಇದ್ದಾಗ ನಿಮ್ದು ಕದ್ದಾಗ ನಮ್ದು' ನಾಟಕ ಪ್ರದರ್ಶನ ಹಮ್ಮಿಕೊಂಡಿದೆ. ಈ ನಾಟಕವನ್ನು ಆಸಿಫ್ ಕ್ಷತ್ರಿಯ ಮತ್ತು ಶ್ವೇತಾ ಶ್ರೀನಿವಾಸ್ ನಿರ್ದೇಶಿಸಿದ್ದಾರೆ. ಟಿಕೆಟ್ ಬುಕ್ ಮೈ ಶೊದಲ್ಲಿ ಲಭ್ಯ.

ವ್ಯಂಗ್ಯಚಿತ್ರ ಪ್ರದರ್ಶನ

ಬೆಂಗಳೂರು: ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆಯು ವ್ಯಂಗ್ಯಚಿತ್ರಕಾರ ಮಾರಿಯೊ ಡಿ. ಮಿರಾಂಡಾ ಅವರ ಜನ್ಮಶತಮಾನೋತ್ಸವದ ಅಂಗವಾಗಿ ಮೇ 2ರಿಂದ ಮೇ 23ರವರೆಗೆ 'ಮಾರಿಯೋ @ 100' ಶೀರ್ಷಿಕೆಯಡಿ ವ್ಯಂಗ್ಯಚಿತ್ರ ಪ್ರದರ್ಶನ ಹಮ್ಮಿಕೊಂಡಿದೆ. ಟ್ರಿನಿಟಿ ವೃತ್ತದಲ್ಲಿರುವ ಮಿಡ್‌ಫೋರ್ಡ್ ಹೌಸ್‌ನಲ್ಲಿರುವ ಸಂಸ್ಥೆಯ ಕೇಂದ್ರದಲ್ಲಿ ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ಪ್ರದರ್ಶನ ನಡೆಯಲಿದೆ.

ಪ್ರತಿ ಗುರುವಾರ ಪ್ರಕಟವಾಗುವ 'ಸಾಂಸ್ಕೃತಿಕ ಮುನ್ನೋಟ' ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

ಐಪಿಎಸ್ ಅಧಿಕಾರಿಗಳ ವರ್ಗ

ಬೆಂಗಳೂರು: ರಾಜ್ಯ ಮೀಸಲು ಪೊಲೀಸ್ ಪಡೆಯ ಎಡಿಜಿಪಿ ಆಗಿ ಎಸ್. ರವಿ ಅವರನ್ನು ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

ಗುಪ್ತಚರ ವಿಭಾಗದ ಐಜಿಪಿ ಆಗಿ ಲಾಬೂ ರಾಮ್, ಬೆಂಗಳೂರು ಕೇಂದ್ರ ವಲಯದ ಡಿಐಜಿ ಆಗಿ ಎಸ್. ಗಿರೀಶ್ ಅವರನ್ನು ವರ್ಗಾವಣೆ ಮಾಡಲಾಗಿದೆ.

ಸಮಗ್ರ ಮಾನಸಿಕ ಆರೈಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರ್ಗ ಮೈಂಡ್ ಕೇರ್ ಸಂಸ್ಥೆಯು ಸಮಗ್ರ ಮಾನಸಿಕ ಆರೈಕೆ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದು, ಸಹಜ ಜೀವನಕ್ಕೆ ಮರಳಲು ಈ ಕಾರ್ಯಕ್ರಮದಡಿ ಮಾನಸಿಕ ಆರೋಗ್ಯ ಸೇವೆಗಳನ್ನು ಒದಗಿಸಲಾಗುತ್ತದೆ.

'ಮಾನಸಿಕ ಆರೋಗ್ಯ ಕೇಂದ್ರಗಳಿಂದ ಹೊರಬರುವ ಬಹುಪಾಲು ರೋಗಿಗಳು ಅಗತ್ಯ ಬೆಂಬಲದ ಕೊರತೆಯಿಂದಾಗಿ ಅತಂತ್ರ ಸ್ಥಿತಿ ಎದುರಿಸುತ್ತಿದ್ದಾರೆ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಮಗ್ರ ಮಾನಸಿಕ ಆರೈಕೆ ಕಾರ್ಯಕ್ರಮ ಪ್ರಾರಂಭಿಸಲಾಗಿದೆ. ಕೇಂದ್ರಕ್ಕೆ ಹೊರರೋಗಿಯಾಗಿ ಭೇಟಿ ನೀಡಿ, ಚಿಕಿತ್ಸೆ ಪಡೆದುಕೊಳ್ಳಬಹುದಾಗಿದೆ. ಮನೋವ್ಯಾಧಿಗೆ ಸೂಕ್ತ ಚಿಕಿತ್ಸೆ ಪಡೆದುಕೊಂಡು ಗುಣಮುಖರಾಗಿದ್ದರೂ, ದೈನಂದಿನ ಜೀವನವನ್ನು ಸ್ವತಂತ್ರವಾಗಿ ನಡೆಸಲು ಸನ್ನದ್ಧರಾಗದವರನ್ನು ಕೈಹಿಡಿದು ಮುನ್ನಡೆಸಲು ಈ ಆರೈಕೆ ಕಾರ್ಯಕ್ರಮವನ್ನು ವಿನ್ಯಾಸಗೊಳಿಸಲಾಗಿದೆ' ಎಂದು ಸಂಸ್ಥೆ ಹೇಳಿದೆ.

'ವ್ಯಕ್ತಿಯು ಸಮಗ್ರವಾಗಿ ಚೇತರಿಸಿಕೊಳ್ಳಲು ಈ ಕಾರ್ಯಕ್ರಮವು ನೆರವಾಗಲಿದೆ. ಆತ್ಮವಿಶ್ವಾಸವನ್ನು ಪುನರ್ ನಿರ್ಮಿಸಲು, ಮಾನಸಿಕ ಸ್ಥಿರತೆ ಮರಳಿ ಪಡೆಯಲು ಸಹಾಯ ಮಾಡಲಿದೆ. ಮನೋವೈದ್ಯರು ಈ ಕಾರ್ಯಕ್ರಮದ ಮೇಲ್ವಿಚಾರಣೆ ಮಾಡುತ್ತಾರೆ. ಸಂಗೀತ, ಯೋಗ ಮತ್ತು ಅಭಿವ್ಯಕ್ತಿ ಕಲಾ ಪ್ರಕಾರಗಳ ಚಿಕಿತ್ಸಕರನ್ನು ಒಳಗೊಂಡ ಪರಿಣಿತರ ತಂಡ ಈ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಿದೆ' ಎಂದು ಸಂಸ್ಥೆಯ ಸಂಸ್ಥಾಪಕಿ ಡಾ.ಜ್ಯೋತಿ ನಿರಜಾ ತಿಳಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಸಾಧಕರು



ಕ್ಯಾಮ್ಲಿನ್ ಪ್ರೌಢಶಾಲೆಯ ಜಿತೇಂದ್ರ ಕುಮಾವತ್ (ಶೇ 96.96), ರೀನಾ ಪಿ. ಪಟೇಲ್ (ಶೇ 95.68)

'ಹೈಕಮಾಂಡ್ ಆದೇಶ ಪಾಲಿಸುತ್ತೇವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ಹಸ್ತಾಂತರ ಮಾಡುವ ವಿಚಾರ ಪಕ್ಷದ ಹೈಕಮಾಂಡ್‌ಗೆ ಬಿಟ್ಟಿದ್ದು. ಅವರು ನೀಡುವ ತೀರ್ಮಾನವನ್ನು ಪಾಲಿಸುತ್ತೇವೆ' ಎಂದು ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಹೇಳಿದರು.

ಅವರ ಜನ್ಮ ದಿನವಾದ ಮೇ 15ರಂದು ಸಿಹಿ ಸುದ್ದಿ ಏನಾದರೂ ಬರಲಿದೆಯೇ ಎನ್ನುವ ಪತ್ರಕರ್ತರ ಪ್ರಶ್ನೆಗೆ ನಗುತ್ತಲೇ ಉತ್ತರಿಸಿದ ಅವರು, 'ಸಿಹಿ ಸುದ್ದಿ ಪ್ರತಿ ಬಾರಿಯೂ ಇರುತ್ತದೆ. ದೆಹಲಿಗೆ ಹೋಗುವ ವಿಚಾರದಲ್ಲಿ ವಿಶೇಷತೆ ಏನೂ ಇಲ್ಲ. ಆಗಾಗ ಕೆಲಸದ ಮೇಲೆ ಹೋಗುತ್ತಲೇ ಇರುತ್ತೇವೆ' ಎಂದು ತಿಳಿಸಿದರು.

ಎನ್‌ಎಸ್‌ಆರ್ ಪ್ರಿಡಾಕ್ ಫೆಲೋಶಿಪ್ ಪ್ರದಾನ

ಪ್ರಜಾವಾಣಿ ವಾರ್ತೆ



ಎನ್‌ಎಸ್‌ ರಾಮಸ್ವಾಮಿ ಪ್ರಿಡಾಕ್ಟರಲ್ ಫೆಲೋಶಿಪ್ ಪಡೆದ ಅಭ್ಯರ್ಥಿಗಳು

ಬೆಂಗಳೂರು: ನಗರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಎಂಟನೇ ಬ್ಯಾಚ್‌ನ 12 ಮಂದಿಗೆ ಎನ್.ಎಸ್. ರಾಮಸ್ವಾಮಿ ಪ್ರಿ-ಡಾಕ್ಟರಲ್ ಫೆಲೋಶಿಪ್ (ಎನ್‌ಎಸ್‌ಆರ್ ಪ್ರಿ-ಡಾಕ್) ಪ್ರದಾನ ಮಾಡಲಾಗಿದೆ. 2025-26ನೇ ಸಾಲಿನ ಬ್ಯಾಚ್‌ನಲ್ಲಿ ಇಬ್ಬರು ಮಹಿಳೆಯರು ಸೇರಿದಂತೆ ಹನ್ನೆರಡು ಮಂದಿ ಫೆಲೋಗಳಿದ್ದರು.

2018ರಲ್ಲಿ ಪ್ರಾರಂಭವಾದ ಈ ಕಾರ್ಯಕ್ರಮದಡಿ ಇದುವರೆಗೆ 77 ಮಂದಿ ಈ ಗೌರವಕ್ಕೆ ಪಾತ್ರರಾಗಿದ್ದಾರೆ. 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾರತ ಮತ್ತು ವಿದೇಶಗಳಲ್ಲಿ ಡಾಕ್ಟರೇಟ್ ಪದವಿ ಪೂರೈಸಿದ್ದಾರೆ.

ನಿರ್ವಹಣೆ ಮತ್ತು ಸಂಬಂಧಿತ ವಿಭಾಗಗಳಲ್ಲಿ ಕಡಿಮೆ ಪ್ರಾತಿನಿಧ್ಯ ಹೊಂದಿರುವ ಸಮುದಾಯಗಳ ಅಭ್ಯರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ನೀಡಲು ಎನ್‌ಎಸ್‌ಆರ್ ಪ್ರಿ-ಡಾಕ್ ಕಾರ್ಯಕ್ರಮ ವಿನ್ಯಾಸಗೊಳಿಸಲಾಗಿದೆ.

ಐಐಎಂಬಿಯ ಸಾರ್ವಜನಿಕ ನೀತಿ ವಿಭಾಗದ ಪ್ರಾಧ್ಯಾಪಕ ಮತ್ತು ಎನ್‌ಎಸ್‌ಆರ್ ಪ್ರಿ-ಡಾಕ್ ಸಮಿತಿಯ ಅಧ್ಯಕ್ಷ ಅನಿಲ್ ಬಿ. ಸೂರಜ್ ಫೆಲೋಗಳನ್ನು ಅಭಿನಂದಿಸಿದ್ದಾರೆ.

'ವ್ಯಕ್ತಿತ್ವ ವಿಕಸನಕ್ಕೆ ಬೇಸಿಗೆ ಶಿಬಿರ ಸಹಕಾರಿ'

ಬೆಂಗಳೂರು: 'ಬಾಲ್ಯದಲ್ಲಿಯೇ ಮಕ್ಕಳ ವ್ಯಕ್ತಿತ್ವ ವಿಕಸನಗೊಳ್ಳಲು ಬೇಸಿಗೆ ಶಿಬಿರಗಳು ಸಹಕಾರಿಯಾಗಲಿವೆ' ಎಂದು ಕೃಷಿ ಇಲಾಖೆ ಆಯುಕ್ತ ವೈ.ಎಸ್.ಪಾಟೀಲ ಹೇಳಿದರು.

ಹಲಸೂರಿನ ರಾಮಕೃಷ್ಣ ಮಠದಲ್ಲಿ ಆಯೋಜಿಸಿರುವ ವಸಂತ ವಿಹಾರ ಬೇಸಿಗೆ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು

ರಾಮಕೃಷ್ಣ ಮಠದ ಹಲಸೂರು ಶಾಖೆ ಅಧ್ಯಕ್ಷ ಸ್ವಾಮಿ ಬೋಧಸ್ವರೂಪಾನಂದ ಮಹಾರಾಜ್ ಮಾತನಾಡಿ, 'ವಸಂತ ವಿಹಾರ ಶಿಬಿರವು ಮೇ 10ರವರೆಗೆ ನಡೆಯಲಿದ್ದು, ರಾಮಕೃಷ್ಣ ಪರಮಹಂಸ, ಶಾರದಾಮಾತೆ, ಸ್ವಾಮಿ ವಿವೇಕಾನಂದರ ಚಿಂತನೆಗಳನ್ನು ತಿಳಿಸಿಕೊಡಲಾಗುತ್ತದೆ' ಎಂದು ಹೇಳಿದರು.



ಹಲಸೂರಿನ ರಾಮಕೃಷ್ಣ ಮಠದಲ್ಲಿ ವಸಂತ ವಿಹಾರ ಬೇಸಿಗೆ ಶಿಬಿರ ಉದ್ಘಾಟಿಸಿದ ಕೃಷಿ ಇಲಾಖೆ ಆಯುಕ್ತ ವೈ.ಎಸ್‌ಪಾಟೀಲ ಮಕ್ಕಳಿಗೆ ಟಿ ಶರ್ಟ್ ವಿತರಿಸಿದರು. ಮಠದ ಅಧ್ಯಕ್ಷ ಸ್ವಾಮಿ ಬೋಧಸ್ವರೂಪಾನಂದ ಮಹಾರಾಜ್ ಉಪಸ್ಥಿತರಿದ್ದರು

ಕೆ.ಭಾನುಮೂರ್ತಿ ವಿಶೇಷ ಉಪನ್ಯಾಸ ನೀಡಿದರು. ಮುಂದಿನ ಎರಡು ವಾರ ಶಿಬಿರದಲ್ಲಿ ನಿತ್ಯ ಹಲವು ಚಟುವಟಿಕೆಗಳು ಇರಲಿವೆ.

ಮಲ್ಲಿಕಾ ಘಂಟಿಗೆ 'ಯಶೋಧರಮ್ಮ ದಾಸಪ್ಪ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಜನಶಕ್ತಿ ಕೇಂದ್ರ ನೀಡುವ 'ಯಶೋಧರಮ್ಮ ದಾಸಪ್ಪ ಪ್ರಶಸ್ತಿ'ಗೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಮಲ್ಲಿಕಾ ಘಂಟಿ ಆಯ್ಕೆಯಾಗಿದ್ದಾರೆ.


ಮಲ್ಲಿಕಾ ಘಂಟಿ

ಈ ಪ್ರಶಸ್ತಿಯು ₹15 ಸಾವಿರ ನಗದು ಹಾಗೂ ಕಂಚಿನ ಫಲಕ ಒಳಗೊಂಡಿದೆ. ಯಶೋಧರಮ್ಮ ದಾಸಪ್ಪ ಅವರು ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿ, ಸಮಾಜ ಸುಧಾರಕಿಯಾಗಿ, ರಾಜಕಾರಣಿಯಾಗಿ ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು, ಅರ್ಪಣಾ ಭಾವದಿಂದ ಸೇವೆಗೈದರು. ಅವರ ಸ್ಮರಣಾರ್ಥ ಈ ಪ್ರಶಸ್ತಿ ನೀಡಲಾಗುತ್ತಿದೆ.

ಮೇ 20ರಂದು ಸಂಜೆ 5.15ಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ವಿಧಾನ ಪರಿಷತ್ತಿನ ಮಾಜಿ ಸಭಾಪತಿ ವಿ.ಆರ್. ಸುದರ್ಶನ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ವಿಮರ್ಶಕಿ ಎಂ.ಎಸ್. ಆಶಾದೇವಿ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ ತಿಳಿಸಿದ್ದಾರೆ.

ಬಹುಭಾಷೆಯಲ್ಲಿ 'ನಮ್ಮ 112' ಸೇವೆ

ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಆಧರಿಸಿ ನಗರ ಪೊಲೀಸರಿಂದ ಹೊಸ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಇಲಾಖೆಯು ನಗರದಲ್ಲಿ 'ನಮ್ಮ 112' ಸೇವೆಯಲ್ಲಿ ಬಹುಭಾಷಾ ವ್ಯವಸ್ಥೆ ಜಾರಿಗೆ ತಂದಿದೆ.

ನಗರ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಗೃಹ ಸಚಿವ ಜಿ.ಪರಮೇಶ್ವರ ಹೊಸ ವ್ಯವಸ್ಥೆಗೆ ಚಾಲನೆ ನೀಡಿದರು.

'ದೇಶದಲ್ಲಿಯೇ ಮೊದಲ ಬಾರಿಗೆ ನಗರ ಪೊಲೀಸ್ ಇಲಾಖೆಯಲ್ಲಿ ಈ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ದೇಶದ 10ಕ್ಕೂ ಹೆಚ್ಚು ಭಾಷೆಗಳಲ್ಲಿ 'ನಮ್ಮ 112' ಸೇವೆ ಒದಗಿಸಲಾಗುತ್ತಿದೆ. ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಆಧರಿಸಿ ಕನ್ನಡ, ಹಿಂದಿ, ತಮಿಳು, ಮಲೆಯಾಳ, ಮರಾಠಿ, ಅಸ್ಸಾಮಿ ಸೇರಿದಂತೆ ಭಾರತೀಯ ಭಾಷೆಗಳು ಹಾಗೂ ಸ್ಪ್ಯಾನಿಷ್, ಫ್ರೆಂಚ್ ಹಾಗೂ ಅರೇಬಿಕ್ ಭಾಷೆಗಳಲ್ಲಿ ಸೇವೆ ಒದಗಿಸಲಾಗುತ್ತಿದೆ' ಎಂದು ಜಿ.ಪರಮೇಶ್ವರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಶಿಕ್ಷಣ, ಉದ್ಯೋಗಕ್ಕೆಂದು ದೇಶದ ವಿವಿಧ ಭಾಗದ ಜನರು ಹಾಗೂ ವಿದ್ಯಾರ್ಥಿಗಳು ಬೆಂಗಳೂರಿನಲ್ಲಿ ನೆಲಸಿದ್ದಾರೆ. ಪ್ರವಾಸಕ್ಕೆಂದು ವಿದೇಶಿಯರೂ ನಗರಕ್ಕೆ ಬರುತ್ತಾರೆ. ಆದರೆ, ತುರ್ತು ಸಂದರ್ಭಗಳಲ್ಲಿ ಪೊಲೀಸರಿಗೆ ಮಾಹಿತಿ ನೀಡಲು ಭಾಷೆಯ ಸಮಸ್ಯೆ ಎದುರಾಗುತ್ತಿತ್ತು. ಇದೀಗ ತುರ್ತು ಸೇವೆಗಳ ಕ್ಷೇತ್ರದಲ್ಲಿ ಮಹತ್ವದ ಮೈಲುಗಲ್ಲು ಸಾಧಿಸಲಾಗಿದೆ. 'ನಮ್ಮ 112' ಸೇವೆಯನ್ನು ಬಹುಭಾಷಾ 'ವಾಯ್ಸ್ ಎ.ಐ' ಹಾಗೂ ಸ್ವಯಂ ಚಾಲಿತ ಭಾಷಾಂತರ ತಂತ್ರಜ್ಞಾನದೊಂದಿಗೆ ಅಭಿವೃದ್ಧಿ ಪಡಿಸಲಾಗಿದೆ' ಎಂದು ಹೇಳಿದರು.

'ನಾಗರಿಕರು ಸ್ವ-ಇಚ್ಛೆಯ ಭಾಷೆಯಲ್ಲಿ ಸಂವಹನ ನಡೆಸಬಹುದು. ಎ.ಐ ತಂತ್ರಜ್ಞಾನವು ಕರೆ ಮಾಡುವವರ ಅಹವಾಲನ್ನು ತಕ್ಷಣವೇ ಅರ್ಥೈಸಿ ಅವಶ್ಯಕ ಮಾಹಿತಿಯನ್ನು ಸ್ಪಷ್ಟವಾಗಿ ದಾಖಲಿಸುತ್ತದೆ. ತುರ್ತು ಸೇವೆಗಳ ಪ್ರತಿಕ್ರಿಯೆಯನ್ನು ವೇಗವಾಗಿ ಹಾಗೂ ಪರಿಣಾಮಕಾರಿಯಾಗಿ ನೀಡುವುದಕ್ಕೆ ಸಹಕಾರಿ ಆಗುತ್ತದೆ. ಇದರಿಂದ ಪ್ರತಿಕ್ರಿಯಿಸುವ ಸಮಯ ಕಡಿಮೆ ಆಗಲಿದೆ. ಅಲ್ಲದೇ, ಅವಘಡ ನಡೆದ ಸ್ಥಳಕ್ಕೆ ಪೊಲೀಸರು ತೆರಳುವುದಕ್ಕೂ ಅನುಕೂಲ ಆಗಲಿದೆ' ಎಂದು ಹೇಳಿದರು.


ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಗೃಹ ಸಚಿವ ಜಿ.ಪರಮೇಶ್ವರ ಅವರೊಂದಿಗೆ ವಿವಿಧ ವಿಭಾಗದ ಪೊಲೀಸ್ ಅಧಿಕಾರಿಗಳು

ಐಪಿಎಲ್ ಪಂದ್ಯಾವಳಿ: ಯಶಸ್ವಿ ನಿರ್ವಹಣೆ

'ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಯ ಐದು ಪಂದ್ಯಗಳು ನಗರದ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದಿದ್ದು ಪ್ರತಿ ಪಂದ್ಯವನ್ನೂ ಯಶಸ್ವಿಯಾಗಿ ಸಂಘಟಿಸಲಾಗಿದೆ. ಯಾವುದೇ ಲೋಪ ನಡೆಯದಂತೆ ನಗರ ಪೊಲೀಸರು ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡಿದ್ದರು' ಎಂದು ಜಿ.ಪರಮೇಶ್ವರ ಅವರು ಹೇಳಿದರು.

'ಐಪಿಎಲ್ ಟಿಕೆಟ್ ತೋರಿಸಿ ನಮ್ಮ ಮೆಟ್ರೊದಲ್ಲಿ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಪ್ರತಿ ಪಂದ್ಯದಲ್ಲಿ 19ರಿಂದ 20 ಸಾವಿರ ಪ್ರೇಕ್ಷಕರು ನಮ್ಮ ಮೆಟ್ರೊ ಸೇವೆ ಬಳಸಿದ್ದಾರೆ' ಎಂದು ಹೇಳಿದರು.

'ಕ್ಯೂಆರ್ ಕೋಡ್ ಆಧಾರಿತ ಡಿಜಿಟಲ್ ಟಿಕೆಟ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿತ್ತು. ಅದರಿಂದ ಅಕ್ರಮ ಟಿಕೆಟ್ ಮಾರಾಟಕ್ಕೂ ಕಡಿವಾಣ ಬಿದ್ದಿದೆ. 500ಕ್ಕೂ ಹೆಚ್ಚು ಸಿಸಿಟಿವಿ ಕ್ಯಾಮೆರಾಗಳು, ಡ್ರೋನ್ ಕ್ಯಾಮೆರಾಗಳನ್ನು ಕಮಾಂಡ್ ಹಾಗೂ ಟ್ರಾಫಿಕ್ ನಿಯಂತ್ರಣ ಕೇಂದ್ರಗಳಿಗೆ ಸಂಪರ್ಕಿಸಿ ಎ.ಐ ಆಧಾರಿತ ವಿಶ್ಲೇಷಣೆಯ ಮೂಲಕ ನಿಗಾ ವಹಿಸಲಾಗಿತ್ತು' ಎಂದು ತಿಳಿಸಿದರು.

ಬೆಟ್ಟಿಂಗ್ 17 ಮಂದಿ ಸೆರೆ

ಈ ಬಾರಿಯ ಐಪಿಎಲ್ ಕ್ರಿಕೆಟ್‌ನಲ್ಲಿ ಬೆಟ್ಟಿಂಗ್ ನಡೆಸಿದವರ ವಿರುದ್ಧ 12 ಪ್ರಕರಣ ದಾಖಲು ಮಾಡಿಕೊಂಡು 17 ಮಂದಿಯನ್ನು ಬಂಧಿಸಲಾಗಿದೆ.

ಕಾಳಸಂತೆಯಲ್ಲಿ ಹೆಚ್ಚಿನ ಬೆಲೆಗೆ ಟಿಕೆಟ್ ಮಾರಾಟ ಮಾಡಿದ್ದವರ ವಿರುದ್ಧ 23 ಪ್ರಕರಣ ದಾಖಲು ಮಾಡಿಕೊಂಡು 31 ಆರೋಪಿಗಳನ್ನು ಬಂಧಿಸಲಾಗಿದೆ. ₹48 ಲಕ್ಷ ಮೌಲ್ಯದ 19 ಮೊಬೈಲ್, ಲ್ಯಾಪ್‌ಟಾಪ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

'ದಿ ಇಂಡಿಯನ್ ಆರ್ಟಿಸಾನ್ಸ್ ಹಾಟ್' ನಾಳೆಯಿಂದ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ವತಿಯಿಂದ ಜಯಮಹಲ್ ಪ್ಯಾಲೇಸ್ ಹೋಟೆಲ್ ಸಭಾಂಗಣದಲ್ಲಿ 'ದಿ ಇಂಡಿಯನ್ ಆರ್ಟಿಸಾನ್ಸ್ ಹಾಟ್' (ಟಿಐಎಎಚ್) ಶೀರ್ಷಿಕೆಯಡಿ ಹಮ್ಮಿಕೊಂಡಿರುವ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳ ಮೇ 1ಕ್ಕೆ ಆರಂಭವಾಗಲಿದೆ.

ಮೇ 10ರವರೆಗೆ ಪ್ರದರ್ಶನ ಇರಲಿದ್ದು, ದೇಶದ ವಿವಿಧೆಡೆಯ ಕುಶಲ ಕರ್ಮಿಗಳು ತಯಾರಿಸಿದ ಉತ್ಪನ್ನಗಳ ಪ್ರದರ್ಶನ, ಪ್ರಚಾರ ಮತ್ತು ಮಾರಾಟಕ್ಕೆ ವೇದಿಕೆಯಾಗಲಿದೆ.

ಉತ್ಪನ್ನಗಳ ಪ್ರದರ್ಶನ ಮಳಿಗೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ ಮತ್ತು ಭಾರತದ ವಿವಿಧ ಭಾಗಗಳಿಂದ ರುಚಿಕರವಾದ ಭಕ್ಷ್ಯಗಳನ್ನು ಪೂರೈಸುವ ಆಹಾರ ಮಳಿಗೆಗಳು ಹಬ್ಬದ ವಾತಾವರಣವನ್ನು ಸೃಷ್ಟಿಸಲಿವೆ.

ಪ್ರಮುಖವಾಗಿ ಚನ್ನಪಟ್ಟಣದ ಆಟಿಕೆಗಳು, ಉತ್ತರ ಪ್ರದೇಶದ ಖುರ್ಜಾದ ಮಣ್ಣಿನ ಪಾತ್ರೆ ಹಾಗೂ ಅಲಂಕಾರಿಕ ವಸ್ತುಗಳು, ಜೈಪುರದ ನೀಲಿ ಮಡಕೆಗಳು, ಜೈಪುರ ಲೋಹ, ಒಡಿಶಾದ ಕಲ್ಲಿನ ವಿಗ್ರಹಗಳು, ಬೇವಿನ ಮರದ ಪಾತ್ರೆ, ಪಟಚಿತ್ರ, ಬಿಹಾರದ ಮಧುಬನಿ ವರ್ಣಚಿತ್ರಗಳು, ತಮಿಳುನಾಡಿನ ತಂಜಾವೂರಿನ ವರ್ಣಚಿತ್ರ, ಪಶ್ಚಿಮ ಬಂಗಾಳದ ಕಾಲಿಘಾಟ್ ವರ್ಣಚಿತ್ರ, ಸೋಲಾ ಹೂವು, ಮಹಾರಾಷ್ಟ್ರದ ರಾಳದ ಕಲೆ, ಸಂಗೀತ ವಾದ್ಯಗಳು, ಆಂಧ್ರ ಪ್ರದೇಶದ ಚರ್ಮದ ಬೊಂಬೆ ಮತ್ತು ದೀಪ, ಆಗ್ರಾದ ಅಮೃತಶಿಲೆ ಕೆತ್ತನೆ, ಮಧ್ಯಪ್ರದೇಶದ ಭೀಲ್ ಚಿತ್ರಕಲೆ, ಕರ್ನಾಟಕದ ಸುರಪುರ ಸುಣ್ಣದ ಕಲೆ, ಹರಿಯಾಣದ ಕಲ್ಲಿನ ಧೂಳಿನ ಚಿತ್ರಕಲೆ, ಮಧ್ಯಪ್ರದೇಶದ ಗೊಂಡ್ ಚಿತ್ರಕಲೆ, ಹರಿಯಾಣದ ಮರದ ಕೆತ್ತನೆ, ಕೇರಳದ ಮರದ ಕೆತ್ತನೆಗಳು ಸೇರಿದಂತೆ ಹಲವು ಸಾಂಪ್ರದಾಯಿಕ ಉತ್ಪನ್ನಗಳು ಒಂದೇ ಸೂರಿನಡಿ ಲಭ್ಯ ಇರಲಿವೆ.

ಪಶ್ಚಿಮ ಬಂಗಾಳದ ಆಕ್ಸಿಡೀಕೃತ ಆಭರಣ, ಕರ್ನಾಟಕದ ಟೆರಾಕೋಟಾ ಆಭರಣ, ಲಂಬಾಣಿ ಆಭರಣ, ಪಶ್ಚಿಮ ಬಂಗಾಳದ ಸಮುದ್ರ ಚಿಪ್ಪು ಮತ್ತು ಮುತ್ತಿನ ಆಭರಣ, ರಾಜಸ್ಥಾನದ ಮೀನಕರಿ ಆಭರಣಗಳು, ಪಂಜಾಬಿ ಚಪ್ಪಲಿಗಳು, ಚರ್ಮದ ಚೀಲಗಳು, ಒಂಟೆ ಚರ್ಮದ ಚಪ್ಪಲಿ, ಕೊಲ್ಹಾಪುರಿ ಚಪ್ಪಲಿ, ಕೈಯಿಂದ ತಯಾರಿಸಿದ ಚರ್ಮದ ಚೀಲ, ಗುಜರಾತ್‌ನ ಪ್ಯಾಚ್‌ವರ್ಕ್ ಚೀಲ, ಗುಜರಾತ್‌ನ ಕೈ ಕಸೂತಿ ಚೀಲಗಳು ಪ್ರದರ್ಶನ ಮತ್ತು ಮಾರಾಟಕ್ಕೆ ಇರಲಿವೆ.

ರಾಜಸ್ಥಾನದ ಅಪ್ಲಿಕ್ ವರ್ಕ್ ಕೈಮಗ್ಗ, ಬಿಳಿ ಖಾದಿ ಟಾಪ್ಸ್, ಬಿಹಾರದ ಬಾಗಲ್‌ಪುರಿ ಸೀರೆ, ಗುಜರಾತ್‌ನ ಕಚ್‌ನ ಅಜರಖ್ ಬಾಂಧನಿ, ಉತ್ತರ ಪ್ರದೇಶದ ಚಿಕನ್ಕಾರಿ, ಒಡಿಶಾದ ಸಂಬಲ್ಪುರ್ ಸೀರೆ, ಪಶ್ಚಿಮ ಬಂಗಾಳದ ಕೈಮಗ್ಗದ ಸೀರೆ, ಜಾಮ್ದಾನಿ ಸೀರೆ, ತೆಲಂಗಾಣದ ಇಕ್ಕತ್ ಸೀರೆ ಮತ್ತು ಉಡುಗೆಗಳು, ಕಾಶ್ಮೀರದ ಕೈಮಗ್ಗ, ಮಿರ್ಜಾಪುರದ ಕಾರ್ಪೆಟ್‌ಗಳು, ಡಾರಿಸ್ ಮತ್ತು ಕಂಬಳಿ, ಉತ್ತರ ಪ್ರದೇಶದ ಸೀತಾಪುರ ಕಂಬಳಿ, ಕರ್ನಾಟಕದ ಇಳಕಲ್ ಸೀರೆ, ತಮಿಳುನಾಡಿನ ಕಾಂಚೀಪುರಂ ಸೀರೆಗಳು ಆಕರ್ಷಿಸಲಿವೆ.

ರಾಜಸ್ಥಾನದ ಪ್ರಾಚೀನ ಪೀಠೋಪಕರಣ, ಆಂಧ್ರ ಪ್ರದೇಶದ ತಿರುಪತಿ ಪ್ರಾಚೀನ ಕೆತ್ತನೆಗಳು, ಪಶ್ಚಿಮ ಬಂಗಾಳದ ಗೋಲ್ಡನ್ ಗ್ರಾಸ್ ಮ್ಯಾಟ್, ಉತ್ತರ ಪ್ರದೇಶದ ಸಹರಾನ್‌ಪುರ ಪೀಠೋಪಕರಣಗಳು ಇರಲಿವೆ.

ರಾಜಸ್ಥಾನದ ಜನಪದ ಗಾಯಕ ಉಸ್ತಾದ್ ಲತೀಫ್ ಖಾನ್ ಅವರು 10 ದಿನ ಗಾಯನ ಕಾರ್ಯಕ್ರಮ ನೀಡಲಿದ್ದಾರೆ. ಮೇಳವು ಪ್ರತಿದಿನ ಬೆಳಿಗ್ಗೆ 10.30ರಿಂದ ರಾತ್ರಿ 8.30ರವರೆಗೆ ಸಾರ್ವಜನಿಕರಿಗೆ ತೆರೆದಿರಲಿದೆ ಎಂದು 'ದಿ ಇಂಡಿಯನ್ ಆರ್ಟಿಸಾನ್ಸ್ ಹಾಟ್' ಸಹ ಸಂಸ್ಥಾಪಕರಾದ ನಾಗರಾಜ್ ಹುಂಡೆಕರ್, ಅಹ್ಮದ್ ಖಾನ್ ಅವರು ತಿಳಿಸಿದರು.

ಮಾಹಿತಿಗಾಗಿ 9880331685, 988650 7007, 9972670107 ಸಂಪರ್ಕಿಸಬಹುದು.

ಮೇಕೆದಾಟು: ₹9 ಸಾವಿರ ಕೋಟಿಯ ಡಿಪಿಆರ್ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೇಕೆದಾಟು ಬಳಿ ಸಮತೋಲನ ಜಲಾಶಯ ನಿರ್ಮಿಸುವ ಉದ್ದೇಶದಿಂದ ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ಕೇಂದ್ರ ಜಲ ಆಯೋಗಕ್ಕೆ ಕರ್ನಾಟಕ ಜಲಸಂಪನ್ಮೂಲ ಇಲಾಖೆ ಸಲ್ಲಿಸಿದೆ.

ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು ಜಲ ಆಯೋಗಕ್ಕೆ ರಾಜ್ಯ ಸರ್ಕಾರ 2019ರ ಜನವರಿಯಲ್ಲಿ ಸಲ್ಲಿಸಿತ್ತು. ಆಗ ಯೋಜನೆಯ ಮೊತ್ತ ₹9 ಸಾವಿರ ಕೋಟಿ ಆಗಿತ್ತು.

ಡಿಪಿಆರ್‌ಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವೇ ಅನುಮೋದನೆ ನೀಡಬೇಕು ಎಂದು ಜಲ ಆಯೋಗ ಷರತ್ತು ವಿಧಿಸಿತ್ತು.

'ಡಿಪಿಆರ್ ಕುರಿತು ಪ್ರಾಧಿಕಾರ ಚರ್ಚೆ ನಡೆಸಬಹುದು. ಆದರೆ, ಈ ಪ್ರಸ್ತಾವದ ಆಧಾರದಲ್ಲಿ ಅಧಿಕೃತವಾಗಿ ಯಾವುದೇ ಅಭಿಪ್ರಾಯಕ್ಕೆ ಬರುವಂತಿಲ್ಲ' ಎಂದು ಸುಪ್ರೀಂ ಕೋರ್ಟ್ 2022ರ ಜುಲೈನಲ್ಲಿ ನಿರ್ದೇಶನ ನೀಡಿತ್ತು. ಆ ಬಳಿಕ ಡಿಪಿಆರ್ ಅನ್ನು ಜಲ ಆಯೋಗಕ್ಕೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಮರಳಿಸಿತ್ತು.

ಕಾವೇರಿ ನ್ಯಾಯಮಂಡಳಿ ತೀರ್ಪು ಉಲ್ಲಂಘಿಸಿ ಕರ್ನಾಟಕ ಸರ್ಕಾರವು ಜಲಾಶಯ ನಿರ್ಮಾಣಕ್ಕೆ ಮುಂದಾಗಿದೆ ಎಂದು ಆರೋಪಿಸಿ ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಈ ಅರ್ಜಿಯನ್ನು ಸುಪ್ರೀಂ ಕೋರ್ಟ್ 2025ರ ನವೆಂಬರ್ 13ರಂದು ವಜಾಗೊಳಿಸಿತ್ತು.

ಆ ಬಳಿಕ ಜಲ ಆಯೋಗವು ಯೋಜನೆಯ ಮೌಲ್ಯಮಾಪನ ಪ್ರಕ್ರಿಯೆ ಆರಂಭಿಸಿತು. ಜಲಸಂಪನ್ಮೂಲ ಇಲಾಖೆಯಿಂದ ಕೆಲವೊಂದು ವಿವರಣೆಗಳನ್ನು ಕೇಳಿತು. ಈ ಆಕ್ಷೇಪಗಳಿಗೆ ಇಲಾಖೆಯು ಏಪ್ರಿಲ್ 21ರಂದು ಉತ್ತರ ನೀಡಿದೆ. ಜತೆಗೆ, ಯೋಜನೆಯ ಡಿಪಿಆರ್ ಸಲ್ಲಿಸಿದೆ. ಆದರೆ, ಯೋಜನಾ ಮೊತ್ತದಲ್ಲಿ ಯಾವುದೇ ಬದಲಾವಣೆ ಆಗಿಲ್ಲ.

ವಿದ್ಯಾರ್ಥಿನಿಯರ ನಾಪತ್ತೆ ಸಿಐಡಿ ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಆಧಾರ್ ಕಾರ್ಡ್ ತೆಗೆದುಕೊಂಡು ಹೋಗಿರುವ ವಿದ್ಯಾರ್ಥಿನಿಯರು

ಬೆಂಗಳೂರು: ನಾಲ್ಕು ತಿಂಗಳ ಹಿಂದೆ ವಿದ್ಯಾರಣ್ಯಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಇಬ್ಬರು ವಿದ್ಯಾರ್ಥಿನಿಯರ ನಿಗೂಢ ನಾಪತ್ತೆ ಪ್ರಕರಣವನ್ನು ರಾಜ್ಯ ಸರ್ಕಾರವು ಹೆಚ್ಚಿನ ತನಿಖೆಗಾಗಿ ಸಿಐಡಿಗೆ ವಹಿಸಿದೆ.

ದ್ವಿತೀಯ ಪಿಯು ವಿದ್ಯಾರ್ಥಿನಿ ತನಿಷ್ಕಾ ಹಾಗೂ ಪ್ರಥಮ ಪಿಯು ವಿದ್ಯಾರ್ಥಿನಿ ತೇಜಸ್ವಿನಿ ಜ.31ರಂದು ನಿಗೂಢವಾಗಿ ನಾಪತ್ತೆ ಆಗಿದ್ದರು. ಅಂದು ಮನೆಯಿಂದ ಆಧಾರ್ ಕಾರ್ಡ್‌ಗಳನ್ನು ತೆಗೆದುಕೊಂಡು ಹೊರಟಿದ್ದ ವಿದ್ಯಾರ್ಥಿನಿಯರು ಇದುವರೆಗೂ ವಾಪಸ್ ಬಂದಿಲ್ಲ. ಆತಂಕಗೊಂಡ ಪೋಷಕರು ವಿದ್ಯಾರಣ್ಯಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ವಿದ್ಯಾರ್ಥಿನಿಯರು ಕೆಲವು ಜಂಕ್ಷನ್ ದಾಟುತ್ತಿರುವ ದೃಶ್ಯವು ಸಿ.ಸಿ. ಟಿ.ವಿ ಕ್ಯಾಮೆರಾದಲ್ಲಿ ಸೆರೆ ಆಗಿತ್ತು. ವಿದ್ಯಾರ್ಥಿನಿಯರು ಯಾವುದೇ ಮೊಬೈಲ್ ಅಥವಾ ಎಟಿಎಂ ಕಾರ್ಡ್‌ಗಳನ್ನು ಬಳಸಿಲ್ಲ ಎಂಬುದು ಇದುವರೆಗೂ ನಡೆದ ತನಿಖೆಯಿಂದ ಗೊತ್ತಾಗಿದೆ. ನಾಲ್ಕು ತಿಂಗಳಿನಿಂದ ಅವರು ತಮ್ಮ ಯಾವುದೇ ಸ್ನೇಹಿತರು ಅಥವಾ ಕುಟುಂಬ ಸದಸ್ಯರನ್ನು ಸಂಪರ್ಕಿಸಿಲ್ಲ. ಹೀಗಾಗಿ, ವಿದ್ಯಾರ್ಥಿನಿಯರನ್ನು ಪತ್ತೆ ಹಚ್ಚುವುದು ದೊಡ್ಡ ಸವಾಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಿದ್ಯಾರ್ಥಿನಿಯರು ಮಲೆ ಮಹದೇಶ್ವರ ಬೆಟ್ಟಕ್ಕೆ ಹೋಗಿದ್ದರು ಎಂಬುದು ಪತ್ತೆಯಾಗಿದೆ. ಬಳಿಕ ಕೆಲವು ಸುಳಿವು ಆಧರಿಸಿ ಮುಂಬೈ, ಚೆನ್ನೈ, ಕೊಯಮತ್ತೂರು, ದೆಹಲಿ, ಕಾಶಿ, ಕೇರಳ, ಚಾಮರಾಜನಗರ ಹಾಗೂ ಮೈಸೂರು ಸೇರಿ ದೇಶದ ಸುಮಾರು 100ಕ್ಕೂ ಹೆಚ್ಚು ಸ್ಥಳಗಳಲ್ಲಿ ಹುಡುಕಾಟ ನಡೆಸಲಾಗಿದೆ. ಆದರೆ, ಯಾವುದೇ ಸುಳಿವು ಸಿಕ್ಕಿಲ್ಲ ಎಂದು ತನಿಖಾ ಮೂಲಗಳು ತಿಳಿಸಿವೆ.

ವಿದ್ಯಾರ್ಥಿನಿಯರ ಪೋಷಕರು ಹೈಕೋರ್ಟ್‌ನಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ಸಹ ಸಲ್ಲಿಸಿದ್ದರು. ಅಲ್ಲದೇ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ಪೋಷಕರು ಒತ್ತಾಯಿಸಿದ್ದರು.

ಬೆದರಿಕೆ: ಪ್ರಕರಣ

ಬೆಂಗಳೂರು: ಡಯಾಗ್ನಾಸ್ಟಿಕ್‌ವೊಂದರ ಸಿಬ್ಬಂದಿ ಮಹಿಳೆ ಜತೆ ಅನುಚಿತವಾಗಿ ವರ್ತಿಸಿದಲ್ಲದೆ, ಜೀವ ಬೆದರಿಕೆ ಹಾಕಿರುವ ಸಂಬಂಧ ಬ್ಯಾಡರಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

33 ವರ್ಷದ ಮಹಿಳೆ ನೀಡಿದ ದೂರಿನ ಮೇಲೆ ಲ್ಯಾಬ್‌ನ ವ್ಯವಸ್ಥಾಪಕ ಪ್ರಭಾಕರ್ ಹಾಗೂ ಸಿಬ್ಬಂದಿ ಪ್ರದೀಪ್ ಅವರ ವಿರುದ್ಧ ಬ್ಯಾಡರಹಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

'ಮಹಿಳೆಯೊಬ್ಬರು ಥೈರಾಯ್ಡ್ ತಪಾಸಣೆಗಾಗಿ ಡಯಾಗ್ನಾಸ್ಟಿಕ್‌ಗೆ ತೆರಳಿದ್ದಾರೆ. ನಂತರ, ರಕ್ತದ ಮಾದರಿ ಸಂಗ್ರಹಿಸುವ ಸಂದರ್ಭದಲ್ಲಿ ಲ್ಯಾಬ್ ತಂತ್ರಜ್ಞ ಬೇಜವಾಬ್ದಾರಿಯಿಂದ ವರ್ತಿಸಿದ್ದಾನೆ. ರಕ್ತ ತೆಗೆಯುವಾಗ ನೋವಾಗುತ್ತಿದೆ ಎಂದು ಮಹಿಳೆ ಕಿರುಚಿಕೊಂಡರೂ ನಿರ್ಲಕ್ಷ್ಯ ವಹಿಸಿ ಬಲವಂತವಾಗಿ ರಕ್ತ ತೆಗೆಯಲಾಗಿದೆ. ಅದರ ಪರಿಣಾಮವಾಗಿ ಮಹಿಳೆಯ ಕೈನಲ್ಲಿ ರಕ್ತ ಹೆಪ್ಪುಗಟ್ಟಿ, ತೀವ್ರ ಸ್ವರೂಪದ ಊತ ಕಾಣಿಸಿಕೊಂಡಿದೆ' ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ವಂಚನೆ: ದೋಷಾರೋಪ ಪಟ್ಟಿ ಸಲ್ಲಿಕೆ

ಬೆಂಗಳೂರು: ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರ ವಿಶೇಷ ಕರ್ತವ್ಯಾಧಿಕಾರಿ ಎಂದು ಹೇಳಿಕೊಂಡು ಜಮ್ಮು–ಕಾಶ್ಮೀರದ ವೈದ್ಯರೊಬ್ಬರಿಗೆ ₹2.70 ಕೋಟಿ ವಂಚಿಸಿದ ಪ್ರಕರಣದ ತನಿಖೆ ಪೂರ್ಣಗೊಳಿಸಿರುವ ವಿಜಯನಗರ ಠಾಣೆಯ ಪೊಲೀಸರು, ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಆರೋಪಪಟ್ಟಿ ಸಲ್ಲಿಸಿದ್ದಾರೆ.

ಬಂಧನಕ್ಕೆ ಒಳಗಾಗಿ ಸದ್ಯ ಜಾಮೀನಿನ ಮೇಲೆ ಬಿಡುಗಡೆ ಆಗಿರುವ ಆರೋಪಿ ಸುಜಯೇಂದ್ರ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ ಎಂದು ಪೊಲೀಸರು ಹೇಳಿದರು. ಅಂದಾಜು 1 ಸಾವಿರಕ್ಕೂ ಅಧಿಕ ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಸಚಿವ ಅಮಿತ್ ಷಾ ಅವರ ದತ್ತು ಪುತ್ರ ಮತ್ತು ಅವರ ವಿಶೇಷ ಕರ್ತವ್ಯಾಧಿಕಾರಿ ಎಂದು ಹೇಳಿಕೊಂಡು ಕರ್ನಾಟಕ ರಾಜ್ಯಪಾಲರ ಲೆಟರ್ ಹೆಡ್ ಬಳಸಿಕೊಂಡು ವಂಚಿಸಲಾಗಿದೆ ಎಂದು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.



ಕಬ್ಬನ್ ರಸ್ತೆಯಲ್ಲಿ ಮೊಣಕಾಲುವರೆಗೆ ನೀರು ನಿಂತಿದ್ದರಿಂದ ಮೆಟ್ರೊ ನಿಲ್ದಾಣಕ್ಕೆ ಹೋಗಲು ಪ್ರಯಾಣಿಕರು ಪರದಾಡಿದರು
ಪ್ರಜಾವಾಣಿ ಚಿತ್ರಗಳು: ಬಿ.ಕೆ. ಜನಾರ್ದನ್



ಪ್ಯಾಲೇಸ್ ಗುಟ್ಟಹಳ್ಳಿ ಬಳಿ ರಸ್ತೆಯಲ್ಲಿ ಹರಿದ ಮಳೆ ನೀರಿನ ನಡುವೆ ವಾಹನ ಸವಾರರು ಪರದಾಡಿದರು



ಬಳ್ಳಾರಿ ರಸ್ತೆಯಲ್ಲಿ ಕಂಡು ಬಂದ ವಾಹನ ದಟ್ಟಣೆ
ಪ್ರಜಾವಾಣಿ ಚಿತ್ರಗಳು: ಎಂ. ಎಸ್. ಮಂಜುನಾಥ್

ನಗರಕ್ಕೆ ತಂಪೆರೆದ ಆಲಿಕಲ್ಲು ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಸಿಲಿನ ತಾಪದಿಂದ ಬಳಲುತ್ತಿದ್ದ ನಗರದ ನಾಗರಿಕರಿಗೆ, ದಾಖಲೆ ಪ್ರಮಾಣದಲ್ಲಿ ಆಲಿಕಲ್ಲಿನೊಂದಿಗೆ ಸುರಿದ ಮಳೆ ತಂಪೆರೆಯಿತು.

ಕಳೆದ ಡಿಸೆಂಬರ್ ನಂತರ ಉತ್ತಮ ಮಳೆಯಾಗದ ಕಾರಣ ನಗರದ ತಾಪಮಾನ ಹೆಚ್ಚಾಗಿತ್ತು. 36 ಡಿಗ್ರಿ ಸೆಲ್ಸಿಯಸ್‌ಗೂ ಅಧಿಕ ಉಷ್ಣಾಂಶದಿಂದಾಗಿ ಮಧ್ಯಾಹ್ನದ ವೇಳೆ ಹೊರಗೆ ತಿರುಗಾಡುವುದೂ ಕಷ್ಟಕರವಾಗಿತ್ತು. ಅದರೆ, ಬುಧವಾರ ಸಂಜೆ ಒಂದು ಗಂಟೆಗೂ ಹೆಚ್ಚು ಕಾಲ ಸುರಿದ ಮಳೆ ನಗರದ ವಾತಾವರಣವನ್ನು ತಣ್ಣಗಾಗಿಸಿತು. ಸಂಜೆ ವೇಳೆಗೆ ಉಷ್ಣಾಂಶ 22 ಡಿಗ್ರಿ ಸೆಲ್ಸಿಯಸ್‌ಗೆ ಇಳಿದಿತ್ತು.

ಬುಧವಾರ ಬೆಳಿಗ್ಗೆಯಿಂದ ಬಿಸಿಲಿನ ವಾತಾವರಣ ಇದ್ದರೂ, ಸಂಜೆ ಸುಮಾರು 4.30ರ ವೇಳೆಗೆ ಮೋಡ ಕವಿಯಿತು. ನಗರದ ಹಲವು ಭಾಗಗಳಲ್ಲಿ 5 ಗಂಟೆ ವೇಳೆಗೆ ಆರಂಭವಾದ ಮಳೆ, ಬಿರುಸುಗೊಂಡು ಬಿರುಗಾಳಿ, ಗುಡುಗು, ಸಿಡಿಲು, ಆಲಿಕಲ್ಲಿನೊಂದಿಗೆ ಭರ್ಜರಿಯಾಗಿ ಸುರಿಯಿತು.

ಸಂಜೆ ವೇಳೆಗೆ ಬಿರುಸಾದ ಮಳೆಯಾಯಿತು. ರಸ್ತೆಯಲ್ಲಿ ನೀರು ಹೆಚ್ಚಾಗಿ ನಿಂತಿದ್ದರಿಂದ ವಾಹನ ಸವಾರರು ಪರಿತಪಿಸಿದರು. ಆಲಿಕಲ್ಲು ಕೂಡ ಸುರಿದಿದ್ದರಿಂದ ದ್ವಿಚಕ್ರ ವಾಹನ ಸವಾರರು ಪರದಾಡಿದರು.

ನಗರದಲ್ಲಿ ಇತ್ತೀಚಿನ ದಶಕಗಳಲ್ಲಿ ಕಾಣದಷ್ಟು ಪ್ರಮಾಣದಲ್ಲಿ ಆಲಿಕಲ್ಲು ಸುರಿಯಿತು. ರಸ್ತೆಯ ಬದಿಯಲ್ಲಿ ಮಳೆ ನೀರಿನೊಂದಿಗೆ ಆಲಿಕಲ್ಲುಗಳು ತೇಲುತ್ತಿದ್ದವು. ರಸ್ತೆ, ಪಾದಚಾರಿ ಮಾರ್ಗದಲ್ಲಿ ಬೆಳ್ಳನೆಯ ಹೊದಿಕೆ ಸೃಷ್ಟಿಯಾಗಿತ್ತು. ವಿಧಾನಸೌಧ, ವಿಕಾಸ ಸೌಧ, ಲೋಕಭವನ, ಕಲ್ಯಾಣ ಮಂಪಟಗಳ ಬೃಹತ್ ಆವರಣಗಳಲ್ಲಿ ಆಲಿಕಲ್ಲುಗಳ ರಾಶಿ ರಾಶಿ ಬಿದ್ದಿತ್ತು.

ಮಹಾತ್ಮಗಾಂಧಿ ರಸ್ತೆ, ಚರ್ಚ್ ಸ್ಟ್ರೀಟ್, ಕಮರ್ಷಿಯಲ್ ಸ್ಟ್ರೀಟ್, ಶಿವಾಜಿನಗರ ಸೇರಿದಂತೆ ಹಲವು ಪ್ರದೇಶಗಳಲ್ಲಿ ವಾಣಿಜ್ಯ ಮಳಿಗೆಗಳಿಗೆ ಮಳೆ ನೀರು ನುಗ್ಗಿ, ಸಾಮಗ್ರಿಗಳಿಗೆ ಹಾನಿಯಾಯಿತು.

ಮೇಲ್ಸೇತುವೆಗಳು ಸೇರಿದಂತೆ ರಸ್ತೆಗಳಲ್ಲಿ ಹೆಚ್ಚು ನೀರು ನಿಂತಿದ್ದರಿಂದ ಮಳೆ ನಿಂತ ಮೇಲೂ ವಾಹನ ದಟ್ಟಣೆ ಉಂಟಾಗಿತ್ತು. ನಗರದ ಕೆಲವು ಭಾಗಗಳಲ್ಲಿ ಮಧ್ಯರಾತ್ರಿಯವರೆಗೂ ತುಂತುರು ಮಳೆ ಮುಂದುವರಿದಿತ್ತು. ನಗರದಲ್ಲಿ ಇನ್ನೂ ಮೂರು ದಿನ ಭಾರಿ ಮಳೆಯಾಗುವ ಸಂಭವವಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.



ನಗರದ ಎಂ.ಜಿ. ರಸ್ತೆಯ ಪಾದಚಾರಿ ಮಾರ್ಗದಲ್ಲಿ ಬಿದ್ದ ಆಲಿಕಲ್ಲು



ಚರ್ಚ್ ರಸ್ತೆಯಲ್ಲಿ ರಾಶಿ ಬಿದ್ದ ಆಲಿಕಲ್ಲು



ಚರ್ಚ್ ಸ್ಟ್ರೀಟ್‌ನ ಪಾದಚಾರಿ ಮಾರ್ಗದಲ್ಲಿ ಬಿದ್ದ ಆಲಿಕಲ್ಲಿನೊಂದಿಗೆ ಜನರು ಸಂಭ್ರಮಿಸಿದರು

ಹಲವು ರಸ್ತೆಗಳಲ್ಲಿ ವಾಹನ ದಟ್ಟಣೆ

ಮಳೆ ನೀರು ರಸ್ತೆಯಲ್ಲಿ ನಿಂತಿದ್ದರಿಂದ ಹಾಗೂ ಮರಗಳು ಬಿದ್ದಿದ್ದರಿಂದ ನಗರದ ಹಲವು ರಸ್ತೆಗಳಲ್ಲಿ ವಾಹನ ದಟ್ಟಣೆ ಉಂಟಾಗಿತ್ತು. ಬುಧವಾರ ಮಧ್ಯರಾತ್ರಿಯವರೆಗೂ ವಾಹನಗಳ ಸಂಚಾರ ನಿಧಾನಗತಿಯಲ್ಲಿತ್ತು.

ಅಶೋಕ ಪಿಲ್ಲರ್ ವೃತ್ತದಲ್ಲಿ, ಹಳ್ಳಿ ತಿಂಡಿ ಜಂಕ್ಷನ್‌ನಿಂದ ರಾಮಕೃಷ್ಣ ಆಶ್ರಮ–ಬಸವನಗುಡಿಯ ಕಡೆಗೆ, ಬಿಜಿಎಸ್ ಮೇಲ್ಸೇತುವೆಯಲ್ಲಿ ಮಳೆ ನೀರು ನಿಂತಿದ್ದರಿಂದ ಮೈಸೂರು ರಸ್ತೆ ಕಡೆಗೆ, ಅಡಕಮಾರನಹಳ್ಳಿ, ಟ್ಯಾಗೋರ್ ವೃತ್ತ, ಬಸವನಗುಡಿ, ಪೆನ್ಸರ್ ರಸ್ತೆ, ಪುಲಕೇಶಿ ನಗರ, ಫ್ರೇಜರ್ ಟೌನ್, ಐಜಿ ಸರ್ಕಲ್, ನಾಗಾ ಜಂಕ್ಷನ್, ಮೋದಿ ರಸ್ತೆ–ವಿಜಯನಗರ, ಹಳೆಯ ಉದಯ ಟಿವಿ ಜಂಕ್ಷನ್, ಪ್ರೆಸಿಡೆಂಟ್ ಹೋಟೆಲ್–ಶೇಷಾದ್ರಿಪುರ, 46ನೇ ಕ್ರಾಸ್ ಜಯನಗರ, ಬಿನ್ನಿ ಗಿರಣಿ ರಸ್ತೆ–ಚಾಮರಾಜಪೇಟೆ, ಕ್ವೀನ್ಸ್ ಜಂಕ್ಷನ್–ಕಬ್ಬನ್ ಪಾರ್ಕ್, 5ನೇ ಮುಖ್ಯ ರಸ್ತೆ ಜೆ.ಪಿ ನಗರ, ಕೆಜಿ ರಸ್ತೆ–ಉಪ್ಪಾರ್‌ಪೇಟೆ, ಲಾಲ್‌ಬಾಗ್ ಮುಖ್ಯರಸ್ತೆ, ಸಿದ್ದಯ್ಯ ರಸ್ತೆ–ವಿಲ್ಸನ್ ಗಾರ್ಡನ್, ಅರಮನೆ ರಸ್ತೆ–ಸದಾಶಿವನಗರ, ಸೋಮೇಶ್ವರ ದೇವಸ್ಥಾನ–ಬಿಳೇಕಹಳ್ಳಿ, ಕಲ್ಪನಾ ಜಂಕ್ಷನ್–ಹೈಗ್ರೌಂಡ್ಸ್‌ನಲ್ಲಿ ವಾಹನ ದಟ್ಟಣೆ ಉಂಟಾಗಿತ್ತು.

ತಾವರೆಕೆರೆ ಮುಖ್ಯ ರಸ್ತೆ-ಹಾಪ್‌ಕಾಮ್ಸ್ ಕಡೆಗೆ, ಅಯ್ಯಪ್ಪ ಅಂಡರ್‌ಪಾಸ್-ಮಡಿವಾಳ ಪೊಲೀಸ್ ಠಾಣೆ ಕಡೆಗೆ, ದೊಮ್ಮಲೂರು, ಹಳೆಯ ವಿಮಾನ ನಿಲ್ದಾಣ ರಸ್ತೆ–ಅಗರಂ, ಚಿಕ್ಕಪೇಟೆ ಮುಖ್ಯರಸ್ತೆ, ಬನ್ನೇರುಘಟ್ಟ ಮುಖ್ಯರಸ್ತೆ, ಚಿನ್ನಪ್ಪ ಲೇಔಟ್ ಮಹದೇವಪುರ, ಸಾರಕ್ಕಿ ಜಂಕ್ಷನ್, ಕೋಡಿಚಿಕ್ಕನಹಳ್ಳಿ ಮುಖ್ಯರಸ್ತೆ, ಬಿಬಿ ಜಂಕ್ಷನ್–ಮೈಸೂರು ರಸ್ತೆಯಲ್ಲಿ ನಿಧಾನಗತಿಯಲ್ಲಿ ವಾಹನಗಳು ಸಾಗಿದವು.

ಧರೆಗುರುಳಿದ 170 ಮರ

ನಗರದಲ್ಲಿ ಭಾರಿ ಮಳೆಯೊಂದಿಗೆ ಬಿರುಗಾಳಿಯೂ ಬೀಸಿದ್ದರಿಂದ ಸುಮಾರು 170 ಮರಗಳು ಧರೆಗುರುಳಿವೆ. 408ಕ್ಕೂ ಹೆಚ್ಚು ಮರಗಳ ರೆಂಬೆ–ಕೊಂಬೆಗಳು ಬಿದ್ದಿವೆ. ಇದರಿಂದ ಹಲವು ವಸತಿ ಬಡಾವಣೆಗಳೂ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ನಾಗರಿಕರು ಹಾಗೂ ವಾಹನಗಳ ಸಂಚಾರಕ್ಕೆ ಅಡ್ಡಿಯಾಯಿತು.

ಕೆಲವು ಮರಗಳು ಮನೆ ಹಾಗೂ ರಸ್ತೆಯ ಅಕ್ಕಪಕ್ಕದ ವಾಣಿಜ್ಯ ಕಟ್ಟಡಗಳ ಮೇಲೆ ಬಿದ್ದು ಭಾರಿ ಹಾನಿಯಾಗಿದೆ. ನಗರ ಪಾಲಿಕೆಗಳ ತಂಡಗಳ ಸಿಬ್ಬಂದಿ ಮರ ತೆರವುಗೊಳಿಸಲು ಮಧ್ಯರಾತ್ರಿಯವರೆಗೂ ಕಾರ್ಯನಿರ್ವಹಿಸಿದರು.

ಬೆಂಗಳೂರು ಕೇಂದ್ರ ನಗರ ಪಾಲಿಕೆಯ ನಿಯಂತ್ರಣ ಕೊಠಡಿಯಲ್ಲಿ ಅತಿಹೆಚ್ಚು (198) ದೂರುಗಳು ದಾಖಲಾಗಿವೆ. ಪಶ್ಚಿಮ ನಗರ ಪಾಲಿಕೆಯಲ್ಲಿ 176, ದಕ್ಷಿಣ ನಗರ ಪಾಲಿಕೆಯಲ್ಲಿ 105, ಉತ್ತರ ನಗರ ಪಾಲಿಕೆಯಲ್ಲಿ 94 ಹಾಗೂ ಪೂರ್ವ ನಗರ ಪಾಲಿಕೆಯಲ್ಲಿ 5 ದೂರು ದಾಖಲಾಗಿವೆ ಎಂದು ಜಿಬಿಎ ತಿಳಿಸಿದೆ.

ಜಯನಗರ, ಚಿಕ್ಕಪೇಟೆ, ಗಾಂಧಿನಗರ, ಶಿವಾಜಿನಗರ, ಮಹಾಲಕ್ಷ್ಮಿ ಲೇಔಟ್, ಶಾಂತಿನಗರ, ಸಿ.ವಿ. ರಾಮನ್ ನಗರ ವ್ಯಾಪ್ತಿಯಲ್ಲಿ ಅತಿಹೆಚ್ಚು ಮರಗಳು ಧರೆಗುರುಳಿವೆ.



ಪ್ಯಾಲೇಸ್ ರಸ್ತೆಯಲ್ಲಿ ಮರ ಬಿದ್ದು ವಾಹನ ಸವಾರರು ಪರದಾಡಿದರು

ಸಂವಾದದಲ್ಲಿ ನಟ ಪ್ರಕಾಶ್ ರಾಜ್ ಹೇಳಿಕೆ
‘ಖಾಲಿದ್‌ನ ಸೆರೆವಾಸವೇ ಪ್ರತಿರೋಧ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗಲಭೆಗೆ ಪ್ರಚೋದನೆ ನೀಡಿದ ಆರೋಪದಲ್ಲಿ ಜೈಲಿನಲ್ಲಿರುವ ಉಮರ್ ಖಾಲಿದ್‌ನ ಸೆರೆವಾಸವು, ನಮ್ಮ ಸಮಾಜವನ್ನೇ ಸೆರೆಮನೆಯಾಗಿಸುವ ಯತ್ನದ ವಿರುದ್ಧದ ಪ್ರತಿರೋಧದ ಸಂಕೇತ’ ಎಂದು ನಟ ಪ್ರಕಾಶ್ ರಾಜ್ ಹೇಳಿದರು.

2020ರ ಈಶಾನ್ಯ ದೆಹಲಿ ಗಲಭೆಗೆ ಕುಮ್ಮಕ್ಕು ನೀಡಿದ ಆರೋಪದಲ್ಲಿ ಸೆರೆಯಲ್ಲಿರುವ ಉಮರ್ ಖಾಲಿದ್ ಸಂಪಾದಕತ್ವದ ಲೇಖನಗಳ ಸಂಗ್ರಹ, ‘ಉಮರ್ ಖಾಲಿದ್ ಆ್ಯಂಡ್ ಹಿಸ್ ವರ್ಲ್ಡ್’ ಕುರಿತಾದ ಸಂವಾದದಲ್ಲಿ ಅವರು ಈ ಮಾತು ಹೇಳಿದರು. ನಗರದ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ, ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟಿ ಸಂಘಟನೆಯು ಸಂವಾದವನ್ನು ಏರ್ಪಡಿಸಿತ್ತು.



ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ ನಡೆದ ಸಂವಾದದಲ್ಲಿ ರಾಮಚಂದ್ರ ಗುಹಾ, ಜಾನಕಿ ನಾಯರ್ ಮತ್ತು ಪ್ರಕಾಶ್ ರಾಜ್ ಮಾತುಕತೆಯ ಪರಿ – ಪ್ರಜಾವಾಣಿ ಚಿತ್ರ

‘ನಾವು ಇಲ್ಲಿ ಕೂತು ಮಾತನಾಡುತ್ತಿರುವ ಹೊತ್ತಿನಲ್ಲೇ, ‘ದೇಶದ ಸರ್ವೋಚ್ಚ ನಾಯಕ’ರು ಚುನಾವಣಾ ಭಾಷಣ ಮಾಡುತ್ತಿರುತ್ತಾರೆ. ‘ನನಗೆ ಮತ ನೀಡಿ, ನಾನು ನಿಮಗೆ ಸ್ವಾತಂತ್ರ್ಯ ನೀಡುತ್ತೇನೆ’ ಎನ್ನುತ್ತಿರುತ್ತಾರೆ. ಆದರೆ, ಉಮರ್ ಖಾಲಿದ್‌ನಂತವರ ಕಾರಣಕ್ಕೆ ನಾವಿಲ್ಲಿ ಇದ್ದೇವೆ. ಅವನನ್ನು ಜೈಲಿನಲ್ಲಿಟ್ಟು, ಹುದುಗಿಸಲಾಗುತ್ತಿದೆ. ಆದರೆ, ಅವ ಅಲ್ಲೇ ಮಾಗುತ್ತಿದ್ದಾನೆ. ಬಿಡುಗಡೆಯಾಗಿ ಹೊರಬಂದಾಗ ಅವನ ಮಾತು ಇನ್ನಷ್ಟು ತೂಕವಾಗಿರಲಿದೆ’ ಎಂದರು.

ಇತಿಹಾಸಕಾರ ರಾಮಚಂದ್ರ ಗುಹಾ, ‘ಈ ಸಂಗ್ರಹದಲ್ಲಿ ಖಾಲಿದ್‌ನ 12 ಲೇಖನಗಳಿವೆ. ಅಷ್ಟೂ ಲೇಖನಗಳು ಒಬ್ಬೊಬ್ಬ ಭಿನ್ನ ಖಾಲಿದ್‌ನನ್ನು ನಮ್ಮೆದುರು ತೆರೆದಿಡುತ್ತವೆ. ಆತ ಹೊರಗಿದ್ದಾಗ ಬರೆದ ಲೇಖನಗಳಿಗಿಂತ, ಜೈಲಿನಲ್ಲಿ ಕೂತು ಬರೆದ ಲೇಖನಗಳು ಅವನು ಎಷ್ಟು ಮಾಗಿದ್ದಾನೆ ಎಂಬುದನ್ನು ತೋರಿಸುತ್ತವೆ’ ಎಂದರು.

ಇತಿಹಾಸಕಾರರಾದ ಜಾನಕಿ ನಾಯರ್, ‘ಒಂದು ಸಮುದಾಯವನ್ನು ಗುರಿ ಮಾಡಿ ಪ್ರೀತಿಯ ಜಿಹಾದ್, ಆಹಾರ ಜಿಹಾದ್, ಬಟ್ಟೆಯ ಜಿಹಾದ್ ಎಂಬ ಪೊಳ್ಳು ಸಂಕಥನಗಳನ್ನು ಸೃಷ್ಟಿಸಲಾಗಿದೆ. ಖಾಲಿದ್‌ನ ಪುಸ್ತಕವನ್ನು ಗುರಿಯಾಗಿಸಿ ‘ಪುಸ್ತಕ ಜಿಹಾದ್’ ಎಂದೂ ಕರೆದರೆ ಅಚ್ಚರಿಯಿಲ್ಲ’ ಎಂದು ಕಳವಳ ವ್ಯಕ್ತಪಡಿಸಿದರು.

ಉಮರ್ ಖಾಲಿದ್ ಸಂಪಾದಿಸಿರುವ ಈ ಪುಸ್ತಕದಲ್ಲಿ 64 ವಿವಿಧ ಲೇಖಕರ ಬರಹಗಳಿವೆ.

ಮಾತುಕತೆ ವಿಫಲ: ಮೇ 20ರಿಂದ ಸಾರಿಗೆ ನೌಕರರ ಮುಷ್ಕರ


ಬೆಂಗಳೂರು: ವೇತನ ಬಾಕಿ ಪಾವತಿ ಸೇರಿದಂತೆ ಸಾರಿಗೆ ನೌಕರರ ಬೇಡಿಕೆ ಈಡೇರಿಕೆ ಕುರಿತು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರ ಜತೆ ಬುಧವಾರ ನಡೆಸಿದ ಮಾತುಕತೆ ವಿಫಲವಾಗಿದ್ದು, ಮೇ 20ರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸುವುದಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಹೇಳಿದೆ.

‘38 ತಿಂಗಳ ವೇತನ ಬಾಕಿ ನೀಡಬೇಕು. 2024ರ ಜನವರಿಯಿಂದ ಜಾರಿಗೆ ಬರುವಂತೆ ವೇತನ ಪರಿಷ್ಕರಣೆ ಮಾಡಬೇಕು. ಶೇಕಡ 25ರಷ್ಟು ವೇತನ ಹೆಚ್ಚಳ ಮಾಡಬೇಕು. ಇತರೆ ಬೇಡಿಕೆಗಳನ್ನು ಕಾಲಮಿತಿಯ ಒಳಗೆ ಈಡೇರಿಸಬೇಕು ಎಂದು ಸಚಿವರಿಗೆ ಮನವಿ ಮಾಡಿದೆವು. ಅವರು ಶೇ 7ರಷ್ಟು ವೇತನ ಹೆಚ್ಚಳ ಮಾಡುವುದಾಗಿ, 2025ರ ಏಪ್ರಿಲ್ 1ರಿಂದ ಪರಿಗಣಿಸುವುದಾಗಿ ಹೇಳಿದರು. ಹಾಗಾಗಿ, ಮಾತುಕತೆ ಫಲಪ್ರದವಾಗಲಿಲ್ಲ’ ಎಂದು ಕೆಎಸ್‌ಆರ್‌ಟಿಸಿ ಸ್ಟಾಫ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷೆ ಜ್ಯೋತಿ ಅನಂತಸುಬ್ಬರಾವ್ ತಿಳಿಸಿದರು.

ಕೋವಿಡ್ ಸಮಯದಲ್ಲಿ ಮೃತಪಟ್ಟವರಿಗೆ ಇದುವರೆಗೂ ಪರಿಹಾರ ನೀಡಿಲ್ಲ. ಇಂತಹ ವಿಷಯಗಳಲ್ಲಿ ಸರ್ಕಾರ ಸ್ಪಂದನೆ ತೋರುವ ಬದಲು, ಸಮಯ ವ್ಯರ್ಥ ಮಾಡುತ್ತಿದೆ ಎಂದು ಜ್ಯೋತಿ ದೂರಿದರು.

ನಗರದಲ್ಲಿ ಇಂದು

ಅನ್ನಪೂರ್ಣಾಂಬ ಸಮೇತ ನಗರೇಶ್ವಸ್ವಾಮಿಯ 142ನೇ ಬ್ರಹ್ಮ ರಥೋತ್ಸವ: ಬೆಳಿಗ್ಗೆ 7ಕ್ಕೆ ಮೂಲ ದೇವರಿಗೆ ಪಂಚಾಮೃತ ಅಭಿಷೇಕ, ಕಲಶ ಸ್ಥಾಪನೆ, ನಗರೇಶ್ವರಸ್ವಾಮಿಗೆ ಏಕವಾರ ರುದ್ರಾಭಿಷೇಕ, ಗಣಪತಿ, ನವಗ್ರಹ ಪರಿವಾರ ದೇವತಾಸಹಿತ ಮಹಾಹೋಮ, ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ, 3ಕ್ಕೆ ಗಿರಿಜಾ ಕಲ್ಯಾಣೋತ್ಸವ, ಸಂಜೆ 4.30ಕ್ಕೆ ಅಡ್ಡಪಲ್ಲಕ್ಕಿ ಪ್ರಾಕಾರೋತ್ಸವ, 5ಕ್ಕೆ ಚಿಕ್ಕರಥದಲ್ಲಿ ರಾಜಬೀದಿ ಮೆರವಣಿಗೆ, ಆಯೋಜನೆ ಮತ್ತು ಸ್ಥಳ: ಬಿ.ಎ.ಎಸ್.ವಿ. (ನಗರ್ತ) ಸಮಿತಿ, ನಗರೇಶ್ವರಸ್ವಾಮಿ ದೇವಸ್ಥಾನದ ಆವರಣ, ನಗರ್ತಪೇಟೆ.




ಹಂ.ಪ. ನಾಗರಾಜಯ್ಯ

‘ಯುದ್ಧ ಬೇಡ–ಶಾಂತಿ ಜಾಥಾ’ಗೆ ಚಾಲನೆ: ಹಂ.ಪ. ನಾಗರಾಜಯ್ಯ, ಉಪಸ್ಥಿತಿ: ಜಿ.ಬಿ. ಶಿವರಾಜು, ವೂಡೇ ಪಿ. ಕೃಷ್ಣ, ಎಂ.ಸಿ. ನರೇಂದ್ರ, ಆಯೋಜನೆ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಶೇಷಾದ್ರಿಪುರಂ ಶಿಕ್ಷಣ ದತ್ತಿ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 9.30

ಉಪನ್ಯಾಸ, ಪುಸ್ತಕಗಳ ಪ್ರದರ್ಶನದ ಉದ್ಘಾಟನೆ: ಬಂಜಗೆರೆ ಜಯಪ್ರಕಾಶ್, ಅತಿಥಿ: ನ. ರವಿಕುಮಾರ, ಅಧ್ಯಕ್ಷತೆ: ಎಸ್.ಎನ್. ವೆಂಕಟೇಶ್, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ಯಲಹಂಕ ಉಪನಗರ, ಬೆಳಿಗ್ಗೆ 10.30

ಆರೋಹಣ: ಅತಿಥಿಗಳು: ರಾಗಿಣಿ ದ್ವಿವೇದಿ, ಎ.ಸಿ. ಶಣ್ಮುಗಂ, ಎ.ಸಿ.ಎಸ್. ಅರುಣ್ ಕುಮಾರ್, ಆಯೋಜನೆ ಮತ್ತು ಸ್ಥಳ: ಡಾ.ಎಸಿಎಸ್ ಕಾಲೇಜ್ ಆಫ್ ಎಂಜಿನಿಯರಿಂಗ್, ಎಸಿಎಸ್ ಕನ್ವೆನ್ಷನ್ ಸೆಂಟರ್, ಬೆಳಿಗ್ಗೆ 11



ರಾಗಿಣಿ ದ್ವಿವೇದಿ

ವಾರ್ಷಿಕೋತ್ಸವ, ಸನ್ಮಾನ ಸಮಾರಂಭ: ಸಂಗೀತ ಕಾರ್ಯಕ್ರಮ: ದಿ ಅಕೌಸ್ಟಿಕ್ ಸಾಗ, ಕ್ರೀಡಾಕೂಟದ ಬಹುಮಾನ ವಿತರಣೆ: ಎಂ. ಚಂದ್ರಶೇಖರ್ ರೆಡ್ಡಿ, ರೇಖಾ ಬಿ.ಎಸ್., ವಿವೇಕ್ ಸುಬ್ಬಾರೆಡ್ಡಿ, ಸನ್ಮಾನ ಸ್ವೀಕರಿಸುವವರು: ಕೃಷ್ಣ ಎಸ್. ದೀಕ್ಷಿತ್, ಸತೀಶ ಜಾರಕಿಹೊಳಿ, ಅತಿಥಿ: ಕೆ. ಶಶಿಕಿರಣ್ ಶೆಟ್ಟಿ, ಆಯೋಜನೆ: ಬೆಂಗಳೂರು ವಕೀಲರ ಸಂಘ, ಸ್ಥಳ: ಸಿಟಿ ಸಿವಿಲ್ ಕೋರ್ಟ್‌ನ ಆವರಣ, ಮಧ್ಯಾಹ್ನ 12.30ರಿಂದ

ಕಾಜಾಣ ನಾಟಕೋತ್ಸವ–2026: ಚಾಲನೆ: ಜೆ.ಕೆ. ಶ್ರೀನಿವಾಸಮೂರ್ತಿ, ಅತಿಥಿಗಳು: ಸುರಭಿ ರಘು, ಎಸ್.ಎಲ್.ಎನ್. ಸ್ವಾಮಿ, ಎನ್.ಎಲ್. ಶಾಂತಕುಮಾರ್, ಅಮರೇಂದ್ರ ಹೊಲ್ಲಂಬಳ್ಳಿ, ಜಿಪಿಜಿ ಚಂದ್ರು, ‘ಕಾಜಾಣ ರಂಗಗೌರವ’ ಸ್ವೀಕರಿಸುವವರು: ರಾಜಗುರು ಹೊಸಕೋಟೆ, ನಯನ ಸೂಡ, ಹನು ರಾಮಸಂಜೀವ, ಚಾಂದಿನಿ, ಉಪಸ್ಥಿತಿ: ಲಕ್ಷ್ಮಿ ರಘುನಂದನ್, ‘ನಾಗಸಂಪಿಗೆ’, ‘ಪಂಚಗವ್ಯ’ ನಾಟಕಗಳ ಪ್ರದರ್ಶನ, ಆಯೋಜನೆ: ಕಾಜಾಣ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 4ರಿಂದ

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ವಿಶ್ರುತ ಸ್ಕೂಲ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್‌ನ ವಿದ್ಯಾರ್ಥಿಗಳು, ನಿರ್ದೇಶನ: ವಸಂತ ಲಕ್ಷ್ಮಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಐದನೇ ಬಡಾವಣೆ, ಜಯನಗರ, ಸಂಜೆ 5.15

2025–26ನೇ ಸಾಲಿನ ‘ಕರ್ನಾಟಕ ಕಲಾಶ್ರೀ ಪ್ರಶಸ್ತಿ’ ಪ್ರದಾನ: ಶಿವರಾಜ ಎಸ್. ತಂಗಡಗಿ, ಅತಿಥಿ: ಪಿ.ಸಿ.ಮೋಹನ್, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಉಪಸ್ಥಿತಿ: ಜೆ. ಮಂಜುನಾಥ್, ಬಿ.ಎಸ್. ಮಂಜುನಾಥಸ್ವಾಮಿ, ಶುಭ ಧನಂಜಯ, ಆಯೋಜನೆ: ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

ನರಸಿಂಹ ಜಯಂತಿ: ಆಯೋಜನೆ ಮತ್ತು ಸ್ಥಳ: ಇಸ್ಕಾನ್ ಹರೇ ಕೃಷ್ಣ ಹಿಲ್, ರಾಜಾಜಿನಗರ ಮತ್ತು ಇಸ್ಕಾನ್ ವೈಕುಂಠ ಹಿಲ್, ವಸಂತಪುರ, ಸಂಜೆ 6

ದಾಸವಾಣಿ: ಗಾಯನ: ಸೌಮ್ಯ ಗಿರೀಶ್, ಸಂಧ್ಯಾ ರಂಗನಾಥ್, ಕೀ–ಬೋರ್ಡ್: ಟಿ.ಎಸ್. ರಮೇಶ್, ತಬಲಾ: ಶ್ರೀನಿವಾಸ ಕಾಖಂಡಕಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಆರನೇ ಹಂತ, ಬನಶಂಕರಿ, ಸಂಜೆ 7



ಮಳೆ ಅಬ್ಬರ...ನಲುಗಿದ ನಗರ





ದುರಂತದ ಸ್ಥಳದಲ್ಲಿ ಬಿದ್ದಿದ್ದ ಕಲ್ಲುಗಳ ರಾಶಿ ಹಾಗೂ ವ್ಯಾಪಾರದ ವಸ್ತುಗಳು
ಚಿತ್ರ: ವಿ. ಪುಷ್ಕರ್

ಬೈಕ್ ಯಾರಿಗೆ ಕೊಡಿಸಲಿ, ತಮ್ಮ ಬದುಕಲೆಂದು ಪ್ರಾರ್ಥಿಸಿದ್ದೆ: ಅಣ್ಣಂದಿರ ವೇದನೆ

ಕೈಕೊಟ್ಟ ವಿದ್ಯುತ್

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗಾಯಾಳುಗಳ ಆರೋಗ್ಯ ವಿಚಾರಿಸಿ ಹೊರ ಬರುತ್ತಿದ್ದಂತೆ ಬೌರಿಂಗ್ ಆಸ್ಪತ್ರೆಯ ಅಪಘಾತ ಚಿಕಿತ್ಸಾ ಘಟಕದಲ್ಲಿ ವಿದ್ಯುತ್ ಕಡಿತವಾಯಿತು. ಎರಡು ನಿಮಿಷ ಅವರು ಕತ್ತಲಲ್ಲಿ ನಿಂತಿದ್ದರು. ಕೂಡಲೇ ಅಧಿಕಾರಿಗಳು ವಿದ್ಯುತ್ ಸಂಪರ್ಕ ಸರಿಪಡಿಸುವಂತೆ ನೋಡಿಕೊಂಡರು.

ಮಡುಗಟ್ಟಿದ ದುಃಖ ಕುಟುಂಬಸ್ಥರ ಆಕ್ರಂದನ

• ಉಮೇಶ ಭಟ್ಟ ಪಿ. ಎಚ್

ಬೆಂಗಳೂರು: 'ನನಗೆ ಆಟದ ಸಾಮಾನು ಕೊಡಿಸು ಎಂದು ಎರಡು ವಾರದಿಂದ ಹಟ ಹಿಡಿದಿದ್ದಳು. ಬುಧವಾರ ರಾತ್ರಿಯೂ ಕೇಳಿದ್ದಳು. ಒಂದೆರಡು ದಿನ ಕಾಯುವಂತೆ ಸಮಾಧಾನ ಮಾಡಿದ್ದೆ. ಆದರೆ, ಅಲ್ಲಾ ನನ್ನ ಸಹೋದರಿಯನ್ನು ಕರೆದುಕೊಂಡು ಬಿಟ್ಟ. ಆಟದ ಸಾಮಾನು ಯಾರಿಗೆ ಕೊಡಿಸಲಿ'

ಎಡೆಬಿಡದೇ ಸುರಿದ ಮಳೆಯಿಂದ ಶಿವಾಜಿನಗರದ ಬೌರಿಂಗ್ ಆಸ್ಪತ್ರೆ ಆವರಣದಲ್ಲಿ ನಡೆದ ದುರಂತದಲ್ಲಿ ಕೆ.ಜಿ ಹಳ್ಳಿ ನಿವಾಸಿ, ಆರು ವರ್ಷದ ಮುಸವೀರ್ ಬೇಗಂ ಎನ್ನುವ ಬಾಲಕಿ ಮೃತಪಟ್ಟಿದ್ದು, ಈ ವಿಚಾರ ತಿಳಿದು ಆಕೆಯ ಸಹೋದರ ಜಾವೇದ್ ಅಲ್ಲಿಗೆ ಬಂದಾಗ ಆತನ ಆಕ್ರಂದನ ಮುಗಿಲು ಮುಟ್ಟಿತ್ತು. ಆತನೊಂದಿಗೆ ಬಂದಿದ್ದ ಐದಾರು ಮಂದಿ ಸಮಾಧಾನಪಡಿಸಲು ಯತ್ನಿಸಿದರೂ ಸಹೋದರಿ ನೆನಪಿಸಿಕೊಂಡು ಬಿಕ್ಕಿ ಬಿಕ್ಕಿ ಅಳುತ್ತಲೇ ಇದ್ದ.

'ಮಿನಿ ಬೈಕ್ ಅನ್ನೇ ಕೊಡಿಸುತ್ತೇನೆ. ಅದರಲ್ಲಿ ನನ್ನನ್ನು ಕೂರಿಸಿಕೊಂಡು ಹೋಗು ಎಂದು ಹೇಳುತ್ತಿದ್ದೆ. ಆ ದಿನ ಬರಲೇ ಇಲ್ಲ' ಎಂದು ಆತ ಹೇಳಿದಾಗ ಸ್ನೇಹಿತರ ಕಣ್ಣಂಚಿನಲ್ಲಿ ಜೀರು ಜಿನುಗಿತು.

ಫಲ ಕೊಡದ ಪ್ರಾರ್ಥನೆ: ಆಸ್ಪತ್ರೆ ರಸ್ತೆಯಲ್ಲಿಯೇ ಹದಿನೈದು ವರ್ಷದಿಂದ ಚಪ್ಪಲಿ ವ್ಯಾಪಾರ ನಡೆಸುತ್ತಿದ್ದ ಡಿ.ಜೆ ಹಳ್ಳಿಯ ಫಯಾಜ್ ಅಹಮದ್ ಗೋಡೆಯ ಕಲ್ಲುಗಳು ಕುಸಿದು ಅಸ್ವಸ್ಥಗೊಂಡಿದ್ದರು. ಆರು ವರ್ಷದ ಮಗ, ಒಂದೂವರೆ ವರ್ಷದ ಮಗಳೊಂದಿಗೆ ಪತ್ನಿ, ಕುಟುಂಬದವರು ಬಂದಿದ್ದರು. ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದರಿಂದ ಬದುಕಿದ್ದಾರೆ ಎನ್ನುವ ನಿರೀಕ್ಷೆಯಲ್ಲಿದ್ದರು. ಒಳಗೆ ಹೋಗುವ ತವಕದಲ್ಲೂ ಇದ್ದರು. ಆಗ ಮೃತರ ಪಟ್ಟಿಯಲ್ಲಿ ಫಯಾಜ್ ಹೆಸರೂ ಇದ್ದುದು ತಿಳಿದಾಗ ಮಕ್ಕಳೊಂದಿಗೆ ಇಡೀ ಕುಟುಂಬ ದುಃಖದ ಮಡುವಿನಲ್ಲಿ ಮುಳುಗಿತು.


'ನನ್ನ ತಮ್ಮ ಚೆನ್ನಾಗಿಯೇ ವ್ಯಾಪಾರ ಮಾಡಿಕೊಂಡಿದ್ದ. ಆತನಿಗೆ ಏನೂ ಆಗದಿದ್ದರೆ ಸಾಕು ಎಂದು ಪ್ರಾರ್ಥಿಸುತ್ತಿದ್ದೆವು. ಸಾವಿನ ಸುದ್ದಿ ತಿಳಿದು ಆಘಾತವಾಯಿತು. ಸಹೋದರ ಇಲ್ಲದಿರುವುದನ್ನು ನಂಬಲಾಗುತ್ತಿಲ್ಲ' ಎಂದು ಅಫ್ರೋಜ್ ಕಣ್ಣೀರಾದರು.

ನಿಜಕ್ಕೂ ಭಯವಾಯಿತು: ದುರ್ಘಟನೆ ನಡೆದ ಸಮೀಪದಲ್ಲೇ ಐದು ವರ್ಷದಿಂದ ಮೊಬೈಲ್ ಕವರ್‌ಗಳ ಮಾರಾಟ ಮಾಡುವ ವಿಜಯಪುರದ ಕಿರಣ ದೊಡ್ಡಮನಿಗೂ ಭಾರೀ ಶಬ್ದ ಕೇಳಿ ಭಯವಾಯಿತು. ಗಾಯಗೊಂಡವರನ್ನು ಪಕ್ಕದಲ್ಲೇ ಕರೆದುಕೊಂಡು ಹೋಗುವ ಆಂಬುಲೆನ್ಸ್‌ಗಳನ್ನು ನೋಡಿದಾಗ ದೊಡ್ಡ ದುರಂತವೇ ಆಗಿರಬೇಕು ಎನ್ನಿಸಿತು.

'ಬೀದಿಯಲ್ಲೇ ನಮ್ಮ ವ್ಯಾಪಾರ. ಮಳೆ ಸುರಿದಿದ್ದರಿಂದ ಮೂಲೆಯಲ್ಲಿ ನಿಂತುಕೊಂಡಿದ್ದೆ. ಆಲಿಕಲ್ಲು ಸಹಿತ ಮಳೆ ಬಿದ್ದುದರಿಂದ ಎದುರಿನ ದೇವಸ್ಥಾನವೂ ಸರಿಯಾಗಿ ಕಾಣುತ್ತಿರಲಿಲ್ಲ. ಜನರ ಆಕ್ರಂದನ ಕೇಳಿ ಅಲ್ಲಿಗೆ ಓಡಿ ಹೋದಾಗ ಗೋಡೆ ಕುಸಿದು ಬಿದ್ದಿತ್ತು. ಕೆಲವರು ಅಲ್ಲಿಯೇ ಮೃತಪಟ್ಟಿದ್ದರು. ಗಾಯಗೊಂಡಿದ್ದವರನ್ನು ಆಸ್ಪತ್ರೆಗೆ ಸೇರಿಸಲು ಸ್ಥಳೀಯರು ಸಹಕರಿಸಿದರು' ಎಂದು ಚಿತ್ರಣ ಬಿಡಿಸಿಟ್ಟರು.



ಸಹೋದರಿ ಕಳೆದುಕೊಂಡ ಜಾವೇದ್ ಕಣ್ಣೀರು




ಬಟ್ಟೆ, ಚಪ್ಪಲಿ ರಾಶಿ

ಅಲ್ಲಿ ಬಿದ್ದಿದ್ದು ದೊಡ್ಡ ಕಲ್ಲುಗಳ ರಾಶಿ. ಅದರ ನಡುವೆ ಚಪ್ಪಲಿಗಳು, ಬಟ್ಟೆಗಳು, ತಳ್ಳುವ ಗಾಡಿ...

ತುತ್ತಿನ ಚೀಲ ತುಂಬಿಸಿಕೊಳ್ಳಲು ಶಿವಾಜಿನಗರ ಬಸ್ ನಿಲ್ದಾಣದ ಸುತ್ತಮುತ್ತ ಹಾಗೂ ಬೌರಿಂಗ್ ಆಸ್ಪತ್ರೆಯ ಸುತ್ತಲಿನ ಗೋಡೆಗೆ ಹೊಂದಿಕೊಂಡ ಪಾದಚಾರಿ ಮಾರ್ಗದಲ್ಲಿ ಬಟ್ಟೆ, ಚಪ್ಪಲಿ, ಹಣ್ಣಿನ ವ್ಯಾಪಾರವನ್ನು ಹಲವರು ಮಾಡುತ್ತಾರೆ. ಕೆಲವರು ಮೂರು ದಶಕದಿಂದಲೂ ಇಲ್ಲಿಯೇ ಬದುಕು ರೂಪಿಸಿಕೊಂಡಿದ್ದಾರೆ. ಸರ್ವ ಧರ್ಮದವರಿಗೆ ಇದೇ ಆಶ್ರಯತಾಣ.

ಮುಖ್ಯದ್ವಾರದ ಪಕ್ಕದಲ್ಲೇ, ಆಸ್ಪತ್ರೆ ಆವರಣದೊಳಗೆ ಮುತ್ತು ಮಾರಿಯಮ್ಮನ್ ದೇವಸ್ಥಾನವಿದೆ. ಎದುರಿಗೆ ಪುರಾತನ ಸಂತ ಮೇರಿ ಬೆಸಿಲಿಕಾ ಚರ್ಚ್ ಇದೆ. ವ್ಯಾಪಾರಿಗಳ ಜತೆಗೆ ಆಸ್ಪತ್ರೆಗೆ ಬರುವ ರೋಗಿಗಳು ಹಾಗೂ ಅವರ ಕುಟುಂಬದವರು ಇಲ್ಲಿ ಹೆಚ್ಚು ಇರುತ್ತಾರೆ. ಚರ್ಚ್‌ಗೆ ಬರುವ ಪ್ರವಾಸಿಗರು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ವಾಹನ ನಿಲುಗಡೆ ಮಾಡಿ ಇದೇ ಮಾರ್ಗದಲ್ಲಿ ದಾಟುತ್ತಾರೆ. ಖರೀದಿಗೂ ಬರುತ್ತಾರೆ.

ದುರಂತ ನಡೆದ ಜಾಗದಿಂದ ಸುಮಾರು 500 ಮೀಟರ್ ಆವರಣದಲ್ಲಿ ಗೋಡೆ ಹಳೆಯದಾಗಿದೆ. ಸೈಜುಗಲ್ಲು, ಸಿಮೆಂಟ್ ಬ್ಲಾಕ್‌ಗಳನ್ನು ಬಳಸಿ ಗೋಡೆ ನಿರ್ಮಿಸಲಾಗಿದೆ. ದೇವಸ್ಥಾನದ ಪಕ್ಕದಲ್ಲಿಯೇ ಎರಡು ಬೃಹತ್ ಆಲದ ಮರಗಳಿದ್ದು, ಬೇರುಗಳು ಗೋಡೆಗೆ ಸೇರಿಕೊಂಡಿದ್ದವು. ಆಸ್ಪತ್ರೆ ಆವರಣದಲ್ಲಿ ನಿರ್ಮಿಸುತ್ತಿದ್ದ ಕಟ್ಟಡದ ಮಣ್ಣನ್ನು ಅಲ್ಲಿಯೇ ತಂದು ಹಾಕಲಾಗಿತ್ತು. ಈ ಎಲ್ಲಾ ಕಾರಣಗಳಿಂದ ಗೋಡೆ ಕೊಂಚ ವಾಲಿತ್ತು. ಆದರೆ, ಬೀಳುವ ಹಂತಕ್ಕೆ ಹೋಗುತ್ತದೆ ಎಂದು ಅಲ್ಲಿನವರು ಅಂದುಕೊಂಡಿರಲಿಲ್ಲ. ಬದುಕಿಗೆ ಆಸರೆಯಾಗಿದ್ದ ಗೋಡೆಯೇ ಕೆಲವರ ಅಂತ್ಯಕ್ಕೂ ಕಾರಣವಾಯಿತು.



ಗೋಡೆಯ ಅವಶೇಷಗಳನ್ನು ಜೆಸಿಬಿ ಯಂತ್ರ ಬಳಸಿ ಅವಶೇಷಗಳನ್ನು ತೆರವು ಮಾಡಲಾಯಿತು

ದಾಖಲೆ ಮಳೆ

ಬೆಂಗಳೂರಿನಲ್ಲಿ ಬುಧವಾರ ಬೆಳಿಗ್ಗೆ 8.30ರಿಂದ ರಾತ್ರಿ 8.30ರವರೆಗೆ 11 ಸೆಂ.ಮೀ ಮಳೆಯಾಗಿದ್ದು, ಏಪ್ರಿಲ್‌ನಲ್ಲಿ ಇದು ಹೊಸ ದಾಖಲೆಯಾಗಿದೆ. 2001ರ ಏಪ್ರಿಲ್ 19ರಂದು 10.8 ಸೆಂ.ಮೀ ಮಳೆ ಸುರಿದಿದ್ದು ಈವರೆಗಿನ ಏಪ್ರಿಲ್‌ನಲ್ಲಿ ಬಿದ್ದ ಅತ್ಯಧಿಕ ಮಳೆಯಾಗಿತ್ತು ಎಂದು ಹವಾಮಾನ ಇಲಾಖೆ ತಿಳಿಸಿದೆ.

ಧರೆಗುರುಳಿದ ಮರಗಳು

ನಗರ ಪಾಲಿಕೆ	ಮರಗಳು	ಕೊಂಬೆ
ಕೇಂದ್ರ	67	131
ಪೂರ್ವ	01	4
ಪಶ್ಚಿಮ	55	121
ದಕ್ಷಿಣ	23	82
ಉತ್ತರ	24	70
ಒಟ್ಟು	170	408

ಜಲಾವೃತ ದೂರುಗಳು

ಕೇಂದ್ರ	19
ಪೂರ್ವ	5
ಉತ್ತರ	3
ದಕ್ಷಿಣ	29
ಪಶ್ಚಿಮ	12

'ಘಟನೆಯಿಂದ ಆಘಾತವಾಗಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಪೌಂಡ್ ಕುಸಿದು ಏಳು ಜನ ಮೃತಪಟ್ಟಿರುವುದು ಅತ್ಯಂತ ದುಃಖಕರ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಗೋಡೆ ಕುಸಿದು ಏಳು ಮಂದಿ ಮೃತಪಟ್ಟ ಹಾಗೂ ಗಾಯಾಳುಗಳು ಚಿಕಿತ್ಸೆ ಪಡೆಯುತ್ತಿರುವ ಬೌರಿಂಗ್ ಆಸ್ಪತ್ರೆಗೆ ಬುಧವಾರ ರಾತ್ರಿ ಭೇಟಿ ನೀಡಿದ ಅವರು, 'ಮೃತರಲ್ಲಿ ನಾಲ್ಕು ಮಂದಿ ಬೀದಿ ಬದಿ ವ್ಯಾಪಾರಿಗಳು. ಇಬ್ಬರು ಕೇರಳದವರು, ಒಂದು ಮಗು ಮೃತಪಟ್ಟಿದ್ದು, ಒಬ್ಬರ ಗುರುತು ಇನ್ನೂ ಪತ್ತೆ ಆಗಿಲ್ಲ. ಚಪ್ಪಲಿ ವ್ಯಾಪಾರಿ, ಬಟ್ಟೆ ವ್ಯಾಪಾರಿ ಮೃತಪಟ್ಟಿದ್ದಾರೆ. ಪ್ರವಾಸಕ್ಕೆ ಕೇರಳದಿಂದ ಬಂದವರು ಮೃತಪಟ್ಟಿದ್ದಾರೆ' ಎಂದು ಸುದ್ದಿಗಾರರಿಗೆ ಮಾಹಿತಿ ನೀಡಿದರು.

'ಕೇರಳದ ಕುಟುಂಬಶ್ರೀ ಎನ್ನುವ ಸಂಸ್ಥೆಯ ಮುಖಾಂತರ 56 ಮಂದಿ ಪ್ರವಾಸಕ್ಕೆ ಬಂದಿದ್ದಾರೆ. ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಶಾಪಿಂಗ್‌ಗೆ ಬಂದಿದ್ದಾಗ ಮಳೆ ಬಂದಿದೆ. ಮಳೆಯಿಂದ ರಕ್ಷಣೆ ಪಡೆಯಲು ಗೋಡೆ ಪಕ್ಕ ಹೋಗಿದ್ದಾಗ ಗೋಡೆ ಕುಸಿದಿದೆ' ಎಂದರು.

'ಮೃತಪಟ್ಟ ಲತಾ ಮತ್ತು ಸ್ಮಿತಾ ನ್ಯೂಟ್ರಿಷಿಯನ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು. ಸರ್ಕಾರದ ಅಧಿಕಾರಿಗಳು ಸಹ ಇವರ ಜೊತೆ ಬಂದಿದ್ದಾರೆ. ಕೇರಳ ಸರ್ಕಾರಕ್ಕೂ ನಾವು ಮಾಹಿತಿ ನೀಡುತ್ತೇವೆ. ಶವ ಪರೀಕ್ಷೆ ನಡೆಸಿ ಇಲ್ಲಿಂದಲೇ ಗೌರವಯುತವಾಗಿ ಕಳಿಸಿಕೊಡುವ ವ್ಯವಸ್ಥೆ ಮಾಡಲಾಗುವುದು' ಎಂದು ಹೇಳಿದರು.

'ಇಂತಹ ಅಪಾಯಕಾರಿ ಜಾಗಗಳಲ್ಲಿ ಬೀದಿ ಬದಿ ವ್ಯಾಪಾರಿಗಳು ವ್ಯಾಪಾರ ಮಾಡದಂತೆ ಕ್ರಮ ವಹಿಸಲು ಜಿಬಿಎ ಆಯುಕ್ತರಿಗೆ ಸೂಚಿಸಿದ್ದೇನೆ. ಬೌರಿಂಗ್ ಆಸ್ಪತ್ರೆ ನೂರು ವರ್ಷಗಳ ಹಳೆಯದ್ದು. ಆಸ್ಪತ್ರೆಯ ಈ ಭಾಗವನ್ನು ಸರಿಯಾದ ರೀತಿ ನಿರ್ವಹಣೆ ಮಾಡಿಲ್ಲ. ಹೀಗಾಗಿ ಈ ದುರ್ಘಟನೆ ಸಂಭವಿಸಿದೆ. ಇದು ಜಿಬಿಎಗೆ ಸಂಬಂಧಿಸಿಲ್ಲ' ಎಂದು ತಿಳಿಸಿದರು.

ಹೊತ್ತಿ ಉರಿದ ತೆಂಗಿನ ಮರ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕಿನ ಪಾಪಭೋವಿಪಾಳ್ಯದಲ್ಲಿ ಬುಧವಾರ ಸಂಜೆ ಸಿಡಿಲು ಬಡಿದು ತೆಂಗಿನ ಮರವೊಂದು ಹೊತ್ತು ಉರಿದಿದೆ.

ಸೋಂಪುರ ಹೋಬಳಿಯ ಚನ್ನೋಹಳ್ಳಿ ಗ್ರಾಮದ ಧನಂಜಯ ಅವರಿಗೆ ಸೇರಿದ ಬೇವಿನ ಮರದ ದೊಡ್ಡ ಕೊಂಬೆ ಬಿರುಗಾಳಿಗೆ ಸಿಲುಕಿ ರಸ್ತೆಗೆ ಉರುಳಿದೆ.

ಸಿಡಿಲಿಗೆ ಹಸು ಸಾವು: ಸೋಂಪುರ ಹೋಬಳಿ ಮರಳಕುಂಟೆ ವೀರಣ್ಣ ಅವರ ಹಸು ಹಾಗೂ ದಾಸೇನಹಳ್ಳಿ ಗ್ರಾಮದ ಮಾವಿನ ಮರದಡಿ ಕಟ್ಟಿದ್ದ ರೈತರೊಬ್ಬರ ಹಸುಗಳು ಮಂಗಳವಾರ ಸಂಜೆ ಸಿಡಿಲು ಬಡಿದು ಸತ್ತಿವೆ.

ಮೈದಾನಕ್ಕೆ ಆಲಿಕಲ್ಲಿನ ಹೊದಿಕೆ..



ನಗರದಲ್ಲಿ ಆಲಿಕಲ್ಲು ಮಳೆ ಸುರಿದ ನಂತರ ಕಂಠೀರವ ಕ್ರೀಡಾಂಗಣ ಕಾಣಿಸಿದ್ದು ಹೀಗೆ...

'ದುರ್ಘಟನೆಯ ಹೊಣೆ ಸರ್ಕಾರವೇ ಹೊರಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಪೌಂಡ್ ಬಿದ್ದು 7 ಮಂದಿ ದುರ್ಮರಣಕ್ಕೀಡಾದ ಘಟನೆ ಆಘಾತಕರ. ಇದರ ಹೊಣೆಯನ್ನು ಸರ್ಕಾರವೇ ಹೊರಬೇಕು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಬಿ.ವೈ. ವಿಜಯೇಂದ್ರ

ಸೂಕ್ತ ನಿರ್ವಹಣೆ ಇಲ್ಲದ ಹಳೆಯ ಗೋಡೆ ಮಳೆಯಿಂದಾಗಿ ಕುಸಿದು ಬಿದ್ದದ್ದೇ ಈ ದುರ್ಘಟನೆಗೆ ಕಾರಣವಾಗಿದೆ ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ರಾಜಧಾನಿ ಬೆಂಗಳೂರಿನಲ್ಲೇ ಈ ಪಾಡಾದರೆ ಉಳಿದ ಕಡೆ ಗತಿ ಏನು? ಗಾಯಗೊಂಡವರಿಗೆ ಚಿಕಿತ್ಸೆ ಮತ್ತು ಮೃತರ ಕುಟುಂಬದವರಿಗೆ ಪರಿಹಾರ ನೀಡಬೇಕು' ಎಂದು ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಪಾಠ ಕಲಿಯದ ಸರ್ಕಾರ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆ ಅನಾಹುತಗಳು ಸಂಭವಿಸದಂತೆ ಶಾಶ್ವತ ಪರಿಹಾರ ಕ್ರಮಗಳನ್ನು ರಾಜ್ಯ ಸರ್ಕಾರ ಕೈಗೊಳ್ಳಬೇಕು ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಒತ್ತಾಯಿಸಿದ್ದಾರೆ.

'ಪ್ರತಿ ಬಾರಿಯೂ ಮಳೆ ಬಂದಾಗ ದುರಂತಗಳು ಸಂಭವಿಸುತ್ತಿವೆ. ಆದರೂ ಸರ್ಕಾರ ಪಾಠ ಕಲಿಯುತ್ತಿಲ್ಲ. ನಗರದಲ್ಲಿ ಇಂತಹ ಅನಾಹುತಗಳು ಸಂಭವಿಸದಂತೆ ಶಾಶ್ವತ ಪರಿಹಾರಗಳನ್ನು ರೂಪಿಸುವ ಅಗತ್ಯವಿದೆ' ಎಂದು ಹೇಳಿದ್ದಾರೆ.

ಕುಮಾರಸ್ವಾಮಿ

ಮೃತರ ಕುಟುಂಬಗಳಿಗೆ ಪರಿಹಾರ ನೀಡಿ ಕೈ ತೊಳೆದುಕೊಳ್ಳಬಾರದು. ಇಂತಹ ಘಟನೆಗಳು ಮರುಕಳಿಸದಂತೆ ಮುನ್ನೆಚ್ಚರಿಕೆ ವಹಿಸಬೇಕು' ಎಂದು ಆಗ್ರಹಿಸಿದ್ದಾರೆ.

ಎಲ್ಲೆಲ್ಲಿ ಅತಿಹೆಚ್ಚು ಮಳೆ? (ಸೆಂ.ಮೀನಲ್ಲಿ)

ಕಾಟನ್ ಪೇಟೆ	7.75
ಚಾಮರಾಜಪೇಟೆ	7.7
ಬೊಮ್ಮನಹಳ್ಳಿ	6.25
ಪುಲಕೇಶಿನಗರ	6.25
ವಿಶ್ವೇಶ್ವರಪುರ	6.1
ರಾಜಮಹಲ್ ಗುಟ್ಟಹಳ್ಳಿ	5.4
ಬಿಟಿಎಂ ಲೇಔಟ್	4.7
ವನ್ನಾರಪೇಟೆ	4
ಸಂಪಂಗಿರಾಮನಗರ	3.9
ಕೆಂಗೇರಿ	3.9
ದಯಾನಂದನಗರ	3.8
ಎಚ್ಎಎಲ್ ವಿಮಾನ ನಿಲ್ದಾಣ	3.35
ಮಾರತ್‌ಹಳ್ಳಿ	3.15
ಪಟ್ಟಾಭಿರಾಮನಗರ	3.15
ಬಸವೇಶ್ವರನಗರ	2.75
ದೊರೆಸಾನಿಪಾಳ್ಯ	2.55
ವಿದ್ಯಾಪೀಠ	2.4
ನಾಗಪುರ	2.4
ಹೆಮ್ಮಿಗೆಪುರ	2.3
ಕೋರಮಂಗಲ	2.2
ಅರಕೆರೆ	2.2
ರಾಜರಾಜೇಶ್ವರಿನಗರ	2.1
ಹೇರೋಹಳ್ಳಿ	2
ನಂದಿನಿ ಲೇಔಟ್	2
ಹಗದೂರು	1.8
ಎಚ್‌ಎಸ್‌ಆರ್ ಲೇಔಟ್	1.7
ಬೆಳ್ಳಂದೂರು	1.7
ಕಮ್ಮನಹಳ್ಳಿ	1.65
ವಿಜ್ಞಾನ ನಗರ	1.6
ಎಚ್.ಗೊಲ್ಲಹಳ್ಳಿ	1.6
ಕೋಣನಕುಂಟೆ	1.5
ಪೀಣ್ಯ ಕೈಗಾರಿಕೆ ಪ್ರದೇಶ	1.5
ಬಾಣಸವಾಡಿ	1.4
ಸಿಂಗಸಂದ್ರ	1.4
ಬಿಳೇಕಹಳ್ಳಿ	1.1
ಮನೋರಾಯನಪಾಳ್ಯ	1.0

ಕಾಂಪೌಂಡ್ ಕುಸಿತ: ಮೃತರ ವಿವರ

ಬೆಂಗಳೂರಿನ ಎಂ.ಆರ್ ಪಾಳ್ಯದ ಬಟ್ಟೆ ವ್ಯಾಪಾರಿ ಮೊಹಮ್ಮದ್ ಅಬ್ದುಲ್ ಹಕ್ (52), ಡಿ.ಜೆ. ಹಳ್ಳಿಯ ಪಾದರಕ್ಷೆ ವ್ಯಾಪಾರಿ ಫಯಾಜ್ ಅಹ್ಮದ್ (39), ಕೆ.ಜಿ ಹಳ್ಳಿ, ವಿದ್ಯಾರ್ಥಿನಿ ಮುಸಾವೀರ್ ಬೇಗಂ (6), ಕೇರಳದಿಂದ ಪ್ರವಾಸಕ್ಕೆ ಬಂದಿದ್ದ ಸ್ಮಿತಾ (47) ಮತ್ತು ಕೆ.ಕೆ.ಲತಾ (57), ಉತ್ತರ ಪ್ರದೇಶದ ವ್ಯಾಪಾರಿ ಸಲಾವುದ್ದೀನ್ ಅನ್ಸಾರಿ (36), ಅಸ್ಸಾಂನ ಕೆಲಸಗಾರ ನಸೀಮುಲ್ಲಾ (19)

ಮೆಟ್ರೊ ನಿಲ್ದಾಣದ ಬಳಿ ನೀರು


ನಗರದ ಪ್ರಮುಖ ರಸ್ತೆಗಳಲ್ಲಿ ಭಾರಿ ಪ್ರಮಾಣದಲ್ಲಿ ನೀರು ನಿಂತಿದ್ದರಿಂದ ಮೆಟ್ರೊ ನಿಲ್ದಾಣಕ್ಕೆ ಹೋಗಲು ಹಾಗೂ ಅಲ್ಲಿಂದ ಹೊರಬರಲು ಪ್ರಯಾಣಿಕರು ಪ್ರಯಾಸಪಟ್ಟರು.

ಕಬ್ಬನ್ ರಸ್ತೆಯಲ್ಲಿ ಸುಮಾರು ಒಂದೂವರೆ ಅಡಿ ನೀರು ನಿಂತಿದ್ದರಿಂದ, ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣಕ್ಕೆ ಹೋಗಲು ಪ್ರಯಾಣಿಕರಿಗೆ ಸಾಧ್ಯವಾಗಲಿಲ್ಲ. ಅಲ್ಲಿಂದ ಹೊರಬರಲೂ ಸಾಧ್ಯವಾಗದೆ ಪ್ರಯಾಣಿಕರು ಪರದಾಡಿದರು. ಬಳ್ಳಾರಿ ರಸ್ತೆಯಲ್ಲಿ ಮಳೆಯ ನೀರು ಹೆಚ್ಚು ನಿಂತಿದ್ದರಿಂದ, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳುವ ಪ್ರಯಾಣಿಕರು ತೊಂದರೆಗೆ ಒಳಗಾದರು. ವಾಹನದಟ್ಟಣೆಯಿಂದ ಕೆಲವರಿಗೆ ಪ್ರಯಾಣ ತಪ್ಪಿತು ಎಂದು ಹೇಳಲಾಗಿದೆ.

750 ಮನೆಗಳಿಗೆ ನೀರು

ಭಾರಿ ಮಳೆಯಿಂದಾಗಿ ತಗ್ಗು ಪ್ರದೇಶದಲ್ಲಿರುವ ಹಾಗೂ ಕೊಳೆಗೇರಿಗಳಲ್ಲಿರುವ ಸುಮಾರು 750 ಮನೆಗಳಿಗೆ ನೀರು ನುಗ್ಗಿದೆ. 'ಬಂಗಿ ಕಾಲೊನಿಯಲ್ಲಿ ಸುಮಾರು 180 ಮನೆಗಳಿಗೆ ನೀರು ನುಗ್ಗಿದ್ದು, ಮನೆಯಲ್ಲಿರುವ ಎಲ್ಲ ಸಾಮಗ್ರಿಗಳು ಹಾಳಾಗಿವೆ. ಅಧಿಕಾರಿಗಳಿಂದ ಯಾವುದೇ ನೆರವು ಸಿಕ್ಕಿಲ್ಲ. ಗುರುವಾರ ಬೆಳಿಗ್ಗೆ ವೇಳೆಗೆ ಪರಿಸ್ಥಿತಿ ಸುಧಾರಿಸಬಹುದು ಎಂದು ನಿರೀಕ್ಷಿಸಿದ್ದೇವೆ' ಎಂದು ಸ್ಥಳೀಯ ನಿವಾಸಿ ರಾಣಿ ತಿಳಿಸಿದರು.

ವಿನೋಬಾ ನಗರದಲ್ಲಿರುವ 300 ಮನೆಗಳಿಗೆ ಹಾಗೂ ಮೈಸೂರು ರಸ್ತೆಯ ಸಮೀಪವಿರುವ ನರಸಿಂಹ ಕಾಲೊನಿಯ 130 ಮನೆಗಳಿಗೆ ನೀರು ನುಗ್ಗಿದೆ ಎಂದು ಸ್ವಯಂಸೇವಕರು ಹೇಳಿದರು.



ಬುಕ್‌ವರ್ಮ್‌ಗೆ ನೀರು

'ಚರ್ಚ್ ಸ್ಟ್ರೀಟ್‌ನಲ್ಲಿರುವ ಬುಕ್‌ವರ್ಮ್ ಪುಸ್ತಕ ಮಳಿಗೆಗೆ ಮಳೆ ನೀರು ನುಗ್ಗಿ ಸುಮಾರು ಐದು ಸಾವಿರ ಪುಸ್ತಕಗಳಿಗೆ ಹಾನಿಯಾಗಿದೆ. ಎಂ.ಜಿ. ರಸ್ತೆ ಹಾಗೂ ಚರ್ಚ್ ಸ್ಟ್ರೀಟ್‌ನ ಮಳೆ ನೀರು ತಗ್ಗು ಪ್ರದೇಶದಲ್ಲಿರುವ ಬುಕ್‌ವರ್ಮ್ ಮಳಿಗೆಗೆ ನುಗ್ಗಿದೆ' ಎಂದು ಮಾಲೀಕ ಕೃಷ್ಣ ತಿಳಿಸಿದರು.

ದೂರುಗಳಿಗೆ ಮೂರು ಗಂಟೆಯೊಳಗೆ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆಯಿಂದ ಸಂಭವಿಸುವ ಸಮಸ್ಯೆ ಹಾಗೂ ದೂರುಗಳನ್ನು ಮೂರು ಗಂಟೆಯೊಳಗೆ ಪರಿಹರಿಸಲಾಗುವುದು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಭರವಸೆ ನೀಡಿದರು.

ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಕಾಟನ್‌ಪೇಟೆ, ಬಿನ್ನಿಪೇಟೆ, ಸುಭಾಷ್ ನಗರ, ಜಗಜೀವನರಾಮ್ ನಗರ ಮತ್ತು ಕೆ.ಆರ್. ಮಾರುಕಟ್ಟೆ ಪ್ರದೇಶಗಳಲ್ಲಿ ಬುಧವಾರ ಭಾರೀ ಮಳೆಯಾಗಿದ್ದು, ಇತರ ನಗರ ಪಾಲಿಕೆಗಳಲ್ಲಿ ಸಾಧಾರಣ ಮಳೆಯಾಗಿದೆ. ಹೆಚ್ಚು ಮಳೆಯಾದ ಪ್ರದೇಶಗಳಲ್ಲಿ ಹಾಗೂ ರಸ್ತೆಗಳಲ್ಲಿ ಜಲಾವೃತವಾಗಿರುವ ಶೋಲ್ಡರ್ ಡ್ರೇನ್, ಗ್ರೇಟಿಂಗ್ಸ್‌ಗಳ ಬಳಿ ಇರುವ ತ್ಯಾಜ್ಯವನ್ನು ತೆರವುಗೊಳಿಸಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತಿದೆ ಎಂದರು.

ಜಿಬಿಎ ಕೇಂದ್ರ ಕಚೇರಿ ನಿಯಂತ್ರಣ ಕೊಠಡಿಗೆ ನೀರು ನಿಲುಗಡೆ, ಮರ ಬಿದ್ದುಹೋಗುವುದು, ಜಲಾವೃತ ಪ್ರದೇಶಗಳು ಹಾಗೂ ಆಸ್ತಿ ಹಾನಿ ಸಂಬಂಧಿತ ಅನೇಕ ದೂರುಗಳು ಬಂದಿದ್ದು, ಅವುಗಳಿಗೆ ತ್ವರಿತವಾಗಿ ಸ್ಪಂದಿಸಲಾಗಿದೆ.

ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯ ನವರಂಗ್, ಡಾ. ರಾಜ್‌ಕುಮಾರ್ ರಸ್ತೆ ಹಾಗೂ ಇಸ್ಕಾನ್ ದೇವಸ್ಥಾನ ರಸ್ತೆ ಪ್ರದೇಶಗಳಲ್ಲಿ ಅನೇಕ ಮರಗಳು ಬಿದ್ದು ವಿದ್ಯುತ್ ವ್ಯತ್ಯಯ ಉಂಟಾಗಿದೆ. ಈ ಸಂಬಂಧ ತುರ್ತು ಕ್ರಮ ಕೈಗೊಂಡಿವೆ ಎಂದರು.

ಗುರುವಾರ ಬೆಳಿಗ್ಗೆಯೊಳಗೆ ಧರೆಗುರುಳಿದ ಮರಗಳು, ರೆಂಬೆ-ಕೊಂಬೆಗಳನ್ನು ತೆರವುಗೊಳಿಸಬೇಕು. ಅಗ್ನಿಶಾಮಕ ತಂಡಗಳನ್ನು ಸಹ ನಿಯೋಜಿಸಿಕೊಂಡು ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ವಿದ್ಯುತ್ ಆಘಾತ: ಇಬ್ಬರ ಸಾವು

ಒಂದನೇ ಪುಟದಿಂದ...

ಪ್ರಥಮ ಪಿಯು ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದ ಸೈಯದ್ ಸೂಫಿಯಾನ್, ಬುಧವಾರ ಸಂಜೆ ಮಳೆ ಸುರಿಯುತ್ತಿದ್ದಾಗಲೇ ಬೈಕ್ ನಿಲುಗಡೆ ಮಾಡಲು ತೆರಳಿದ್ದ. ಆಗ ಕಂಬದಿಂದ ವಿದ್ಯುತ್ ಪ್ರವಹಿಸಿ, ಮೃತಪಟ್ಟಿದ್ದಾನೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಬೌರಿಂಗ್ ಆಸ್ಪತ್ರೆಗೆ ರವಾನಿಸಲಾಗಿದೆ. ವಿದ್ಯುತ್ ಪ್ರವಹಿಸಿ ಸೈಯದ್ ಮೃತಪಟ್ಟಿದ್ದಾನೆಂದು ಕುಟುಂಬಸ್ಥರು ತಿಳಿಸಿದ್ದಾರೆ. ತನಿಖೆ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು. ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಬನ್ನೇರುಘಟ್ಟ ರಸ್ತೆಯ ವೇಗಾ ಸಿಟಿ ಮಾಲ್ ಸಮೀಪದ ಸಾರಕ್ಕಿ ಬಸ್ ನಿಲ್ದಾಣದ ಬಳಿ ರಾತ್ರಿ 8.25ರ ಸುಮಾರಿಗೆ ಜೆ.ಡಿ ಮರದ ಸ್ಲಂ ನಿವಾಸಿ ರಘು (35) ಅವರು ವಿದ್ಯುತ್ ಆಘಾತದಿಂದ ಮೃತಪಟ್ಟಿದ್ದಾರೆ.



ಬೌರಿಂಗ್ ಆಸ್ಪತ್ರೆಯ ಗೋಡೆ ಕುಸಿತ ಸ್ಥಳಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರು ಉಪಸ್ಥಿತರಿದ್ದರು



ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಬೌರಿಂಗ್ ಆಸ್ಪತ್ರೆಯ ಗೋಡೆ ಕುಸಿದ ಸ್ಥಳಕ್ಕೆ ಬುಧವಾರ ರಾತ್ರಿ ಭೇಟಿ ನೀಡಿದ್ದರು. ವಸತಿ ಸಚಿವ ಜಮೀರ್ ಅಹಮದ್ ಖಾನ್ ಉಪಸ್ಥಿತರಿದ್ದರು

ಹಣವನ್ನು ಗಳಿಸುವ ಮೊದಲೇ ಅದನ್ನು ಖರ್ಚು ಮಾಡುವ ಕೆಲಸ ಬೇಡ
ಥಾಮಸ್ ಜೆಫರ್ಸನ್, ಬರಹಗಾರ

ದುಡ್ಡಿನಂಥಾ ಮಾತು

ನಿಯಮ ಆಧಾರಿತ ಹೂಡಿಕೆ ಮಹತ್ವ

ಜಾಗತಿಕ ಮಟ್ಟದಲ್ಲಿ ಹೆಸರು ಸಂಪಾದಿಸಿರುವ ಹೂಡಿಕೆದಾರರಾದ ಬೆಂಜಮಿನ್ ಗ್ರಹಾಂ ಮತ್ತು ವಾರನ್ ಬಫೆಟ್ ಅವರ ಕೆಲಸಗಳಿಂದಾಗಿ 'ವ್ಯಾಲ್ಯೂ ಇನ್ವೆಸ್ಟಿಂಗ್' ವಿಧಾನವು ಜನಪ್ರಿಯತೆ ಗಳಿಸಿದೆ. ಈ ವಿಧಾನದಲ್ಲಿನ ಮೂಲ ಆಲೋಚನೆ ಕೂಡ ಬಹಳ ಸರಳವಾಗಿದೆ.

• ಚಿಂತನ್ ಹಾರಿಯಾ



ಕಲೆ: ಸಂತೋಷ್ ಸಸಿಹಿತ್ಲು

ಷೇರುಪೇಟೆ ಹೂಡಿಕೆ ಅಂದಾಕ್ಷಣ 'ಇದನ್ನು ನಮ್ಮಿಂದ ನಿಭಾಯಿಸಲು ಸಾಧ್ಯವೇ' ಎಂಬ ಭಾವನೆ ಹಲವರಲ್ಲಿ ತಕ್ಷಣಕ್ಕೆ ಮೂಡಬಹುದು. ಭಾರತದಲ್ಲಿ ಷೇರುಪೇಟೆಯಲ್ಲಿ ನೋಂದಾಯಿತ ಕಂಪನಿ ಸಂಖ್ಯೆ ಸಾವಿರಗಳ ಮಟ್ಟದಲ್ಲಿದೆ, ಮಾರುಕಟ್ಟೆಯಲ್ಲಿ ಸುದ್ದಿಗದ್ದಲ ಕೂಡ ನಿರಂತರವಾಗಿರುತ್ತದೆ. ಹೀಗಿರುವಾಗ ಸರಿಯಾದ ಕಂಪನಿಯ ಷೇರು ಆಯ್ಕೆ ಮಾಡುವುದು ಸುಲಭದ ಕೆಲಸ ಅಲ್ಲವೇ ಅಲ್ಲ.

ಭಾರತದಲ್ಲಿ ಬಂಡವಾಳ ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವ ಪ್ರವೃತ್ತಿ ಬಲಗೊಳ್ಳುತ್ತಿದೆ, ಪ್ಯಾಸಿವ್ ಹೂಡಿಕೆ ವಿಧಾನ ಕೂಡ ಜನಪ್ರಿಯವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಷೇರುಗಳ ಗುಣಮಟ್ಟ, ಅವುಗಳ ಮೌಲ್ಯ ಹಾಗೂ ಅವುಗಳ ಮೌಲ್ಯವರ್ಧನೆಯ ವೇಗವನ್ನು ಗಮನಿಸುವುದು ನಿರ್ದಿಷ್ಟವಾದ ಕೆಲವು ನಿಯಮಗಳಿಗೆ ಅನುಗುಣವಾಗಿ ಈಕ್ವಿಟಿಗಳಲ್ಲಿ ಹಣ ತೊಡಗಿಸಲು ಬಯಸುವ ಹೂಡಿಕೆದಾರರ ನಡುವೆ ಜನಪ್ರಿಯವಾಗುತ್ತಿದೆ.

ಷೇರುಗಳ ಮೌಲ್ಯವನ್ನು ಆಧರಿಸಿ ರೂಪುಗೊಂಡಿರುವ ಒಂದು ಸೂಚ್ಯಂಕದ ಹೆಸರು 'ನಿಫ್ಟಿ 200 ವ್ಯಾಲ್ಯೂ 30'. ಷೇರುಗಳ ಮೌಲ್ಯವನ್ನು ಆಧರಿಸಿ, ನಿರ್ದಿಷ್ಟವಾದ ಅನುಪಾತಗಳನ್ನು ಗಮನಿಸಿ ಹೂಡಿಕೆ ಮಾಡಲು ಬಯಸುವವರಿಗೆ ಈ ಸೂಚ್ಯಂಕವು ಪರಿಣಾಮಕಾರಿ ಆಯ್ಕೆಯಾಗಿದೆ.

ಈ ಸೂಚ್ಯಂಕದ ಮಹತ್ವವೇನು?

ದೇಶದ ಷೇರುಪೇಟೆಯಲ್ಲಿ ಬೇರೆ ಬೇರೆ ಕಂಪನಿಗಳ ಷೇರುಗಳ ಜೊತೆ ಹೋಲಿಸಿದಾಗ ಆಕರ್ಷಕವಾದ ಮೌಲ್ಯಕ್ಕೆ ಲಭ್ಯವಿರುವ ಕಂಪನಿಗಳ ಮೇಲೆ ಹಣ ತೊಡಗಿಸಲು ಅನುಕೂಲ ಆಗುವ ರೀತಿಯಲ್ಲಿ 'ನಿಫ್ಟಿ 200 ವ್ಯಾಲ್ಯೂ 30 ಸೂಚ್ಯಂಕ'ವನ್ನು ರೂಪಿಸಲಾಗಿದೆ. ಈ ಸೂಚ್ಯಂಕದಲ್ಲಿ 'ನಿಫ್ಟಿ 200 ಸೂಚ್ಯಂಕ'ದಿಂದ ಆಯ್ಕೆ ಮಾಡಿದ 30 ಕಂಪನಿಗಳ ಪ್ರಾತಿನಿಧ್ಯ ಇದೆ. ಆ ಮೂವತ್ತು ಕಂಪನಿಗಳನ್ನು ಈ ಕೆಳಗಿನ ಅಂಶಗಳನ್ನು ಪರಿಗಣಿಸಿ ಆಯ್ಕೆ ಮಾಡಲಾಗುತ್ತದೆ.

- **ಪಿ.ಇ. ಅನುಪಾತ:** ಅಂದರೆ ಪ್ರತಿ ₹1 ಗಳಿಕೆಗೆ ಹೂಡಿಕೆದಾರರು ಎಷ್ಟು ರೂಪಾಯಿ ವೆಚ್ಚ ಮಾಡುತ್ತಿದ್ದಾರೆ ಎಂಬುದನ್ನು ಇದು ಹೇಳುತ್ತದೆ.
- **ಪಿ.ಬಿ. ಅನುಪಾತ:** ಇದು ಷೇರುಮೌಲ್ಯ ಹೆಚ್ಚಿದೆಯೋ, ಕಡಿಮೆಯೋ ಎಂಬುದನ್ನು ತಿಳಿಸುತ್ತದೆ
- **ಲಾಭಾಂಶದ ಪ್ರಮಾಣ:** ಕಂಪನಿಯು ತನ್ನ ಲಾಭದಲ್ಲಿ ಹೂಡಿಕೆದಾರರಿಗೆ ವಿತರಿಸುವ ಪಾಲು
- **ಪಿ.ಎಸ್. ಅನುಪಾತ:** ಕಂಪನಿಯ ಮಾರುಕಟ್ಟೆ ಮೌಲ್ಯ ಹಾಗೂ ವಾರ್ಷಿಕ ವರಮಾನದ ನಡುವಿನ ಅನುಪಾತವನ್ನು ಹೇಳುತ್ತದೆ

ಹಣಕಾಸಿನ ಸಾಧನೆಗೆ ಹೋಲಿಕೆ ಮಾಡಿದಾಗ, ಮೌಲ್ಯವು ದುಬಾರಿ ಆಗಿರದ ಷೇರುಗಳನ್ನು ಆಯ್ಕೆ ಮಾಡುವ ಗುರಿಯನ್ನು 'ನಿಫ್ಟಿ 200 ವ್ಯಾಲ್ಯೂ 30 ಸೂಚ್ಯಂಕ' ಹೊಂದಿದೆ. ಇದು ಹೂಡಿಕೆದಾರರಿಗೆ ಹಲವು ಪ್ರಯೋಜನಗಳನ್ನು ಒದಗಿಸಿಕೊಡುತ್ತದೆ. ಹೂಡಿಕೆದಾರರು ಇಂತಹ ಷೇರುಗಳನ್ನು ತಾವಾಗಿಯೇ ಆಯ್ಕೆ ಮಾಡಲು ಮುಂದಾದಾಗ ತಮ್ಮಲ್ಲಿ ವಸ್ತುನಿಷ್ಠ ನೋಟದ ಕೊರತೆಯಿಂದಾಗಿ ಉಂಟಾಗಬಹುದಾದ ಲೋಪಗಳನ್ನು ನಿವಾರಿಸಲು ಈ ಸೂಚ್ಯಂಕವು ಸಹಾಯ ಮಾಡುತ್ತದೆ. ಆರ್ಥಿಕ ಸ್ಥಿತಿ, ವಹಿವಾಟು ಬಹಳ ಗಟ್ಟಿಮುಟ್ಟಾಗಿದ್ದರೂ ಬಂಡವಾಳ ಮಾರುಕಟ್ಟೆಯಲ್ಲಿ ಕಡಿಮೆ ಮೌಲ್ಯಕ್ಕೆ ಲಭ್ಯವಿರುವ ಕಂಪನಿಯ ಷೇರುಗಳಲ್ಲಿ ಹಣ ತೊಡಗಿಸಲು ಈ ಸೂಚ್ಯಂಕವು ಅವಕಾಶ ಮಾಡಿಕೊಡುತ್ತದೆ.

ಈ ಸೂಚ್ಯಂಕವನ್ನು ಕಾಲಕಾಲಕ್ಕೆ ಪರಿಶೀಲನೆ ನಡೆಸಲಾಗುತ್ತದೆ, ಹೊಸ ಷೇರುಗಳನ್ನು ಸೇರ್ಪಡೆ ಮಾಡುವ, ಹಳೆಯ ಕೆಲವನ್ನು ಅಲ್ಲಿಂದ ತೆಗೆಯುವ ಕೆಲಸ ಕೂಡ ಆಗುತ್ತಿರುತ್ತದೆ.

ವ್ಯಾಲ್ಯೂ ಇನ್ವೆಸ್ಟಿಂಗ್

ಷೇರುಪೇಟೆಗಳಲ್ಲಿ 'ವ್ಯಾಲ್ಯೂ ಇನ್ವೆಸ್ಟಿಂಗ್' ಬಗ್ಗೆ ಬಹಳಷ್ಟು ಚರ್ಚೆಗಳು ಆಗಿವೆ, ಹೂಡಿಕೆಯ ಈ ವಿಧಾನದ ಬಗ್ಗೆ ಬಹಳಷ್ಟು ಅಧ್ಯಯನಗಳು ಆಗಿವೆ. ಜಾಗತಿಕ ಮಟ್ಟದಲ್ಲಿ ಹೆಸರು ಸಂಪಾದಿಸಿರುವ ಹೂಡಿಕೆದಾರರಾದ ಬೆಂಜಮಿನ್ ಗ್ರಹಾಂ ಮತ್ತು ವಾರನ್ ಬಫೆಟ್ ಅವರ ಕೆಲಸಗಳಿಂದಾಗಿ ಈ ಹೂಡಿಕೆ ವಿಧಾನವು ಜನಪ್ರಿಯತೆ ಗಳಿಸಿದೆ. ಇಲ್ಲಿ ಮೂಲ ಆಲೋಚನೆ ಬಹಳ ಸರಳವಾಗಿದೆ: ಬಹಳ ಉತ್ತಮವಾದ ಕಂಪನಿಗಳ ಷೇರುಗಳು ಸೂಕ್ತವಾದ ಬೆಲೆಗೆ ಅಥವಾ ಕಡಿಮೆ ಬೆಲೆಗೆ ಸಿಗುವಾಗ ಅವುಗಳನ್ನು ಖರೀದಿಸಬೇಕು ಎಂಬುದು ಆ ಆಲೋಚನೆ.

ಬಂಡವಾಳ ಮಾರುಕಟ್ಟೆಗಳು ಬಹಳ ಸಂದರ್ಭಗಳಲ್ಲಿ ಚಕ್ರೀಯ ಗತಿಯಲ್ಲಿ ಸಾಗುತ್ತಿರುತ್ತವೆ. ಕೆಲವು ಸಂದರ್ಭಗಳಲ್ಲಿ ಭಾರಿ ಪ್ರಮಾಣದ ಮೌಲ್ಯವರ್ಧನೆಯ ಸಾಧ್ಯತೆ ಇರುವ ಷೇರುಗಳು ಮುನ್ನೆಲೆಗೆ ಬಂದಿರುತ್ತವೆ. ಇನ್ನು ಕೆಲವು ಸಂದರ್ಭಗಳಲ್ಲಿ ಹೂಡಿಕೆದಾರರು ಬಹಳ ಉತ್ತಮವಾದ ಆರ್ಥಿಕ ಸ್ಥಿತಿ ಹಾಗೂ ಸ್ಥಿರವಾದ ಪ್ರಮಾಣದಲ್ಲಿ ಹಣದ ಹರಿವು ಇರುವ ಕಂಪನಿಗಳನ್ನು ಅರಸುತ್ತಾರೆ. ಉತ್ತಮ ಆರ್ಥಿಕ ಸ್ಥಿತಿ ಹೊಂದಿರುವ ಹಾಗೂ ಸ್ಥಿರ ಪ್ರಮಾಣದ ಹಣದ ಹರಿವು ಇರುವ ಕಂಪನಿಗಳನ್ನು ಗುರುತಿಸಿ, ಅವುಗಳ ಷೇರು ಖರೀದಿಸಲು 'ವ್ಯಾಲ್ಯೂ' ಆಧಾರಿತ ಹೂಡಿಕೆ ವಿಧಾನವು ಯತ್ನಿಸುತ್ತದೆ.

'ನಿಫ್ಟಿ 200 ವ್ಯಾಲ್ಯೂ 30 ಸೂಚ್ಯಂಕ'ವು ಈ ತತ್ತ್ವವನ್ನು ನಿಯಮ ಆಧಾರಿತ ಚೌಕಟ್ಟೊಂದರ ಮೂಲಕ ಕಾರ್ಯರೂಪಕ್ಕೆ ತರುವ ಕೆಲಸ ಮಾಡುತ್ತದೆ. ನಿಫ್ಟಿ 200 ಸೂಚ್ಯಂಕದ ಭಾಗವಾಗಿರುವ ಕಂಪನಿಗಳ ಪೈಕಿ, 'ವ್ಯಾಲ್ಯೂ' ಮಾನದಂಡಗಳಲ್ಲಿ ಹೆಚ್ಚಿನ ಅಂಕ ಪಡೆಯುವ ಕಂಪನಿಗಳನ್ನು ಆಯ್ಕೆ ಮಾಡಿಕೊಳ್ಳುತ್ತದೆ.

ಇಟಿಎಫ್ ಹಾಗೂ ಇಂಡೆಕ್ಸ್ ಫಂಡ್‌ಗಳು ಈ ವಿಧಾನಕ್ಕೆ ಅನುಗುಣವಾಗಿ ಹಣ ತೊಡಗಿಸಲು ನೆರವಾಗುತ್ತವೆ.

ಹೂಡಿಕೆದಾರರು 'ನಿಫ್ಟಿ 200 ವ್ಯಾಲ್ಯೂ 30 ಸೂಚ್ಯಂಕ'ದಲ್ಲಿ ಎರಡು ಬಗೆಗಳಲ್ಲಿ – ಅಂದರೆ ಇಟಿಎಫ್ ಹಾಗೂ ಇಂಡೆಕ್ಸ್ ಫಂಡ್ ಮೂಲಕ – ಹೂಡಿಕೆ ಮಾಡಬಹುದು.

ಇಟಿಎಫ್ ಮಾರ್ಗ: ಎಕ್ಸ್‌ಚೇಂಜ್ ಟ್ರೇಡೆಡ್ ಫಂಡ್‌ಗಳು (ಇಟಿಎಫ್) ದೇಶದ ಷೇರುಪೇಟೆಗಳಲ್ಲಿ ಷೇರುಗಳ ಮಾದರಿಯಲ್ಲಿಯೇ ಖರೀದಿ, ಮಾರಾಟ ಆಗುತ್ತವೆ. ಹೂಡಿಕೆದಾರರು ತಮ್ಮ ಡಿಮ್ಯಾಟ್ ಖಾತೆಯನ್ನು ಬಳಸಿ ಇವುಗಳನ್ನು ಖರೀದಿಸಬಹುದು ಅಥವಾ ಮಾರಾಟ ಮಾಡಬಹುದು. ಪಾರದರ್ಶಕ ಹೂಡಿಕೆ ಅವಕಾಶ ಕಲ್ಪಿಸುವುದು, ಬಹಳ ಕಡಿಮೆ ಪ್ರಮಾಣದ ಶುಲ್ಕವನ್ನು ಪಡೆಯುವುದು ಇಟಿಎಫ್‌ಗಳ ಹೆಚ್ಚುಗಾರಿಕೆ.

ಇಂಡೆಕ್ಸ್ ಫಂಡ್: ಇವು ಸೂಚ್ಯಂಕವನ್ನು ಅನುಕರಣೆ ಮಾಡುತ್ತವೆ. ಆದರೆ ಇವು ಸಾಂಪ್ರದಾಯಿಕ ಮ್ಯೂಚುವಲ್ ಫಂಡ್‌ಗಳ ಮಾದರಿಯಲ್ಲಿಯೇ ಇರುತ್ತವೆ. ಡಿಮ್ಯಾಟ್ ಖಾತೆಯನ್ನು ಬಳಸುವ ಅಗತ್ಯ ಇಲ್ಲದೆ ಹೂಡಿಕೆದಾರರು ಈ ಬಗೆಯ ಫಂಡ್‌ಗಳ ಮೂಲಕ ಹಣ ತೊಡಗಿಸಬಹುದು. ಸೂಚ್ಯಂಕದ ಭಾಗವಾಗಿರುವ ಷೇರುಗಳಲ್ಲಿ ಹಣ ತೊಡಗಿಸಲು ಇವೆರಡೂ ಆಯ್ಕೆಗಳು ದಾರಿ ಮಾಡಿಕೊಡುತ್ತವೆ.

ಈಗ ಏಕೆ ಇತ್ತ ಗಮನ?

'ನಿಫ್ಟಿ 200 ವ್ಯಾಲ್ಯೂ 30 ಸೂಚ್ಯಂಕ' ಆಧಾರಿತ ಇಟಿಎಫ್ ಅಥವಾ ಈ ಸೂಚ್ಯಂಕದ ಮೇಲೆ ಹಣ ತೊಡಗಿಸುವ ಫಂಡ್‌ಗಳು ಹೂಡಿಕೆಯಲ್ಲಿ ವೈವಿಧ್ಯ ಸಾಧಿಸಲು ಅವಕಾಶ ನೀಡುವ, ಹೂಡಿಕೆಯಲ್ಲಿ ಶಿಸ್ತು ಸಾಧಿಸಲು ಅನುವು ಮಾಡಿಕೊಡುವ ಹಾಗೂ ವೆಚ್ಚವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ದಾರಿ ಮಾಡಿಕೊಡುವ ಕಾರಣಕ್ಕಾಗಿ ಹೂಡಿಕೆದಾರರನ್ನು ಆಕರ್ಷಿಸುತ್ತಿವೆ.

ಮೊದಲನೆಯದಾಗಿ, ಈ ಸೂಚ್ಯಂಕವು ನಿಫ್ಟಿ–200 ಸೂಚ್ಯಂಕವನ್ನು ಆಧರಿಸಿದೆ. ನಿಫ್ಟಿ–200 ಸೂಚ್ಯಂಕವು ಬೇರೆ ಬೇರೆ ವಲಯಗಳಿಗೆ ಸೇರಿದ ಮಿಡ್‌ಕ್ಯಾಪ್ ಮತ್ತು ಲಾರ್ಜ್‌ಕ್ಯಾಪ್ ಕಂಪನಿಗಳನ್ನು ಪ್ರತಿನಿಧಿಸುತ್ತದೆ. 'ನಿಫ್ಟಿ 200 ವ್ಯಾಲ್ಯೂ 30 ಸೂಚ್ಯಂಕ'ವು ಮಾರುಕಟ್ಟೆಯನ್ನು ಪ್ರತಿನಿಧಿಸುತ್ತಲೇ, ಆಯ್ದ 30 ಷೇರುಗಳ ಮೇಲೆ ಗಮನ ಹರಿಸುತ್ತದೆ.

ಎರಡನೆಯದಾಗಿ, ಕಡಿಮೆ ಮೌಲ್ಯಕ್ಕೆ ಲಭ್ಯವಿರುವ ಷೇರುಗಳ ಮೇಲೆ ಹೂಡಿಕೆ ಮಾಡುವ 'ವ್ಯಾಲ್ಯೂ ಇನ್ವೆಸ್ಟಿಂಗ್' ವಿಧಾನವು ದೀರ್ಘಾವಧಿಯಲ್ಲಿ ಹೆಚ್ಚಿನ ಗಳಿಕೆ ತಂದುಕೊಟ್ಟಿದೆ. ಮೂರನೆಯದಾಗಿ, ಇಟಿಎಫ್ ಅಥವಾ ಇಂಡೆಕ್ಸ್ ಫಂಡ್‌ಗಳ ಮೂಲಕ ಹೂಡಿಕೆ ಮಾಡುವುದು ಕಡಿಮೆ ವೆಚ್ಚದ ಕೆಲಸ. ಇದು ಕೂಡ ದೀರ್ಘಾವಧಿಯಲ್ಲಿ ಹೆಚ್ಚಿನ ಗಳಿಕೆ ತಂದುಕೊಡುವುದಕ್ಕೆ ನೆರವಾಗಬಹುದು.

ದೀರ್ಘಾವಧಿಯಲ್ಲಿ ಇದರ ಪಾತ್ರ

ದೀರ್ಘಾವಧಿಗೆ ಹಣ ತೊಡಗಿಸುವ ಉದ್ದೇಶ ಇರುವ ಹೂಡಿಕೆದಾರರಿಗೆ 'ನಿಫ್ಟಿ 200 ವ್ಯಾಲ್ಯೂ 30 ಸೂಚ್ಯಂಕ'ದಲ್ಲಿ ಹಣ ತೊಡಗಿಸುವುದು ಹೂಡಿಕೆಯಲ್ಲಿ ವೈವಿಧ್ಯ ಸಾಧಿಸಲು ಹೆಚ್ಚುವರಿ ನೆರವು ಒದಗಿಸಬಹುದು. ಬೇರೆ ಬೇರೆ ಸಂದರ್ಭಗಳಲ್ಲಿ ಮಾರುಕಟ್ಟೆಯಲ್ಲಿ ಕಾಣುವ ಭಿನ್ನ ಬಗೆಯ ಚಲನೆಯ ಸಂದರ್ಭಗಳಲ್ಲಿ ಹೂಡಿಕೆದಾರರಿಗೆ ಇದು ಸಹಾಯಕ್ಕೆ ಬರಬಹುದು.

ಲೇಖಕ ಐಸಿಐಸಿಐ ಪ್ರುಡೆನ್ಶಿಯಲ್ ಎಎಂಸಿ ಕಂಪನಿಯ ಹೂಡಿಕೆ ಕಾರ್ಯತಂತ್ರ ವಿಭಾಗದ ಮುಖ್ಯಸ್ಥ

ಒಟ್ಟಾರೆಯಾಗಿ ಹೇಳುವುದಿದ್ದರೆ...

ಇಂದಿನ ಸಂಕೀರ್ಣ ಹಣಕಾಸಿನ ಜಗತ್ತಿನಲ್ಲಿ ಸರಳವಾಗಿ ನಡೆದುಕೊಳ್ಳುವ ಗುಣಕ್ಕೆ ಕಡಿಮೆ ಬೆಲೆ! ಹೀಗಿದ್ದರೂ, ಮೌಲ್ಯದ ದೃಷ್ಟಿಯಿಂದ ಚೆನ್ನಾಗಿರುವ ಕಂಪನಿಗಳನ್ನು ಹೊಂದಿರುವ 'ನಿಫ್ಟಿ 200 ವ್ಯಾಲ್ಯೂ 30 ಸೂಚ್ಯಂಕ' ಆಧಾರಿತ ಹೂಡಿಕೆ ಉತ್ಪನ್ನದಲ್ಲಿ ಹಣ ತೊಡಗಿಸುವುದು ಷೇರುಗಳಲ್ಲಿನ ಹೂಡಿಕೆಗೆ ವ್ಯವಸ್ಥಿತವಾದ ಮಾರ್ಗವೊಂದನ್ನು ಕಲ್ಪಿಸಿಕೊಡುತ್ತದೆ.

ಪ್ಯಾಸಿವ್ ಹೂಡಿಕೆ ವಿಧಾನಗಳು ವ್ಯಾಪಕವಾಗುತ್ತಿರುವ ಸಂದರ್ಭದಲ್ಲಿ ಇಂತಹ ಹೂಡಿಕೆ ಕ್ರಮವು ಷೇರುಗಳಲ್ಲಿ ಹಣ ತೊಡಗಿಸುವುದಕ್ಕೆ ಪಾರದರ್ಶಕವಾದ ಮಾರ್ಗವೊಂದನ್ನು ತೋರಿಸುತ್ತದೆ. ಯಾವುದೇ ಹೂಡಿಕೆ ವಿಧಾನ ಕೂಡ ಅಂತಿಮ ಫಲಿತಾಂಶದ ವಿಚಾರದಲ್ಲಿ ಖಚಿತವಾದ ಭರವಸೆಯನ್ನು ಒದಗಿಸಲಾರದು. ಹೀಗಿದ್ದರೂ ವೈವಿಧ್ಯೀಕರಣ, ದೀರ್ಘಾವಧಿಯ ಕುರಿತ ಆಲೋಚನೆ, ನಿಯಮ ಆಧಾರಿತ ಹೂಡಿಕೆಯು 'ಸ್ಥಿರವಾದ ಗತಿಯಲ್ಲಿ ಸಂಪತ್ತು ಸೃಷ್ಟಿ'ಯ ಮೇಲೆ ಗಮನ ಕೇಂದ್ರೀಕರಿಸಲು ಹೂಡಿಕೆದಾರರಿಗೆ ನೆರವಾಗುತ್ತದೆ.

ಎಸ್‌ಐಪಿ:₹3.49 ಲಕ್ಷ ಕೋಟಿ ಹೂಡಿಕೆ

ಮಾಹಿತಿ ಕಣಜ




2016–17ರ ಆರ್ಥಿಕ ವರ್ಷದಲ್ಲಿ ವ್ಯವಸ್ಥಿತ ಹೂಡಿಕೆ ಯೋಜನೆಯಲ್ಲಿನ (ಎಸ್‌ಐಪಿ) ಮೊತ್ತವು ₹43,921 ಕೋಟಿ. ಇದು 2025–26ರ ಆರ್ಥಿಕ ವರ್ಷದ ಮಾರ್ಚ್ ಅಂತ್ಯದ ವೇಳೆಗೆ ₹3,49,589 ಕೋಟಿಗೆ ತಲುಪಿದೆ.

ಆನ್‌ಲೈನ್ ಹೂಡಿಕೆ ವೇದಿಕೆ ಗ್ರೋವ್ ಪ್ರಕಾರ, ಶಿಸ್ತುಬದ್ಧ ಹೂಡಿಕೆ ಯೋಜನೆಯಾಗಿರುವ ಎಸ್‌ಐಪಿ, ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವವರಿಗೆ ಷೇರುಪೇಟೆಯ ಏರಿಳಿತದಿಂದ ಸುರಕ್ಷತೆಯನ್ನು ನೀಡುತ್ತದೆ. ಹೀಗಾಗಿ ಈ ಯೋಜನೆಯಲ್ಲಿ ಹೂಡಿಕೆ ಮಾಡುವವರ ಸಂಖ್ಯೆ ಹೆಚ್ಚಾಗುತ್ತಲೇ ಇರುತ್ತದೆ.

ಕಳೆದ ಕೆಲವು ವರ್ಷಗಳ ಅಂಕಿ–ಅಂಶವನ್ನು ಗಮನಿಸಿದಾಗ ಎಸ್‌ಐಪಿಯಲ್ಲಿ ಹೂಡಿಕೆ ಮಾಡುವವರು ಮತ್ತು ಹೂಡಿಕೆ ಮೊತ್ತವು ಏರಿಕೆಯಾಗುತ್ತಲೇ ಇದೆ. ಆರಂಭದಲ್ಲಿ ಹೂಡಿಕೆ ಮೊತ್ತ ಸಣ್ಣದಿದ್ದರೂ, ಶಿಸ್ತುಬದ್ಧವಾಗಿ ಹೂಡಿಕೆ ಮಾಡಿದರೆ ದೀರ್ಘಾವಧಿಯಲ್ಲಿ ದೊಡ್ಡ ಸಂಪತ್ತನ್ನೇ ಸೃಷ್ಟಿಸುತ್ತದೆ. ಒಂದೇ ಬಾರಿಗೆ ದೊಡ್ಡ ಮೊತ್ತವನ್ನು (ಲಂಪ್ ಸಮ್) ಸಹ ಹೂಡಿಕೆ ಮಾಡಬಹುದಾಗಿದೆ. ಅಂದಾಜಿನ ಪ್ರಕಾರ, ಎಸ್‌ಐಪಿಯು ವಾರ್ಷಿಕ ಶೇ 10-15ರಷ್ಟು ಗಳಿಕೆ ನೀಡುವ ಸಾಮರ್ಥ್ಯ ಹೊಂದಿದೆ.

10.44 ಕೋಟಿ
2025-26ರ ಮಾರ್ಚ್ ಅಂತ್ಯದ ವೇಳೆಗೆ ಎಸ್‌ಐಪಿಯಲ್ಲಿನ ಒಟ್ಟು ಖಾತೆಗಳ ಸಂಖ್ಯೆ

₹15.10 ಲಕ್ಷ ಕೋಟಿ
ಎಸ್‌ಐಪಿಯ ಒಟ್ಟು ಸಂಪತ್ತಿನ ನಿರ್ವಹಣಾ ಮೌಲ್ಯ (ಎಯುಎಂ)



ವರುಣ್ ಬೆವರೇಜಸ್ ಲಿಮಿಟೆಡ್

ಬ್ರೋಕರೇಜ್ ಮಾತು

ವರುಣ್ ಬೆವರೇಜಸ್ ಲಿಮಿಟೆಡ್ ಷೇರಿನ ಬೆಲೆ ₹600ಕ್ಕೆ ತಲುಪಲಿದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ.

ಪ್ರಸಕ್ತ ಕ್ಯಾಲೆಂಡರ್ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿಯ ವರಮಾನವು ₹6,570 ಕೋಟಿಗೂ ಹೆಚ್ಚಿದೆ. ಇದು ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 18ರಷ್ಟು ಜಾಸ್ತಿ. ಇದೇ ಅವಧಿಯಲ್ಲಿ ತೆರಿಗೆ, ಬಡ್ಡಿ, ಸಾಲ ತೀರುವಳಿ ಪೂರ್ವದ ವರಮಾನ (ಇಬಿಐಟಿಡಿಎ) ಶೇ 21ರಷ್ಟು ಏರಿಕೆ ದಾಖಲಿಸಿದ್ದು, ₹1,530 ಕೋಟಿಯಷ್ಟಾಗಿದೆ.

ತೆರಿಗೆ ನಂತರದ ಲಾಭವು (ಪಿಎಟಿ) ಶೇ 21ರಷ್ಟು ಏರಿಕೆಯಾಗಿದ್ದು, ₹880 ಕೋಟಿಯಷ್ಟಾಗಿದೆ. ಕಂಪನಿಯ ಕಾರ್ಬೋನೇಟೆಡ್ ಪಾನೀಯ (ಸಿಎಸ್‌ಡಿ), ಜ್ಯೂಸ್ ಮತ್ತು ನೀರಿನ ಮಾರಾಟದ ಪ್ರಮಾಣವು ಕ್ರಮವಾಗಿ ಶೇ 74, ಶೇ 7 ಮತ್ತು ಶೇ 19ರಷ್ಟು ಹೆಚ್ಚಳವಾಗಿದೆ.

ಎಲ್‌ನಿನೊ ಪರಿಣಾಮದಿಂದ ಪ್ರಸಕ್ತ ವರ್ಷದ ಜೂನ್ ತ್ರೈಮಾಸಿಕದವರೆಗೆ ವಾತಾವರಣದಲ್ಲಿ ಹೆಚ್ಚಿನ ತಾಪ ಇರಲಿದೆ. ಅಲ್ಲದೆ, ಕಂಪನಿಯು ಹೊಸದಾಗಿ ನಿಂಬೂಜ್ ಮತ್ತು ಟ್ರೋಪಿಕಾನ ಎಂಬ ಪಾನೀಯವನ್ನು ಬಿಡುಗಡೆ ಮಾಡಿದೆ. ಇದು ದೇಶದಲ್ಲಿ ಮಾರಾಟವನ್ನು ಹೆಚ್ಚಿಸಲಿದೆ. ಕಂಪನಿಯು ಇತ್ತೀಚೆಗೆ ದಕ್ಷಿಣ ಆಫ್ರಿಕಾದ ಟ್ವಿಝಾ ಮತ್ತು ಕ್ರಿಕ್ಲಿ ಸ್ವಾಧೀನಪಡಿಸಿಕೊಂಡಿದೆ. ಇದರಿಂದಾಗಿ ಕಂಪನಿಯ ತಯಾರಿಕೆ ಹೆಚ್ಚಲಿದೆ.

ಹೆಚ್ಚಿನ ತಾಪದಿಂದ ಕಂಪನಿಯ ವಹಿವಾಟು ಹೆಚ್ಚಳವಾಗುವ ನಿರೀಕ್ಷೆ ಇದೆ. 2026 ಮತ್ತು 2027ರ ಕ್ಯಾಲೆಂಡರ್ ವರ್ಷದಲ್ಲಿ ಕಂಪನಿಯ ಗಳಿಕೆಯ ಹೆಚ್ಚಳ ಕ್ರಮವಾಗಿ ಶೇ 4 ಮತ್ತು ಶೇ 6ರಷ್ಟಿರಲಿದೆ. 2025ರಿಂದ 2027ರವರೆಗೆ ಕಂಪನಿಯ ವರಮಾನದ ಸಂಯುಕ್ತ ವಾರ್ಷಿಕ ಬೆಳವಣಿಗೆ ದರವು (ಸಿಎಜಿಆರ್) ಶೇ 16ರಷ್ಟು, ಇಬಿಐಟಿಡಿಎ ಶೇ 16ರಷ್ಟು ಮತ್ತು ತೆರಿಗೆ ನಂತರದ ಲಾಭ ಶೇ 20ರಷ್ಟಿರಲಿದೆ ಎಂದು ಅಂದಾಜಿಸಲಾಗಿದೆ ಎಂದಿದೆ.

ಬುಧವಾರದ ವಹಿವಾಟಿನ ಅಂತ್ಯಕ್ಕೆ ವರುಣ್ ಬೆವರೇಜಸ್‌ನ ಷೇರಿನ ಮೌಲ್ಯವು ₹523.25 ಆಗಿತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಇಂಗ್ಲಿಷ್

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

Unit-1 Prose : A Hero

Know about the Author

R.K.Narayan is widely considered to be one of India's greatest English language novelists known for simple and unpretentious writing style. He is best known for his works set in the fictional South Indian town of Malgudi. One of his works include Swami and his Friends, The Bachelor of Arts, The English Teacher and The Financial Expert. His novel, The Guide was adapted for film, it won Sahitya Academy Award. He highlights, social content and provides a feel for his characters through everyday life. He was nominated to the Rajya Sabha, the upper house of India's parliament.

Let's look at the solutions for this year (2026 March) annual Exam's Question Paper.

1) A newspaper report about a boy was an unexpected event in Swami's life. Justify.

Ans:- The newspaper report about a boy fighting a tiger became an unexpected turning point in Swami's life because it led to a chain of events that changed him completely.

Swami read in the newspaper that a village boy had bravely fought a tiger. He found this hard to believe and argued that only a strong grown-up could do such a thing. However, his father disagreed and emphasized that courage is more important than age or strength. When Swami refused to accept this idea, his father challenged him to prove his bravery by sleeping alone in the office room—something Swami had always been afraid to do.

Though frightened, Swami had no choice but to accept the challenge. That night, while trying to sleep, he saw a dark figure moving in the room. Terrified, he assumed it was a devil. In panic, he clung to the figure and bit it with all his strength, using his teeth as his only weapon.

The "devil" turned out to be a notorious burglar who had entered the house. Swami's unexpected act of courage helped catch the thief, and he was praised as a hero.

Thus, what started as a simple newspaper report unexpectedly pushed Swami to confront his fears and prove his courage, transforming him into a hero overnight.

Other Question and Answer

1) Swami's father drew his attention to a report in the newspaper. What was the report about?

Ans:- The report was about the bravery of a village lad who came face to face with a tiger while returning home by jungle path and fought the tiger to climb the tree where he stayed half a day till some people came that way and killed the tiger.

2) The report said that the boy (who fought with the tiger) stayed on the tree for half a day. Why did he do so?

a) He wanted to watch the tiger from the top of tree
b) He wanted someone to kill the tiger
c) He wanted to take rest for some time

Ans:- (b) He wanted someone to kill the tiger

3) Swami said that a very strong and grown up person might have fought with a tiger. Do you think he made this remark out of his
(a) Experience, (b) Wisdom, (c) Belief?
(Choose the most appropriate word)

Ans:- (c) Belief

4) "Can you prove you have courage?" Swami's father said. (Answer the following questions)
a) Was he joking? Or, serious?
b) Was it a challenge? Or, a command

Ans:- (a) Swami's father was serious.
(b) It started as a challenge, but soon became a command when Swami tried to escape from it.

5) The place where Swami usually slept was .... (Fill in the blank)

Ans:- Beside his granny in the passage.

6) What is disgraceful, according to Swami's father?

Ans:- According to Swami's father it is disgraceful for a boy in second form (aged 12 years and 8th year of study in school as per classification of students according to their age in England) to sleep beside granny or mother like a baby.

7) What do you think was the practice of granny before she went to bed?

Ans: Granny used to tell stories to Swami before she went to bed.

8) Was Swami really sleeping? Or was he pretending?

Ans: Swami Was not really sleeping, he was pretending to sleep by covering his face with the blanket and snored under it.

9) To Swami, his father looked like an .... (Fill in the blank)

Ans: To Swami, his father looked like an apparition in the semi darkness of the passage.

10) Why do you think Swami looked at his granny and his mother while following his father to the room?

Ans: Swami looked at his granny and mother with an appeal to save him from his father's challenge to make him sleep alone in the office room.

11) "There might be scorpions before your law books", said Swami.
a) Had he seen them earlier? Or were there scorpions really?
b) Was it a trick to escape from his father?
(Answer all the questions)

Ans: a) Swami had not seen any scorpions earlier. There may not be any scorpions really.
b) Yes, absolutely It was a trick to escape from his father.

12) Swami wished that the tiger had not spared the boy, which means......... (Choose the right answer)
(1) He did not want the boy to be alive.
(2) He did not want the tiger to be alive.

Ans: He did not want the boy to be alive.

13) As silence deepened in the room, what was Swami reminded of?

Ans: Swami remembered all the stories of devils and ghosts he had heard in his life. Swami remembered his close friend seeing devil in banyan tree, devil making Muniswami's father spit blood by slapping and many other such stories.

ಪಿಯುಸಿ ಪರೀಕ್ಷೆ ದಿಕ್ಸೂಚಿ — Biology

ಎಸ್ಸೆಸ್ಸೆಲ್ಸಿ ಸಮಾಜ ಅಧ್ಯಯನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

REPRODUCTION

Reproduction in flowering plants

Multiple choice questions

1. The function of tapetum in microsporangium is
a) It nourishes the developing pollen grains
b) It helps in dehiscence of anther to release the pollen
c) It helps in protection
d) It helps in division

Ans: a

2. Select the correct sequence of anther wall layers:
a) Epidermis→Middle layers → Endothecium → Tapetum
b) Epidermis → Endothecium → Middle layers → Tapetum
c) Epidermis → Tapetum → Middle layers → Endothecium
d) Tapetum → Middle layers → Epidermis → Endothecium

Ans. b

3. Select the correct sequence of events in microsporogenesis:
a) Sporogenous tissue → Microspore mother cell → Microspore tetrad →Microspores
b) Microspores → Microspore mother cell → Microspore tetrad→ Sporogenous tissue
c) Sporogenous tissue → Microspore tetrad →Microspores → Microspore mother cell
d) Microspores → Sporogenous tissue → Microspore tetrad → Microspore mother cell

Ans: a

4. The most resistant organic material present on exine of pollen grain is
a) Tapetum b) Pectin
c) Sporopollenin d) Cellulose

Ans: C

5. Which of the following has proved helpful in preserving pollen as fossils?
a) Pollen kit b) Cellulosic intine
c) Oil content d) Sporopollenin

Ans: d

6. Select the incorrect statement with respect to vegetative cell of pollen grain.
a) It is bigger than generative cell
b) It has abundant food reserve
c) It has a large irregularly shaped nucleus
d) It floats in the cytoplasm of generative cell

Ans:- d

Answer the following

1. What is a stamen?


Ans:- The little stalks with swollen tops just indside the ring of the petal in a flower are stamens. They produce pollen grains. Its two parts are filament and anther.

2. What is a carpel?

Ans:- Carpel is the male reproductive organ of the plant. It is flask like structure present in the centre of the flower. Its three parts are stigma, style and ovary.


3. Draw a neat diagram of a flower and label its parts.

Ans:- *Diagram of a flower with its parts labelled*



4. Draw a neat diagram of a stamen and carpel of a flower and label its parts.

Ans:- *Diagram of stamen and carpel of a flower with its parts labelled*




5. What is pollination?

Ans:- The transfer of the pollen grains from the anther of a stamen to the stigma of a carpel is called pollination.

6. What is Self - pollination?


Ans:- The transfer of the pollen grains from the anther of a stamen of a flower to the stigma of a carpel of the same flower is called self - pollination.



The above figure shows the process of self - pollination.

7. What is Cross – pollination?

Ans:- The transfer of the pollen grains from the anther of a stamen of a flower to the stigma of a carpel of another flower is cross - pollination.



(Contd...)

ವಿದ್ಯುತ್ ಬೇಡಿಕೆಯಲ್ಲಿ ಭಾರಿ ಹೆಚ್ಚಳ

ಬಿಸಿಗಾಳಿಯ ಪರಿಣಾಮ • ಅನಿರೀಕ್ಷಿತ ಏರಿಕೆಯತ್ತ ವಿದ್ಯುತ್ ಬಳಕೆ ಪ್ರಮಾಣ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದಲ್ಲಿ ಬೇಸಿಗೆ ತಾಪಮಾನ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ. ಇದರಿಂದಾಗಿ ವಿದ್ಯುತ್ ಬಳಕೆಯ ಜತೆಗೆ ಬೇಡಿಕೆಯೂ ಅನಿರೀಕ್ಷಿತ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ.

ಸೋಮವಾರ (ಏ. 27) ಮಧ್ಯಾಹ್ನ 3 ಗಂಟೆ ವೇಳೆಗೆ ವಿದ್ಯುತ್ ಬೇಡಿಕೆ ಪ್ರಮಾಣ 18 ಸಾವಿರ ಮೆಗಾವಾಟ್ ದಾಟಿದೆ. ಇದು 19 ಸಾವಿರ ಮೆಗಾವಾಟ್ ತಲುಪುವ ಸಾಧ್ಯತೆಯಿದೆ.

'ವಿದ್ಯುತ್ ಬೇಡಿಕೆಯಲ್ಲಿಯೂ ದಿಢೀರ್ ಏರುಪೇರಾಗುತ್ತಿರುವುದರಿಂದ ವಿತರಣಾ ಜಾಲದಲ್ಲಿ ಟ್ರಿಪ್ ಆಗುತ್ತಿದೆ. ಇದು ಕೆಲವೆಡೆ ವಿದ್ಯುತ್ ಪೂರೈಕೆ ಸ್ಥಗಿತಕ್ಕೆ ಕಾರಣವಾಗುತ್ತಿದೆ' ಎಂದು ಇಂಧನ ಇಲಾಖೆಯ ಮೂಲಗಳು ತಿಳಿಸಿವೆ.

'ರಾತ್ರಿ ಮತ್ತು ಬೆಳಿಗ್ಗೆ ವಿದ್ಯುತ್ ಬೇಡಿಕೆ ಕಡಿಮೆ ಇರುವುದರಿಂದ ದಿನದ ಒಟ್ಟಾರೆ ಸರಾಸರಿ ವಿದ್ಯುತ್ ಬೇಡಿಕೆ 14 ಸಾವಿರದಿಂದ 14,100 ಮೆಗಾವಾಟ್ ಆಸುಪಾಸು ಅಂದಾಜು ಮಾಡಲಾಗಿದೆ. ಅಂದರೆ, ದಿನವೊಂದಕ್ಕೆ ವಿದ್ಯುತ್ ಬೇಡಿಕೆ 335 ದಶಲಕ್ಷ ಯೂನಿಟ್‌ನಿಂದ 338 ದಶಲಕ್ಷ ಯೂನಿಟ್ ಆಗಬಹುದು. ಇದೇ ವರ್ಷ ಮಾರ್ಚ್ 26ರಂದು 335.62 ದಶಲಕ್ಷ ಯೂನಿಟ್ ವಿದ್ಯುತ್ ಬಳಕೆ ಆಗಿದ್ದರೆ, ಏಪ್ರಿಲ್ 1ರಂದು 331.94 ದಶಲಕ್ಷ ಯೂನಿಟ್ ಬಳಕೆ ಆಗಿದೆ.

ಮುಖ್ಯಾಂಶಗಳು

- ಬೇಸಿಗೆ ತಾಪಮಾನ ದಿನದಿಂದ ದಿನಕ್ಕೆ ಏರಿಕೆ
- ಮಧ್ಯಾಹ್ನ 3 ಗಂಟೆ ವೇಳೆ 18 ಸಾವಿರ ಮೆಗಾವಾಟ್ ಬೇಡಿಕೆ
- ಮೇ 15ರವರೆಗೆ ಗರಿಷ್ಠ ವಿದ್ಯುತ್ ಬೇಡಿಕೆ

ವಿದ್ಯುತ್ ಫೀಡರ್‌ಗಳ ಬಳಿ ಸೌರ ವಿದ್ಯುತ್ ಉತ್ಪಾದಿಸಿ ಕೃಷಿ ಪಂಪ್ ಸೆಟ್‌ಗಳಿಗೆ ಪೂರೈಸುವ 'ಕುಸುಮ್ ಸಿ' ಯೋಜನೆಯಡಿ 500 ಮೆಗಾವಾಟ್‌ಗಿಂತ ಹೆಚ್ಚು ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಹೀಗಾಗಿ, ಕೃಷಿ ಪಂಪ್ ಸೆಟ್‌ಗಳು ಹಗಲು ವೇಳೆ ಕೆಲಸ ನಿರ್ವಹಿಸುತ್ತಿವೆ. ಈ ಕಾರಣದಿಂದಾಗಿ ರಾತ್ರಿ ಮತ್ತು ಬೆಳಗಿನ ವೇಳೆಯಲ್ಲಿ ವಿದ್ಯುತ್ ಬೇಡಿಕೆ ಸ್ವಲ್ಪ ಮಟ್ಟಿಗೆ ಇಳಿಮುಖ ಆಗಿದೆ.

ಕಳೆದ 4 ವರ್ಷಗಳಲ್ಲಿ ಏಪ್ರಿಲ್ 28ರಂದು ವಿದ್ಯುತ್ ಬಳಕೆ

ವರ್ಷ	ಯೂನಿಟ್ (ದಶ ಲಕ್ಷಗಳಲ್ಲಿ)
2023	289.85
2024	307.81
2025	280.99
2026	353.72

ಅಂದರೆ ಮೇ 15ರವರೆಗೆ ಗರಿಷ್ಠ ವಿದ್ಯುತ್ ಬೇಡಿಕೆ ಪ್ರತಿನಿತ್ಯ 330 ದಶಲಕ್ಷ ಯೂನಿಟ್‌ನಿಂದ 340 ದಶಲಕ್ಷ ಯೂನಿಟ್‌ವರೆಗೆ ಬರಬಹುದು ಎಂದು ಅಂದಾಜಿಸಲಾಗಿದೆ. ಜಲ ವಿದ್ಯುತ್, ಉಷ್ಣ ವಿದ್ಯುತ್ ಉತ್ಪಾದನೆಯಲ್ಲಿ ಸ್ಥಿರತೆ ಕಾಯ್ದುಕೊಳ್ಳುವುದರ ಜತೆಗೆ, ಕೇಂದ್ರ ಗ್ರಿಡ್‌ನಲ್ಲಿ ಹಂಚಿಕೆಯಾಗದೆ ಉಳಿದಿರುವ ವಿದ್ಯುತ್ ಪಡೆದು ಈ ಬೇಡಿಕೆಯನ್ನು ಈಡೇರಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ನೀರು ಸರಬರಾಜು ಫೀಡರ್‌ಗಳಿಗೆ 24 ಗಂಟೆ, ಕೃಷಿ ಫೀಡರ್‌ಗಳಿಗೆ 7 ಗಂಟೆ ತ್ರಿ ಫೇಸ್ ವಿದ್ಯುತ್ ಪೂರೈಸಲಾಗುತ್ತಿದೆ. ಬೇಸಿಗೆಯಲ್ಲಿ ಯಾವುದೇ ಸಮಸ್ಯೆ ಆಗದಂತೆ ನಿರಂತರ ವಿದ್ಯುತ್ ಪೂರೈಕೆಗೆ ಯಾವುದೇ ಅಡಚಣೆ ಆಗದಂತೆ ನಿಯಮಿತವಾಗಿ ಎಲ್ಲ ವಿದ್ಯುತ್ ಉಪಕೇಂದ್ರಗಳ ಹಾಗೂ 11 ಕೆವಿ ವಿದ್ಯುತ್ ಮಾರ್ಗಗಳ ನಿರ್ವಹಣೆ ಕಾರ್ಯ ಮಾಡಲಾಗುತ್ತಿದೆ' ಎಂದೂ ಮೂಲಗಳು ತಿಳಿಸಿವೆ.

ಲೋಡ್ ಶೆಡ್ಡಿಂಗ್ ಇಲ್ಲ: ಕೆ.ಜೆ. ಜಾರ್ಜ್


ಕೆ.ಜೆ. ಜಾರ್ಜ್

'ಮುಂಗಾರು ಆಗಮನದವರೆಗೆ ಎಷ್ಟು ವಿದ್ಯುತ್ ಬೇಕು ಎಂದು ಅಂದಾಜಿಸಿ ಅಗತ್ಯವಿರುವಷ್ಟು ವಿದ್ಯುತ್ ಪೂರೈಸಲು ಸರ್ಕಾರ ಎಲ್ಲ ರೀತಿಯ ಕ್ರಮಗಳನ್ನು ತೆಗೆದುಕೊಂಡಿದೆ. ಯಾವುದೇ ಕಾರಣಕ್ಕೂ ಲೋಡ್‌ಶೆಡ್ಡಿಂಗ್ ಮಾಡುವುದಿಲ್ಲ. ರಾಜ್ಯದ ಬೇಡಿಕೆ ಪೂರೈಸುವಷ್ಟು ವಿದ್ಯುತ್ ಲಭ್ಯವಿದೆ' ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ತಿಳಿಸಿದರು.

'ಪ್ರಜಾವಾಣಿ' ಜತೆ ಮಾತನಾಡಿದ ಅವರು, 'ವಿದ್ಯುತ್ ಬೇಡಿಕೆ ಏಕಾಏಕಿ ಹೆಚ್ಚಾದರೆ ಒತ್ತಡದಿಂದ ಟ್ರಿಪ್ ಆಗಿ ವಿದ್ಯುತ್ ಸ್ಥಗಿತಗೊಳ್ಳಬಹುದೇ ಹೊರತು ಲೋಡ್ ಶೆಡ್ಡಿಂಗ್ ಮಾಡುತ್ತಿಲ್ಲ. ರೈತರಿಗೆ ದಿನದ ಏಳು ಗಂಟೆ ತ್ರೀ ಫೇಸ್ ವಿದ್ಯುತ್ ನೀಡುವ ವಾಗ್ದಾನವನ್ನು ಈಡೇರಿಸುತ್ತಿದ್ದೇವೆ. ಒಟ್ಟಾರೆ ರಾಜ್ಯದ ಜನರಿಗೆ ತೊಂದರೆ ಆಗದಂತೆ ಅಗತ್ಯ ವಿದ್ಯುತ್ ಪೂರೈಸಲಾಗುವುದು' ಎಂದೂ ಅವರು ಹೇಳಿದರು.

'ನಿರೀಕ್ಷೆಗಿಂತ ಹೆಚ್ಚಿನ ಬೇಡಿಕೆ ಬಂದರೆ ಕೇಂದ್ರ ಗ್ರಿಡ್‌ನಲ್ಲಿ ಹಂಚಿಕೆಯಾಗದೆ ಉಳಿದ ವಿದ್ಯುತ್ ಪಡೆಯುವುದೂ ಸೇರಿದಂತೆ ಪರ್ಯಾಯ ವ್ಯವಸ್ಥೆಗೆ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ' ಎಂದರು.

ಯಾವ ಮೂಲದಿಂದ ಎಷ್ಟು ವಿದ್ಯುತ್ ಪೂರೈಕೆ (2026ರ ಏಪ್ರಿಲ್ 28ರಂದು)

ಮೂಲ	ಯೂನಿಟ್ (ದಶ ಲಕ್ಷಗಳಲ್ಲಿ)
ಕೆಪಿಸಿಎಲ್‌ನ ಜಲ, ಉಷ್ಣ ವಿದ್ಯುತ್ ಸ್ಥಾವರ	109.82
ಕೆಪಿಸಿಎಲ್‌ನ ತ್ಯಾಜ್ಯದಿಂದ ವಿದ್ಯುತ್ ಸ್ಥಾವರ	0.15
ಸೌರ, ಪವನ, ಕೋ-ಜನರೇಷನ್, ಮಿನಿ ಹೈಡಲ್, ಬಯೋಮಾಸ್ ಘಟಕ	70.67
ಕೇಂದ್ರ ಗ್ರಿಡ್, ಇತರೆ ಕೇಂದ್ರ ಸರ್ಕಾರದ ಮೂಲಗಳಿಂದ	82.46

(ಇದರಲ್ಲಿ ವಿನಿಮಯ ಆಧಾರದ ಮೇಲೆ ಉತ್ತರ ಪ್ರದೇಶ, ಹರಿಯಾಣ ಮತ್ತು ಪಂಜಾಬ್ ರಾಜ್ಯಗಳಿಂದ 35.12 ದಶಲಕ್ಷ ಯೂನಿಟ್ ಇದೆ)

'ಕೆಪಿಸಿಸಿ ಸಾರಥ್ಯ ಸತೀಶ ಸಮರ್ಥ'

ಬೆಂಗಳೂರು: 'ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಸತೀಶ ಜಾರಕಿಹೊಳಿ ಬೇಡಿಕೆ ಇಟ್ಟಿದ್ದಾರೆ. ಅವರು ಉತ್ತಮ ಸಂಘಟಕರಾಗಿದ್ದು, ಅವರಿಗೆ ನಾಯಕತ್ವ ವಹಿಸುವ ಸಾಮರ್ಥ್ಯವಿದೆ' ಎಂದು ಸಚಿವ ಎಂ.ಬಿ. ಪಾಟೀಲ ಅಭಿಪ್ರಾಯಪಟ್ಟರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಜಾರಕಿಹೊಳಿ ಸೇರಿದಂತೆ ಎಲ್ಲರಿಗೂ ಹೈಕಮಾಂಡ್ ನಾಯಕರ ಬಳಿ ಚರ್ಚಿಸಲು ಅಧಿಕಾರ ಇದೆ' ಎಂದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ದಲಿತ ಮುಖ್ಯಮಂತ್ರಿ ಕೂಗಿಗೆ ಹೈಕಮಾಂಡ್ ಉತ್ತರ ನೀಡಲಿದೆ. ಹೈಕಮಾಂಡ್ ಎಲ್ಲವನ್ನೂ ತೀರ್ಮಾನಿಸಲಿದೆ' ಎಂದರು.

'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ರಾಜ್ಯಕ್ಕೆ ಬಂದಾಗ ನಾನು ಅವರನ್ನು ಭೇಟಿಯಾಗುತ್ತೇನೆ. ನನ್ನ ಆಸಕ್ತಿಯನ್ನು ಹೈಕಮಾಂಡ್‌ಗೆ ಹೇಳುತ್ತೇನೆ, ಬಹಿರಂಗವಾಗಿ ಹೇಳುವುದಿಲ್ಲ' ಎಂದರು.

'ಸದ್ಯದ ರಾಜಕೀಯ ಬೆಳವಣಿಗೆಯಿಂದ ಪಕ್ಷದ ವರ್ಚಸ್ಸಿಗೆ ಧಕ್ಕೆ ಆಗುತ್ತಿದೆ' ಎಂಬ ಸತೀಶ ಜಾರಕಿಹೊಳಿ ಹೇಳಿಕೆಗೆ, 'ಒಂದು ಮನೆ ಎಂದ ಮೇಲೆ ಸಣ್ಣಪುಟ್ಟ ಗೊಂದಲಗಳು ಇರುತ್ತದೆ. ನಮ್ಮ ಹೈಕಮಾಂಡ್ ತುಂಬಾ ಗಟ್ಟಿಯಾಗಿದೆ. ಏನೇ ಗೊಂದಲಗಳಿದ್ದರೂ ಎಲ್ಲವನ್ನೂ ಬಗೆಹರಿಸಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಅಹಿಂದ ಸಮಾವೇಶಕ್ಕೆ ಕರೆದರೆ ಹೋಗುತ್ತೇವೆ: ಮಹದೇವಪ್ಪ

ನವದೆಹಲಿ: ಕರ್ನಾಟಕದಲ್ಲಿ ಅಹಿಂದ ಸಮಾವೇಶಕ್ಕೆ ಆಹ್ವಾನ ನೀಡಿದರೆ ಹೋಗುತ್ತೇವೆ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ತಿಳಿಸಿದರು.

ಬುಧವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅಹಿಂದ ಕಾಂಗ್ರೆಸ್‌ಗೆ ಮುಖ್ಯ ಮತ ಬ್ಯಾಂಕ್. ಸಮಾವೇಶವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಶಕ್ತಿ ಪ್ರದರ್ಶನ ಅಲ್ಲ. ಅವರೇ ನಮಗೆಲ್ಲ ಶಕ್ತಿ' ಎಂದರು.

ಅಧಿಕಾರ ಹಂಚಿಕೆ ಬಗ್ಗೆ ಮಾಜಿ ಸಚಿವ ಕೆ.ಎನ್.ರಾಜಣ್ಣ ಏನು ಹೇಳಿದ್ದಾರೆ ಎಂಬುದು ಗೊತ್ತಿಲ್ಲ. ನಮ್ಮಲ್ಲಿ ಹೈಕಮಾಂಡ್ ತೀರ್ಮಾನವೇ ಅಂತಿಮ. ಹೈಕಮಾಂಡ್ ತೀರ್ಮಾನ ಮಾಡಿದಾಗ ಸಚಿವ ಸಂಪುಟ ಪುನರ್ ರಚನೆ ಆಗುತ್ತದೆ ಎಂದರು.

ರಾಜ್ಯದಲ್ಲಿ ಒಳ ಮೀಸಲಾತಿ ಜಾರಿ ಮಾಡಿರುವ ಬಗ್ಗೆ ಕೇಂದ್ರ ಪರಿಶಿಷ್ಟ ಜಾತಿ ಆಯೋಗಕ್ಕೆ ಮಾಹಿತಿ ನೀಡಲಾಗಿದೆ. ರಾಜ್ಯದಲ್ಲಿ ಮೀಸಲಾತಿ ಹೆಚ್ಚಳ ಮಾಡುವಂತೆ ಕೇಂದ್ರ ಸಮಾಜ ಕಲ್ಯಾಣ ಸಚಿವರಿಗೆ ಮನವಿ ಮಾಡಲಾಗಿದೆ ಎಂದರು.

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ
MAHARANI CLUSTER UNIVERSITY
ಅರಮನೆ ರಸ್ತೆ, ಬೆಂಗಳೂರು – 560001. Email:mcublr@gmail.com

ಸಂಖ್ಯೆ:ಮಕ್ಲವಿ/ಅಭಿವೃದ್ಧಿ.ವಿ–009/010/2026–27/15 ದಿನಾಂಕ:29.04.2026

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದಲ್ಲಿ ಡಿ ದೇವರಾಜ ಅರಸು ಸಂಶೋಧನಾ ಸಂಸ್ಥೆಯಿಂದ ಪ್ರಾಯೋಜಿತವಾಗಿ "ಹಾವಾಡಿಗ" ಸಮುದಾಯದ ಕುಲಶಾಸ್ತ್ರೀಯ ಅಧ್ಯಯನದ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ. ಈ ವಿಷಯವಾಗಿ "ಹಾವಾಡಿಗ" ಸಮುದಾಯಕ್ಕೆ ಸಂಬಂಧಿಸುವಂತೆ ಯಾವುದೇ ಮಾಹಿತಿಯುಳ್ಳವರು 9945082165/9972735600/996492388 ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸುವುದು ಹಾಗೂ ವಿಶ್ವವಿದ್ಯಾಲಯದ ವೆಬ್‌ಸೈಟ್‌ಗೆ ಭೇಟಿ ನೀಡುವುದು.

ವೆಬ್‌ಸೈಟ್ ವಿಳಾಸ https://mcu.karnataka.gov.in/90/centre-for-sociology-studies-and-research/en

ಸಹಿ/– ಕುಲಸಚಿವರು,
ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ

ಡಿಐಪಿಆರ್/ಸಿಪಿ/408/ಸಿಸಿಎಲ್/2026–27

ಕುವೆಂಪು ವಿಶ್ವವಿದ್ಯಾಲಯ: ಹಿಂಸೆಗೆ ತಿರುಗಿದ ಎನ್‌ಎಸ್‌ಯುಐ ಪ್ರತಿಭಟನೆ

ಕುಲಪತಿ ಫಲಕಕ್ಕೆ ಮಸಿ, ದಾಂದಲೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಡಿಜಿಟಲ್ ಮೌಲ್ಯಮಾಪನ ಅವೈಜ್ಞಾನಿಕವಾಗಿದೆ. ಇದರಿಂದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಅನುತ್ತೀರ್ಣರಾಗುತ್ತಿದ್ದಾರೆ ಹಾಗೂ ಪದವಿ ಪರೀಕ್ಷೆಗಳ ಫಲಿತಾಂಶ ಪ್ರಕಟಣೆ ಹಾಗೂ ಪ್ರಮಾಣಪತ್ರ ವಿತರಣೆಯಲ್ಲಿ ವಿಳಂಬವಾಗುತ್ತಿದೆ ಎಂದು ಆರೋಪಿಸಿ ಎನ್‌ಎಸ್‌ಯುಐ ಸಂಘಟನೆ ನೇತೃತ್ವದಲ್ಲಿ ಬುಧವಾರ ಶಂಕರಘಟ್ಟದ ಕುವೆಂಪು ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ಪ್ರತಿಭಟನೆ ಹಿಂಸೆಗೆ ತಿರುಗಿತು.

ಪ್ರತಿಭಟನೆಯ ವೇಳೆ ಉದ್ರಿಕ್ತ ಪ್ರತಿಭಟನಕಾರರು ಕುಲಪತಿ ಕಚೇರಿಗೆ ನುಗ್ಗಿ ಅಲ್ಲಿನ ಕುರ್ಚಿ, ಪೀಠೋಪಕರಣ ಜಖಂಗೊಳಿಸಿದರು. ಆವರಣದಲ್ಲಿದ್ದ ಹೂಕುಂಡಗಳನ್ನು ಒಡೆದು ಹಾಕಿದರು.

ಕುಲಪತಿ ಪ್ರೊ. ಶರತ್ ಅನಂತಮೂರ್ತಿ ವಿರುದ್ಧ ಧಿಕ್ಕಾರ ಕೂಗಿದ ಪ್ರತಿಭಟನಕಾರರು, ಕುಲಪತಿ, ರಿಜಿಸ್ಟ್ರಾರ್ ಅವರನ್ನು ಸರ್ಕಾರ ಹಿಂದೆ ಕರೆಸಿಕೊಳ್ಳಬೇಕು ಎಂದು ಆಗ್ರಹಿಸಿದರು. ಈ ವೇಳೆ ಕುಲಪತಿ ಕಚೇರಿಯ ಫಲಕಕ್ಕೆ ಕಪ್ಪು ಮಸಿ ಬಳಿದು ಆಕ್ರೋಶ ವ್ಯಕ್ತಪಡಿಸಿದರು.

'ಐದು ತಿಂಗಳ ಹಿಂದೆ ನಡೆದ ಪದವಿ ತರಗತಿಗಳ 1, 3 ಮತ್ತು 5ನೇ ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶ ಇನ್ನೂ ಪ್ರಕಟವಾಗಿಲ್ಲ. ಮೂರು ವರ್ಷಗಳಿಂದ ವಿದ್ಯಾರ್ಥಿಗಳಿಗೆ ಸರಿಯಾಗಿ ಅಂಕಪಟ್ಟಿ ವಿತರಿಸಿಲ್ಲ. ಪಾಸಿಂಗ್ ಸರ್ಟಿಫಿಕೇಟ್ ಹಾಗೂ ಪದವಿ ಪ್ರಮಾಣಪತ್ರಗಳು ಸಿಗದೇ ವಿದ್ಯಾರ್ಥಿಗಳ ಉದ್ಯೋಗ, ಮುಂದಿನ ವ್ಯಾಸಂಗಕ್ಕೆ ತೊಂದರೆ ಆಗಿದೆ' ಎಂದು ಆರೋಪಿಸಿದ ಪ್ರತಿಭಟನಕಾರರು, ಡಿಜಿಟಲ್ ಮೌಲ್ಯಮಾಪನ ವ್ಯವಸ್ಥೆ ಕೈಬಿಡುವಂತೆ ಆಗ್ರಹಿಸಿದರು.


ಕುವೆಂಪು ವಿ.ವಿ.ಯ ಕುಲಪತಿ ಕೊಠಡಿ ಎದುರು ಪ್ರತಿಭಟನಕಾರರು ಪೀಠೋಪಕರಣ ಧ್ವಂಸಗೊಳಿಸಿದರು

> ದಾಳಿ ನಡೆಸಿ ವಿ.ವಿ.ಗೆ ಅಪಮಾನ ಮಾಡಿದ್ದಾರೆ. ಇದರಲ್ಲಿ ಹಳೆಯ ವಿದ್ಯಾರ್ಥಿಗಳ ಪಾತ್ರವಿರುವ ಶಂಕೆ ಇದೆ. ತಪ್ಪಿತಸ್ಥರ ವಿರುದ್ಧ ಕ್ರಮ ನಿಶ್ಚಿತ
> **ಪ್ರೊ.ಶರತ್ ಅನಂತಮೂರ್ತಿ,** ಕುಲಪತಿ, ಕುವೆಂಪು ವಿಶ್ವವಿದ್ಯಾಲಯ

> ಅನುಮತಿ ಪಡೆಯದೇ ಪ್ರತಿಭಟನೆ ನಡೆಸಲಾಗಿದೆ. ಗಲಾಟೆಗೆ ಸಂಬಂಧಿಸಿದಂತೆ 15ಕ್ಕೂ ಹೆಚ್ಚು ಜನರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದೇವೆ
> **ಬಿ.ನಿಖಿಲ್,** ಶಿವಮೊಗ್ಗ ಎಸ್‌.ಪಿ.

ಕುಲಪತಿ ಕಚೇರಿ ಮೇಲೆ ದಾಳಿ ನಡೆದ ವಿಷಯ ತಿಳಿಯುತ್ತಿದ್ದಂತೆಯೇ ವಿಶ್ವವಿದ್ಯಾಲಯದ ಹಂಗಾಮಿ ರಿಜಿಸ್ಟ್ರಾರ್ ಆಗಿರುವ ಶಿವಮೊಗ್ಗ ಜಿಲ್ಲಾ ಪಂಚಾಯಿತಿ ಸಿಇಒ ಎನ್. ಹೇಮಂತ್ ಭೇಟಿ ನೀಡಿ ಕುಲಪತಿ ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ ಮಾಹಿತಿ ಪಡೆದರು.

ಶಿವಮೊಗ್ಗ ಎಎಸ್‌ಪಿ ಕಾರಿಯಪ್ಪ ಮತ್ತು ಭದ್ರಾವತಿ ಡಿವೈಎಸ್‌ಪಿ ಪ್ರಕಾಶ್ ರಾಥೋಡ್ ಸ್ಥಳಕ್ಕೆ ಭೇಟಿ ನೀಡಿ, ಪ್ರತಿಭಟನಕಾರರ ಮನವೊಲಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದರು. ಸದ್ಯ ವಿಶ್ವವಿದ್ಯಾಲಯದ ಆವರಣದಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ.

ಬಿಸಿಲು: ಮತ್ತೊಬ್ಬ ನರೇಗಾ ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಸಿಂಧನೂರು (ರಾಯಚೂರು ಜಿಲ್ಲೆ): ತಾಲ್ಲೂಕಿನ ಪಗಡದಿನ್ನಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮನರೇಗಾ ಯೋಜನೆಯಡಿ ಬುಧವಾರ ಮಧ್ಯಾಹ್ನ ಕೆಲಸ ಮಾಡುತ್ತಿದ್ದ ಕೂಲಿ ಕಾರ್ಮಿಕ, ಮುಳ್ಳೂರು ಕ್ಯಾಂಪಿನ ನಿವಾಸಿ ಅಂಬಣ್ಣ (62) ಕುಸಿದುಬಿದ್ದು ಮೃತಪಟ್ಟಿದ್ದಾರೆ.


ಅಂಬಣ್ಣ

ಅಂಬಣ್ಣ ಅವರು ಬೆಳಿಗ್ಗೆ 10 ಗಂಟೆಗೆ ಹಾಜರಾತಿಗಾಗಿ ಫೋಟೊ ತೆಗೆಸಿಕೊಂಡು ಕಾಲುವೆಯ ಕೆಲಸದಲ್ಲಿ ತೊಡಗಿಕೊಂಡಿದ್ದರು. ಮಧ್ಯಾಹ್ನ 12 ಗಂಟೆಗೆ ಮತ್ತೊಮ್ಮೆ ಫೋಟೊ ತೆಗೆಸಿಕೊಳ್ಳುವ ಪೂರ್ವದಲ್ಲಿ ಏಕಾಏಕಿ ಕುಸಿದುಬಿದ್ದು ಮೃತಪಟ್ಟಿದ್ದಾರೆ.

ರಾಯಚೂರು ತಾಲ್ಲೂಕಿನ ಯಾಪಲದಿನ್ನಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸೋಮವಾರ ಮಧ್ಯಾಹ್ನ ಬಿಸಿಲಿನ ವೇಳೆ ಕೆಲಸ ಮಾಡುತ್ತಿದ್ದಾಗ ಕೂಲಿ ಕಾರ್ಮಿಕ ಹುಸೇನಪ್ಪ ಮಡಿವಾಳ ಅವರೂ ಕುಸಿದುಬಿದ್ದು ಮೃತಪಟ್ಟಿದ್ದರು. ಜಿಲ್ಲೆಯಲ್ಲಿ ತಾಪಮಾನ ಏರಿಕೆಯಾಗುತ್ತಿದ್ದು, ಬಿಸಿಲಿನಲ್ಲಿ ಕೆಲಸ ಮಾಡುತ್ತಿದ್ದಾಗ ಇಬ್ಬರು ಕಾರ್ಮಿಕರು ಮೃತಪಟ್ಟಂತಾಗಿದೆ.

ಕರ್ನಾಟಕ ಸರ್ಕಾರ
ಪುರಸಭೆ ಕಾರ್ಯಾಲಯ, ಕಂಪ್ಲಿ. ಬಳ್ಳಾರಿ ಜಿಲ್ಲೆ.
Email : ka.kampli.tmc@gmail.com website : www.kamplitown.mrc.gov.in

ಕ್ರ.ಸಂ. ಪು.ಸ.ಕಂ/ಅಮೃತ್/ಪಾರ್ಕ್/01/2025–26 ದಿನಾಂಕ : 24.04.2026

ಟೆಂಡರ್ ಪ್ರಕಟಣೆ (ಇ–ಪೋರ್ಟಲ್ ಮೂಲಕ)

ಕಂಪ್ಲಿ ಪುರಸಭೆಯ ಅಮೃತ್ 2.0 ಯೋಜನೆ & ಕೆರೆ ಅಭಿವೃದ್ಧಿ ಶುಲ್ಕ ಅನುದಾನದಡಿ ಉದ್ಯಾನವನ ಅಭಿವೃದ್ಧಿ ಕಾಮಗಾರಿಗೆ ಈ ಕೆಳಕಂಡ ಇಂಡೆಂಟ್‌ಗೆ ಟೆಂಡರ್ ಕರೆಯಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ತಿದ್ದುಪಡಿ ನಿಯಮಗಳು 2001 ರ ಅನ್ವಯ ಕೆ.ಡಬ್ಲ್ಯೂ –1&4 ರ ಸ್ಟ್ಯಾಂಡರ್ಡ್ ಬಿಡ್ ಟೆಂಡರ್ ಡಾಕ್ಯುಮೆಂಟ್ ನಿಯುವಾವಳಿಗಳಂತೆ ನೋಂದಾಯಿತ ಮತ್ತು ಪರವಾನಿಗೆ ಪಡೆದ ಅರ್ಹ ಸಿವಿಲ್ ಗುತ್ತೇದಾರರಿಂದ **https://kppp.karnataka.gov.in/** ರಲ್ಲಿ ಟೆಂಡರ್‌ನ್ನು ಸಲ್ಲಿಸಬಹುದಾಗಿರುತ್ತದೆ.

ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **ದಿನಾಂಕ 05.05.2026 ಸಂಜೆ 5.00 ಗಂಟೆವರೆಗೆ**
ಟೆಂಡರ್‌ಗಳನ್ನು ತಾಂತ್ರಿಕ ತೆರೆಯುವ ದಿನಾಂಕ: **ದಿನಾಂಕ 07.05.2026 ಬೆಳಿಗ್ಗೆ 11.00 ಗಂಟೆಗೆ**

Sl No	Indent No	Estimate Cost (in Lakhs)
01	Development of Somappa park DMA/2025-26/OW/WORK_INDENT50638/CALL-3	104.81
2	DMA/2026-27/OW/WORK_INDENT57507	20.00

ಸಹಿ/– ಮುಖ್ಯಾಧಿಕಾರಿಗಳು,
ಪುರಸಭೆ, ಕಂಪ್ಲಿ.

ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/103

ಉತ್ತರ ಕರ್ನಾಟಕದ ವಿವಿಧೆಡೆ ಮಳೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಹುಬ್ಬಳ್ಳಿ ನಗರ, ಸೇರಿದಂತೆ ಬಾಗಲಕೋಟೆ, ಹಾವೇರಿ ಹಾಗೂ ಹೊಸಪೇಟೆ (ವಿಜಯನಗರ) ಜಿಲ್ಲೆಯ ಕೆಲವೆಡೆ ಬುಧವಾರ ಬೆಳಿಗ್ಗೆ ಕೆಲ ಸಮಯ ಮಳೆ ಸುರಿಯಿತು.

ಹುಬ್ಬಳ್ಳಿ ನಗರದಲ್ಲಿ ಮುಂಜಾನೆ ಜೋರು ಮಳೆ ಆದರೆ, ಬಾಗಲಕೋಟೆ ಜಿಲ್ಲೆಯ ಬಾದಾಮಿ ಪಟ್ಟಣ, ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಲ್ಲಿ ಧಾರಾಕಾರ ಮಳೆ ಸುರಿಯಿತು. ಸಿಡಿಲಿನ ಆರ್ಭಟವು ತುಸು ಜೋರಾಗಿಯೇ ಇತ್ತು. ಮಧ್ಯಾಹ್ನ ಮತ್ತೆ ಬಿಸಿಲಿನ ವಾತಾವರಣವಿತ್ತು.

ಹಾವೇರಿ ಜಿಲ್ಲೆಯ ಹಲವು ಕಡೆಗಳಲ್ಲಿ ಮಳೆಯಾಗಿದೆ. ಧಗೆಯಿಂದ ಬೇಸತ್ತಿದ್ದ ಜನರಿಗೆ ತಂಪಿನ ಅನುಭವ ಆಯಿತು. ವಿಜಯನಗರ ಜಿಲ್ಲೆಯ ಕೆಲವೆಡೆ ಮಂಗಳವಾರ ತಡರಾತ್ರಿಯಿಂದ ಬುಧವಾರ ಬೆಳಗಿನ ತನಕ ಮಳೆ ಸುರಿಯಿತು.

ಮಧ್ಯರಾತ್ರಿ ಗುಡುಗು ಸಿಡಿಲು ಹಾಗೂ ಜೋರು ಗಾಳಿ ಸಹಿತ ಮಳೆ ಸುರಿಯಲು ಆರಂಭಿಸಿತು. ಬೆಳಿಗ್ಗೆ ತನಕವೂ ಜಿಟಿಜಿಟಿ ಮಳೆಯಾಯಿತು. ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಹಂಪಸಾಗರ, ತಂಬ್ರಹಳ್ಳಿ ಹೋಬಳಿ ಭಾಗದಲ್ಲಿ ಹಾಗೂ ಕೂಡ್ಲಿಗಿ ತಾಲ್ಲೂಕಿನ ಕೆಲವಡೆ ಸಹ ಮಳೆಯಾಗಿದೆ.

ಚಿಕ್ಕಮಗಳೂರಿನಲ್ಲಿ ತಂಪೆರೆದ ಮಳೆ: ಚಿಕ್ಕಮಗಳೂರು ನಗರದಲ್ಲಿ ಬುಧವಾರ ಸಂಜೆ ಭರ್ಜರಿಯಾಗಿ ಸುರಿದ ಮಳೆ ತಂಪೆರೆಯಿತು. ಸಂಜೆ 4.30ರ ಸುಮಾರಿಗೆ ಆರಂಭವಾದ ಮಳೆ 20 ನಿಮಿಷ ಗುಡುಗಿನ ಜತೆ ಆರ್ಭಟಿಸಿತು.

ರಸ್ತೆಗಳಲ್ಲಿ ಹರಿದ ನೀರಿನಲ್ಲಿ ಜನ ಸಂಭ್ರಮದಿಂದಲೇ ವಾಹನ ಚಲಾಯಿಸಿದರು. ಸೋಮವಾರ ಮತ್ತು ಮಂಗಳವಾರ ಸಂಜೆ ಕೂಡಾ ಮಳೆಯಾಗಿ ಇಳೆ ತಂಪಾಗಿತ್ತು.

ಮಠಕ್ಕೆ ಅಪ್ಪಳಿಸಿದ ಸಿಡಿಲು

ಕಲಬುರಗಿ: ಕಲ್ಯಾಣ ಕರ್ನಾಟಕದ ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿ ತಾಲ್ಲೂಕಿನ ಗುರುಗುಂಟಾ ಹೋಬಳಿ ವ್ಯಾಪ್ತಿಯ ಯರಜಂತಿ ಗ್ರಾಮದಲ್ಲಿ ಬುಧವಾರ ಬೆಳಿಗ್ಗೆ ಆಲಿಕಲ್ಲು ಸಹಿತ ಮಳೆಯಾಗಿದೆ. ಹನುಮಂತಿ ಬಸಯ್ಯ ಅವರಿಗೆ ಸೇರಿದ ಮನೆಯ ತಗಡಿನ ಟಿನ್ ಶೀಟ್‌ಗಳು ಗಾಳಿಗೆ ಹಾರಿ ಹೋಗಿವೆ. ಇದರಿಂದ ಮನೆಯಲ್ಲಿ ಇದ್ದ ಜೋಳ, ಸಜ್ಜೆ ಮಳೆಗೆ ಸಿಲುಕಿ ₹ 75 ಸಾವಿರ ಮೌಲ್ಯದ ದವಸ ಧಾನ್ಯಗಳು ಹಾಳಾಗಿವೆ.

ಯಾದಗಿರಿ ಜಿಲ್ಲೆಯ ಕೆಂಭಾವಿ ಸಮೀಪದ ಮುದನೂರು ಗ್ರಾಮದ ಕೋರಿ ಸಿದ್ದೇಶ್ವರ ಶಾಖಾ ಮಠಕ್ಕೆ ಮಂಗಳವಾರ ತಡರಾತ್ರಿ ಸಿಡಿಲು ಬಡಿದಿದೆ. ದೇವರ ಮೂರ್ತಿಗಳು, ಪೀಠೋಪಕರಣ ಸುಟ್ಟು ಕರಕಲಾಗಿವೆ. ಸಿಡಿಲು ಅಪ್ಪಳಿಸಿದ ಶಬ್ದದ ಹಿಂದೆಯೇ ಮಠದ ಆವರಣದಲ್ಲಿದ್ದ ಭಕ್ತರು ಸ್ಥಳದಿಂದ ಓಡಿ ಹೋಗಿದ್ದರಿಂದ ಅನಾಹುತ ತಪ್ಪಿದೆ.

'ಮಾತು ನಿಲ್ಲಿಸಿದ್ದೇವೆ, ಬಹಿಷ್ಕಾರ ಹಾಕಿಲ್ಲ'

ಬೆಳಗಾವಿ: 'ತಾಲ್ಲೂಕಿನ ಕೊಂಡಸಕೊಪ್ಪ ಗ್ರಾಮದಲ್ಲಿ ಕುರುಬ ಸಮಾಜದವರು ಯಾರಿಗೂ ಬಹಿಷ್ಕಾರ ಹಾಕಿಲ್ಲ. ಆದರೆ, 'ದುಷ್ಟರಿಂದ ದೂರ ಇರು' ಎಂಬ ನಾಣ್ಣುಡಿಯಂತೆ ನಮ್ಮ ಪಾಡಿಗೆ ನಾವು ಇದ್ದೇವೆ. ದುರುದ್ದೇಶದಿಂದ ಬಹಿಷ್ಕಾರದ ಆರೋಪ ಮಾಡಲಾಗಿದೆ' ಎಂದು ಕುರುಬ ಸಮಾಜದ ಮುಖಂಡ ವಿಠ್ಠಲ ಸಾಂಬ್ರೇಕರ್ ಹೇಳಿದರು.

ಬುಧವಾರ ಗ್ರಾಮಸ್ಥರೊಂದಿಗೆ ಸೇರಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಗ್ರಾಮದಲ್ಲಿ ₹1 ಕೋಟಿ ವೆಚ್ಚದಲ್ಲಿ ಬೃಹತ್ ಬೀರದೇವರ ದೇವಸ್ಥಾನ ನಿರ್ಮಾಣ ಮಾಡಿದ್ದೇವೆ. ಇಲ್ಲಿ 'ಸಿದ್ಧರ ವಾಣಿ'ಯನ್ನು ಆಲಿಸುವುದು ನಮ್ಮ ಕುಲದ ಜನರ ನಂಬಿಕೆ. ಆದರೆ, ನರಸೋಬಾ ಸಾಂಬ್ರೇಕರ್ ಅವರು ಈ ಬಗ್ಗೆಯೇ ಕೆಟ್ಟದಾಗಿ ಮಾತನಾಡುತ್ತಿದ್ದಾರೆ. ದೇವರ ಬಗ್ಗೆ ಇಲ್ಲಸಲ್ಲದ ಅಪಪ್ರಚಾರ ಮಾಡಿದ್ದಾರೆ. ಇದಕ್ಕೆ ಬೇಸತ್ತು ನಾವು ಮಾತನಾಡುವುದನ್ನು ಬಿಟ್ಟಿದ್ದೇವೆ ಹೊರತು; ಒತ್ತಾಯದ ಬಹಿಷ್ಕಾರ ಹಾಕಿಲ್ಲ' ಎಂದರು.

'ಬಹಿಷ್ಕಾರ ಆರೋಪ ಮಾಡಿರುವ ನರಸೋಬಾ ಅವರ ಸಹೋದರ ವಿಠ್ಠಲ ಕೊಲೆ ಪ್ರಕರಣದಲ್ಲಿ ಜೈಲಿನಿಂದ ಬಂದಿದ್ದಾರೆ. ಅವರಿಂದಲೇ ಜೀವ ಬೆದರಿಕೆ ಇದೆ' ಎಂದರು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ) **(2ನೇ ಕರೆ)**

ಬೆಂಗಳೂರು ಜಲಮಂಡಳಿಯು ಈ ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ಎರಡು ಹಂತದ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಛೇರಿ (ಬಳಸಿದ ನೀರು ಯೋಜನೆ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–09.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್ ಮೊತ್ತ / ಇ.ಎಂ.ಡಿ
	ಸಂ.ಬೆಂಜಮಂ/ಮುಅ(ಬನೀಯೋ)/ಉಮುಅ(ಬನೀಯೋ)/ತಾಂಸ/176/2026–27 ದಿನಾಂಕ: 28.04.2026	
1.	ದೊಮ್ಮಲೂರು, ರಾಯಲ್ ಆರ್ಕಿಡ್ ಹೋಟೇಲ್ ಎದುರಿನಿಂದ ಕೆಜಿಎ ರಸ್ತೆಯವರೆಗೆ ಮಳೆ ನೀರು ಕಾಲುವೆ ಒಳಭಾಗದಲ್ಲಿ 1100 ಮಿ.ಮೀ ವ್ಯಾಸದ ಡಿಐ ರೈಸಿಂಗ್ ಮೇನ್‌ನನ್ನು ಒದಗಿಸಿ ಅಳವಡಿಸುವ ಕಾಮಗಾರಿ. (ಹೆಚ್ಚುವರಿ ಉದ್ದಕ್ಕೆ)	ರೂ. 358.09 ಲಕ್ಷಗಳು / ರೂ. 5.37 ಲಕ್ಷಗಳು
	ಸಂ.ಬೆಂಜಮಂ/ಮುಅ(ಬನೀಯೋ)/ಉಮುಅ(ಬನೀಯೋ)/ತಾಂಸ/174/2026–27 ದಿನಾಂಕ: 28.04.2026	
2.	ದೊಮ್ಮಲೂರು, ಮೇಲ್ಸೇತುವೆ ಐಎಸ್‌ಪಿಎಸ್ ನಿಂದ ಹಳೆ ವಿಮಾನ ನಿಲ್ದಾಣ ರಸ್ತೆ, ಡೈಮಂಡ್ ಡಿಸ್ಟ್ರಿಕ್ಟ್ ಅಪಾರ್ಟ್‌ಮೆಂಟ್ ಕಡೆಗೆ 1100 ಮಿ.ಮೀ ವ್ಯಾಸದ ಡಿಐ ರೈಸಿಂಗ್ ಮೇನ್‌ನನ್ನು ಒದಗಿಸಿ ಅಳವಡಿಸುವ ಕಾಮಗಾರಿ. (ಹೆಚ್ಚುವರಿ ಉದ್ದಕ್ಕೆ)	ರೂ. 358.30 ಲಕ್ಷಗಳು / ರೂ. 5.37 ಲಕ್ಷಗಳು

ಮೇಲ್ಕಂಡ ಕಾಮಗಾರಿಗೆ ಟೆಂಡರ್ ದಾಖಲೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 15.05.2026 ರಂದು ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ : 16.05.2026ರ ಸಂಜೆ 5.00 ಗಂಟೆಗೆ

ಸಹಿ/– ಮುಖ್ಯ ಅಭಿಯಂತರರು (ಬ.ನೀ.ಯೋ)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/426/Zen/2026-27

ಮಹಾನಗರ ಪಾಲಿಕೆ, ಕಲಬುರಗಿ
ದೂ.: 08472/278675 ಫ್ಯಾಕ್ಸ : 08472/260776 ಇ ಮೇಲ್– itstaff_ulb_gulbarga@yahoo.com

No: KMP/TS-01/CF-UGD/DC-65/Z-2Recall-3/2026-27 Date: 29-04-2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್
ಪ್ರಕಟಣೆ ಸಂಖ್ಯೇ : /2026–27 ದಿನಾಂಕ: 29.04.2026

1) ಕಾಮಗಾರಿಯ ವಿವರ : DMA/2025-26/SE6269/CALL-3 ನ 2025–26ನೇ ಸಾಲಿನ ಪಾಲಿಕೆ ನಿಧಿಯಲ್ಲಿ ಅನುಮೋದನೆಗೊಂಡ (01) ಒಳಚರಂಡಿಯ ಕಾರ್ಯಾಚರಣೆ ಮತ್ತು ನಿರ್ವಹಣೆಯ (O&M) ಕಾಮಗಾರಿಗಳಿಗೆ ಕೆ.ಪಿ.ಪಿ. ಪ್ರೋರ್ಟಲ್–2.0 ನಲ್ಲಿ ಕೆ.ಟಿ.ಪಿ.ಪಿ ರ ಕೆ.ಸಿ–8 ರ 15 ದಿನಗಳ ಪ್ರಕಾರ 3ನೇ ಕರೆ ಟೆಂಡರವನ್ನು ಪ್ರಕಟಣೆ. 2) ಲೆಕ್ಕ ಶೀರ್ಷಿಕೆ: 2025–26ನೇ ಸಾಲಿನ ಪಾಲಿಕೆ ನಿಧಿಯಲ್ಲಿ ಅನುಮೋದನೆಗೊಂಡ (01) ಒಳಚರಂಡಿಯ ಕಾರ್ಯಾಚರಣೆ ಮತ್ತು ನಿರ್ವಹಣೆಯ (O&M) ಕಾಮಗಾರಿಗಳಿಗೆ ಕೆ.ಪಿ.ಪಿ. ಪ್ರೋರ್ಟಲ್–2.0 ನಲ್ಲಿ ಕೆ.ಟಿ.ಪಿ.ಪಿ ರ ಕೆ.ಸಿ–8 ರ 15 ದಿನಗಳ ಪ್ರಕಾರ 3ನೇ ಕರೆ ಟೆಂಡರವನ್ನು ಪ್ರಕಟಣೆ, 3) ಟೆಂಡರಿಗಿಟ್ಟ ಮೊತ್ತ: **ಅಂದಾಜು ಪಟ್ಟಿಯ ಗರಿಷ್ಠ ಮೊತ್ತ ರೂ. /ಅಂದಾಜು ಪಟ್ಟಿಯ ಕನಿಷ್ಠ ಮೊತ್ತ ರೂ. 253,00,000.00,** 4) ಗುತ್ತಿಗೆದಾರರ ಅರ್ಹತೆ: As per Bid Document, 5) ಪೂರ್ವಭಾವಿ ಸಭೆ ದಿನಾಂಕ ಮತ್ತು ಸಮಯ: **14.05.2026 ಬೆಳಿಗ್ಗೆ 11.00,** 6) ಟೆಂಡರ ಸಲ್ಲಿಸಲು ಅಂತಿಮ ದಿನಾಂಕ: **15.05.2026 ಸಾಯಂಕಾಲ 4:30 ಗಂಟೆಯವರೆಗೆ,** 7) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ: **16.05.2026 ಸಾಯಂಕಾಲ 4:35 ಗಂಟೆಯವರೆಗೆ,** 8) ಟೆಂಡರ ತೆರೆಯುವ ದಿನಾಂಕ ಆರ್ಥಿಕ: **18.05.2026 ಬೆಳಿಗ್ಗೆ 11:30 ಗಂಟೆಗೆ,** 9) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ 1. ಟೆಂಡರ್ ಫಾರಂ ಬೆಲೆ ರೂ. As per e-portal EMD ಗರಿಷ್ಠ ಮೊತ್ತ, 2. ರೂ / ಕನಿಷ್ಠ ಮೊತ್ತ ರೂ.3,57,200.00, 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಮತ್ತು ಮೋ. ನಂ: ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ. 9620341599 & 9448119141, 11) ಅಂತರಜಾಲ ತಾಣದ ವಿಳಾಸ: www.kppp.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/85/ಕೆ.ಎಸ್.ಎಂ.ಸಿ.&ಎ/2026–27

ಹಾವೇರಿ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,
ಪಶು ಆಸ್ಪತ್ರೆ ಆವರಣ, ಪಿ.ಬಿ. ರಸ್ತೆ, ಹಾವೇರಿ-581 110
ದೂರವಾಣಿ ಸಂಖ್ಯೆ : 08375–200650 ಇ–ಮೇಲ್: purhavemul@gmail.com

ಸಂಖ್ಯೆ/ಹಾಹಾಒ/ಮಾರುಕಟ್ಟೆ/ಕ್ಷೀ.ಭಾ./ಟೆಂಡರ್/2026–27 ದಿನಾಂಕ: 29.04.2026

ಟೆಂಡರ್ ಪ್ರಕಟಣೆ

"ಕ್ಷೀರ ಭಾಗ್ಯ" ಯೋಜನೆಯಡಿ ಹಾವೇರಿ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಹಾವೇರಿ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಶಾಲೆಗಳಿಗೆ ಮತ್ತು ಸಿ.ಡಿ.ಪಿ.ಒ. ಉಗ್ರಾಣಗಳಿಗೆ ಹಾಲಿನ ಪುಡಿ ಸಾಗಾಣಿಕೆ ಮಾಡಲು ಎರಡು ವರ್ಷದ ಅವಧಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ (ಟೆಕ್ನಿಕಲ್/ಕಮರ್ಷಿಯಲ್) ಟೆಂಡರ್ ಕರೆಯಲಾಗಿದ್ದು, ಆಸಕ್ತರು ಅರ್ಜಿಯನ್ನು ಸಲ್ಲಿಸಬಹುದಾಗಿದೆ.

1	ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ	ದಿನಾಂಕ: 29.04.2026 ರಿಂದ ಪ್ರಾರಂಭ
2	ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ	ದಿನಾಂಕ: 08.05.2026 ರಂದು ಸಂಜೆ: 5.00 ಗಂಟೆಯವರೆಗೆ
3	ಟೆಕ್ನಿಕಲ್ ಟೆಂಡರ್ ತೆರೆಯುವ ದಿನ	ದಿನಾಂಕ: 11.05.2026 ರಂದು ಬೆಳಿಗ್ಗೆ: 11.00 ಗಂಟೆಗೆ
4	ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ ದಿನ	ನಂತರ ತಿಳಿಸಲಾಗುವುದು

Part A. ಹಾವೇರಿ ಹಾಲು ಒಕ್ಕೂಟದ ಯು.ಹೆಚ್.ಟಿ. ಘಟಕದ ಗೋದಾಮಿನಿಂದ ಎಲ್ಲಾ ತಾಲ್ಲೂಕಿನ ಸರಕಾರಿ ಹಾಗೂ ಅನುದಾನಿತ ಶಾಲೆಗಳಿಗೆ

ಹಾವೇರಿ ಹಾಲು ಒಕ್ಕೂಟದ ಯು.ಹೆಚ್.ಟಿ. ಘಟಕ ಜಂಗಮನಕೊಪ್ಪ, ಗೋದಾಮಿನಿಂದ ಈ ಕೆಳಗೆ ನಮೂದಿಸಿದಂತೆ ಮಾರ್ಗವಾರು ಸಂಬಂದಿಸಿದ ತಾಲ್ಲೂಕಿನ ಎಲ್ಲಾ ಸರಕಾರಿ ಹಾಗೂ ಅನುದಾನಿತ ಶಾಲೆಗಳಿಗೆ ಬೇಡಿಕೆಯನುಸಾರ ಸರಬರಾಜು ಮಾಡುವ ವಿವರ.

ಕ್ರ. ಸಂ.	ಕೆನಭರಿತ ಹಾಲಿನ ಪುಡಿ ಸರಬರಾಜು ಮಾಡಬೇಕಾದ ತಾಲ್ಲೂಕವಾರು ವಿವರಗಳು	ಇ.ಎಂ.ಡಿ. ರೂ.	ಭದ್ರತಾ ಠೇವಣಿ ರೂ.	ಮಾಹೆಯಾನ ಅಂದಾಜು ಹಾಲಿನ ಪುಡಿ ಮತ್ತು ರಾಗಿ ಹೆಲ್ತ ಮಿಕ್ಸ ಸಾಗಾಣಿಕೆ ಪರಿಮಾಣ (ಕೆ.ಜಿ. ಗಳಲ್ಲಿ)	ವಾಹನ ಸಾಮರ್ಥ್ಯ ಟನಗಳಲ್ಲಿ
1	ಯು.ಹೆಚ್.ಟಿ. ಘಟಕದ ಗೋದಾಮಿನಿಂದ ಹಿರೇಕೆರೂರ ತಾಲ್ಲೂಕಿನ ಎಲ್ಲಾ ಸರಕಾರಿ ಹಾಗೂ ಅನುದಾನಿತ ಶಾಲೆಗಳಿಗೆ.	3,00,000	6,00,000	8,500	2 ಟನ್
2	ಯು.ಹೆಚ್.ಟಿ. ಘಟಕದ ಗೋದಾಮಿನಿಂದ ರಟ್ಟಿಹಳ್ಳಿ ತಾಲ್ಲೂಕಿನ ಎಲ್ಲಾ ಸರಕಾರಿ ಹಾಗೂ ಅನುದಾನಿತ ಶಾಲೆಗಳಿಗೆ.	3,00,000	6,00,000	7,500	2 ಟನ್
3	ಯು.ಹೆಚ್.ಟಿ. ಘಟಕದ ಗೋದಾಮಿನಿಂದ ರಾಣೇಬೆನ್ನೂರ ತಾಲ್ಲೂಕಿನ ಎಲ್ಲಾ ಸರಕಾರಿ ಹಾಗೂ ಅನುದಾನಿತ ಶಾಲೆಗಳಿಗೆ.	3,00,000	6,00,000	18,000	2 ಟನ್
4	ಯು.ಹೆಚ್.ಟಿ. ಘಟಕದ ಗೋದಾಮಿನಿಂದ ಬ್ಯಾಡಗಿ ತಾಲ್ಲೂಕಿನ ಎಲ್ಲಾ ಸರಕಾರಿ ಹಾಗೂ ಅನುದಾನಿತ ಶಾಲೆಗಳಿಗೆ.	3,00,000	6,00,000	8,000	2 ಟನ್
5	ಯು.ಹೆಚ್.ಟಿ. ಘಟಕದ ಗೋದಾಮಿನಿಂದ ಹಾನಗಲ್ಲ ತಾಲ್ಲೂಕಿನ ಎಲ್ಲಾ ಸರಕಾರಿ ಹಾಗೂ ಅನುದಾನಿತ ಶಾಲೆಗಳಿಗೆ.	300,000	6,00,000	15,000	2 ಟನ್
6	ಯು.ಹೆಚ್.ಟಿ. ಘಟಕದ ಗೋದಾಮಿನಿಂದ ಹಾವೇರಿ ತಾಲ್ಲೂಕಿನ ಎಲ್ಲಾ ಸರಕಾರಿ ಹಾಗೂ ಅನುದಾನಿತ ಶಾಲೆಗಳಿಗೆ.	3,00,000	6,00,000	18,000	2 ಟನ್
7	ಯು.ಹೆಚ್.ಟಿ. ಘಟಕದ ಗೋದಾಮಿನಿಂದ ಶಿಗ್ಗಾಂವ ತಾಲ್ಲೂಕಿನ ಎಲ್ಲಾ ಸರಕಾರಿ ಹಾಗೂ ಅನುದಾನಿತ ಶಾಲೆಗಳಿಗೆ.	3,00,000	6,00,000	12,000	2 ಟನ್
8	ಯು.ಹೆಚ್.ಟಿ. ಘಟಕದ ಗೋದಾಮಿನಿಂದ ಸವಣೂರ ತಾಲ್ಲೂಕಿನ ಎಲ್ಲಾ ಸರಕಾರಿ ಹಾಗೂ ಅನುದಾನಿತ ಶಾಲೆಗಳಿಗೆ.	3,00,000	6,00,000	12,000	2 ಟನ್

Part-B ಹಾವೇರಿ ಹಾಲು ಒಕ್ಕೂಟದ ಯು.ಹೆಚ್.ಟಿ. ಘಟಕದ ಗೋದಾಮಿನಿಂದ ಎಲ್ಲಾ ತಾಲ್ಲೂಕಿನ ಸಿ.ಡಿ.ಪಿ.ಒ. ಉಗ್ರಾಣಗಳಿಗೆ :–

ಹಾವೇರಿ ಹಾಲು ಒಕ್ಕೂಟದ ಯು.ಹೆಚ್.ಟಿ. ಘಟಕ, ಜಂಗಮನಕೊಪ್ಪ, ಗೋದಾಮಿನಿಂದ ಎಲ್ಲಾ ತಾಲ್ಲೂಕಿನ ಸಿ.ಡಿ.ಪಿ.ಒ. ಉಗ್ರಾಣಗಳಿಗೆ ಬೇಡಿಕೆಯನುಸಾರ ಸರಬರಾಜು ಮಾಡುವ ವಿವರ.

ಕ್ರ. ಸಂ.	ಕೆನಭರಿತ ಹಾಲಿನ ಪುಡಿ ಸರಬರಾಜು ಮಾಡಬೇಕಾದ ತಾಲ್ಲೂಕವಾರು ವಿವರಗಳು	ಇ.ಎಂ.ಡಿ. ರೂ.	ಭದ್ರತಾ ಠೇವಣಿ ರೂ.	ಮಾಹೆಯಾನ ಅಂದಾಜು ಹಾಲಿನ ಪುಡಿಯ ಸಾಗಾಣಿಕೆ ಪರಿಮಾಣ (ಕೆ.ಜಿ.ಗಳಲ್ಲಿ)	ವಾಹನ ಸಾಮರ್ಥ್ಯ ಟನಗಳಲ್ಲಿ
1	ಯು.ಹೆಚ್.ಟಿ. ಗೋದಾಮಿನಿಂದ ಹಿರೇಕೆರೂರ ಸಿ.ಡಿ.ಪಿ.ಒ. ಉಗ್ರಾಣಕ್ಕೆ	1,00,000	3,00,000	6000	6 ಟನ್
2	ಯು.ಹೆಚ್.ಟಿ. ಗೋದಾಮಿನಿಂದ ರಾಣೇಬೆನ್ನೂರ ಸಿ.ಡಿ.ಪಿ.ಒ. ಉಗ್ರಾಣಕ್ಕೆ	1,00,000	3,00,000	9000	9 ಟನ್
3	ಯು.ಹೆಚ್.ಟಿ. ಗೋದಾಮಿನಿಂದ ಬ್ಯಾಡಗಿ ಸಿ.ಡಿ.ಪಿ.ಒ. ಉಗ್ರಾಣಕ್ಕೆ	1,00,000	3,00,000	4000	6 ಟನ್
4	ಯು.ಹೆಚ್.ಟಿ. ಗೋದಾಮಿನಿಂದ ಹಾನಗಲ್ಲ ಸಿ.ಡಿ.ಪಿ.ಒ. ಉಗ್ರಾಣಕ್ಕೆ	1,00,000	3,00,000	8000	9 ಟನ್
5	ಯು.ಹೆಚ್.ಟಿ. ಗೋದಾಮಿನಿಂದ ಹಾವೇರಿ ಸಿ.ಡಿ.ಪಿ.ಒ. ಉಗ್ರಾಣಕ್ಕೆ	1,00,000	3,00,000	8,700	9 ಟನ್
6	ಯು.ಹೆಚ್.ಟಿ. ಗೋದಾಮಿನಿಂದ ಶಿಗ್ಗಾಂವ ಸಿ.ಡಿ.ಪಿ.ಒ. ಉಗ್ರಾಣಕ್ಕೆ	1,00,000	3,00,000	6,000	6 ಟನ್
7	ಯು.ಹೆಚ್.ಟಿ. ಗೋದಾಮಿನಿಂದ ಸವಣೂರ ಸಿ.ಡಿ.ಪಿ.ಒ. ಉಗ್ರಾಣಕ್ಕೆ	1,00,000	3,00,000	6,500	6 ಟನ್

ಹೆಚ್ಚಿನ ಮಾಹಿತಿಯನ್ನು ಹಾವೇರಿ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಕಛೇರಿ ವೇಳೆಯಲ್ಲಿ ಮಾರುಕಟ್ಟೆ ವಿಭಾಗದಿಂದ ಪಡೆಯಬಹುದು.
ದೂರವಾಣಿ: 08375–200650, 8746935066 ಇ–ಮೇಲ್: mkthavemul@gmail.com

ದಿನಾಂಕ: 29.04.2026
ಸ್ಥಳ : ಹಾವೇರಿ

ಸಹಿ/–
ವ್ಯವಸ್ಥಾಪಕ ನಿರ್ದೇಶಕರು,
ಹಾವೇರಿ ಜಿಲ್ಲಾ ಸಹಕಾರ ಹಾಲು ಒಕ್ಕೂಟ, ಹಾವೇರಿ.

ಜಲಜೀವನ್‌ಗೆ ₹17,554 ಕೋಟಿ

ತಿಳಿವಳಿಕೆ ಪತ್ರಕ್ಕೆ ಜಲಶಕ್ತಿ ಸಚಿವಾಲಯ, ರಾಜ್ಯದ ಪಂಚಾಯತ್ ರಾಜ್ ಇಲಾಖೆ ಸಹಿ

1.13 ಕೋಟಿ	88.06 ಲಕ್ಷ	66,344	48,789
ಗ್ರಾಮೀಣ ಕುಟುಂಬಗಳ ಸಂಖ್ಯೆ	ನಲ್ಲಿ ಸಂಪರ್ಕ ಕಲ್ಪಿಸಲಾದ ಮನೆಗಳು	ಕೈಗೊಳ್ಳಲಾಗಿರುವ ಕಾಮಗಾರಿಗಳು	ಭೌತಿಕವಾಗಿ ಪೂರ್ಣಗೊಂಡ ಕಾಮಗಾರಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ಎರಡು ವರ್ಷಗಳಲ್ಲಿ ಕೇಂದ್ರ ಸರ್ಕಾರದ ಅಸಹಕಾರದ ನಡುವೆಯೂ ಜಲಜೀವನ್ ಮಿಷನ್ ಯೋಜನೆಗೆ ರಾಜ್ಯ ₹17,554 ಕೋಟಿ ಬಂಡವಾಳ ಹೂಡಿಕೆ ಮಾಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಕೇಂದ್ರದ ಜಲಶಕ್ತಿ ಸಚಿವಾಲಯದ ಜತೆ 'ಜಲ ಜೀವನ್ ಮಿಷನ್ 2.0' ತಿಳಿವಳಿಕೆ ಪತ್ರಕ್ಕೆ ಸಹಿ ಹಾಕುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಒಟ್ಟು ಮೊತ್ತದಲ್ಲಿ(₹17,554 ಕೋಟಿ) ಕೇಂದ್ರದ ಪಾಲಿನ ನಿರೀಕ್ಷೆಯಲ್ಲಿ ಹೂಡಿಕೆ ಮಾಡಿರುವ ₹8,880.71 ಕೋಟಿಯೂ ಸೇರಿದೆ. ಯೋಜನೆಗಳನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ನಮ್ಮ ಬದ್ಧತೆ ತೋರಿಸಿದ್ದೇವೆ. ಯೋಜನೆ ಅನುಷ್ಠಾನದಲ್ಲಿ ರಾಜ್ಯ ಸರ್ಕಾರ ಯಾವುದೇ ರಾಜಿ ಮಾಡದೆ, ರಾಷ್ಟ್ರದ ಅಭಿವೃದ್ಧಿಗೆ ಕೊಡುಗೆ ನೀಡುತ್ತಿದ್ದರೂ, ಕೇಂದ್ರ ಅನುದಾನ ಬಿಡುಗಡೆ ಮಾಡಲು ವಿಳಂಬ ಮಾಡುತ್ತಿರುವುದು ದುರದೃಷ್ಟಕರ' ಎಂದು ಸಿದ್ದರಾಮಯ್ಯ ಬೇಸರ ವ್ಯಕ್ತಪಡಿಸಿದರು.

'ರಾಜ್ಯದಲ್ಲಿ ಸದೃಢವಾದ ಸಾಂಸ್ಥಿಕ ಹಾಗೂ ನಿರ್ವಹಣಾ ವ್ಯವಸ್ಥೆಯನ್ನು ರೂಪಿಸಲು ಒತ್ತು ನೀಡಿದ್ದೇವೆ. ಕಾರ್ಯಾಚರಣೆ ಮತ್ತು ನಿರ್ವಹಣೆ ನೀತಿಯನ್ನು ಅನುಷ್ಠಾನಗೊಳಿಸಿರುವುದರಲ್ಲಿ ಕರ್ನಾಟಕ ಮೊದಲ ರಾಜ್ಯವಾಗಿದೆ. ಲಿಂಗ ಸಮತೋಲನ ಇರುವ ಗ್ರಾಮೀಣ ನೀರು ಮತ್ತು ನೈರ್ಮಲ್ಯ ಸಮಿತಿಗಳನ್ನು ಸಕ್ರಿಯವಾಗಿ ತೊಡಗಿಸಲಾಗಿದೆ. ಇದಕ್ಕಾಗಿಯೇ ಮೀಸಲಿರಿಸಲಾದ ಪಿಎಂಯು ಸ್ಥಾಪಿಸಲಾಗುತ್ತಿದೆ. ಜೀವ ಜಲ ಅಪ್ಲಿಕೇಶನ್, ಜಿಐಎಸ್ ಆಧಾರಿತ ಆಸ್ತಿ ನಿರ್ವಹಣೆ, ನೈಜ ಸಮಯ ಮೇಲ್ವಿಚಾರಣೆ ಮುಂತಾದ ಡಿಜಿಟಲ್ ನಾವೀನ್ಯತೆಗಳು ಆಡಳಿತವನ್ನು ಪರಿವರ್ತಿಸುತ್ತಿವೆ. 1.51 ಲಕ್ಷಕ್ಕೂ ಹೆಚ್ಚು ಮಹಿಳೆಯರಿಗೆ



'ಜಲ ಜೀವನ್ ಮಿಷನ್ 2.0' ತಿಳಿವಳಿಕೆ ಪತ್ರಕ್ಕೆ ಸಹಿ ಹಾಕುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಚಿವ ಪ್ರಿಯಾಂಕ್ ಖರ್ಗೆ

ನೀರಿನ ಗುಣಮಟ್ಟ ಪರೀಕ್ಷೆ ಮಾಡುವ ವಿಧಾನದಲ್ಲಿ ತರಬೇತಿ ನೀಡುವ ಮೂಲಕ ಸಮುದಾಯದ ಮಾಲೀಕತ್ವ ಸುಭದ್ರಪಡಿಸಲಾಗಿದೆ' ಎಂದರು.

ಗುಣಮಟ್ಟ ಖಾತ್ರಿಪಡಿಸಲು ಕರ್ನಾಟಕವು ಬ್ಯೂರೋ ವೆರಿಟಾಸ್ ಸಂಸ್ಥೆಯನ್ನು ಸ್ವತಂತ್ರ ಪರಿಶೀಲನೆ, ಮಾದರಿ ಆಧರಿತ ತಪಾಸಣೆ, ದಾಖಲೆಗಳ ಪರಿಶೀಲನೆ, ತಾಂತ್ರಿಕ ಪರೀಕ್ಷೆಗಳಿಗಾಗಿ ನೇಮಿಸಿದ್ದು, ಈ ಮೂಲಕ ಕಾಮಗಾರಿಗಳ ಸುಸ್ಥಿರ ಕಾರ್ಯಶೀಲತೆಯನ್ನು ಖಾತ್ರಿಪಡಿಸಲಾಗುತ್ತಿದೆ ಎಂದು ಸಿದ್ದರಾಮಯ್ಯ ಹೇಳಿದರು.

> **ಕೇಂದ್ರ ಸರ್ಕಾರ ಆಯವ್ಯಯದಲ್ಲಿ ಹಂಚಿಕೆ ಮಾಡಿದ್ದರೂ, ಎರಡು ವರ್ಷಗಳಿಂದ ರಾಜ್ಯಕ್ಕೆ ಅನುದಾನ ಬಿಡುಗಡೆ ಮಾಡಿಲ್ಲ. ರಾಜ್ಯವೇ ಕೇಂದ್ರದ ಪಾಲಿನ ಅನುದಾನ ಭರಿಸಿ, ಯೋಜನೆಯ ಅನುಷ್ಠಾನ ಮುಂದುವರಿಸಲಿದೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ ಮತ್ತು ಕೇಂದ್ರ ಜಲಸಂಪನ್ಮೂಲ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರು ದೆಹಲಿಯಿಂದ ವಿಡಿಯೊ ಸಂವಾದದ ಮೂಲಕ ಪಾಲ್ಗೊಂಡಿದ್ದರು. ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ಮುಖ್ಯಮಂತ್ರಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್, ಆರ್ಥಿಕ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಇದ್ದರು.

'ಮಾಹಿತಿ ಆಯೋಗದ ಆಡಳಿತ ಕುಸಿತ'

ಆಯೋಗದ ಕಾರ್ಯದರ್ಶಿ ವಿರುದ್ಧ ಮುಖ್ಯ ಕಾರ್ಯದರ್ಶಿಗೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಮಾಹಿತಿ ಆಯೋಗದ ಪ್ರಭಾರ ಕಾರ್ಯದರ್ಶಿ ಬಿ.ಸಿ. ಸತೀಶ ಅವರ ಕಾರಣಕ್ಕೆ ಆಯೋಗದ ಇಡೀ ಆಡಳಿತ ವ್ಯವಸ್ಥೆ ಕುಸಿದು ಬಿದ್ದಿದೆ' ಎಂಬ ವಿಷಯ ಕರ್ನಾಟಕ ರಾಜ್ಯ ಮಾಹಿತಿ ಆಯೋಗದ ರಾಜ್ಯ ಮಾಹಿತಿ ಆಯುಕ್ತರ ಸಭೆಯಲ್ಲಿ ಗಂಭೀರ ಚರ್ಚೆಗೆ ಗ್ರಾಸವಾಗಿದೆ.

ಈ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆಯಲಾಗಿದೆ ಎಂದು ಗೊತ್ತಾಗಿದೆ.

ಕರ್ನಾಟಕ ರಾಜ್ಯ ಮಾಹಿತಿ ಆಯೋಗದ ರಾಜ್ಯ ಮಾಹಿತಿ ಆಯುಕ್ತರ ಸಭೆಯು ಏಪ್ರಿಲ್ 15ರಂದು ನಡೆದಿತ್ತು. ಆಯೋಗದ ಪ್ರಭಾರ ಕಾರ್ಯದರ್ಶಿ ಅವರು ಕಚೇರಿಗೆ ಹಾಜರಾಗದೇ ಇರುವುದು, ಮುಖ್ಯ ಮಾಹಿತಿ ಆಯುಕ್ತರ ಸೂಚನೆಗಳನ್ನು ಪಾಲಿಸದೇ ಇರುವುದು ಸೇರಿ ಹಲವು ವಿಷಯಗಳನ್ನು ಚರ್ಚಿಸಲಾಗಿದೆ ಎಂಬ ವಿಚಾರ ಸಭೆಯ ನಡಾವಳಿಯಲ್ಲಿ ಇದೆ. ಅವರ ವಿರುದ್ಧ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆಯಬೇಕು ಎಂದೂ ಸಭೆಯಲ್ಲಿ ತೀರ್ಮಾನಿಸಲಾಗಿತ್ತು.

'ಆಯೋಗದ ಹಿಂದಿನ ಕಾರ್ಯದರ್ಶಿಯಾಗಿದ್ದ ಸುಷ್ಮಾ ಗೋಡಬೋಲೆ ಅವರ ವರ್ಗಾವಣೆಯ ನಂತರ ಆ ಹುದ್ದೆಯ ಪ್ರಭಾರ ಹೊಣೆಗಾರಿಕೆಯನ್ನು ಬಿ.ಸಿ.ಸತೀಶ ಅವರಿಗೆ ನೀಡಿ, 2025ರ ಡಿಸೆಂಬರ್ 3ರಂದು ಸರ್ಕಾರ ಆದೇಶಿಸಿತ್ತು. ಆದರೆ, ಅಂದಿನಿಂದ ಈವರೆಗೆ ಸತೀಶ ಅವರು ಕಚೇರಿಗೆ ಹಾಜರಾಗಿಲ್ಲ. ಯಾವುದೇ ಕೆಲಸಗಳಲ್ಲಿ ಭಾಗಿಯಾಗಿಲ್ಲ. ಇದರಿಂದ ಆಯೋಗದ ಕಾರ್ಯನಿರ್ವಹಣೆಗೆ ತೊಡಕಾಗಿದೆ ಎಂದು ಮಾಹಿತಿ ಆಯುಕ್ತರು' ಸಭೆಯಲ್ಲಿ ಆರೋಪಿಸಿದ್ದರು.

'ಆಡಳಿತ ಸುಗಮವಾಗಲಿ ಎಂದು ಮಾಹಿತಿ ಆಯುಕ್ತರು, ಕಾರ್ಯದರ್ಶಿ ಮತ್ತು ಸಿಬ್ಬಂದಿ ಒಳಗೊಂಡ ವಾಟ್ಸ್‌ಆ್ಯಪ್ ಗ್ರೂಪ್ ರಚಿಸಲಾಗಿತ್ತು. ಆದರೆ ಕಾರ್ಯದರ್ಶಿ ಸತೀಶ ಅವರು ಯಾವುದೇ ಕಾರಣ ಇಲ್ಲದೆ ಆ ಗ್ರೂಪ್‌ನಿಂದ ಹೊರಬಂದಿದ್ದಾರೆ' ಎಂಬ ಮಾಹಿತಿ ನಡಾವಳಿಯಲ್ಲಿ ಇದೆ.

'ಅವರ ನಡೆಯಿಂದ ಆಯೋಗದ ಕಾರ್ಯನಿರ್ವಹಣೆಗೆ ಆಗಿರುವ ತೊಂದರೆಗಳ ಬಗ್ಗೆ ಪಟ್ಟಿ ಮಾಡಿ ಮುಖ್ಯ ಕಾರ್ಯದರ್ಶಿಗೆ ಸಲ್ಲಿಸಬೇಕು. ಸತೀಶ್ ಅವರ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳಬೇಕು. ಆಯೋಗಕ್ಕೆ ಪೂರ್ಣ ಪ್ರಮಾಣದ ಕಾರ್ಯದರ್ಶಿಯನ್ನು ನೇಮಕ ಮಾಡಬೇಕು ಎಂದು ಕೋರಲು ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಅದರಂತೆ ಪತ್ರ ಬರೆಯಲಾಗಿದೆ' ಎಂದು ಮೂಲಗಳು ಹೇಳಿವೆ.

ಸತೀಶ ವಿರುದ್ಧದ ಆರೋಪಗಳು

- ಆಯೋಗ ರಚನೆಯಾಗಿ 21 ವರ್ಷವಾದರೂ ವೃಂದ ಮತ್ತು ನೇಮಕಾತಿ ವರದಿ ಸಿದ್ಧವಾಗಿಲ್ಲ. ಅದನ್ನು ಸಿದ್ಧಪಡಿಸಿ ಎಂದು ಸೂಚನೆ ನೀಡಿದ್ದರೂ, ಪಾಲಿಸಿಲ್ಲ
- ರಾಜ್ಯ ಮಾಹಿತಿ ಆಯೋಗದ ಕಡತಗಳ ವಿಲೇವಾರಿ ವಿಧಾನ ಕುರಿತು ಅಧ್ಯಯನಕ್ಕಾಗಿ ಮಾರ್ಚ್‌ನಲ್ಲಿ ಆಂಧ್ರ ಪ್ರದೇಶ ಮಾಹಿತಿ ಆಯೋಗದ ಮುಖ್ಯ ಆಯುಕ್ತರು ಮತ್ತು ಆರು ಮಾಹಿತಿ ಆಯುಕ್ತರು ರಾಜ್ಯಕ್ಕೆ ಬಂದಿದ್ದರು. ಈ ವೇಳೆ ಸತೀಶ್ ಅವರು ಸಭೆಗೆ ಹಾಜರಾಗದೆ ಶಿಷ್ಟಾಚಾರ ಉಲ್ಲಂಘಿಸಿದ್ದಾರೆ
- ರಾಜ್ಯ ಮಾಹಿತಿ ಆಯೋಗದ ಕಡತಗಳನ್ನು ಡಿಜಿಟಲೀಕರಿಸಿ, ಸಾರ್ವಜನಿಕರಿಗಾಗಿ ಪ್ರಕಟಿಸುವಂತೆ ನಿರ್ದೇಶನ ನೀಡಿದ್ದರೂ ಅದನ್ನು ಕಡೆಗಣಿಸಿದ್ದಾರೆ
- ರಾಜ್ಯ ಸರ್ಕಾರದ ವಿವಿಧ ಇಲಾಖೆ, ಪ್ರಾಧಿಕಾರ, ನಿಗಮಗಳ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ವಿಧಿಸಿರುವ ದಂಡವನ್ನು ವಸೂಲಿ ಮಾಡಲು ಸತೀಶ್ ಅವರು ಯಾವುದೇ ಕ್ರಮ ತೆಗೆದುಕೊಂಡಿಲ್ಲ
- ಆಯೋಗದ ಕಚೇರಿಯಲ್ಲಿ ಮಹಿಳೆಯ ಶೌಚಾಲಯವು ಬಳಸಲು ಬಾರದ ಸ್ಥಿತಿಯಲ್ಲಿ ಇದೆ. ಲೋಕೋಪಯೋಗಿ ಇಲಾಖೆಯಿಂದ ₹2 ಲಕ್ಷ ಮಂಜೂರಾಗಿದ್ದರೂ, ಶೌಚಾಲಯ ದುರಸ್ತಿಗೆ ಕಾರ್ಯದರ್ಶಿಯು ಕ್ರಮ ತೆಗೆದುಕೊಂಡಿಲ್ಲ
- 2026–27ನೇ ಸಾಲಿಗೆ ಭದ್ರತಾ ಸಿಬ್ಬಂದಿ ಒದಗಿಸಲು ಖಾಸಗಿ ಭದ್ರತಾ ಏಜೆನ್ಸಿಯನ್ನು ಏಕಪಕ್ಷೀಯವಾಗಿ ಮುಂದುವರೆಸಿರುತ್ತಾರೆ
- ಆಯೋಗದ ಸಿಬ್ಬಂದಿ, ನೌಕರರು, ಹೊರಗುತ್ತಿಗೆ ಸಿಬ್ಬಂದಿಗೆ ವೇತನ ಬಿಡುಗಡೆ ಮಾಡಲು ತೀರಾ ವಿಳಂಬ ಮಾಡುತ್ತಾರೆ. ತಮ್ಮಿಚ್ಛೆಯ ದಿನದಂದು ವೇತನದ ಬಿಲ್‌ಗೆ ಸಹಿ ಮಾಡುತ್ತಾರೆ

ದಾಂಪತ್ಯ ಜೀವನಕ್ಕೆ 106 ಜೋಡಿ

ಧರ್ಮಸ್ಥಳ: ವಧು–ವರರಿಗೆ ಉಡುಗೊರೆ ನೀಡಿ ಹಾರೈಕೆ

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): ಧರ್ಮಸ್ಥಳದಲ್ಲಿ ಬುಧವಾರ ನಡೆದ ಉಚಿತ ಸಾಮೂಹಿಕ ವಿವಾಹ ಮಹೋತ್ಸವದಲ್ಲಿ 106 ಜೋಡಿ ವಧು–ವರರು ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಹಾಗೂ ಕುಟುಂಬದವರು ವರನಿಗೆ ಧೋತಿ, ಶಾಲು ಹಾಗೂ ವಧುವಿಗೆ ಸೀರೆ, ಮೂಗುತಿ ಮತ್ತು ರವಿಕೆ ಕಣ ವಿತರಿಸಿದರು.

ಸಂಜೆ ವಧು-ವರರನ್ನು ಮೆರವಣಿಗೆಯಲ್ಲಿ ದೇಗುಲ ಬಳಿಯಿಂದ ಅಮೃತವರ್ಷಿಣಿ ಸಭಾಭವನಕ್ಕೆ ಕರೆತರಲಾಯಿತು. ವೀರೇಂದ್ರ ಹೆಗ್ಗಡೆ, ಅತಿಥಿಗಳು ತಾಳಿ ವಿತರಿಸಿದರು.

ದಾಂಪತ್ಯ ದೀಕ್ಷೆಯ ಬಳಿಕ ನೂತನ ದಂಪತಿಗಳಿಗೆ ಧರ್ಮಸ್ಥಳದ ವತಿಯಿಂದ ಉಡುಗೊರೆ ನೀಡಿ ಶುಭ ಹಾರೈಸಲಾಯಿತು.

ಬೇರೆ ಕಡೆ ನಡೆಸುವ ಉಚಿತ ಸಾಮೂಹಿಕ ವಿವಾಹ ಸಮಾರಂಭಕ್ಕೆ ಇನ್ನು ಮುಂದೆ ಧರ್ಮಸ್ಥಳದಿಂದ ಮಂಗಳಸೂತ್ರ ಕೊಡಲಾಗುವುದಿಲ್ಲ ಎಂದು ವೀರೇಂದ್ರ ಹೆಗ್ಗಡೆ ಹೇಳಿದರು.

'ಏಕೆಂದರೆ ಹೀಗೆ ಕೊಟ್ಟರೆ ಬೇರೆ ಕಡೆಗಳಲ್ಲಿಯೂ ಧರ್ಮಸ್ಥಳದ ವತಿಯಿಂದ ಸಾಮೂಹಿಕ ವಿವಾಹ ಏರ್ಪಡಿಸುತ್ತಾರೆ ಎಂಬ ತಪ್ಪು ಕಲ್ಪನೆ ಜನರಲ್ಲಿ ಮೂಡುತ್ತದೆ. ಧರ್ಮಸ್ಥಳದಿಂದ ತಾಳಿ ಕೊಡುತ್ತಾರೆ ಎಂದಾಗ ಜನರು ಕ್ಷೇತ್ರಕ್ಕೆ ಬರುವ ಬದಲು ಅಲ್ಲೇ ಮದುವೆಯಾಗಲು ನಿರ್ಧರಿಸುತ್ತಾರೆ' ಎಂದರು.

ಮೆಸ್ಕಾಂ ಅಧ್ಯಕ್ಷ ಕೆ. ಹರೀಶ್ ಕುಮಾರ್, ಶಾಸಕ ಹರೀಶ್ ಪೂಂಜ, ವಿಧಾನ ಪರಿಷತ್ ಸದಸ್ಯ ಕೆ. ಪ್ರತಾಪಸಿಂಹ ನಾಯಕ್, ಹೇಮಾವತಿ ವೀ. ಹೆಗ್ಗಡೆ, ಡಿ. ಹರ್ಷೇಂದ್ರ ಕುಮಾರ್, ಶರ್ಮಿಳಾ ವೇದಿಕೆಯಲ್ಲಿ ಇದ್ದರು.

ಬೆಂಗಳೂರು ಕ್ಷೇಮವನದ ಸಿಇಒ ಶ್ರದ್ಧಾ ಅಮಿತ್ ಸ್ವಾಗತಿಸಿದರು. ಎ.ವಿ. ಶೆಟ್ಟಿ ವಂದಿಸಿದರು. ಸಂಪತ್ ಕುಮಾರ್ ರೈ ಮತ್ತು ಶ್ರೀನಿವಾಸ ರಾವ್ ಧರ್ಮಸ್ಥಳ ಕಾರ್ಯಕ್ರಮ ನಿರೂಪಿಸಿದರು.



ಧರ್ಮಸ್ಥಳದಲ್ಲಿ ಬುಧವಾರ ನಡೆದ ಉಚಿತ ಸಾಮೂಹಿಕ ವಿವಾಹ ಮಹೋತ್ಸವಕ್ಕೂ ಮುನ್ನ ವಧುವರರನ್ನು ಮೆರವಣಿಗೆಯಲ್ಲಿ ಕರೆತರಲಾಯಿತು

ಮೂವರು ಪೊಲೀಸರು ಅಮಾನತು

ಧಾರವಾಡ: ಗಾಂಜಾ ಪ್ರಕರಣದಲ್ಲಿ ಆದಿತ್ಯ ಮ್ಯಾಗೇರಿಯ ಎಂಬವನನ್ನು ವಿಚಾರಣೆ ನಡೆಸಿ ಲಂಚ ಕೇಳಿದ್ದರು ಎಂಬ ಆರೋಪಕ್ಕೆ ಸಂಬಂಧಿಸಿ ವಿದ್ಯಾಗಿರಿ ಠಾಣೆ ಹೆಡ್ ಕಾನ್‌ಸ್ಟೆಬಲ್‌ಗಳಾದ ಚಂದ್ರು ನಡುವಿನಮನಿ, ಕಿರಣ ಡೊಕ್ಕಣ್ಣವರ ಹಾಗೂ ಕಾನ್‌ಸ್ಟೆಬಲ್ ಸಯ್ಯದ್ ತಹಶೀಲ್ದಾರ್ ಅವರನ್ನು ಅಮಾನತುಗೊಳಿಸಲಾಗಿದೆ.

'ಪೊಲೀಸರು ಲಂಚ ಕೇಳಿದ್ದರು ಎಂಬ ಆರೋಪದ ಕುರಿತು ವಿಚಾರಣೆಗೆ ಡಿಸಿಪಿ ಶ್ರುತಿ ಅವರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ಸಮಿತಿ ಮೂರು ದಿನಗಳಲ್ಲಿ ವರದಿ ನೀಡಲಿದೆ. ಈಗ ಮೂವರು ಪೊಲೀಸರನ್ನು ಅಮಾನತುಗೊಳಿಸಲಾಗಿದೆ' ಎಂದು ಹುಬ್ಬಳ್ಳಿ–ಧಾರವಾಡ ಪೊಲೀಸ್ ಕಮಿಷನರ್ ಎನ್.ಶಶಿಕುಮಾರ್ ತಿಳಿಸಿದರು.

ಬಿಎಸ್‌ಸಿ ವಿದ್ಯಾರ್ಥಿ ಆದಿತ್ಯ ಮ್ಯಾಗೇರಿ ಮನೆಯಲ್ಲಿ ಸೋಮವಾರ ರಾತ್ರಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು.

ಪೊಲೀಸರು ಗಾಂಜಾ ಪ್ರಕರಣದಲ್ಲಿ ಆದಿತ್ಯನನ್ನು ವಿಚಾರಣೆ ನಡೆಸಿ, ₹2 ಸಾವಿರ ಹಣ ಕೊಡುವಂತೆ ಆತನಿಗೆ ಬೇಡಿಕೆ ಇಟ್ಟಿದ್ದರು ಎಂದು ಆದಿತ್ಯ ತಾಯಿ ಕವಿತಾ ಆರೋಪಿಸಿದ್ದರು.

ವಿದ್ಯಾರ್ಥಿನಿಗೆ 41 ಅಂಕ ಕಡಿತಗೊಳಿಸಿದ್ದ ಮೌಲ್ಯಮಾಪಕರು

ತೆಕ್ಕಲಕೋಟೆ (ಬಳ್ಳಾರಿ ಜಿಲ್ಲೆ): ಪಟ್ಟಣದ ನೇತಾಜಿ ಸುಭಾಷ್ ಚಂದ್ರ ಬೋಸ್ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ವಿ.ಆರಿಕಾ ಅವರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ವಿಜ್ಞಾನ ವಿಷಯದ ಅಂಕ ನಮೂದಿಸುವಲ್ಲಿ ಪರೀಕ್ಷಾ ಮಂಡಳಿ ಎಡವಟ್ಟು ಮಾಡಿದೆ.

ಪರೀಕ್ಷೆಯಲ್ಲಿ 58 ಅಂಕ ಗಳಿಸಿದ್ದ ಆರಿಕಾಗೆ ಕೇವಲ 17 ಅಂಕ ನೀಡಲಾಗಿತ್ತು. ಉತ್ತರ ಪತ್ರಿಕೆಯ ಛಾಯಾಪ್ರತಿ ಪಡೆದಾಗ ಈ ತಪ್ಪು ಗೊತ್ತಾಗಿದೆ. ವಿದ್ಯಾರ್ಥಿನಿ ಮರು ಮೌಲ್ಯಮಾಪನಕ್ಕೆ ದಂಡ ತೆತ್ತು ಅರ್ಜಿ ಸಲ್ಲಿಸಬೇಕಾಗಿದೆ.

ಮೌಲ್ಯಮಾಪಕರ ನಿರ್ಲಕ್ಷ್ಯದಿಂದ 41 ಅಂಕಗಳ ವ್ಯತ್ಯಾಸವಾಗಿದೆ. ಇದು ಸರಿಯಾದಲ್ಲಿ ಆರಿಕಾ 538 ಅಂಕ ಗಳಿಸಲಿದ್ದಾರೆ ಎಂದು ಮುಖ್ಯ ಶಿಕ್ಷಕ ಮಂಜುನಾಥ ತಿಳಿಸಿದ್ದಾರೆ.

ಮೊದಲು 6, ಈಗ 64: (ತಿಕೋಟಾ (ವಿಜಯಪುರ) ವರದಿ): ಎಸ್‌ಎಸ್‌ಎಲ್‌ಸಿ ಪರೀಕ್ಷೆ ಇಂಗ್ಲಿಷ್ ವಿಷಯದಲ್ಲಿ 06 ಅಂಕ ಫಲಿತಾಂಶ ಪ್ರಕಟವಾಗಿದ್ದ, ಬಿಜ್ಜರಗಿ ಗ್ರಾಮದ ಮಾಣಿಕೇಶ್ವರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಶ್ರೇಯಾ ಮಾದೇವ ಚೌಧರಿ ಅವರು ಉತ್ತರಪತ್ರಿಕೆ ಛಾಯಾಪ್ರತಿ ಪಡೆದಾಗ 64 ಅಂಕ ಪಡೆದಿರುವುದು ಗೊತ್ತಾಗಿದೆ.

ಸುದ್ದಿ 2 ನಿಮಿಷ

ವಿನಯ ಕುಲಕರ್ಣಿ ಶಾಸಕತ್ವ ರದ್ದು

ಬೆಂಗಳೂರು: 'ಧಾರವಾಡ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣದಲ್ಲಿ ಜನಪ್ರತಿನಿಧಿ ನ್ಯಾಯಾಲಯದಿಂದ ಶಿಕ್ಷೆಗೆ ಗುರಿಯಾಗಿರುವ ವಿನಯ ಕುಲಕರ್ಣಿ ಶಾಸಕ ಸ್ಥಾನ ಈಗಾಗಲೇ ರದ್ದಾಗಿದೆ' ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ತಿಳಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ವಿಧಾನಸಭೆಯ ಯಾವೊಬ್ಬ ಸದಸ್ಯನ ಸದಸ್ಯತ್ವ ರದ್ದು ಮಾಡುವ ಅಧಿಕಾರ ಸಭಾಧ್ಯಕ್ಷರಿಗೆ ಇಲ್ಲ' ಎಂದು ಸ್ಪಷ್ಟಪಡಿಸಿದರು.

'ವಿಧಾನಸಭೆಯೊಳಗೆ ಏನಾದರೂ ಆದಾಗ ಮಾತ್ರ ಅನರ್ಹಗೊಳಿಸುವ ಅಧಿಕಾರ ಇದೆ. ಯಾರಾದರೂ ಶಿಕ್ಷೆಗೆ ಒಳಪಟ್ಟಾಗ ನಿಯಮದ ಪ್ರಕಾರ ಅವರ ಶಾಸಕ ಸ್ಥಾನ ತಾನಾಗಿಯೇ ರದ್ದಾಗುತ್ತದೆ. ಪ್ರಕರಣಕ್ಕೆ ನ್ಯಾಯಾಲಯದಲ್ಲಿ ತಡೆಯಾಜ್ಞೆ ಸಿಕ್ಕರೆ ಮತ್ತೆ ಶಾಸಕ ಸ್ಥಾನ ಮರುಸ್ಥಾಪನೆ ಆಗುತ್ತದೆ' ಎಂದರು.

'ಈ ಬಗ್ಗೆ ಸದನಕ್ಕೆ ಮಾಹಿತಿ ನೀಡುವುದಷ್ಟೇ ನನ್ನ ಜವಾಬ್ದಾರಿ. ವಿಧಾಸಭೆಯ ಕಾರ್ಯದರ್ಶಿಗೆ ಪರಿಶೀಲನೆ ಮಾಡಲು ಹೇಳಿದ್ದೇನೆ. ವಿನಯ ಕುಲಕರ್ಣಿ ವಿಷಯದಲ್ಲಿ ಕ್ರಮ ತೆಗೆದುಕೊಳ್ಳಲು ವಿಳಂಬವಾಗುತ್ತಿದೆ ಎನ್ನುವುದು ವಿಷಯವೇ ಇಲ್ಲ' ಎಂದರು.



'ಶಾಸಕ ಸ್ಥಾನದಿಂದ ಅನರ್ಹಗೊಳಿಸುವ ವಿಚಾರವಾಗಿ ಬಿಜೆಪಿ, ಕಾಂಗ್ರೆಸ್ ಎಂದು ನಾನು ತಾರತಮ್ಯ ಮಾಡಿಲ್ಲ. ತಾರತಮ್ಯ ಮಾಡುವಂಥದ್ದು ಏನಿದೆ? ಶಾಸಕ ಸ್ಥಾನ ರದ್ದಾದ ಬಳಿಕ ಅವರು ಸದನಕ್ಕೆ ಬರಲು ಸಾಧ್ಯವಿಲ್ಲ. ಈ ಮಾಹಿತಿ ಇಲ್ಲದೇ ಇರುವವರಿಗೆ ಮಾಹಿತಿ ಕೊಡುತ್ತಿದ್ದೇನೆ' ಎಂದು ತಿರುಗೇಟು ನೀಡಿದರು.

ಜಾಮೀನಿಗೆ ನಟ ದರ್ಶನ್ 'ಸುಪ್ರೀಂ'ಗೆ ಮೊರೆ

ನವದೆಹಲಿ: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಜಾಮೀನು ನೀಡುವಂತೆ ನಟ ದರ್ಶನ್ ಅವರು ಸುಪ್ರೀಂ ಕೋರ್ಟ್ ಕದ ತಟ್ಟಿದ್ದಾರೆ.

ದರ್ಶನ್ ಹಾಗೂ ಇತರ ಆರೋಪಿಗಳಿಗೆ ಜಾಮೀನು ನೀಡಿದ್ದ ಕರ್ನಾಟಕ ಹೈಕೋರ್ಟ್ ಆದೇಶವನ್ನು 2025ರ ಆಗಸ್ಟ್ 14ರಂದು ಸುಪ್ರೀಂ ಕೋರ್ಟ್ ರದ್ದುಗೊಳಿಸಿತ್ತು.

'ಕೊಲೆ ಪ್ರಕರಣದ ವಿಚಾರಣೆ ನಡೆಯುತ್ತಿದೆ. ಆದರೆ, ಎಂಟು ತಿಂಗಳು ಕಳೆದರೂ ಸಾಕ್ಷಿಗಳ ವಿಚಾರಣೆ ಮುಕ್ತಾಯವಾಗಿಲ್ಲ. 273 ಸಾಕ್ಷಿಗಳ ಪೈಕಿ 15 ಸಾಕ್ಷಿಗಳ ವಿಚಾರಣೆಯಷ್ಟೇ ಮುಗಿದೆ. ಸಾಕ್ಷಿಗಳ ವಿಚಾರಣೆ ವಿಳಂಬ ಆಗುತ್ತಿದೆ. ಇದೇ ರೀತಿಯಾದರೆ ವಿಚಾರಣೆ ಮುಗಿಯಲು ಹಲವು ವರ್ಷ ಬೇಕಾಗುತ್ತದೆ. ಹೀಗಾಗಿ, ಜಾಮೀನು ಮಂಜೂರು ಮಾಡಬೇಕು' ಎಂದು ದರ್ಶನ್ ಅವರು ಅರ್ಜಿಯಲ್ಲಿ ಕೋರಿದ್ದಾರೆ. ಅರ್ಜಿಯ ವಿಚಾರಣೆ ಮೇ 5ರಂದು ನಡೆಯಲಿದೆ.



ಮಂಗಳೂರಿನ ಹೊಯಿಗೆ ಬಜಾರ್‌ನಲ್ಲಿ ಹಸಿ ಮೀನುಗಳನ್ನು ಬುಧವಾರ ಒಣಗಿಸುತ್ತಿದ್ದ ಕಾರ್ಮಿಕ ಮಹಿಳೆಯರು ಚಿತ್ರ: ಫಕ್ರುದ್ದೀನ್ ಎಚ್.

ತಿರುಪತಿಗೆ ಪ್ರತಿನಿತ್ಯ 12.5 ಟನ್ ಬಮೂಲ್ ತುಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರತಿ ದಿನ 12.5 ಟನ್‌ನಂತೆ ಆರು ತಿಂಗಳ ಕಾಲ 2 ಸಾವಿರ ಟನ್ ತುಪ್ಪವನ್ನು ತಿರುಪತಿ ತಿರುಮಲ ದೇವಸ್ಥಾನಕ್ಕೆ ಪೂರೈಸಲಾಗುವುದು ಎಂದು ಬೆಂಗಳೂರು ಸಹಕಾರ ಹಾಲು ಒಕ್ಕೂಟದ (ಬಮೂಲ್) ಅಧ್ಯಕ್ಷ ಡಿ.ಕೆ. ಸುರೇಶ್ ತಿಳಿಸಿದರು.

ಬಮೂಲ್‌ನಿಂದ ತಿರುಪತಿಗೆ ನಂದಿನಿ ತುಪ್ಪ ಸರಬರಾಜು ಮಾಡುವ ಟ್ಯಾಂಕರ್‌ಗೆ ಬುಧವಾರ ಚಾಲನೆ ನೀಡಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಿರುಪತಿ ತಿರುಮಲ ದೇವಸ್ಥಾನದೊಂದಿಗೆ (ಟಿಟಿಡಿ) ಈ ಸಂಬಂಧ ಬಮೂಲ್ ಒಪ್ಪಂದ ಮಾಡಿಕೊಂಡಿದೆ. ಇದರಿಂದ ₹136 ಕೋಟಿ ಆದಾಯ ಬರಲಿದೆ. ಇದಲ್ಲದೇ ಕೆಎಂಎಫ್ ಮದರ್ ಡೇರಿ 5,000 ಟನ್, ಖಾಸಗಿ ಕಂಪನಿಗಳು 1 ಸಾವಿರ ಟನ್ ತುಪ್ಪವನ್ನು ತಿರುಪತಿಗೆ ಸರಬರಾಜು ಮಾಡಲಿವೆ' ಎಂದರು.

'ನಂದಿನಿ ಹೆಸರು ದುರ್ಬಳಕೆ ಮಾಡಿಕೊಳ್ಳುವವರ ವಿರುದ್ಧ ನಿಗಾ ಇರಿಸಲಾಗಿದೆ. ಈಗಾಗಲೇ ಕೆಲವರ ವಿರುದ್ಧ ಕ್ರಮ ಕೂಡ ಆಗಿದೆ. ಕೆಲವು ಕಡೆ ದೂರುಗಳು ಬಂದಿವೆ. ಯಾವುದೇ ಕಾರಣಕ್ಕೂ ಗುಣಮಟ್ಟ ಹಾಳಾಗಲು ಬಿಡುವುದಿಲ್ಲ. ತಿರುಪತಿಗೆ ಸರಬರಾಜು ಮಾಡುವ ತುಪ್ಪದಲ್ಲೂ ವ್ಯತ್ಯಾಸ ಆಗದಂತೆ ನೋಡಿಕೊಳ್ಳಲು ಲಾರಿಗಳಿಗೆ ಡಿಜಿಟಲ್ ಲಾಕ್ ತಂತ್ರಜ್ಞಾನ ಬಳಕೆ ಮಾಡಲಾಗಿದೆ' ಎಂದು ಹೇಳಿದರು.



ಬಮೂಲ್‌ನಿಂದ ತಿರುಪತಿ ದೇವಸ್ಥಾನಕ್ಕೆ ನಂದಿನಿ ತುಪ್ಪ ಸರಬರಾಜು ಮಾಡುವ ಕಾರ್ಯಕ್ರಮಕ್ಕೆ ಬೆಂಗಳೂರು ಡೇರಿ ಆವರಣದಲ್ಲಿ ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ಅವರು ಬುಧವಾರ ಚಾಲನೆ ನೀಡಿದರು. ಬಮೂಲ್ ವ್ಯವಸ್ಥಾಪಕ ನಿರ್ದೇಶಕ ಡಾ.ಎಸ್‌.ಟಿ. ಸುರೇಶ್, ನಿರ್ದೇಶಕ ಸತೀಶ್ ಕಡತನಮಲೆ ಇದ್ದರು

ದರ ಹೆಚ್ಚಳ ಇಲ್ಲ: 'ಕೆಲ ಖಾಸಗಿ ಸಂಸ್ಥೆಗಳು ಹಾಲಿನ ದರವನ್ನು ಲೀಟರ್‌ಗೆ ₹2 ಏರಿಕೆ ಮಾಡಿದ್ದರೂ ನಂದಿನಿ ಹಾಲಿನ ದರ ಏರಿಕೆ ಮಾಡುವ ಪ್ರಸ್ತಾಪ ಸದ್ಯಕ್ಕೆ ನಮ್ಮ ಮುಂದೆ ಇಲ್ಲ' ಎಂದರು.

'ಯುದ್ಧದ ಕಾರಣದಿಂದ ಪ್ಲಾಸ್ಟಿಕ್ ಕ್ರೇಟ್, ಪ್ಯಾಕಿಂಗ್ ಕವರ್ ಹಾಗೂ ಶುದ್ಧೀಕರಣಕ್ಕೆ ಬಳಸುವ ರಾಸಾಯನಿಕ ವಸ್ತುಗಳ ಸರಬರಾಜಿನಲ್ಲಿ ವ್ಯತ್ಯಯವಾಗಿದೆ. ಇದರಿಂದ ಉತ್ಪನ್ನಗಳ ಪ್ಯಾಕಿಂಗ್ ಸಲಕರಣೆಗಳ ದರ ದುಬಾರಿಯಾಗುತ್ತಿದೆ. ಹೋಟೆಲ್‌ಗಳಿಂದ ಹಾಲಿಗೆ ಬೇಡಿಕೆ ಕಡಿಮೆಯಾಗಿದ್ದರೂ ಬೇಸಿಗೆ ಕಾರಣಕ್ಕೆ ಮೊಸರು, ಮಜ್ಜಿಗೆಗೆ ಬೇಡಿಕೆ ಹೆಚ್ಚಿದೆ. ಇನ್ನೂ 3–4 ತಿಂಗಳು ಯಾವುದೇ ಸಮಸ್ಯೆ ಆಗುವುದಿಲ್ಲ' ಎಂದು ತಿಳಿಸಿದರು.

> **ಕೆಎಂಎಫ್ ಅಧ್ಯಕ್ಷ ಸ್ಥಾನದ ಚುನಾವಣೆಗೆ ದಿನಾಂಕ ಇನ್ನೂ ನಿಗದಿಯಾಗಿಲ್ಲ. ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗವು ಪ್ರಕ್ರಿಯೆ ನಡೆಸಲಿದ್ದು, ಇನ್ನಷ್ಟು ದಿನ ಕಾಯಬೇಕಾಗುತ್ತದೆ.**
> **ಡಿ.ಕೆ.ಸುರೇಶ್,** ಬಮುಲ್ ಅಧ್ಯಕ್ಷ

ಚಿಟಿಕೆ ಸುದ್ದಿ

ಇಂದಿನಿಂದ ಪಿಯು ಪರೀಕ್ಷೆ–2

ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆ-2 ಗುರುವಾರದಿಂದ (ಏ.30) ಆರಂಭವಾಗಲಿದ್ದು, 1.72 ಲಕ್ಷ ವಿದ್ಯಾರ್ಥಿಗಳು ಹೆಸರು ನೋಂದಣಿ ಮಾಡಿಕೊಂಡಿದ್ದಾರೆ.

ಪರೀಕ್ಷೆ-2 ಬರೆಯಲು ಹೆಸರು ನೋಂದಾಯಿಸಿಕೊಂಡಿರುವ ವಿದ್ಯಾರ್ಥಿಗಳಲ್ಲಿ 92,554 ಬಾಲಕರು ಹಾಗೂ 79,597 ಬಾಲಕಿಯರಿದ್ದಾರೆ. ಈ ಬಾರಿ ಅನುತ್ತೀರ್ಣರಾದ 82,746 ವಿದ್ಯಾರ್ಥಿಗಳ ಜತೆಗೆ 794 ಖಾಸಗಿ ಹಾಗೂ 39,099 ಪುನರಾವರ್ತಿತ ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ. 49,512 ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಪರೀಕ್ಷೆ ಬರೆಯಲಿದ್ದಾರೆ. ಮೊದಲ ದಿನ ಕನ್ನಡ, ಅರೇಬಿಕ್ ಭಾಷೆಯ ಪರೀಕ್ಷೆಗಳು ನಿಗದಿಯಾಗಿವೆ.

ಫೆ.28ರಿಂದ ಮಾ.17ರವರೆಗೆ ನಡೆದಿದ್ದ 2025-26ನೇ ಸಾಲಿನ ದ್ವಿತೀಯ ಪಿಯು ಪರೀಕ್ಷೆ-1ರಲ್ಲಿ ಪರೀಕ್ಷೆ ಬರೆದಿದ್ದ 6.32 ಲಕ್ಷ ವಿದ್ಯಾರ್ಥಿ ಗಳಲ್ಲಿ 5.46 ಲಕ್ಷ (ಶೇ 86.48) ತೇರ್ಗಡೆಯಾಗುವ ಮೂಲಕ ಹೊಸ ದಾಖಲೆ ಬರೆದಿದ್ದರು. ಪರೀಕ್ಷೆ–2ಕ್ಕೆ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಪೂರ್ಣ ಸಿದ್ಧತೆ ಮಾಡಿಕೊಂಡಿದೆ. ಮೇ 13ರಂದು ಪರೀಕ್ಷೆ ಮುಕ್ತಾಯವಾಗಲಿದೆ.

ಪುಸ್ತಕ ಪ್ರಾಧಿಕಾರ: ನಾಲ್ಕು ಹೊಸ ಪ್ರಶಸ್ತಿ ಸ್ಥಾಪನೆ

ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರವು ಹೊಸದಾಗಿ ನಾಲ್ಕು ಪ್ರಶಸ್ತಿಗಳನ್ನು ಸ್ಥಾಪಿಸಿದೆ.

'ನಂಜನಗೂಡು ತಿರುಮಲಾಂಬ ಪ್ರಶಸ್ತಿ', 'ಡಾ.ಹಾ.ಮಾ. ನಾಯಕ ಪ್ರಶಸ್ತಿ', 'ಪಿ.ಆರ್. ತಿಪ್ಪೇಸ್ವಾಮಿ ಪ್ರಶಸ್ತಿ' ಹಾಗೂ 'ಗಳಗನಾಥ ಪ್ರಶಸ್ತಿ'ಯನ್ನು ಸ್ಥಾಪಿಸಲಾಗಿದೆ. ರಾಜ್ಯದ ನಾಲ್ಕೂ ಕಂದಾಯ ವಿಭಾಗಗಳಿಗೆ ತಲಾ ಒಂದರಂತೆ ಈ ಪ್ರಶಸ್ತಿಗಳನ್ನು ನೀಡಲಾಗುತ್ತದೆ ಎಂದು ಪ್ರಾಧಿಕಾರದ ಅಧ್ಯಕ್ಷ ಮಾನಸ ಹೇಳಿದ್ದಾರೆ.

'ಪ್ರಾಧಿಕಾರ ಆರಂಭಿಸಿರುವ 'ಮನೆಗೊಂದು ಗ್ರಂಥಾಲಯ' ಯೋಜನೆಯಡಿ, ಗ್ರಂಥಾಲಯ ಅನುಷ್ಠಾನ ಕಾರ್ಯಕ್ರಮದ ಮೂಲಕ ಗುರುತಿಸಿಕೊಂಡವರನ್ನು ಈ ಪ್ರಶಸ್ತಿಗೆ ಪರಿಗಣಿಸಲಾಗುತ್ತದೆ' ಎಂದು ತಿಳಿಸಿದ್ದಾರೆ.

'ಈ ಪ್ರಶಸ್ತಿಯು ತಲಾ ₹ 25 ಸಾವಿರ ನಗದು ಬಹುಮಾನ ಹಾಗೂ ಸ್ಮರಣಿಕೆ ಒಳಗೊಂಡಿದೆ. ಪ್ರಾಧಿಕಾರದ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಈ ಪ್ರಶಸ್ತಿಗಳನ್ನು ನೀಡಲಾಗುವುದು' ಎಂದು ಹೇಳಿದ್ದಾರೆ.

ಹೃದಯಾಘಾತ: ಕಚೇರಿಯಲ್ಲೇ ಲೆಕ್ಕಾಧಿಕಾರಿ ಸಾವು

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ಪುರಸಭೆಯ ಲೆಕ್ಕಾಧಿಕಾರಿ ವಿಜಯಕುಮಾರ್ ಕನಕಗಿರಿ (40) ಬುಧವಾರ ಕಚೇರಿಯಲ್ಲಿ ಕರ್ತವ್ಯದಲ್ಲಿದ್ದಾಗಲೇ ನಿಧನರಾದರು.



ವಿಜಯ ಕುಮಾರ್

ಬೆಳಿಗ್ಗೆ ಕೆಲಸ ಮಾಡುತ್ತಿದ್ದಾಗ ಕುಳಿತ ಕುರ್ಚಿಯಲ್ಲೇ ತೀವ್ರ ಹೃದಯಾಘಾತದಿಂದ ಕುಸಿದರು. ತಕ್ಷಣ ಸಿಬ್ಬಂದಿ ಅವರನ್ನು ಖಾಸಗಿ ಆಸ್ಪತ್ರೆಗೆ ಕರೆದೊಯ್ದರು. ಆ ವೇಳೆಗೆ ಮೃತಪಟ್ಟಿದ್ದರು.

ಕೊಪ್ಪಳ ನಗರ ನಿವಾಸಿಯಾದ ವಿಜಯಕುಮಾರ್ ಅವರಿಗೆ ಪತ್ನಿ, 6 ತಿಂಗಳ ಮಗು ಇದೆ.

ಬೀರೂರು: ಪಿಎಸ್‌ಐ ಪತ್ನಿ ಆತ್ಮಹತ್ಯೆ

ಕಡೂರು (ಚಿಕ್ಕಮಗಳೂರು): ಬೀರೂರು ಠಾಣೆಯ ಸಬ್ ಇನ್‌ಸ್ಪೆಕ್ಟರ್ ಡಿ.ವಿ.ತಿಪ್ಪೇಶ್ ಅವರ ಪತ್ನಿ ಪದ್ಮಾವತಮ್ಮ ಎಸ್.ಜಿ.(36) ಆತ್ಮಹತ್ಯೆ ಮಾಡಿಕೊಂಡಿದ್ದಾರೆ.



ಪದ್ಮಾವತಮ್ಮ

ಪಟ್ಟಣದ ರಾಜಾಜಿನಗರದ ಮನೆಯಲ್ಲಿ ಫ್ಯಾನ್‌ಗೆ ಸೀರೆಯಿಂದ ಪದ್ಮಾವತಮ್ಮ ನೇಣು ಹಾಕಿಕೊಂಡಿದ್ದಾರೆ. ದಂಪತಿ 15 ವರ್ಷಗಳ ಹಿಂದೆ ಪ್ರೀತಿಸಿ ಅಂತರ್ಜಾತಿ ವಿವಾಹವಾಗಿದ್ದರು.


'ದಂಪತಿಗೆ ಇಬ್ಬರು ಮಕ್ಕಳಿದ್ದು, ಕುಟುಂಬಕ್ಕೆ ಪತಿ ಸಮಯ ಕೊಡುತ್ತಿಲ್ಲ ಎಂಬ ಬೇಸರದಿಂದ ಮಾನಸಿಕವಾಗಿ ನೊಂದಿದ್ದರು ಎಂದು ಹೇಳಲಾಗಿದೆ. ಮಂಗಳವಾರ ರಾತ್ರಿ ಕರ್ತವ್ಯದ ಮೇಲೆ ತಿಪ್ಪೇಶ್ ತೆರಳಿದ್ದಾಗ ಮಧ್ಯರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬುಧವಾರ ಬೆಳಿಗ್ಗೆ ವಿಷಯ ತಿಳಿದಿದ್ದು, ಸ್ಥಳಕ್ಕೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಿ.ಟಿ.ಜಯಕುಮಾರ್ ಭೇಟಿ ನೀಡಿ ಮಾಹಿತಿ ಪಡೆದರು' ಎಂದು ಪೊಲೀಸರು ತಿಳಿಸಿದ್ದಾರೆ.

ತರೀಕೆರೆ ಡಿವೈಎಸ್‌ಪಿ ಪರಶುರಾಮಪ್ಪ ನೇತೃತ್ವದಲ್ಲಿ ತನಿಖೆ ನಡೆಸಲಾಗುತ್ತಿದೆ. ಮೃತರ ತಾಯಿ ದೂರು ನೀಡಿದ್ದು, ಅಸಹಜ ಸಾವು (ಯುಡಿಆರ್) ಪ್ರಕರಣ ದಾಖಲಾಗಿದೆ.

ಮಹಿಳೆಯರ ಚಿತ್ರೀಕರಿಸಿ ಬಿತ್ತರಿಸಿದ ಆರೋಪ: ಪ್ರಕರಣ ರದ್ದತಿಗೆ ನಕಾರ

ಕಿಡಿಗೇಡಿತನಕ್ಕೆ ಕ್ಷಮೆ ಇಲ್ಲ: ಹೈಕೋರ್ಟ್


ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಸಾರ್ವಜನಿಕ ಸಾರಿಗೆ ಎಂಬುದು ಯಾರಿಗೂ ಭಯ ಉಂಟು ಮಾಡುವ ಮತ್ತು ಶೋಷಣೆಯ ಸ್ಥಳವಾಗಿರಬಾರದು. ಈ ಜಾಗಗಳು ಎಲ್ಲರ ಪಾಲಿಗೆ ಸದಾ ಸುರಕ್ಷತೆ ಹೊಂದಿದ ಘನತೆಯ ತಾಣಗಳಾಗಿ ಕಂಗೊಳಿಸಬೇಕು' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಮೆಟ್ರೊ ರೈಲಿನಲ್ಲಿ ಪ್ರಯಾಣಿಸುವ ಮಹಿಳೆಯರನ್ನು ಹಿಂಬಾಲಿಸಿ ಅವರ ಶರೀರದ ಭಾಗಗಳನ್ನು ಮೊಬೈಲ್ ಫೋನ್‌ನಲ್ಲಿ ಚಿತ್ರೀಕರಿಸಿದ ವಿಡಿಯೋಗಳನ್ನು ತನ್ನ 'ಮೆಟ್ರೊ_ಚಿಕ್ಸ್' ಹೆಸರಿನಲ್ಲಿ ಇನ್‌ಸ್ಟಾಗ್ರಾಂ ಸಾಮಾಜಿಕ ಜಾಲತಾಣದಲ್ಲಿ ಬಿತ್ತರಿಸಿದ್ದ ಆರೋಪಿಯ ಅರ್ಜಿ ವಜಾಗೊಳಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ತನ್ನ ತೀರ್ಪು ಪ್ರಕಟಿಸಿದೆ.

'ದೂರು ಅಥವಾ ದೋಷಾರೋಪ ಪಟ್ಟಿಯಲ್ಲಿ ಕಂಡುಬರುವ ಎಲ್ಲಾ ಆರೋಪಗಳು ಕಳಪೆ ಮತ್ತು ಅಸ್ಪಷ್ಟವಾಗಿವೆ. ಸಾಕ್ಷಿಗಳು ವಿಶ್ವಾಸಾರ್ಹವಾಗಿಲ್ಲ. ಆದ್ದರಿಂದ, ಪ್ರಕರಣ ರದ್ದುಗೊಳಿಸಬೇಕು' ಎಂಬ ಅರ್ಜಿದಾರರ ಮನವಿಯನ್ನು ನ್ಯಾಯಪೀಠ ತಳ್ಳಿ ಹಾಕಿದೆ. 'ಆರೋಪಿಯ ಕಿಡಿಗೇಡಿ ಕೃತ್ಯ ಕ್ಷಮೆಗೆ ಅರ್ಹವಾದುದಲ್ಲ. ಆದ್ದರಿಂದ, ಪೂರ್ಣ ಪ್ರಮಾಣದ ವಿಚಾರಣೆಗೆ ಒಳಪಟ್ಟು ದೋಷಮುಕ್ತರಾಗಿ ಹೊರಬರುವುದು ಅರ್ಜಿದಾರರ ಜವಾಬ್ದಾರಿಯಾಗಿದೆ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.



> **ಜನದಟ್ಟಣೆಯ ಸ್ಥಳಗಳಲ್ಲಿ ನಡೆಸಲಾಗುವ ಇಂತಹ ಕೃತ್ಯಗಳನ್ನು ಸಹಿಸಲಾಗದು. ಇಂತಹ ಆರೋಪಗಳ ವಿಚಾರಣೆ ರದ್ದುಪಡಿಸಿದರೆ ನಾಗರಿಕ ಸಮಾಜದ ರಚನೆಯನ್ನೇ ನಾಶಪಡಿಸುವ ನಡವಳಿಕೆಗೆ ಇಂಬು ಕೊಟ್ಟಂತಾಗುತ್ತದೆ.**
> **ನ್ಯಾ.ಎಂ.ನಾಗಪ್ರಸನ್ನ**

'ಅನಾಮಧೇಯ ಮಹಿಳಾ ಪ್ರಯಾಣಿಕರ ಮೇಲೆ ರಹಸ್ಯ ಕಣ್ಗಾವಲು ಇರಿಸಿ ಅವರ ಚಿತ್ರಗಳು ಮತ್ತು ವಿಡಿಯೊಗಳನ್ನು ಒಪ್ಪಿಗೆಯಿಲ್ಲದೆ ಚಿತ್ರೀಕರಿಸಿರುವುದು ಆತಂಕಕಾರಿ' ಎಂದು ಕಳವಳ ವ್ಯಕ್ತಪಡಿಸಿದೆ.

'ತನಿಖೆಯ ಸಮಯದಲ್ಲಿ ಸಂಗ್ರಹಿಸಲಾಗಿರುವ ವಸ್ತುಗಳ ಸಾಕ್ಷ್ಯ ರೂಪವನ್ನು ಗಮನಿಸಿದರೆ ಈ ಪ್ರಕರಣದ ವಿಚಾರಣೆ ಮುಂದುವರಿಯಲು ಸಾಕಷ್ಟು ಪ್ರಾಥಮಿಕ ಕಾರಣಗಳಿರುವುದನ್ನು ಬಹಿರಂಗಪಡಿಸುತ್ತದೆ. ಹಾಗಾಗಿ, ಈ ಹಂತದಲ್ಲಿ ವಿಚಾರಣೆಯನ್ನು ತಡೆಯುವುದು ನ್ಯಾಯದ ಹಾದಿಯನ್ನು ಮೊಟಕುಗೊಳಿಸಿದಂತಾಗುತ್ತದೆ. ಒಂದು ವೇಳೆ ಇಂತಹ ಆರೋಪಗಳ ವಿಚಾರಣೆಯನ್ನು ಮಧ್ಯದಲ್ಲೇ ಚಿವುಟಿ ಹಾಕಿದರೆ ಇದೇ ರೀತಿಯ ಕಾನೂನು ಉಲ್ಲಂಘನೆಗೆ ಪ್ರೋತ್ಸಾಹ ನೀಡಿದಂತಾಗುತ್ತದೆ' ಎಂದು ನ್ಯಾಯಪೀಠ ಉಲ್ಲೇಖಿಸಿದೆ.

ಪ್ರಕರಣ: 'ನನ್ನ ವಿರುದ್ಧದ ಎಫ್‌ಐಆರ್ ಮತ್ತು ನಗರದ 2ನೇ ಹೆಚ್ಚುವರಿ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿನ ನ್ಯಾಯಿಕ ವಿಚಾರಣೆ ರದ್ದುಪಡಿಸಬೇಕು' ಎಂದು ಕೋರಿ ಕರಿಹೋಬನಹಳ್ಳಿ ತಿಗಳರಪಾಳ್ಯ ಮುಖ್ಯ ರಸ್ತೆಯ ನಿವಾಸಿ ಬಿ.ಕೆ.ದಿಗಂತ್ (28) ಹೈಕೋರ್ಟ್ ಮೆಟ್ಟಿಲೇರಿದ್ದರು.

ಅರ್ಜಿದಾರರ ವಿರುದ್ಧ ವಿವಿಧ ಪ್ರಕರಣಗಳ ಅಡಿಯಲ್ಲಿ ಬನಶಂಕರಿ ಪೊಲೀಸ್ ಠಾಣೆ ಪೊಲೀಸರು ಸ್ವಯಂಪ್ರೇರಿತ ಕ್ರಿಮಿನಲ್ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಲೈಕು–ಕಮೆಂಟುಗಳ ಚಟ

'ತನ್ನ ಇನ್‌ಸ್ಟಾಗ್ರಾಂ ಖಾತೆಯ ಮೆಟ್ರೊ_ಚಿಕ್ಸ್ ಪುಟವನ್ನು ಹೆಚ್ಚು ಜನರು ಫಾಲೋ ಮಾಡಬೇಕು. ಅತಿ ಹೆಚ್ಚು ಲೈಕ್‌ಗಳು ಹಾಗೂ ಕಮೆಂಟ್‌ಗಳು ಬರಬೇಕು ಎಂಬ ಉದ್ದೇಶದಿಂದ ಆರೋಪಿಯು ಚಿತ್ರೀಕರಣ ಮಾಡಿದ್ದಾರೆ. ಇಂತಹ 14 ವಿಡಿಯೊಗಳು ಆರೋಪಿಯ ಪುಟದಲ್ಲಿ ಬಿತ್ತರವಾಗಿವೆ. ಇವು ಆರೋಪಿಯ ಅನುಚಿತ ವರ್ತನೆಗೆ ಸ್ಪಷ್ಟ ಸಾಕ್ಷ್ಯವಾಗಿವೆ' ಎಂದು ದೋಷಾರೋಪ ಪಟ್ಟಿಯಲ್ಲಿ ವಿವರಿಸಲಾಗಿದೆ.

'ಯಡಿಯೂರಪ್ಪ ಹೋರಾಟದ ಕೆಚ್ಚು ನೆನಪಿಸಲು ಸಮಾವೇಶ'


ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): 'ಯಡಿಯೂರಪ್ಪ ಅವರನ್ನು ಪಕ್ಷ ಎಂದೂ ಕಡೆಗಣಿಸಿಲ್ಲ, ಅನ್ಯಾಯವನ್ನೂ ಮಾಡಿಲ್ಲ. ಅವರಿಗೆ ಪಕ್ಷ ಎಲ್ಲವನ್ನೂ ನೀಡಿದೆ' ಎಂದು ಯಡಿಯೂರಪ್ಪ ಪುತ್ರ, ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಇಲ್ಲಿ ಹೇಳಿದರು.

'ಯಡಿಯೂರಪ್ಪ ಅವರ ಹೋರಾಟದ ಕೆಚ್ಚನ್ನು ನೆನಪಿಸುವ ಸಲುವಾಗಿಯೇ ಚಿತ್ರದುರ್ಗದಲ್ಲಿ ಸಮಾವೇಶ ನಡೆಯುತ್ತಿದೆ' ಎಂದು ಹೇಳಿದರು.

ಚಿತ್ರದುರ್ಗದಲ್ಲಿ ಮೇ 9ಕ್ಕೆ ನಡೆಯುವ ಬಿಎಸ್‌ವೈ ಅಭಿಮಾನೋತ್ಸವದ ಸಿದ್ಧತಾ ಸಭೆಯಲ್ಲಿ ಪಾಲ್ಗೊಳ್ಳಲು ಬುಧವಾರ ಇಲ್ಲಿಗೆ ಬಂದಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ನಮ್ಮದು ರಾಷ್ಟ್ರೀಯ ಪಕ್ಷ, ನಾಯಕತ್ವ ಬದಲಾವಣೆ ವಿಚಾರವನ್ನು ಪಕ್ಷದ ವರಿಷ್ಠರು ನಿರ್ಧರಿಸುತ್ತಾರೆ. ವರಿಷ್ಠರ ತೀರ್ಮಾನಕ್ಕೆ ನಾವೆಲ್ಲ ಬದ್ಧ' ಎಂದರು.



ಬಿ.ವೈ. ವಿಜಯೇಂದ್ರ

'ರಾಜ್ಯದ ಜ್ವಲಂತ ಸಮಸ್ಯೆಗಳ ಕುರಿತು ಗುರುವಾರದಿಂದ ಹೋರಾಟ ಆರಂಭಿಸಲಾಗುವುದು' ಎಂದು ವಿಜಯೇಂದ್ರ ಇಲ್ಲಿ ಹೇಳಿದರು.

ಮಾಜಿ ಸಚಿವ ಬಿ.ಶ್ರೀರಾಮುಲು, 'ಸಿದ್ದರಾಮಯ್ಯ ಅವರ ಕುರ್ಚಿಗೆ ಆತಂಕ ಬಂದಾಗಲೆಲ್ಲಾ ಅವರಿಗೆ ಅಹಿಂದ ನೆನಪಾಗುತ್ತದೆ' ಎಂದು ಲೇವಡಿ ಮಾಡಿದರು.

'ರಾಜ್ಯದಲ್ಲಿ ಕುರ್ಚಿ ರಾಜಕೀಯ ತೀವ್ರಗೊಂಡಿದೆ. ಒಂದೊಂದು ತಂಡ ದೆಹಲಿ ಯಾತ್ರೆ ಮಾಡುತ್ತಿದೆ. ಮೇ 4ರ ನಂತರ ಕಾಂಗ್ರೆಸ್‌ನಲ್ಲಿ ಬದಲಾವಣೆ ನಿಶ್ಚಿತ' ಎಂದು ವಿಜಯೇಂದ್ರ ಅವರು ಇದೇ ಸಂದರ್ಭದಲ್ಲಿ ಹೇಳಿದರು.

ಪಶ್ಚಿಮ ಬಂಗಾಳ: ಒಟ್ಟಾರೆ ದಾಖಲೆ ಮತದಾನ

ಕೆಲವೆಡೆ ಘರ್ಷಣೆ, ಪ್ರತಿಭಟನೆ: ಎರಡೂ ಹಂತದ ಚುನಾವಣೆ ಬಳಿಕ ಶೇ 92.47ರಷ್ಟು ಮತದಾನ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭೆಯ 142 ಕ್ಷೇತ್ರಗಳಿಗೆ ಬುಧವಾರ ನಡೆದ ಚುನಾವಣೆಯಲ್ಲಿ ಶೇ 91.66ರಷ್ಟು ಮತದಾನವಾಗಿದೆ.

ರಾಜ್ಯದ ಕೆಲವೆಡೆ ಅಭ್ಯರ್ಥಿಗಳ ಮೇಲೆ ಹಲ್ಲೆ, ಘರ್ಷಣೆ, ಪ್ರತಿಭಟನೆ ನಡೆದ ಬಗ್ಗೆ ವರದಿಯಾಗಿದೆ. ಕೋಲ್ಕತ್ತ, ಹೌರಾ, ಹೂಗ್ಲಿ, ನಾದಿಯಾ, ಉತ್ತರ ಮತ್ತು ದಕ್ಷಿಣ ಪರಗಣ 24 ಹಾಗೂ ಪುರ್ಬ ಬರ್ಧಮಾನ್ ಜಿಲ್ಲೆಗಳಲ್ಲಿ ಜನರು ಬೆಳಿಗ್ಗೆ 7 ಗಂಟೆಯಿಂದಲೇ ಸರತಿ ಸಾಲಿನಲ್ಲಿ ನಿಂತು ಮತ ಚಲಾಯಿಸಿದರು.

ಮಧ್ಯಾಹ್ನ 1 ಗಂಟೆ ವೇಳೆಗೆ ಶೇ 61.11ರಷ್ಟು ಮತದಾರರು ಮತ ಚಲಾಯಿಸಿದ್ದರು. ಮಧ್ಯಾಹ್ನ 3 ಗಂಟೆ ವೇಳೆಗೆ ಶೇ 78.68ರಷ್ಟು ಮತ್ತು 5 ಗಂಟೆ ವೇಳೆಗೆ ಶೇ 89.99ರಷ್ಟು ಮತದಾನ ದಾಖಲಾಗಿತ್ತು. ಆ ಬಳಿಕವೂ ತುರುಸಿನ ಮತದಾನ ನಡೆದಿದ್ದು, ಒಟ್ಟು ಶೇ 91.66ರಷ್ಟು ಮತದಾನವಾಗಿದೆ. ಮೊದಲ ಹಂತದಲ್ಲಿ ಶೇ 93.19ರಷ್ಟು ಮತದಾನವಾಗಿತ್ತು.

ಎರಡೂ ಹಂತದ ಬಳಿಕ ರಾಜ್ಯದಲ್ಲಿ ಶೇ 92.47ರಷ್ಟು ಮತದಾನವಾಗಿದ್ದು, ಸ್ವಾತಂತ್ರ್ಯದ ಬಳಿಕ ಇದೇ ಮೊದಲ ಬಾರಿ ರಾಜ್ಯದಲ್ಲಿ ಈ ಪ್ರಮಾಣದಲ್ಲಿ ಮತದಾನವಾಗಿದೆ ಎಂದು ಆಯೋಗ ತಿಳಿಸಿದೆ.

ಸುವೇಂದು ವಿರುದ್ಧ ಘೋಷಣೆ: ಬಿಜೆಪಿ ನಾಯಕ ಸುವೇಂದು ಅಧಿಕಾರಿ ಅವರು ಕಾಲಿಘಾಟ್ ಪ್ರದೇಶದ ಮತಗಟ್ಟೆಗೆ ಭೇಟಿ ನೀಡಿದಾಗ ಕೆಲಕಾಲ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿತ್ತು. ಟಿಎಂಸಿ ಕಾರ್ಯಕರ್ತರು 'ಜೈ ಬಂಗಾಳ', 'ಚೋರ್, ಚೋರ್' ಎಂಬ ಘೋಷಣೆ ಕೂಗಿದರು. ಇದಕ್ಕೆ ಪ್ರತಿಯಾಗಿ ಬಿಜೆಪಿ ಕಾರ್ಯಕರ್ತರು 'ಜೈ ಶ್ರೀರಾಮ್' ಎಂದು ಕೂಗಿದರು. ಈ ವೇಳೆ ಪೊಲೀಸರು ಮಧ್ಯಪ್ರವೇಶಿಸಿ, ಜನರನ್ನು ಚದುರಿಸಲು ಲಾಠಿಚಾರ್ಜ್ ನಡೆಸಿದರು. 'ಹೊರಗಿನವರು ಚುನಾವಣೆ ಮೇಲೆ ಪ್ರಭಾವ ಬೀರಲು ಯತ್ನಿಸುತ್ತಿದ್ದಾರೆ' ಎಂದು ಅಧಿಕಾರಿ ಆರೋಪಿಸಿದರು. ಬಳಿಕ ಅವರು ಚುನಾವಣಾ ಆಯೋಗಕ್ಕೆ ದೂರು ನೀಡಿ, ಹೆಚ್ಚಿನ ಕೇಂದ್ರೀಯ ಭದ್ರತಾ ಪಡೆಗಳನ್ನು ನಿಯೋಜಿಸುವಂತೆ ಕೋರಿದರು.

> ಕೇಂದ್ರೀಯ ಪಡೆಗಳು, ವೀಕ್ಷಕರು, ಚುನಾವಣಾ ಅಧಿಕಾರಿಗಳನ್ನು ಬಳಸಿಕೊಂಡು ಚುನಾವಣೆಯಲ್ಲಿ ಅಕ್ರಮ ಎಸಗಲು ಬಿಜೆಪಿ ಯತ್ನಿಸುತ್ತಿದೆ
> **ಮಮತಾ ಬ್ಯಾನರ್ಜಿ,** ಮುಖ್ಯಮಂತ್ರಿ

> ಮಮತಾ ಅವರ ನಡೆ ಅವರ ಹತಾಶೆಯ ಸಂಕೇತ. ಅವರಿಗೆ ಒಂದೂ ಮತ ಬರುವುದಿಲ್ಲ ಎಂದು ಅವರಿಗೆ ತಿಳಿದಿದೆ
> **ಸುವೇಂದು ಅಧಿಕಾರಿ,** ಬಿಜೆಪಿ ಅಭ್ಯರ್ಥಿ

ಎಲ್ಲೆಲ್ಲಿ ಏನೇನಾಯ್ತು?:

- ನಾದಿಯಾ ಜಿಲ್ಲೆಯ ಚಪ್ರಾದಲ್ಲಿ ಅಣಕು ಮತದಾನದ ಸಂದರ್ಭದಲ್ಲಿ ಬಿಜೆಪಿ ಏಜೆಂಟ್ ಮೇಲೆ ಹಲ್ಲೆ ಮಾಡಲಾಗಿದೆ ಎಂದು ಆರೋಪಿಸಲಾಗಿದೆ
- ಶಾಂತಿಪುರದಲ್ಲಿ ಬಿಜೆಪಿ ಕಚೇರಿ ಧ್ವಂಸ ಮಾಡಲಾಗಿದೆ
- ಹೌರಾದ ಲಿಲುವಾ ಮತಗಟ್ಟೆಯಲ್ಲಿ ಇವಿಎಂ ಕೆಟ್ಟಿದ್ದರಿಂದ ಮತದಾನ ವಿಳಂಬವಾಗಿತ್ತು. ಇದರಿಂದ ಉದ್ರಿಕ್ತರಾದ ಮತದಾರರ ಮೇಲೆ ಕೇಂದ್ರೀಯ ಪಡೆಗಳು ಲಾಠಿಚಾರ್ಜ್ ನಡೆಸಿದವು. ಪ್ರಕರಣ ಸಂಬಂಧ ಇಬ್ಬರನ್ನು ಬಂಧಿಸಲಾಗಿದೆ
- ಅಮಡಾಂಗ ಮತಗಟ್ಟೆಯಲ್ಲಿ ಅನಧಿಕೃತವಾಗಿ ಸೇರಿದ್ದ ಬೆಂಬಲಿಗರನ್ನು ಪೊಲೀಸ್ ಮತ್ತು ಆರ್‌ಎಎಫ್ ಸಿಬ್ಬಂದಿ ಚದುರಿಸಿದರು
- ಪಾನಿಹಾಟಿಯಲ್ಲಿ ಬಿಜೆಪಿ ಅಭ್ಯರ್ಥಿ, ಆರ್.ಜಿ ಕರ್ ಸಂತ್ರಸ್ತೆಯ ತಾಯಿ ಇದ್ದ ಕಾರನ್ನು ಟಿಎಂಸಿ ಕಾರ್ಯಕರ್ತರು ಅಡ್ಡಗಟ್ಟಿ, ಪ್ರತಿಭಟಿಸಿದರು
- ಬಸಂತಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿಕಾಸ್ ಸರ್ದಾರ್, 'ಟಿಎಂಸಿಯ 200–250 ಗೂಂಡಾಗಳು ಕಾರಿನ ಮೇಲೆ ದಾಳಿ ನಡೆಸಿದರು ಮತ್ತು ಚಾಲಕನ ಮೇಲೆ ಹಲ್ಲೆ ನಡೆಸಿದರು' ಎಂದು ಆರೋಪಿಸಿದ್ದಾರೆ
- ಇಂಟಲಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪ್ರಿಯಾಂಕಾ ತಿಬ್ರೆವಾಲ್ ಅವರು, 'ಮತಗಟ್ಟೆಯಲ್ಲಿ ಹೆಚ್ಚಿನ ಜನ ಸೇರಿದ್ದನ್ನು ಪ್ರಶ್ನಿಸಿದ್ದಕ್ಕೆ ಟಿಎಂಸಿ ಏಜೆಂಟ್‌ಗಳು ಹಲ್ಲೆ ನಡೆಸಿದರು' ಎಂದು ಆರೋಪಿಸಿದ್ದಾರೆ

> ಪಶ್ಚಿಮ ಬಂಗಾಳವನ್ನು ಟಿಎಂಸಿಯ ದುರಾಡಳಿತದಿಂದ ಮುಕ್ತಗೊಳಿಸಲು ಮತದಾರರು ತಮ್ಮ ಹಕ್ಕನ್ನು ಚಲಾಯಿಸಿದ್ದಾರೆ ಎಂಬ ವಿಶ್ವಾಸವಿದೆ. ನನ್ನ ಮಗಳು ಮಾತ್ರವಲ್ಲದೆ ಅಸಂಖ್ಯಾತ ಹೆಣ್ಣುಮಕ್ಕಳು ದೌರ್ಜನ್ಯ ಎದುರಿಸುತ್ತಿದ್ದಾರೆ. ಮಹಿಳೆಯರ ಸುರಕ್ಷತೆ ನನ್ನ ಆದ್ಯತೆ
> **ಆರ್.ಜಿ ಕರ್ ಸಂತ್ರಸ್ತೆ ತಾಯಿ,** ಬಿಜೆಪಿ ಅಭ್ಯರ್ಥಿ

ಮಮತಾ–ಸುವೇಂದು ಮುಖಾಮುಖಿ

ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ಬಿಜೆಪಿ ನಾಯಕ ಸುವೇಂದು ಅಧಿಕಾರಿ ಅವರು ಭವಾನಿಪುರ ಕ್ಷೇತ್ರದ ಚಕ್ರಬೇರಿಯಾ ಪ್ರದೇಶದ ಮತಗಟ್ಟೆಗೆ ಒಂದೇ ಸಮಯದಲ್ಲಿ ಭೇಟಿ ನೀಡಿದ್ದರು. ಮಮತಾ ಬ್ಯಾನರ್ಜಿ ಅವರು ಮತಗಟ್ಟೆಯ ಹೊರಗೆ ಕುಳಿತಿದ್ದಾಗ ಸುವೇಂದು ಅಧಿಕಾರಿ ಅವರು ಕೇಂದ್ರೀಯ ಪಡೆಗಳ ಭದ್ರತೆಯ ಮಧ್ಯೆ ಮತಗಟ್ಟೆಗೆ ಧಾವಿಸಿದರು. ಇಬ್ಬರೂ ಸೌಜನ್ಯಕ್ಕೂ ಪರಸ್ಪರ ಮಾತನಾಡಲಿಲ್ಲ.

ಸಾಮಾನ್ಯವಾಗಿ ಮಧ್ಯಾಹ್ನದ ವೇಳೆ ಮತದಾನಕ್ಕಾಗಿ ಮನೆಯಿಂದ ಹೊರಡುತ್ತಿದ್ದ ಮಮತಾ ಬ್ಯಾನರ್ಜಿ ಅವರು ಈ ಬಾರಿ ಬೆಳಿಗ್ಗೆ 8 ಗಂಟೆಯಿಂದಲೇ ಮತಗಟ್ಟೆ ಭೇಟಿ ಆರಂಭಿಸಿದ್ದು ವಿಶೇಷವಾಗಿತ್ತು.

ಮೇಲ್ವಿಚಾರಣೆ ನಡೆಸಿದ ಅಜಯ್ ಪಾಲ್: ವಿಶೇಷ ಪೊಲೀಸ್ ವೀಕ್ಷಕ ಅಜಯ್ ಪಾಲ್ ಶರ್ಮಾ ಅವರು ದಕ್ಷಿಣ ಪರಗಣ 24 ಜಿಲ್ಲೆಯಲ್ಲಿ ಚುನಾವಣಾ ಪ್ರಕ್ರಿಯೆಯ ಮೇಲ್ವಿಚಾರಣೆ ನಡೆಸಿದರು. 'ಸಿಂಘಂ' ಎಂದೇ ಖ್ಯಾತಿ ಪಡೆದಿರುವ ಅಜಯ್ ಪಾಲ್ ಅವರ ನಿಯೋಜನೆಗೆ ಟಿಎಂಸಿ ತೀವ್ರ ವಿರೋಧ ವ್ಯಕ್ತಪಡಿಸಿತ್ತು.

ಟಿಎಂಸಿ ಕಾರ್ಯಕರ್ತರೊಂದಿಗೆ ಬಿಜೆಪಿ ಅಭ್ಯರ್ಥಿ ಸಂವಾದ: ಬಿಜೆಪಿ ಅಭ್ಯರ್ಥಿ, ಹಿಂದೂ ಬೋಧಕ ಶ್ರುತಿ ಶೇಖರ್ ಗೋಸ್ವಾಮಿ ಅವರು ಟಿಎಂಸಿಯ ಸ್ಥಳೀಯ ಕಾರ್ಯಕರ್ತರೊಂದಿಗೆ ಆತ್ಮೀಯವಾಗಿ ಸಂವಾದ ನಡೆಸಿದರು. ಅವರ ಈ ನಡೆಗೆ ಶ್ಲಾಘನೆ ವ್ಯಕ್ತವಾಗಿದೆ.



ಬಿಜೆಪಿ ನಾಯಕ ಸುವೇಂದು ಅಧಿಕಾರಿ ಅವರ ವಿರುದ್ಧ ಟಿಎಂಸಿ ಕಾರ್ಯಕರ್ತರು ಘೋಷಣೆ ಕೂಗಿದರು —ಪಿಟಿಐ ಚಿತ್ರ



ಪೂರ್ವ ವರ್ಧಮಾನ್ ಜಿಲ್ಲೆಯಲ್ಲಿ ಮತ ಚಲಾಯಿಸಲು ಬಂದಿದ್ದ ಮತದಾರರು —ಪಿಟಿಐ ಚಿತ್ರ

ದುರ್ಬಳಕೆ ದೃಢಪಟ್ಟರೆ ಮರುಮತದಾನ

ಟೇಪ್ ಅಥವಾ ಶಾಯಿ ಬಳಸಿ ಇವಿಎಂ ದುರ್ಬಳಕೆ ಮಾಡಿರುವುದು ದೃಢಪಟ್ಟರೆ ಆ ಮತಗಟ್ಟೆಗಳಲ್ಲಿ ಮರುಮತದಾನ ನಡೆಸಲಾಗುವುದು ಎಂದು ಚುನಾವಣಾ ಆಯೋಗ ತಿಳಿಸಿದೆ.

ಜಿಲ್ಲಾ ಚುನಾವಣಾ ಅಧಿಕಾರಿ ಅಥವಾ ಚುನಾವಣಾ ವೀಕ್ಷಕರು ಪರಿಶೀಲನಾ ವರದಿ ನೀಡಿದ ಬಳಿಕವೇ ಈ ಬಗ್ಗೆ ಆದೇಶಿಸಲಾಗುವುದು. ಇಂಥ ಅಕ್ರಮಗಳ ಬಗ್ಗೆ ಆಯೋಗವು ಶೂನ್ಯ ಸಹಿಷ್ಣುತೆ ಹೊಂದಿದೆ ಎಂದು ಮುಖ್ಯ ಚುನಾವಣಾ ಅಧಿಕಾರಿ ಮನೋಜ್ ಅಗರ್ವಾಲ್ ತಿಳಿಸಿದ್ದಾರೆ.

'ಬಿಜೆಪಿಯ ಕಮಲ ಚಿಹ್ನೆಯನ್ನು ಟೇಪ್ ಅಥವಾ ಶಾಯಿ ಬಳಸಿ ಮರೆಮಾಚಲಾಗಿದೆ' ಎಂದು ಬಿಜೆಪಿ ಆರೋಪಿಸಿದ ಬೆನ್ನಲ್ಲೇ ಅಗರ್ವಾಲ್ ಅವರು ಈ ಹೇಳಿಕೆ ನೀಡಿದ್ದಾರೆ.

'ಬೂತ್ ಸಂಖ್ಯೆ 144 ಮತ್ತು 189ರಲ್ಲಿ ಪಕ್ಷದ ಚಿಹ್ನೆಯನ್ನು ಬಿಳಿ ಟೇಪ್ ಅಂಟಿಸಿ ಮರೆಮಾಡಲಾಗಿದೆ' ಎಂದು ದೂರಿ ಬಿಜೆಪಿ ಐಟಿ ಘಟಕದ ಮುಖ್ಯಸ್ಥ ಅಮಿತ್ ಮಾಳವೀಯ ಅವರು 'ಎಕ್ಸ್'ನಲ್ಲಿ ವಿಡಿಯೊ ಹಂಚಿಕೊಂಡಿದ್ದರು.

ಅಬಕಾರಿ ಪ್ರಕರಣ: 4ರಂದು ವಿಚಾರಣೆ

ನವದೆಹಲಿ (ಪಿಟಿಐ): ಅಬಕಾರಿ ನೀತಿ ಪ್ರಕರಣದಲ್ಲಿ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಮಾಜಿ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಹಾಗೂ ಇತರ 21 ಮಂದಿಯನ್ನು ಖುಲಾಸೆ ಗೊಳಿಸಿರುವ ವಿಚಾರಣಾ ನ್ಯಾಯಾಲಯದ ಆದೇಶದ ವಿರುದ್ಧ ಸಿಬಿಐ ಸಲ್ಲಿಸಿರುವ ಅರ್ಜಿಯನ್ನು ಮೇ 4ರಂದು ವಿಚಾರಣೆಗೆ ತೆಗೆದುಕೊಳ್ಳಲಾಗುವುದು ಎಂದು ದೆಹಲಿ ಹೈಕೋರ್ಟ್ ಬುಧವಾರ ತಿಳಿಸಿದೆ.

ನ್ಯಾಯಮೂರ್ತಿ ಸ್ವರ್ಣ ಕಾಂತಾ ಶರ್ಮಾ ಅವರು ವಿಚಾರಣೆಯಿಂದ ಹಿಂದೆ ಸರಿಯುವಂತೆ ಎಎಪಿಯ ನಾಯಕರು ಆಗ್ರಹಿಸಿದ್ದರೂ, ತಮ್ಮ ಪ್ರತಿಕ್ರಿಯೆ ಸಲ್ಲಿಸಲು ನ್ಯಾಯ ಮೂರ್ತಿಗಳು ಅಂತಿಮ ಅವಕಾಶ ನೀಡಿದ್ದಾರೆ.

ಪ್ರಕರಣದಿಂದ ಹಿಂದೆ ಸರಿಯುವಂತೆ ಆಗ್ರಹಿಸಿ ಎಎಪಿಯ ಮುಖಂಡರು ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾಯಮೂರ್ತಿ ಸ್ವರ್ಣ ಕಾಂತಾ ಅವರು ಏ. 20ರಂದು ವಜಾಗೊಳಿಸಿದ್ದರು. ಇದರ ನಂತರ ಕೇಜ್ರಿವಾಲ್ ಹಾಗೂ ಸಿಸೋಡಿಯಾ ನ್ಯಾಯಮೂರ್ತಿಗೆ ಪತ್ರ ಬರೆದಿದ್ದರು.

'ವೈಯಕ್ತಿಕವಾಗಿ ಹಾಗೂ ವಕೀಲರ ಮೂಲಕವೂ ನೀವಿರುವ ಪೀಠದ ಮುಂದೆ ವಿಚಾರಣೆಗೆ ಹಾಜರಾಗುವುದಿಲ್ಲ. ಮಹಾತ್ಮ ಗಾಂಧಿ ಅವರ ಸತ್ಯಾಗ್ರಹದ ಮಾರ್ಗ ಅನುಸರಿಸುತ್ತೇವೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದರು.

ಎಎಪಿಯ ಮಾಜಿ ಶಾಸಕ ದುರ್ಗೇಶ್ ಪಾಠಕ್ ಅವರು ಸಹ ಇದೇ ರೀತಿಯ ಪತ್ರವನ್ನು ನ್ಯಾಯಮೂರ್ತಿಗಳಿಗೆ ಬುಧವಾರ ಬರೆದಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ತೆಗೆದುಕೊಳ್ಳುವಂತೆ ನಿರ್ದೇಶನ ನೀಡಿರುವ ನ್ಯಾ. ಸ್ವರ್ಣ ಕಾಂತಾ, 'ಮೇ 4ರಿಂದ ವಿಚಾರಣೆ ಆರಂಭಿಸುತ್ತೇವೆ' ಎಂದು ಹೇಳಿದ್ದಾರೆ.

ಕೆಲವು ಆರೋಪಿಗಳು ಇನ್ನೂ ತಮ್ಮ ಪ್ರತಿಕ್ರಿಯೆ ಸಲ್ಲಿಸಿಲ್ಲ. ಇದನ್ನು ಗಮನಿಸಿರುವ ನ್ಯಾಯಾಲಯವು, ಮೇ 2ರ ಶನಿವಾರದೊಳಗೆ ಸಲ್ಲಿಸಲು ಕೊನೆಯ ಅವಕಾಶ ನೀಡಿದೆ.

ಗಂಗಾ ಎಕ್ಸ್‌ಪ್ರೆಸ್ ವೇ ಉದ್ಘಾಟಿಸಿ ಪ್ರಧಾನಿ ನರೇಂದ್ರ ಮೋದಿ ಆರೋಪ

'ಸಮಾಜವಾದಿ ಪಕ್ಷ ಮಹಿಳಾ ವಿರೋಧಿ'

ಹರ್ದೋಯಿ (ಉತ್ತರಪ್ರದೇಶ) (ಪಿಟಿಐ): ಸಮಾಜವಾದಿ ಪಕ್ಷದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಪ್ರಧಾನಿ ನರೇಂದ್ರ ಮೋದಿ, ಆ ಪಕ್ಷವು ಮಹಿಳಾ ವಿರೋಧಿ ಮನಃಸ್ಥಿತಿ ಹೊಂದಿದೆ. ಉತ್ತರ ಪ್ರದೇಶದ ಜನರನ್ನು ದುರುಪಯೋಗಪಡಿಸಿಕೊಳ್ಳುವ ಡಿಎಂಕೆ ಪಕ್ಷದ ಜೊತೆಗೆ ಹೊಂದಾಣಿಕೆ ಮಾಡಿಕೊಂಡಿದೆ' ಎಂದು ಆರೋಪಿಸಿದ್ದಾರೆ.

ಬುಧವಾರ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಗಂಗಾ ಎಕ್ಸ್‌ಪ್ರೆಸ್ ವೇ ಉದ್ಘಾಟಿಸಿ ಬೃಹತ್ ರ್‍ಯಾಲಿ ಉದ್ದೇಶಿಸಿ ಮಾತನಾಡಿದ ಅವರು, 'ಸಮಾಜವಾದಿ ಪಕ್ಷವು ಉತ್ತರ ಪ್ರದೇಶದ ಅಭಿವೃದ್ಧಿಯನ್ನು ಬಯಸುತ್ತಿಲ್ಲ, ರಾಜ್ಯವನ್ನು ಗತಕಾಲಕ್ಕೆ ಕೊಂಡೊಯ್ಯಲು ಪ್ರಯತ್ನಿಸುತ್ತಿದೆ' ಎಂದು ದೂರಿದ್ದಾರೆ.

'2029ರ ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ವಿಧೇಯಕದ ವಿರುದ್ಧ ಸಮಾಜವಾದಿ ಪಕ್ಷವು ಮತ ಚಲಾಯಿಸಿದೆ. ಆ ಮೂಲಕ ಉತ್ತರ ಪ್ರದೇಶದಲ್ಲಿ ಸಂಸತ್ ಸದಸ್ಯರ ಸೀಟು ಹೆಚ್ಚಳ ಮಾಡುವುದನ್ನು ವಿರೋಧಿಸಿದೆ' ಎಂದು ತಿಳಿಸಿದ್ದಾರೆ.

'ರಾಜ್ಯದ ಜನರ ಮತ ಪಡೆದು ಸಂಸತ್ ಪ್ರವೇಶಿಸಿರುವ ಇವರು, ನಿಮ್ಮನ್ನು ನಿಂದನೆ ಮಾಡುವ ಜನ ಜೊತೆಗೆ ಕೈ ಜೋಡಿಸಿದ್ದಾರೆ. ಉತ್ತರ ಪ್ರದೇಶದಲ್ಲಿ ಸೀಟು ಹೆಚ್ಚಳಕ್ಕೆ ಡಿಎಂಕೆ ಆಕ್ಷೇಪ ವ್ಯಕ್ತಪಡಿಸಿದರೆ, ಸಮಾಜವಾದಿ ಪಕ್ಷ ಕೂಡ ಇದೇ ಧಾಟಿಯಲ್ಲಿ ಮಾತನಾಡುತ್ತಿದೆ' ಎಂದು ಹೇಳಿದ್ದಾರೆ.

'ಇಂತಹ ಬೆಳವಣಿಗೆಗಳು ಸಮಾಜವನ್ನು ವಿಭಜಿಸಿ, ರಾಜ್ಯದ ಅಭಿವೃದ್ಧಿಗೆ ತಡೆಯೊಡ್ಡುವುದಾಗಿದೆ' ಎಂದು ಮೋದಿ ತಿಳಿಸಿದ್ದಾರೆ.

ಅಭಿವೃದ್ಧಿ ಪರ್ವ: ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಅಭಿವೃದ್ಧಿ ಕೆಲಸಗಳನ್ನು ಉಲ್ಲೇಖಿಸಿದ ಮೋದಿ, 'ರಾಜ್ಯವು ಈ ಹಿಂದೆ ಹಿಂದುಳಿದಿರುವ ಜೊತೆಗೆ ಕಾನೂನು–ಸುವ್ಯವಸ್ಥೆಯೂ ಕುಸಿದಿತ್ತು' ಎಂದಿದ್ದಾರೆ.

ಮುಖ್ಯಾಂಶಗಳು

- ವಿಶ್ವವು ಅಸ್ಥಿರತೆ, ಸಂಘರ್ಷದಲ್ಲಿದೆ
- ಭಾರತವು ನಿರಂತರ ಅಭಿವೃದ್ಧಿಯ ಹಾದಿಯಲ್ಲಿದೆ
- 'ದೇಶ ವಿರೋಧಿಗಳು ಅಭಿವೃದ್ಧಿ ಬಯಸುತ್ತಿಲ್ಲ'

> ಪಕ್ಷವು ಯಾವಾಗಲೂ ಜನರನ್ನು ಒಗ್ಗೂಡಿಸಲು ಕೆಲಸ ಮಾಡಿದೆ. ನಾವು ತಾರತಮ್ಯವನ್ನು ಹೊಡೆದುಹಾಕಿ, ಸಾಮರಸ್ಯ ಸೃಷ್ಟಿಸುವಲ್ಲಿ ನಂಬಿಕೆ ಇಟ್ಟಿದ್ದೇವೆ
> **ಅಖಿಲೇಶ್ ಯಾದವ್,** ಎಸ್‌ಪಿ ಮುಖ್ಯಸ್ಥ



ವಾರಾಣಸಿಯ ಕಾಶಿ ವಿಶ್ವನಾಥ ದೇವಾಲಯಕ್ಕೆ ಬುಧವಾರ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿ ಮಕ್ಕಳ ಜೊತೆ ಸಂಭಾಷಣೆ ನಡೆಸಿದರು —ಪಿಟಿಐ ಚಿತ್ರ

ಸ್ವಕ್ಷೇತ್ರದಲ್ಲಿ 14 ಕಿ.ಮೀ. ರೋಡ್‌ಶೋ

ವಾರಾಣಸಿ, ಉತ್ತರ ಪ್ರದೇಶ (ಪಿಟಿಐ): ಎರಡು ದಿನಗಳ ಉತ್ತರ ಪ್ರದೇಶ ಪ್ರವಾಸ ಕೈಗೊಂಡಿರುವ ಪ್ರಧಾನಿ ನರೇಂದ್ರ ಮೋದಿ, ಸ್ವಕ್ಷೇತ್ರ ವಾರಾಣಸಿಯಲ್ಲಿ ಬುಧವಾರ ಬೆಳಿಗ್ಗೆ 14 ಕಿ.ಮೀ. ರೋಡ್ ಶೋ ನಡೆಸಿದರು. ರಸ್ತೆಯುದ್ದಕ್ಕೂ ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದರು.

ಬನಾರಸ್ ಲೋಕೊಮೋಟಿವ್ ವರ್ಕ್ಸ್‌ನಿಂದ ಆರಂಭವಾದ ರೋಡ್ ಶೋ ಲಹರ್‌ತಾರ, ಕಚ್ಚರಿ, ಅಂಬೇಡ್ಕರ್ ಚೌರಾಹ್, ಚೌಕಾಘಾಟ್, ತೆಲಿಯಾಬಾಗ್, ಲಹುರಾಬೀರ್, ಮೈದಾಗಿನ್ ಮೂಲಕ ಸಾಗಿ ಕಾಶಿ ವಿಶ್ವನಾಥ ದೇವಾಲಯದಲ್ಲಿ ಕೊನೆಗೊಂಡಿತು. ನಂತರ ವಿಶ್ವನಾಥನ ದೇವಾಲಯಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು. ಅಲ್ಲಿಂದ ಹೊರಬಂದ ಪ್ರಧಾನಿ ಅವರನ್ನು ಸ್ಥಳೀಯ ಜನಪ್ರತಿನಿಧಿಗಳು ತ್ರಿಶೂಲ, ಡಮರುಗ ನೀಡಿ ಗೌರವಿಸಿದರು.

ಗಂಗಾ ಎಕ್ಸ್‌ಪ್ರೆಸ್ ವೇ ವೈಶಿಷ್ಟ್ಯ

594 ಕಿ.ಮೀ ಒಟ್ಟು ಉದ್ದ **₹36,230** ಕೋಟಿ ವೆಚ್ಚ

ಉದ್ಘಾಟನೆ: 29 ಏಪ್ರಿಲ್ 2029
ಮೊದಲ ಹಂತ: ಮೀರತ್‌ನಿಂದ ಪ್ರಯಾಗರಾಜ್

ಪ್ರಯಾಣದ ಸಮಯ: ಮೀರತ್ ಮತ್ತು ಪ್ರಯಾಗರಾಜ್ ನಡುವೆ 10–12 ಗಂಟೆಗಳಿಂದ ಕೇವಲ 6–7 ಗಂಟೆಗಳಿಗೆ ಇಳಿಸುತ್ತದೆ.

ಸಂಪರ್ಕಿಸುವ ಜಿಲ್ಲೆಗಳು –12

1. ಮೀರತ್
2. ಹಾಪುರ್
3. ಬುಲಂದ್‌ಶಹರ್
4. ಅಮರೋಹ
5. ಸಂಭಾಲ್
6. ಬುದೌನ್
7. ಶಹಜಹಾನ್‌ಪುರ
8. ಹರ್ದೋಯಿ
9. ಉನ್ನಾವೋ
10. ರಾಯ್‌ಬರೇಲಿ
11. ಪ್ರತಾಪ್‌ಗಢ
12. ಪ್ರಯಾಗರಾಜ್

ನಿರ್ಮಾಣದ ವಿವರ
14 ಉದ್ದನೆಯ ಸೇತುವೆಗಳು, 7 ರೈಲ್ವೆ ಮೇಲ್ಸೇತುವೆಗಳು, 32 ಫ್ಲೈಓವರ್‌ಗಳು, 450ಕ್ಕೂ ಹೆಚ್ಚು ಅಂಡರ್‌ಪಾಸ್‌ಗಳಿವೆ.

ತುರ್ತು ವಿಮಾನ ನಿಲ್ದಾಣ:
ಶಹಜಹಾನ್‌ಪುರ ಬಳಿ ವಾಯುಪಡೆಯ ವಿಮಾನಗಳ ತುರ್ತು ಭೂಸ್ಪರ್ಶಕ್ಕಾಗಿ 3.2 ಕಿ.ಮೀ ಉದ್ದದ ಏರ್‌ಸ್ಟ್ರಿಪ್ ನಿರ್ಮಾಣ

ಎಕ್ಸ್‌ಪ್ರೆಸ್‌ವೇಗಳಿಗೆ ಸಂಪರ್ಕ
ಯಮುನಾ ಎಕ್ಸ್‌ಪ್ರೆಸ್‌ವೇ, ಆಗ್ರಾ–ಲಖನೌ ಎಕ್ಸ್‌ಪ್ರೆಸ್‌ವೇ, ಜೇವಾರ್ ಲಿಂಕ್ ಎಕ್ಸ್‌ಪ್ರೆಸ್‌ವೇ, ನೋಯ್ಡಾ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ

ಗರಿಷ್ಠ ವೇಗ
120 ಕಿ.ಮೀ/ಗಂಟೆಗೆ

ಆರ್ಥಿಕ ಅಭಿವೃದ್ಧಿ
ಈ ಮಾರ್ಗದ ಉದ್ದಕ್ಕೂ ಕೈಗಾರಿಕಾ ಕಾರಿಡಾರ್‌ಗಳ ಸ್ಥಾಪನೆ, ಲಾಜಿಸ್ಟಿಕ್ ಪಾರ್ಕ್, ಗೋದಾಮು ಹಾಗೂ ಕೃಷಿ ಆಧಾರಿತ ಕೈಗಾರಿಕೆಗಳ ನಿರ್ಮಾಣಕ್ಕೆ ಆದ್ಯತೆ

ಪ್ರವಾಸೋದ್ಯಮ
ಪ್ರಯಾಗರಾಜ್‌ನಲ್ಲಿ ನಡೆಯುವ ಮಹಾಕುಂಭ ಮೇಳಕ್ಕೆ ಬರುವ ಭಕ್ತರಿಗೆ ಮತ್ತು ಪ್ರವಾಸಿಗರಿಗೆ ಇದು ಸುಗಮ ಪ್ರಯಾಣದ ಅನುಕೂಲ ಕಲ್ಪಿಸುತ್ತದೆ. ಭವಿಷ್ಯದಲ್ಲಿ ಹರಿದ್ವಾರಕ್ಕೂ ಸಂಪರ್ಕ ಕಲ್ಪಿಸಲಿದೆ.

12ನೇ ತರಗತಿ: ದೋಷಗಳು ಮತ್ತು ವಿಳಂಬಗಳ ಕುರಿತು ಸಿಬಿಎಸ್‌ಇ ಸ್ಪಷ್ಟನೆ

'ಮೌಲ್ಯಮಾಪನದಲ್ಲಿ ಸಮಸ್ಯೆಯಿಲ್ಲ'

ನವದೆಹಲಿ (ಪಿಟಿಐ): 12ನೇ ತರಗತಿ ಉತ್ತರ ಪತ್ರಿಕೆಗಳ ಮೌಲ್ಯಮಾಪನದಲ್ಲಿನ ದೋಷಗಳು ಮತ್ತು ವಿಳಂಬಗಳ ಕುರಿತ ಮಾಧ್ಯಮ ವರದಿಯನ್ನು ಕೇಂದ್ರ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಬುಧವಾರ ನಿರಾಕರಿಸಿದೆ. ಪ್ರಕ್ರಿಯೆಯು 'ಸಂಪೂರ್ಣ'ವಾಗಿ ಸಮರ್ಪಕವಾಗಿದೆ ಮತ್ತು ನಿಗದಿತ ವೇಳಾಪಟ್ಟಿಯ ಪ್ರಕಾರ ನಡೆಯುತ್ತಿದೆ ಎಂದು ಅದು ಪ್ರತಿಪಾದಿಸಿದೆ.

'ಮೊದಲೇ ಸೂಚಿಸಿದಂತೆ ಮೇ ತಿಂಗಳ ಮೂರನೇ ವಾರದಲ್ಲಿ ವಿದ್ಯಾರ್ಥಿಗಳು ಫಲಿತಾಂಶವನ್ನು ನಿರೀಕ್ಷಿಸಬಹುದು. ಹೊಸದಾಗಿ ಪರಿಚಯಿಸಲಾದ ಆನ್ ಸ್ಕ್ರೀನ್ ಮಾರ್ಕಿಂಗ್ (ಒಎಸ್‌ಎಂ) ವ್ಯವಸ್ಥೆಯಲ್ಲಿನ ತಾಂತ್ರಿಕ ಸಮಸ್ಯೆಗಳ ಬಗೆಗಿನ ಮಾಧ್ಯಮ ವರದಿಗಳು ಅವಾಸ್ತವಿಕ' ಎಂದು ಪರೀಕ್ಷಾ ನಿಯಂತ್ರಕ ಸಂಯಮ್ ಭಾರದ್ವಾಜ್ ಹೇಳಿದ್ದಾರೆ.

ಒಎಸ್‌ಎಂ ಎಂದರೆ ಉತ್ತರ ಪತ್ರಿಕೆಗಳನ್ನು ಸ್ಕ್ಯಾನ್ ಮಾಡಿ ಕಂಪ್ಯೂಟರ್ ಪರದೆಯ ಮೇಲೆ ಡಿಜಿಟಲ್ ರೂಪದಲ್ಲಿ ಮೌಲ್ಯಮಾಪನ ಮಾಡುವ ವಿಧಾನವಾಗಿದೆ. ಇದರಲ್ಲಿ ಮೌಲ್ಯಮಾಪಕರು ಪೇಪರ್ ಬದಲಿಗೆ ಕಂಪ್ಯೂಟರ್ ಬಳಸಿ ಅಂಕಗಳನ್ನು ನೀಡುತ್ತಾರೆ. ಹೀಗಾಗಿ ಅಂಕಗಳ ಲೆಕ್ಕಾಚಾರದಲ್ಲಿ ತಪ್ಪುಗಳಾಗುವುದಿಲ್ಲ ಎನ್ನಲಾಗಿದೆ.

'ಮೌಲ್ಯಮಾಪನವು ಈ ಹಿಂದಿನ ಮೌಲ್ಯಮಾಪನಕ್ಕಿಂತ ಉತ್ತಮವಾಗಿ ನಡೆಯುತ್ತಿದೆ. ಈ ವರ್ಷ ಪೂರ್ಣ ಪ್ರಮಾಣದ ಒಎಸ್‌ಎಂ ವ್ಯವಸ್ಥೆಯನ್ನು ಜಾರಿಗೆ ತಂದಿರುವುದಕ್ಕೆ ಮಂಡಳಿಯು ತುಂಬಾ ಹೆಮ್ಮೆ ಪಡುತ್ತದೆ. ಮೌಲ್ಯಮಾಪನ ಮಾಡುತ್ತಿರುವ ಶಿಕ್ಷಕರು ಕೂಡ ಇದರ ಬಗ್ಗೆ ತೃಪ್ತಿ ವ್ಯಕ್ತಪಡಿಸಿದ್ದಾರೆ' ಎಂದಿದ್ದಾರೆ.

2026ರ ಬೋರ್ಡ್ ಪರೀಕ್ಷೆಗಳಿಂದ 12ನೇ ತರಗತಿಯ ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕಾಗಿ ಒಎಸ್‌ಎಂ ಪರಿಚಯಿಸುವುದಾಗಿ ಸಿಬಿಎಸ್‌ಇ ಫೆಬ್ರುವರಿಯಲ್ಲಿ ಸುತ್ತೋಲೆ ಹೊರಡಿಸಿತ್ತು. ಮೌಲ್ಯಮಾಪನ ಪ್ರಕ್ರಿಯೆ ದಕ್ಷತೆ ಹೆಚ್ಚಿಸುವ ಗುರಿಯನ್ನು ಈ ಕ್ರಮ ಹೊಂದಿದೆ ಎಂದು ಮಂಡಳಿ ಹೇಳಿದೆ.

ಕೇಜ್ರಿವಾಲ್‌ಗೆ ಹೈಕೋರ್ಟ್ ನೋಟಿಸ್

ನವದೆಹಲಿ (ಪಿಟಿಐ): ಆಮ್ ಆದ್ಮಿ ಪಕ್ಷದ (ಎಎಪಿ) ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಅವರಿಗೆ ದೆಹಲಿ ಹೈ ಕೋರ್ಟ್ ಬುಧವಾರ ಹೊಸದಾಗಿ ನೋಟಿಸ್ ಜಾರಿಗೊಳಿಸಿದೆ.

ವಿಚಾರಣಾ ನ್ಯಾಯಾಲಯವು ಕೇಜ್ರಿವಾಲ್ ಅವರನ್ನು ಖುಲಾಸೆ ಗೊಳಿಸಿದ್ದನ್ನು ಪ್ರಶ್ನಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸ್ವರ್ಣ ಕಾಂತಾ ಶರ್ಮಾ ನೋಟಿಸ್ ಜಾರಿಗೊಳಿಸಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಏಪ್ರಿಲ್ 1ರಂದೇ ಕೇಜ್ರಿವಾಲ್ ಅವರಿಗೆ ಹೈಕೋರ್ಟ್ ನೋಟಿಸ್ ನೀಡಿತ್ತು. ಆ ನೋಟಿಸ್ ಕೇಜ್ರಿವಾಲ್ ಅವರನ್ನು ತಲುಪಿಲ್ಲ ಎಂಬುದು ನ್ಯಾಯಮೂರ್ತಿಗಳ ಗಮನಕ್ಕೆ ಬಂದಿರುವ ಕಾರಣ ಬುಧವಾರ ಹೊಸದಾಗಿ ನೋಟಿಸ್ ಜಾರಿಗೊಳಿಸಿ, ಮುಂದಿನ ವಿಚಾರಣೆ ಜುಲೈ 22ಕ್ಕೆ ನಿಗದಿಪಡಿಸಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸಂಪಾದಕೀಯ

ಸ್ವಚ್ಛ ಸಬ್ ರಿಜಿಸ್ಟ್ರಾರ್ ಕಚೇರಿ! ರಾಜಕೀಯ ಇಚ್ಛಾಶಕ್ತಿಗೆ ಪರೀಕ್ಷೆ

ಉಪ ನೋಂದಣಾಧಿಕಾರಿಗಳ (ಸಬ್ ರಿಜಿಸ್ಟ್ರಾರ್) ವರ್ಗಾವಣೆಗೆ ಕೌನ್ಸೆಲಿಂಗ್ ಪದ್ಧತಿಯೊಂದಿಗೆ 'ಡಿಮೆರಿಟ್ ಅಂಕ' (ಅನರ್ಹತಾ ಅಂಕ) ವ್ಯವಸ್ಥೆ ಪರಿಚಯಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಇದು ದಶಕಗಳಷ್ಟು ಹಳೆಯದಾದ ಸಮಸ್ಯೆಯನ್ನು ಒಪ್ಪಿಕೊಂಡು, ಅದಕ್ಕೆ ಉತ್ತರ ಕಂಡುಕೊಳ್ಳುವ ಕ್ರಮವಾಗಿದೆ. ಅಧಿಕಾರಿಗಳ ಮೇಲಿನ ಪ್ರಕರಣಗಳಿಗೆ ಅನುಗುಣವಾಗಿ ಅನರ್ಹತಾ ಅಂಕ ನೀಡುವ ಪದ್ಧತಿಯನ್ನು ಇದೇ ಮೊದಲ ಬಾರಿಗೆ ಪರಿಚಯಿಸಲಾಗುತ್ತಿದೆ. ಇದರ ಅನ್ವಯ ಕ್ರಿಮಿನಲ್ ಪ್ರಕರಣಗಳು ಅಥವಾ ಲೋಕಾಯುಕ್ತ ಬಲೆಗೆ ಬಿದ್ದ ಅಧಿಕಾರಿಗಳಿಗೆ ನಾಲ್ಕು ಅಂಕಗಳು, ಕಾನೂನು ಕ್ರಮಕ್ಕೆ ಒಳಗಾದವರಿಗೆ ಮೂರು ಅಂಕ, ಇಲಾಖಾ ತನಿಖೆಯಲ್ಲಿ ಶಿಕ್ಷೆಗೆ ಒಳಗಾದವರಿಗೆ ಎರಡು ಅಂಕ ಮತ್ತು ತನಿಖೆ ಪ್ರಗತಿಯಲ್ಲಿದ್ದವರಿಗೆ ಒಂದು ಅಂಕ ನೀಡಲಾಗುತ್ತದೆ. ಈ ಅಂಕಗಳನ್ನು ಆಧರಿಸಿ ವರ್ಗಾವಣೆಗೆ ಆಯ್ಕೆ ಮಾಡಿಕೊಳ್ಳುವ ಸ್ಥಳ ನಿಗದಿಯಾಗಲಿದೆ. ಈ ಮೂಲಕ ಪ್ರಾಮಾಣಿಕತೆಗೂ ವರ್ಗಾವಣೆಗೂ ಸಂಬಂಧ ಬೆಸೆಯಲು ಹೊರಟಿರುವ ಸರ್ಕಾರದ ಪ್ರಯತ್ನ ತಾತ್ತ್ವಿಕವಾಗಿ ಒಂದು ಮಹತ್ವದ ನಡೆಯಾಗಿದೆ. ಸಬ್ ರಿಜಿಸ್ಟ್ರಾರ್ ಕಚೇರಿಗಳು– ವಿಶೇಷವಾಗಿ ಬೆಂಗಳೂರಿನಲ್ಲಿನ ಕಚೇರಿಗಳು– ಬಹಳ ಕಾಲದವರೆಗೂ ಖಾಸಗಿ ಸಾಮ್ರಾಜ್ಯಗಳಂತೆ ಕಾರ್ಯನಿರ್ವಹಿಸುತ್ತಿದ್ದವು. ಪಾರದರ್ಶಕವಲ್ಲದ ಮಾರ್ಗಗಳ ಮೂಲಕ ಹುದ್ದೆಗಳನ್ನು ಪಡೆದುಕೊಳ್ಳುವ ಹಾಗೂ ಉಳಿಸಿಕೊಳ್ಳುವ ವ್ಯವಸ್ಥೆ ಜಾರಿಯಲ್ಲಿತ್ತು. ಆ ವ್ಯವಸ್ಥೆಯನ್ನು ಬದಲಿಸಿ, ಪ್ರಭಾವ ಮತ್ತು ಶಿಫಾರಸುಗಳಿಗೆ ಅವಕಾಶ ಕಲ್ಪಿಸದಿರುವ ಹಾಗೂ ಪ್ರಾಮಾಣಿಕ ಅಧಿಕಾರಿಗಳಿಗೆ ಹೆಚ್ಚಿನ ಮೌಲ್ಯದ ಸ್ಥಳಗಳಿಗೆ ವರ್ಗಾವಣೆ ಮಾಡುವ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರ ಉದ್ದೇಶ ಸರಿಯಾದುದಾಗಿದೆ. ಉದ್ದೇಶಿತ ಕ್ರಮಗಳನ್ನು ಪ್ರಾಮಾಣಿಕತೆಯಿಂದ ಅಕ್ಷರಶಃ ಅನುಷ್ಠಾನಗೊಳಿಸಿದಲ್ಲಿ, ನೋಂದಣಿ ಮತ್ತು ಮುದ್ರಾಂಕ ಇಲಾಖೆಯನ್ನು ವರ್ಷಗಳಿಂದ ಆವರಿಸಿಕೊಂಡಿರುವ ಪ್ರಭಾವಿ ವಲಯಗಳನ್ನು ತೊಡೆದುಹಾಕುವುದು ಸಾಧ್ಯವಾಗುತ್ತದೆ.



ಸಬ್ ರಿಜಿಸ್ಟ್ರಾರ್ ಕಚೇರಿಗಳಿಗೆ ಅಂಟಿಕೊಂಡಿರುವ ಕಳಂಕವನ್ನು ತೊಡೆದುಹಾಕಲು ಸರ್ಕಾರ ಮುಂದಾಗಿದೆ. ಈ ಪ್ರಯತ್ನಕ್ಕೆ ನೀತಿಯಷ್ಟೇ ಸಾಲದು, ರಾಜಕೀಯ ಇಚ್ಛಾಶಕ್ತಿಯೂ ಅಗತ್ಯ.

ಕೌನ್ಸೆಲಿಂಗ್ ಆಧಾರಿತ ವರ್ಗಾವಣೆ ಹೊಸತೇನೂ ಅಲ್ಲ. ಕಳೆದ ವರ್ಷವೇ ಈ ವ್ಯವಸ್ಥೆಯನ್ನು ಪರಿಚಯಿಸಲಾಗಿತ್ತು ಹಾಗೂ ಕೆಲವು ಅಧಿಕಾರಿಗಳು ಅನೇಕ ವರ್ಷಗಳ ಕಾಲ ಒಂದೇ ಕಡೆ ಕಾರ್ಯನಿರ್ವಹಿಸುತ್ತಿರುವ ವಿಷಯವನ್ನು ಸರ್ಕಾರ ಪ್ರಸ್ತಾಪಿಸಿತ್ತು. ವ್ಯವಸ್ಥೆಯಲ್ಲಿ ಪಾರದರ್ಶಕ ಬದಲಾವಣೆ ತರುವ ಭರವಸೆಯನ್ನೂ ನೀಡಲಾಗಿತ್ತು. ಈ ಬಾರಿಯೂ ಹಳೆಯ ಕಳವಳ ಮತ್ತು ಭರವಸೆಯನ್ನು ಪುನರುಚ್ಚರಿಸಲಾಗುತ್ತಿದೆ. ಪ್ರಮುಖ ಹುದ್ದೆಗಳಲ್ಲಿ ಅವಧಿಗೂ ಮೀರಿ ನೆಲಸಿದ್ದ ಅಧಿಕಾರಿಗಳು ಈಗಲೂ ಮುಂದುವರಿದಿದ್ದಾರೆ ಎನ್ನುವುದಾದರೆ, ಕಳೆದ ವರ್ಷದ ಕೌನ್ಸೆಲಿಂಗ್ ಪ್ರಕ್ರಿಯೆ ಪ್ರದರ್ಶನಕ್ಕಾಗಿ ನಡೆಯಿತೇ ಅಥವಾ ಅದರಿಂದ ಏನಾದರೂ ಸಾಧನೆ ಆಗಿದೆಯೇ ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಫಲಿತಾಂಶಗಳಿಲ್ಲದ ಮಾತು, ಭರವಸೆ, ಘೋಷಣೆಗಳ ಮುಂದುವರಿಕೆಯು ವ್ಯವಸ್ಥೆಯನ್ನು ಆಕ್ರಮಿಸಿಕೊಂಡಿರುವ ವಲಯಗಳ ಪ್ರತಿರೋಧದ ಶಕ್ತಿಯನ್ನು ಸೂಚಿಸುವಂತಿದೆ. ಸಬ್ ರಿಜಿಸ್ಟ್ರಾರ್ ಕಚೇರಿಗಳು ಭ್ರಷ್ಟಾಚಾರಕ್ಕೆ ಪರ್ಯಾಯ ಹೆಸರುಗಳಾಗಿವೆ ಹಾಗೂ ಅವುಗಳು ಮಧ್ಯವರ್ತಿಗಳ ನಿಯಂತ್ರಣಕ್ಕೊಳಪಟ್ಟಿವೆ. ಈ ಮಧ್ಯವರ್ತಿಗಳು ಅಧಿಕಾರಿಗಳೊಂದಿಗೆ ಶಾಮೀಲಾಗಿ ಬಲಿಷ್ಠವಾಗಿ ಬೆಳೆದಿದ್ದಾರೆ. ಅಪವಿತ್ರ ಮೈತ್ರಿಯನ್ನು ಭಂಗಗೊಳಿಸುವ ಪ್ರಯತ್ನವನ್ನು ಅಧಿಕಾರದಲ್ಲಿ ಇರುವ ರಾಜಕಾರಣಿಗಳು ಮಾಡಿರುವುದು ಕೂಡ ವಿರಳ. ಸಮಸ್ಯೆಯ ಮುಂದುವರಿಕೆಯು ರೋಗನಿರ್ಣಯದ ಕೊರತೆಯ ಬದಲು, ನೀತಿನಿಯಮಗಳ ಜಾರಿಯ ಕೊರತೆಯನ್ನು ಸೂಚಿಸುತ್ತದೆ. ನೀತಿನಿಯಮಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕಟ್ಟುನಿಟ್ಟಾದ ಪರಿಶೀಲನೆ, ಸಕಾಲಿಕ ಲೆಕ್ಕಪರಿಶೋಧನೆ ಮತ್ತು ತಪ್ಪುಗಳಿಗೆ ಕಠಿಣ ಹಾಗೂ ಖಚಿತ ಶಿಕ್ಷೆಯೊಂದಿಗೆ ವ್ಯವಸ್ಥೆಯನ್ನು ಸರಿಪಡಿಸುವ ರಾಜಕೀಯ ಇಚ್ಛಾಶಕ್ತಿ ಪ್ರದರ್ಶಿಸದೆ ಹೋದಲ್ಲಿ, ಪ್ರಸ್ತುತ ತರಲು ಹೊರಟಿರುವ ಸುಧಾರಣೆಯೂ ಹಿಂದಿನಂತೆ ಹಳ್ಳ ಹಿಡಿಯುವ ಸಾಧ್ಯತೆಯಿದೆ.

ರಾಜಕೀಯ ಸಂಕಲ್ಪದ ಕೊರತೆಯಿಂದ ಒಳ್ಳೆಯ ಯೋಜನೆಗಳೂ ಹಳಿ ತಪ್ಪಬಹುದು ಎನ್ನುವುದಕ್ಕೆ 'ಇ–ಖಾತಾ' ಯೋಜನೆ ಎಚ್ಚರಿಕೆಯ ಪಾಠದಂತಿದೆ. ಆಸ್ತಿ ದಾಖಲೆಗಳಿಗೆ ಸಂಬಂಧಿಸಿದ ಭ್ರಷ್ಟಾಚಾರ ತಡೆಗಟ್ಟುವ ಮಹತ್ವಾಕಾಂಕ್ಷೆಯಿಂದ ಜಾರಿಗೆ ತರಲಾದ ಈ ಯೋಜನೆ, ಹೊಸ ಅಕ್ರಮಗಳಿಗೆ ದಾರಿಗಳನ್ನು ಸೃಷ್ಟಿಸಿತು. ತಂತ್ರಜ್ಞಾನ ಮತ್ತು ನೀತಿಗಳಿಂದಷ್ಟೇ ಪಟ್ಟಭದ್ರ ಹಿತಾಸಕ್ತಿಗಳನ್ನು ಮಣಿಸಲು ಸಾಧ್ಯವಿಲ್ಲ ಎನ್ನುವುದಕ್ಕೆ 'ಇ–ಖಾತಾ' ಸಾಕ್ಷಿಯಂತಿದೆ. ವರ್ಗಾವಣೆಗೆ ಸಂಬಂಧಿಸಿದ ಕೌನ್ಸೆಲಿಂಗ್ ಕೂಡ ವೈಫಲ್ಯಗಳ ಪಟ್ಟಿಗೆ ಸೇರಬಾರದು. ಸಕಾಲಿಕ ವರ್ಗಾವಣೆ, ಪ್ರಾಮಾಣಿಕ ಅಧಿಕಾರಿಗಳಿಗೆ ರಕ್ಷಣೆ–ಮಾನ್ಯತೆ ಹಾಗೂ ಮಧ್ಯವರ್ತಿ ವ್ಯವಸ್ಥೆಯನ್ನು ಕೊನೆಗೊಳಿಸುವ ಪ್ರಯತ್ನಗಳಿಂದ ವ್ಯವಸ್ಥೆಯಲ್ಲಿ ಹೊಸ ಗಾಳಿ–ಬೆಳಕು ತರಬಹುದು. ಒಳ್ಳೆಯ ಉದ್ದೇಶವಿರುವ ಯೋಜನೆಗಳಷ್ಟೇ ರಾಜ್ಯಕ್ಕೆ ಸಾಕಾಗವು. ಅವುಗಳೊಂದಿಗೆ, ಶಿಕ್ಷೆಯ ಭಯವಿಲ್ಲದೆ ದಶಕಗಳಿಂದ ಭ್ರಷ್ಟಾಚಾರವನ್ನೇ ಸಹಜಸ್ಥಿತಿಯನ್ನಾಗಿ ಮಾಡಿರುವ ವ್ಯವಸ್ಥೆಯನ್ನು ಕೊನೆಗೊಳಿಸುವ ರಾಜಕೀಯ ದೃಢ ಸಂಕಲ್ಪ ಅಗತ್ಯವಾಗಿದೆ.

ಚಾಟಿ

'ಸಿಸ್ಟಮ್'ಗಳ ಕಾರುಬಾರು!



ಕಚೇರಿಗಳಲ್ಲಿ ಎದುರಾಗುವ ಸಾಮಾನ್ಯ ಉತ್ತರಗಳು: ಸಿಸ್ಟಮ್ ವರ್ಕ್ ಆಗ್ತಾ ಇಲ್ಲ... ಸಿಸ್ಟಮ್ ತಗೋತಾ ಇಲ್ಲ... ನಂದೇನೂ ಇಲ್ಲ, ಸಿಸ್ಟಮ್ ತಾನೇ ಲಾಕ್ ಮಾಡಿಬಿಡುತ್ತೆ... ಎಲ್ಲೆಡೆ ಸಿಸ್ಟಮ್‌ಗಳದ್ದೇ ಕಾರುಬಾರು! ರಕ್ತ–ಮಾಂಸ, ಮೂಳೆ–ಮಜ್ಜೆ, ಬುದ್ಧಿ–ಹೃದಯ ಇರುವ ಮನುಷ್ಯ ಗತಿಸಿ ಬಹಳ ಸಮಯ ಆಗಿದೆ.

ಸವಿತಾ ನಾಗಭೂಷಣ, ಕವಯಿತ್ರಿ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಬೆಂಗಳೂರಿನಲ್ಲಿ ರಸ್ತೆ ಗುಂಡಿಗಳ ಕಾರಣ ಅಪಘಾತದಲ್ಲಿ ಯಾರೂ ಸತ್ತಿಲ್ಲ, ಒಬ್ಬರೂ ಗಾಯಗೊಂಡಿಲ್ಲ ಎಂದು ಸರ್ಕಾರ ಹೇಳಿದೆ. ಅಧಿಕಾರಿಗಳು ನೇತ್ರಾಲಯಕ್ಕೆ ಹೋಗಿ ಕಣ್ಣು ಸರಿ ಮಾಡಿಸಿಕೊಳ್ಳಲಿ. ಬೆಂಗಳೂರಿನಲ್ಲಿ ರಸ್ತೆ ಗುಂಡಿಗಳಿಂದ 891 ಜನರು ಸಾವನ್ನಪ್ಪಿದ್ದಾರೆ ಎಂಬ ವರದಿ ಇದೆ.

ಛಲವಾದಿ ನಾರಾಯಣಸ್ವಾಮಿ, ವಿಧಾನಪರಿಷತ್ತಿನ ವಿಪಕ್ಷ ನಾಯಕ

25 ವರ್ಷಗಳ ಹಿಂದೆ

ಸೋಮವಾರ, 30-4-2001

• **ದ್ವೇಷಭಾವ: ಸೋನಿಯಾ ಆರೋಪ ನಿರಾಧಾರ**

ನವದೆಹಲಿ, ಏ. 29– ತಮ್ಮ ಕುಟುಂಬದ ವಿರುದ್ಧ ಕೇಂದ್ರ ಸರ್ಕಾರ ದ್ವೇಷಭಾವನೆ ತಳೆದಿದೆ ಎಂಬ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಆರೋಪ ನಿರಾಧಾರ ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಇಂದು ಇಲ್ಲಿ ಸ್ಪಷ್ಟಪಡಿಸಿದ್ದಾರೆ.

ಲೋಕಸಭೆಯ ಪ್ರತಿಪಕ್ಷದ ನಾಯಕಿ ಸೋನಿಯಾ, ಸಂಸತ್ ಕಲಾಪದ ಕೊನೆಯ ದಿನ ಭಾವೋದ್ರೇಕಕ್ಕೆ ಒಳಗಾಗಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸುವಂತಾಗಲು ನಾನು ಆಕ್ಷೇಪಾರ್ಹವಾದ ಏನನ್ನೂ ಹೇಳಿಲ್ಲ ಎಂದು ವಾಜಪೇಯಿ ಅವರು ತಮ್ಮ ಹೇಳಿಕೆಯಲ್ಲಿ ಅಭಿಪ್ರಾಯಪಟ್ಟಿದ್ದಾರೆ.

75 ವರ್ಷಗಳ ಹಿಂದೆ

ಸೋಮವಾರ, 30-4-1951

• **ಮಂತ್ರಿಮಂಡಲ ವಿಸ್ತರಣೆ: ಐಕ್ಯತೆ ಸಾಧನೆ ಬಗ್ಗೆ ಆಶೋದಯ**

ವಾಣೀವಿಲಾಸಪುರ, ಏ.29– ಕಾಂಗ್ರೆಸ್ಸಿನಲ್ಲಿ ಐಕ್ಯತೆ ಸಾಧನೆ ಬಗ್ಗೆ ಶುಭ ಸಮಾಚಾರ ಕೇಳಲು ಕಾತುರವಾಗಿ ಸೇರಿದ್ದ ಎಂ.ಪಿ.ಸಿ.ಸಿ. ಸಭೆ ನಿರಾಶೆಗೊಂಡು ಮುಕ್ತಾಯಗೊಳ್ಳುವ ಮುನ್ನ 'ಏನಾದರೂ ಆಗಲಿ, ಒಂದು ತೀರ್ಮಾನಕ್ಕೆ ಬಂದು ಐಕ್ಯತೆ ಸಾಧಿಸಲು ಸಂಕಲ್ಪ ಮಾಡಿದ್ದೇವೆ' ಎಂಬ ಭರವಸೆಯನ್ನು ತನ್ನ ನಾಯಕ ವರ್ಗದಿಂದ ಪಡೆಯಿತು.

ಶ್ರೀ ಕೆ. ಹನುಮಂತಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಮೈಸೂರು ಕಾಂಗ್ರೆಸ್ಸಿನಲ್ಲಿ ಅರ್ಥಾತ್ ಶಾಸನಸಭಾ ಕಾಂಗ್ರೆಸ್ ಪಕ್ಷದಲ್ಲಿ ಐಕ್ಯತೆ ಸಾಧಿಸಲು ಕಳೆದ ಸುಮಾರು 1 ತಿಂಗಳಿಂದ ನಡೆಯುತ್ತಿದ್ದ ಮಾತುಕತೆಗಳ ಫಲವಾಗಿ ಮೈಸೂರು ಮಂತ್ರಿಮಂಡಲ ಸದ್ಯದಲ್ಲೇ ವಿಸ್ತಾರಗೊಳ್ಳುವುದೆಂದು ಖಚಿತವಾಗಿ ಗೊತ್ತಾಗಿದೆ. ಐಕ್ಯತೆಯ ಸಾಧನೆಗೆ ಮಂತ್ರಿಮಂಡಲ ವಿಸ್ತರಣೆಯ ಪರಿಹಾರ ಮಾರ್ಗ ನಿರ್ಧಾರವಾಗಿದೆ.

ಮರುವಿಂಗಡಣೆ: ದಕ್ಷಿಣದ ತಪ್ಪು!



ಸೂರ್ಯ–ನಮಸ್ಕಾರ

ಎ. ಸೂರ್ಯ ಪ್ರಕಾಶ್

> ಪೂರ್ವಗ್ರಹ ನಿಲುವುಗಳಿಂದ ಆಗಬಹುದಾದ ಅನಾಹುತಕ್ಕೆ 'ಕ್ಷೇತ್ರಗಳ ಮರುವಿಂಗಡಣೆ'ಗೆ ಸಂಬಂಧಿಸಿದಂತೆ ದಕ್ಷಿಣ ಭಾರತದ ರಾಜ್ಯಗಳ ವರ್ತನೆ ಉದಾಹರಣೆಯಂತಿದೆ. ಕೇಂದ್ರ ಸರ್ಕಾರದ ಬಗ್ಗೆ ಇರುವ ಅವಿಶ್ವಾಸವನ್ನು ಕಾರಣವಾಗಿಸಿಕೊಂಡು, ಸಂವಿಧಾನ ತಿದ್ದುಪಡಿ ಮಸೂದೆಯನ್ನು ಸೋಲಿಸಿದ ದಕ್ಷಿಣದ ರಾಜ್ಯಗಳ ನಡೆಯು ಮುಂದೆ ಅವುಗಳಿಗೇ ತಿರುಗುಬಾಣ ಆಗಬಹುದು.

ಕ್ಷೇತ್ರಗಳ ಮರುವಿಂಗಡಣೆ (ಡಿಲಿಮಿಟೇಶನ್) ಉದ್ದೇಶದ ಸಂವಿಧಾನ ತಿದ್ದುಪಡಿ ಯತ್ನವನ್ನು ಸೋಲಿಸಲು ಕಾಂಗ್ರೆಸ್ ನೇತೃತ್ವದ ವಿರೋಧ ಪಕ್ಷಗಳ ಒಕ್ಕೂಟವನ್ನು ಬೆಂಬಲಿಸಲು ದಕ್ಷಿಣ ಭಾರತದ ಬಹುತೇಕ ರಾಜಕೀಯ ಮುಖಂಡರು ತೆಗೆದುಕೊಂಡ ತೀರ್ಮಾನವು ದಕ್ಷಿಣದ ಎಲ್ಲ ರಾಜ್ಯಗಳ ಪಾಲಿಗೆ ಬಹುದೊಡ್ಡ ಅಪರಾಧವಾಗಿ ಪರಿಣಮಿಸಬಹುದು.

ಕಾಂಗ್ರೆಸ್, ಡಿಎಂಕೆ ಮತ್ತು ಸಿಪಿಎಂ ಪಕ್ಷಗಳ ದಕ್ಷಿಣ ಭಾರತದ ನಾಯಕರು ಸರಿಯಾಗಿ ಆಲೋಚನೆ ಮಾಡುವಲ್ಲಿ ವಿಫಲರಾದುದು ಹಾಗೂ ತಿದ್ದುಪಡಿಯು ಒಳ್ಳೆಯ ರೀತಿಯಲ್ಲಿ ಅನುಷ್ಠಾನಕ್ಕೆ ಬರುವಂತೆ ನೋಡಿಕೊಳ್ಳುವಲ್ಲಿ ಸೋತಿರುವುದು ದುರದೃಷ್ಟಕರ ಸಂಗತಿ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಮೇಲೆ ಅವರಿಗೆ ವಿಶ್ವಾಸದ ಕೊರತೆ ಇರುವುದು ಈ ಕ್ರಮಕ್ಕೆ ಮುಖ್ಯ ಕಾರಣ ಎಂಬುದು ಸ್ಪಷ್ಟ.

ಇದಕ್ಕೆ ಒಂದಿಷ್ಟು ವಿವರಣೆ ನೀಡಬೇಕು. 'ಪ್ರತಿ ರಾಜ್ಯಕ್ಕೂ ಲೋಕಸಭೆಯಲ್ಲಿ ಸಂಖ್ಯಾಬಲ ಒದಗಿಸಬೇಕು, ಆ ಸಂಖ್ಯಾಬಲ ಹಾಗೂ ಆ ರಾಜ್ಯದ ಜನಸಂಖ್ಯೆಯ ನಡುವಿನ ಅನುಪಾತವು ಎಷ್ಟು ಸಾಧ್ಯವೋ ಅಷ್ಟರಮಟ್ಟಿಗೆ ಎಲ್ಲ ರಾಜ್ಯಗಳಿಗೂ ಒಂದೇ ಆಗಿರಬೇಕು' ಎಂದು ಸಂವಿಧಾನದ 81ನೆಯ ವಿಧಿಯಲ್ಲಿ ಹೇಳಲಾಗಿದೆ. ಪ್ರತಿ ಜನಗಣತಿ ಪೂರ್ಣಗೊಂಡ ನಂತರ ಲೋಕಸಭೆಯಲ್ಲಿ ರಾಜ್ಯಗಳಿಗೆ ನಿಗದಿ ಮಾಡುವ ಸಂಖ್ಯೆ, ರಾಜ್ಯಗಳ ಕ್ಷೇತ್ರವಾರು ವಿಂಗಡಣೆಯನ್ನು ಸಂಸತ್ತು ಕಾನೂನಿನ ಮೂಲಕ ತೀರ್ಮಾನಿಸುವ ಪ್ರಾಧಿಕಾರದಿಂದ ಮತ್ತು ಆ ಕಾನೂನಿನ ಮೂಲಕ ತೀರ್ಮಾನಿಸುವ ವಿಧಾನದಲ್ಲಿ ನಡೆಸಬೇಕು ಎಂದು 82ನೆಯ ವಿಧಿಯು ಹೇಳುತ್ತದೆ.

ಹೀಗಾಗಿ, ವಾಸ್ತವ ಸಂಗತಿಗಳನ್ನು ಪರಿಗಣಿಸಿ, ಸ್ಥಾನಗಳನ್ನು ಶೇ 50ರಷ್ಟು ಹೆಚ್ಚು ಮಾಡುವ ಸೂತ್ರವನ್ನು ಅನುಷ್ಠಾನಕ್ಕೆ ತರಬೇಕು ಹಾಗೂ ಜನಸಂಖ್ಯೆಯನ್ನು ಮಾತ್ರವೇ ಪರಿಗಣಿಸಬಾರದು ಎಂದು ಕ್ಷೇತ್ರ ಮರುವಿಂಗಡಣಾ ಆಯೋಗಕ್ಕೆ ಹೇಳುವ ಅವಕಾಶವು ಸರ್ಕಾರ ಮತ್ತು ಸಂಸತ್ತಿಗೆ ಇದೆ. ಸಂಖ್ಯಾಬಲವನ್ನು ಶೇ 50ರಷ್ಟು ಹೆಚ್ಚಿಸಲಾಗುತ್ತದೆ ಎಂದು ಸರ್ಕಾರವು ಸಂಸತ್ತಿನಲ್ಲಿ ನೀಡಿದ್ದ ಭರವಸೆಯ ಬಗ್ಗೆ ಎಲ್ಲರೂ ಗಂಭೀರವಾದ ನೋಟ ಹರಿಸಬೇಕಾಗಿತ್ತು.

1971ರ ನಂತರದಲ್ಲಿ ದೇಶದಲ್ಲಿ ಕ್ಷೇತ್ರಗಳ ಮರುವಿಂಗಡಣೆ ಆಗಿಲ್ಲ, ಲೋಕಸಭಾ ಕ್ಷೇತ್ರಗಳ ಸಂಖ್ಯೆಯು ಹೆಚ್ಚಳ ಕಂಡಿಲ್ಲ. ಹೀಗಾಗಿ ಭಾರತೀಯ ಜನತಾ ಪಕ್ಷದ (ಬಿಜೆಪಿ) ನಾಯಕ ದಿವಂಗತ ಮದನ್‌ಲಾಲ್ ಖುರಾನಾ ಸೇರಿದಂತೆ ಹಲವರು ಹೊಸದಾಗಿ ಕ್ಷೇತ್ರ ಮರುವಿಂಗಡಣೆ ಆಗಬೇಕು, ಲೋಕಸಭೆಯ ಕ್ಷೇತ್ರಗಳ ಸಂಖ್ಯೆಯು 800ಕ್ಕಿಂತ ಜಾಸ್ತಿ ಆಗಬೇಕು ಎಂದು 2001ರಲ್ಲಿ ಆಗ್ರಹಿಸಿದ್ದರು. ಆಗ ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿಯಾಗಿದ್ದರು.

ಆದರೆ ದಕ್ಷಿಣ ಭಾರತದ ಪ್ರಮುಖ ನಾಯಕರಾದ ಚಂದ್ರಬಾಬು ನಾಯ್ಡು, ರಾಮಕೃಷ್ಣ ಹೆಗಡೆ, ಕರುಣಾನಿಧಿ ಮತ್ತಿತರರು, ಕ್ಷೇತ್ರ ಮರುವಿಂಗಡಣೆಯನ್ನು ಜನಸಂಖ್ಯೆಯನ್ನು ಮಾತ್ರವೇ ಆಧಾರವಾಗಿ ಇರಿಸಿಕೊಂಡು ಮಾಡುವುದಕ್ಕೆ ವಿರೋಧ ವ್ಯಕ್ತಪಡಿಸಿದರು. ಏಕೆಂದರೆ, ಕೇಂದ್ರ ಸರ್ಕಾರ ರೂಪಿಸಿದ ಜನಸಂಖ್ಯಾ ನಿಯಂತ್ರಣ ಯೋಜನೆಗಳನ್ನು ಅನುಸರಿಸಿದ ದಕ್ಷಿಣದ ರಾಜ್ಯಗಳಿಗೆ ದೊಡ್ಡ ನಷ್ಟ ಆಗುತ್ತದೆ ಎಂದು ಅವರು ಹೇಳಿದ್ದರು. ಆ ಹೊತ್ತಿಗೆ ದಕ್ಷಿಣದ ರಾಜ್ಯಗಳ ದಶವಾರ್ಷಿಕ ಜನನ ಪ್ರಮಾಣವು ಉತ್ತರ ಭಾರತದ ರಾಜ್ಯಗಳಿಗೆ ಹೋಲಿಸಿದರೆ ಬಹಳ ಕಡಿಮೆ ಆಗಿತ್ತು. ಸಂವಿಧಾನದ 81ನೆಯ ವಿಧಿಯಲ್ಲಿ ಹೇಳಿರುವ ಸೂತ್ರವನ್ನು ಪಾಲನೆ ಮಾಡಿದ್ದರೆ ಉತ್ತರ ಭಾರತದ ರಾಜ್ಯಗಳಿಗೆ ಸಿಗುವ ಸಂಖ್ಯಾಬಲಕ್ಕೆ ಹೋಲಿಸಿದರೆ, ದಕ್ಷಿಣ ಭಾರತದ ರಾಜ್ಯಗಳಿಗೆ ಸಿಗುವ ಸಂಖ್ಯಾಬಲದ ಪ್ರಮಾಣವು ಬಹಳ ಕಡಿಮೆ ಆಗುತ್ತಿತ್ತು. ಚಂದ್ರಬಾಬು ನಾಯ್ಡು ಅವರು ಕ್ಷೇತ್ರ ಮರುವಿಂಗಡಣೆಯನ್ನು ತಡೆಯಲು ಸಂಸದರ ನಿಯೋಗವೊಂದನ್ನು ಪ್ರಧಾನಿ ವಾಜಪೇಯಿ ಅವರಲ್ಲಿಗೆ ಕಳುಹಿಸಿದರು. ಬೇಡಿಕೆಯನ್ನು ಒಪ್ಪಿಕೊಂಡ ವಾಜಪೇಯಿ ಅವರು, 81ನೆಯ ವಿಧಿಗೆ ತಿದ್ದುಪಡಿ ತಂದು, ಲೋಕಸಭೆಯ ಸದಸ್ಯರ ಸಂಖ್ಯೆಯನ್ನು '2026ರ ನಂತರದ ಮೊದಲ ಜನಗಣತಿಯ ಅಂಕಿ–ಅಂಶಗಳು ಪ್ರಕಟ ಆಗುವವರೆಗೆ' 543ರಲ್ಲಿಯೇ ತಡೆಹಿಡಿಯಲು ನಿರ್ಧರಿಸಿದರು.

ಈಗ ನಾವು 2026ನೆಯ ಇಸವಿಯಲ್ಲಿದ್ದೇವೆ. ಹೊಸದಾಗಿ ಜನಗಣತಿ ಆಗಬೇಕಿದೆ. ದಕ್ಷಿಣದ ರಾಜ್ಯಗಳ ವಾದಕ್ಕೆ ಸ್ಪಂದಿಸಿದ ಮೋದಿ ನೇತೃತ್ವದ ಸರ್ಕಾರವು 81ನೆಯ ವಿಧಿಯಲ್ಲಿ ಹೇಳಿರುವ ಸೂತ್ರವನ್ನು ಮೀರಿ, ಸಂವಿಧಾನ ತಿದ್ದುಪಡಿಯೊಂದಿಗೆ ದಕ್ಷಿಣದ ರಾಜ್ಯಗಳಿಗೆ ಹೊಸದೊಂದು ಕೊಡುಗೆ ನೀಡಲು ಮುಂದಾಯಿತು. ದಕ್ಷಿಣದ ಎಲ್ಲ ರಾಜ್ಯಗಳ ಲೋಕಸಭಾ ಸಂಖ್ಯಾಬಲವನ್ನು ಶೇ 50ರಷ್ಟು ಹೆಚ್ಚಿಸುವ ಪ್ರಸ್ತಾವ ಅದು. ಅಂದರೆ, ಉತ್ತರ ಭಾರತದ ರಾಜ್ಯಗಳ ಜನಸಂಖ್ಯೆಯು (ನಿಂದನಾತ್ಮಕವಾಗಿ 'ಬಿಮಾರು' ಎಂದು ಈ ರಾಜ್ಯಗಳನ್ನು ಕರೆಯಲಾಗುತ್ತದೆ) ಕಳೆದ ಐವತ್ತು ವರ್ಷಗಳಲ್ಲಿ ಹೆಚ್ಚಳ ಕಂಡಿದ್ದರೂ, ಆ ರಾಜ್ಯಗಳಿಗೆ ಅದರ ಅನುಕೂಲ ಸಿಗುವುದಿಲ್ಲ. ಅಂದರೆ, 81ನೆಯ ವಿಧಿಯಲ್ಲಿ ಹೇಳಿರುವ 'ಪ್ರತಿ ರಾಜ್ಯದ (ಲೋಕಸಭಾ) ಸಂಖ್ಯಾಬಲ ಹಾಗೂ ಆ ರಾಜ್ಯದ ಜನಸಂಖ್ಯೆಯ ನಡುವಿನ ಅನುಪಾತವು ಎಷ್ಟು ಸಾಧ್ಯವೋ ಅಷ್ಟರಮಟ್ಟಿಗೆ ಎಲ್ಲ ರಾಜ್ಯಗಳಿಗೂ ಒಂದೇ ಆಗಿರಬೇಕು' ಸೂತ್ರವನ್ನು ಪಾಲಿಸುವುದಿಲ್ಲ ಎಂದು ಆ ಪ್ರಸ್ತಾವ ಹೇಳಿತ್ತು.

ಇದನ್ನು ಸಂಸತ್ತು ಒಪ್ಪಿಕೊಂಡಿದ್ದರೆ ದಕ್ಷಿಣ ಭಾರತದ ರಾಜ್ಯಗಳಿಗೂ ಅನುಕೂಲ ಆಗುತ್ತಿತ್ತು. ಆದರೆ, ದಕ್ಷಿಣ ಭಾರತದ ರಾಜ್ಯಗಳ ನಾಯಕರು ಕುರುಡಾಗಿ ವರ್ತಿಸಿದರು, ಮೋದಿ ವಿರೋಧಿ ನಿಲುವು ತಳೆದರು, ಸರ್ಕಾರದ ಪ್ರಸ್ತಾವ ತಿರಸ್ಕರಿಸಿದರು. ಚಂದ್ರಬಾಬು ನಾಯ್ಡು ಅವರ ಟಿಡಿಪಿ, ಜನಸೇನಾ ಪಕ್ಷ ಹಾಗೂ ವೈಎಸ್‌ಆರ್ ಕಾಂಗ್ರೆಸ್ ಸಂವಿಧಾನ ತಿದ್ದುಪಡಿಯನ್ನು ಬೆಂಬಲಿಸಿದವು. ವಾಸ್ತವ ಏನೆಂದರೆ, ಮೋದಿ ನೇತೃತ್ವದ ಸರ್ಕಾರದ ಸೂತ್ರವು ಅನುಷ್ಠಾನಕ್ಕೆ ಬಂದಿದ್ದರೆ ಹೆಚ್ಚಿನ ತೊಂದರೆ ಉತ್ತರ ಭಾರತದ ರಾಜ್ಯಗಳಿಗೇ ಆಗುತ್ತಿತ್ತು. ಆದರೂ ಅವು ದೂರು ಹೇಳುತ್ತಿಲ್ಲ. ದಕ್ಷಿಣದ ನಾಯಕರು ಇಷ್ಟೆಲ್ಲಾ ತಕರಾರು ಎತ್ತುತ್ತಿದ್ದಾರೆ ಎಂದಾದರೆ ಕೇಂದ್ರದ ಸೂತ್ರವು ತಮಗೆ ಅನುಕೂಲ ಮಾಡುವಂತಿರಬೇಕು ಎಂದು ಅವು ಭಾವಿಸಿರಬಹುದು!

ಜನಸಂಖ್ಯಾ ಪರಿಣತರ ಪ್ರಕಾರ, ದೇಶದ ಜನಸಂಖ್ಯೆ ಸ್ಥಿರವಾಗಬೇಕು ಎಂದಾದರೆ ಒಟ್ಟು ಫಲವಂತಿಕೆ ದರವು (ಟಿಎಫ್‌ಆರ್) 2.1ರಷ್ಟಾಗಬೇಕು. ಟಿಎಫ್‌ಆರ್ 2.1ಕ್ಕಿಂತ ಕಡಿಮೆ ಆದಾಗ ಜನಸಂಖ್ಯೆ ತಗ್ಗಲು ಆರಂಭವಾಗುತ್ತದೆ. ದೇಶದಲ್ಲಿ 1970ರ ದಶಕದಿಂದಲೂ ದಕ್ಷಿಣದ ರಾಜ್ಯಗಳ ಟಿಎಫ್‌ಆರ್ ಕಡಿಮೆ ಆಗುತ್ತಿರುವುದನ್ನು ತಜ್ಞರು ಗುರುತಿಸಿದ್ದಾರೆ. ಕಳೆದ 20 ವರ್ಷಗಳಲ್ಲಿ ಈ ಇಳಿಕೆಯು ಗಂಭೀರ ಪ್ರಮಾಣ ತಲಪಿದೆ. 2001ರಲ್ಲಿ ದೇಶದ ಟಿಎಫ್‌ಆರ್ 3.2ರಷ್ಟಿತ್ತು. ಇದು 2011ರಲ್ಲಿ 2.4ಕ್ಕೆ ಬಂತು. ಈಗ ಇದು 2ಕ್ಕೆ ಇಳಿಕೆ ಆಗಿರುವ ಅಂದಾಜು ಇದೆ. ಅಂದರೆ, ಇದು ಸ್ಥಿರ ಜನಸಂಖ್ಯೆಗೆ ಅಗತ್ಯವಿರುವ ಮಟ್ಟಕ್ಕಿಂತ ಕಡಿಮೆ.


ಆದರೆ, ಟಿಎಫ್‌ಆರ್ ವಿಚಾರದಲ್ಲಿ ಪ್ರದೇಶವಾರು ವ್ಯತ್ಯಾಸ, ಅಸಮತೋಲನ ಇದೆ. ದಕ್ಷಿಣದ ರಾಜ್ಯಗಳಲ್ಲಿ ಟಿಎಫ್‌ಆರ್ ಕಳೆದೆರಡು ದಶಕಗಳಲ್ಲಿ ಕುಸಿದಿದೆ. 'ಬಿಮಾರು' ರಾಜ್ಯಗಳಲ್ಲಿ (ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಉತ್ತರ ಪ್ರದೇಶ) ಇದು ಹೆಚ್ಚಿನ ಮಟ್ಟದಲ್ಲಿಯೇ ಇದೆ. ಇದರಿಂದಾಗಿ ಉತ್ತರ–ದಕ್ಷಿಣ ಅಸಮತೋಲನ ಉಂಟಾಗಿದೆ.

2021ರಲ್ಲಿ ಬಿಹಾರದ ಟಿಎಫ್‌ಆರ್ 3.0, ಮಧ್ಯಪ್ರದೇಶದಲ್ಲಿ 2.6, ರಾಜಸ್ಥಾನದಲ್ಲಿ 2.4 ಹಾಗೂ ಉತ್ತರ ಪ್ರದೇಶದಲ್ಲಿ 2.7 ಇದೆ ಎಂದು ಅಂದಾಜಿಸಲಾಗಿದೆ. ಇವನ್ನು ಹೊರತುಪಡಿಸಿದರೆ 2.1ಕ್ಕಿಂತ ಹೆಚ್ಚಿನ ಟಿಎಫ್‌ಆರ್ ಇರುವ ರಾಜ್ಯಗಳು ಛತ್ತೀಸಗಢ ಮತ್ತು ಜಾರ್ಖಂಡ್ ಮಾತ್ರ. ದೇಶದ ಇತರ ಎಲ್ಲ ರಾಜ್ಯಗಳ ಟಿಎಫ್‌ಆರ್ 2.1ಕ್ಕಿಂತ ಕಡಿಮೆ ಇದೆ. ಅಂದರೆ ಈ ಆರು ರಾಜ್ಯಗಳ ಜನಸಂಖ್ಯೆಯು ಇನ್ನೂ ಎರಡರಿಂದ ಮೂರು ದಶಕಗಳವರೆಗೆ ಹೆಚ್ಚುತ್ತಾ ಇರಲಿದೆ. ದಕ್ಷಿಣದಲ್ಲಿ ಕೇರಳ, ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿ ಟಿಎಫ್‌ಆರ್ 1.5ಕ್ಕೆ ಕುಸಿದಿದೆ. ಕರ್ನಾಟಕ ಮತ್ತು ತೆಲಂಗಾಣದಲ್ಲಿ ಇದು 1.6ರಷ್ಟಿದೆ. ಅಂದರೆ, ಈ ರಾಜ್ಯಗಳ ಜನಸಂಖ್ಯೆಯ ದಶವಾರ್ಷಿಕ ಬೆಳವಣಿಗೆ ದರವು ತೀವ್ರವಾಗಿ ಕುಸಿಯಲಿದೆ. ವಾಸ್ತವದಲ್ಲಿ, ಕೇರಳ ಮತ್ತು ತಮಿಳುನಾಡು ರಾಜ್ಯಗಳ ಟಿಎಫ್‌ಆರ್ 2001ರಲ್ಲಿಯೇ 2.1ಕ್ಕಿಂತ ಕಡಿಮೆ ಇತ್ತು. ಆ ಸಂದರ್ಭದಲ್ಲಿ 'ಬಿಮಾರು' ರಾಜ್ಯಗಳ ಟಿಎಫ್‌ಆರ್ 4ರ ಆಸುಪಾಸಿನಲ್ಲಿತ್ತು.

ಮುಂದಿನ ಜನಗಣತಿಯ ನಂತರ, ಸಂವಿಧಾನದ 81ನೆಯ ಹಾಗೂ 82ನೆಯ ವಿಧಿಗಳ ಪ್ರಕಾರ ಕ್ಷೇತ್ರಗಳ ಮರುವಿಂಗಡಣೆ ಆಗುವುದು ಖಚಿತ. ಈಗ ಕೇಂದ್ರ ಸರ್ಕಾರ ಮುಂದಿರಿಸಿದ್ದ ಸೂತ್ರವನ್ನು ತಿರಸ್ಕರಿಸಿ ಆಗಿರುವ ಕಾರಣದಿಂದಾಗಿ, ಮರುವಿಂಗಡಣೆ ಆಯೋಗವು 81ನೆಯ ವಿಧಿಯಲ್ಲಿ ಹೇಳಿರುವ ಸೂತ್ರಕ್ಕೆ ಅನುಗುಣವಾಗಿ ನಡೆದುಕೊಳ್ಳಲಿದೆ. ಆಗ ದಕ್ಷಿಣದ ರಾಜ್ಯಗಳ ಮೇಲೆ ತೀರಾ ಕೆಟ್ಟ ಪರಿಣಾಮ ಬೀರಬಹುದು. ಬಿಜೆಪಿಯ ಆಡಳಿತ ಇರುವ 'ಬಿಮಾರು' ರಾಜ್ಯಗಳ ಸಂಖ್ಯಾಬಲವು ಆಗ ತೀವ್ರವಾಗಿ ಹೆಚ್ಚಳ ಕಾಣಬಹುದು. ಈ ಸಾಧ್ಯತೆಗೆ ದಕ್ಷಿಣ ಭಾರತದ ರಾಜ್ಯಗಳು ತಾವಾಗಿಯೇ ಅವಕಾಶ ಒದಗಿಸಿಕೊಟ್ಟಿವೆ.



ಸುಭಾಷಿತ



ಶಾಂತನೂ ಸುಖಿಯೂ ಆದವನು ವಯಸ್ಸಿನ ಭಾರ ಕಾಣನು. ಹಾಗಿಲ್ಲದವನಿಗೆ ಯೌವನ, ಮುಪ್ಪು ಎರಡೂ ಹೊರೆಯೇ.

–ಪ್ಲೇಟೊ

ವಾಚಕರ ವಾಣಿ

ಚಲನಚಿತ್ರ ನಿರ್ಮಾಣ ಶಾಸಕರ ಕೆಲಸವೆ?

ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರ ಸಹೋದರ, ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ 'ಅಣ್ಣ ಫ್ರಂ ಮೆಕ್ಸಿಕೊ' ಹೆಸರಿನ ಸಿನಿಮಾ ನಿರ್ಮಿಸಿದ್ದಾರೆ. 'ಚಿತ್ರರಂಗಕ್ಕೆ ಏನಾದರೂ ಕೊಡುಗೆ ನೀಡಬೇಕು ಎನ್ನುವ ಉದ್ದೇಶದಿಂದ ಈ ಚಿತ್ರ ನಿರ್ಮಿಸಿದ್ದೇನೆ' ಎನ್ನುವ ಅವರ ಮಾತು ಆಶ್ಚರ್ಯ ತರಿಸಿತು. ಸಿನಿಮಾ ನಿರ್ಮಾಣ ಶಾಸಕರ ಕೆಲಸವೆ? ಸಂಕಷ್ಟದಲ್ಲಿರುವ ಮತದಾರರಿಗೆ ಸಹಾಯ ಮಾಡಲೆಂದು ಆರಿಸಿ ಕಳಿಸಿದ ಜನಪ್ರತಿನಿಧಿಗಳು ಖಾಸಗಿ ವಿದ್ಯಾಸಂಸ್ಥೆಗಳು, ಹೋಟೆಲ್ ಉದ್ಯಮ, ಆಸ್ಪತ್ರೆ, ರಿಯಲ್ ಎಸ್ಟೇಟ್, ಸಿನಿಮಾ, ಇತ್ಯಾದಿ ವ್ಯವಹಾರಗಳಲ್ಲಿ ತೊಡಗಿಕೊಂಡಿದ್ದಾರೆ. ಹೀಗೆ ವ್ಯಾಪಾರ–ವಹಿವಾಟುಗಳಲ್ಲಿ ತೊಡಗಿಕೊಂಡವರು ಜನಸೇವೆಗೆ ಸಮಯ ಎಲ್ಲಿಂದ ತರುತ್ತಾರೆ? ಶಾಸಕರಾಗಿ ಸಂಬಳ ಸವಲತ್ತುಗಳನ್ನು ಅನುಭವಿಸುವ ಜನಪ್ರತಿನಿಧಿಗಳು ಬೇರೆ ಯಾವುದೇ ಉದ್ಯೋಗ ಮಾಡದೆ, ತಮ್ಮ ಪೂರ್ಣ ಸಮಯವನ್ನು ಜನಸೇವೆಗೆ ಮೀಸಲಿಡುವಂತೆ ಒತ್ತಾಯಿಸಿ, ಮತದಾರರು ಚಳವಳಿ ಮಾಡಬೇಕಾದ ಸಮಯ ಬಂದಿದೆ.

ಕೃಷ್ಣ ಭಟ್ ಗೋಸಾಡ, ಬೆಂಗಳೂರು

ವಿದ್ಯಾಕೇಂದ್ರ 'ಸಿನಿಮಾ ಕ್ಲಬ್' ಆಗದಿರಲಿ

ಶಾಲಾ ಕಾರ್ಯಕ್ರಮಗಳಲ್ಲಿ ಅಶ್ಲೀಲ ಹಾಡುಗಳನ್ನು ಶಿಕ್ಷಣ ಇಲಾಖೆ ನಿಷೇಧಿಸಿರುವುದು ಸ್ವಾಗತಾರ್ಹ. ಇಂದಿನ ಶೇ 80ರಷ್ಟು ಚಿತ್ರಗೀತೆಗಳು ದ್ವಂದ್ವಾರ್ಥ ಹಾಗೂ ನೈತಿಕ ಪತನದ ಸಾಹಿತ್ಯ ಹೊಂದಿವೆ. ಇವು ವಿದ್ಯಾರ್ಥಿಗಳ ಮೃದು ಮನಸ್ಸಿನ ಮೇಲೆ ಬೀರುವ ಪ್ರಭಾವ ನಕಾರಾತ್ಮಕವಾಗಿರುತ್ತದೆ. ಶಾಲೆಯು ಜ್ಞಾನ ದೇಗುಲವೇ ಹೊರತು ಸಿನಿಮಾ ಕ್ಲಬ್ ಅಲ್ಲ. ಅಶ್ಲೀಲ ಹಾಡುಗಳನ್ನು ನಿಷೇಧಿಸಿ ಸುತ್ತೋಲೆ ಹೊರಡಿಸಿದರೆ ಸಾಲದು, ನಿಯಮ ಉಲ್ಲಂಘಿಸುವ ಶಾಲೆಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಶಾಲಾ ಆಡಳಿತ ಮಂಡಳಿಗಳು ರಾಷ್ಟ್ರೀಯತೆ, ಜಾನಪದ ಮತ್ತು ನೈತಿಕ ಮೌಲ್ಯದ ಹಾಡುಗಳಿಗೆ ಆದ್ಯತೆ ನೀಡಬೇಕು.

ವಿಜಯಕುಮಾರ ಎಚ್.ಕೆ., ರಾಯಚೂರು

ಗುಂಡಿಗೆ ಕಾಣಿಕೆ

ಬೆಂಗಳೂರು ನಗರಾಡಳಿತ
ರಸ್ತೆ ಗುಂಡಿ ದುರಸ್ತಿ ಕಡೆಗೆ
ಕೊಟ್ಟಿತು ಲಕ್ಷ್ಯ.
ಒಂದು ಗುಂಡಿ ದುರಸ್ತಿಗೆ
ಕೊಟ್ಟಿತು ಲಕ್ಷ!
ಸಂಬಂಧಿಸಿದವರಿಗೆ
ಭರ್ಜರಿ ಭಕ್ಷ್ಯ!
ದುರಸ್ತಿ ನಾಲ್ಕು ತಿಂಗಳು
ನೆಟ್ಟಗಿರೋದು ಡೌಟು
ಕನಿಷ್ಠ ಪಕ್ಷ.

ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

'ಅಭಿಮಾನೋತ್ಸವ' ಮತ್ತು ನೈತಿಕ ಪ್ರಶ್ನೆ

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ತಮ್ಮ ಅಧಿಕಾರದ ಅವಧಿಯಲ್ಲಿ ಹಲವಾರು ಜನೋಪಯೋಗಿ, ಜನಪ್ರಿಯ ಕೆಲಸಗಳನ್ನು ಮಾಡಿರಬಹುದು. ಆದರೆ ನಾಯಕತ್ವಕ್ಕೂ ನೈತಿಕತೆಗೂ ಸಂಬಂಧವಿಲ್ಲದಂತೆ ಅವರು ನಡೆದುಕೊಂಡಿದ್ದಾರೆ. ಈಗ ಅವರಿಗಾಗಿ ನಡೆಯುತ್ತಿರುವ 'ಅಭಿಮಾನೋತ್ಸವ'ದ ಅದ್ದೂರಿ ಕಾರ್ಯಕ್ರಮ ಸಮಾಜಕ್ಕೆ ನೀಡುವ ಸಂದೇಶವೇನು? ಹಣ, ಅಧಿಕಾರ ಇದ್ದವರು ಏನು ಮಾಡಿದರೂ ಹಾರ–ತುರಾಯಿ, ಪ್ರಚಾರ ಪಡೆಯಬಹುದೆಂದೆ? ಇಷ್ಟೊಂದು ಪ್ರಚಾರ ಮಾಡಿ ಕಾರ್ಯಕ್ರಮ ನಡೆಸುವ ಬದಲು ಖಾಸಗಿಯಾಗಿ ಮಾಡಿಕೊಳ್ಳಬಹುದಿತ್ತೇನೊ?

ಸರೋಜ ಎಂ.ಎಸ್., ಸಾಗರ

ಜನರ ಹಕ್ಕು ಹೈಕಮಾಂಡ್‌ನಿಂದ ಹೈಜಾಕ್?

'ಇನ್ನೀಗ ಭಿನ್ನಮತದ ಸಮಯ' (ಲೇ: ರವೀಂದ್ರ ಭಟ್ಟ, ಪ್ರ.ವಾ., ಏ. 28) ಬರಹ ಸಮಕಾಲೀನ ರಾಜಕೀಯಕ್ಕೆ ಹಿಡಿದ ಕನ್ನಡಿ. ಬರಹ ಹೇಳುವಂತೆ ಕಾಂಗ್ರೆಸ್ ಪಕ್ಷದಲ್ಲಿನ ಬಿರುಗಾಳಿ, ಸುಂಟರಗಾಳಿಯ ಪರಿಣಾಮವು ನೇರವಾಗಿ ಆಡಳಿತದ ಮೇಲೆ ಆಗಲಿದೆ. 'ಭಾರತ ಸಂವಿಧಾನದ ಪೀಠಿಕೆಯು ಅಂತಿಮವಾಗಿ ಅಧಿಕಾರದ ಮೂಲವಿರುವುದು ಜನರ ಕೈಯಲ್ಲಿ' ಎಂಬ ಆಶಯವನ್ನು ಹೊಂದಿದೆ. ಆದರೆ, ಮುಖ್ಯಮಂತ್ರಿಯ ಆಯ್ಕೆ ಹಾಗೂ ಬದಲಾವಣೆಯ ವಿಷಯದಲ್ಲಿ ಹೈಕಮಾಂಡ್ ಅನ್ನುವ ಅಘೋಷಿತ ಸಾರ್ವಭೌಮ, ಸಂವಿಧಾನ ಪೀಠಿಕೆಯ ಮೌಲ್ಯವನ್ನು ಗಾಳಿಗೆ ತೂರಿ, ಜನರ ಆಯ್ಕೆಯ ಅಧಿಕಾರವನ್ನು ತಾನು ಮಾತ್ರ ಅನುಭವಿಸುತ್ತಿರುವುದು ಪ್ರಜಾಪ್ರಭುತ್ವವನ್ನು ಅಲುಗಾಡಿಸುವ ವಿದ್ಯಮಾನವಾಗಿದೆ. ಜನಪ್ರತಿನಿಧಿಗಳ ಆಯ್ಕೆಯ ವಿಷಯದಲ್ಲಿ ಮತದಾರರು ಹೊಂದಿರುವ ಹಕ್ಕನ್ನು ಪರಿಗಣಿಸಿದಂತೆ, ಮುಖ್ಯಮಂತ್ರಿ ಆಯ್ಕೆ ಮತ್ತು ಬದಲಾವಣೆಯ ಕುರಿತಾಗಿಯೂ ಅವರ ಹಕ್ಕು ಮತ್ತು ಆಶಯವನ್ನು ಗೌರವಿಸುವ ವ್ಯವಸ್ಥೆ ಅಪೇಕ್ಷಣೀಯ.

ನಾಗರಾಜ ಸನದಿ, ಬೆಳಗಾವಿ

ಆದಿವಾಸಿಗಳ ದುರವಸ್ಥೆಗೆ ಯಾರು ಕಾರಣ?

ಕಾರ್ಮಿಕರ ದಿನಾಚರಣೆಗೆ ಸ್ವಲ್ಪ ಮೊದಲಷ್ಟೇ ಖನಿಜ ಸಂಪನ್ನ ಒಡಿಶಾ ರಾಜ್ಯದ ದಿನಗೂಲಿ ಕಾರ್ಮಿಕನ ಅಸಹಾಯಕ ಬದುಕು ಮಾಧ್ಯಮಗಳಲ್ಲಿ ಸುದ್ದಿಯಾಗಿದೆ. ಅಕ್ಕನ ಅಸ್ಥಿಪಂಜರ ಹೆಗಲ ಮೇಲೆ ಹೊತ್ತು ಹೋಗಿ ಬ್ಯಾಂಕಿಗೆ 'ಸಾವಿನ ಸಾಕ್ಷಿ' ಕೊಟ್ಟಿರುವ ಆಘಾತಕಾರಿ ಘಟನೆ ಸಾಮಾಜಿಕ ಜಾಲತಾಣದಲ್ಲಿ ಸುದ್ದಿಯಾಗಿದೆ. ಸ್ಥಳೀಯ ಅಧಿಕಾರಿಗಳು ಮತ್ತು ಪೊಲೀಸರು ಬಡ ಕಾರ್ಮಿಕನ ನೆರವಿಗೆ ಬಂದಿದ್ದು, ಹಣ ಕೊಡಿಸುವುದಾಗಿ ಭರವಸೆ ನೀಡಿ ಸಮಾಧಾನ ಪಡಿಸಿದ್ದಾರೆ. ಈ ಘಟನೆಯ ಮೂಲಕ, ಖನಿಜನಾಡು ಒಡಿಶಾದಲ್ಲಿ ಆದಿವಾಸಿ ಕಾರ್ಮಿಕರ ಸ್ಥಿತಿ ಹೇಗಿದೆ? ಅವರಿಗೆ ನೀಡಲಾಗುತ್ತಿರುವ ಶಿಕ್ಷಣ, ಉದ್ಯೋಗ, ಆರೋಗ್ಯ ಸೌಲಭ್ಯಗಳು ಹೇಗಿವೆ? ಅಲ್ಲಿನ ಜನಸಾಮಾನ್ಯರಿಗೆ ಕಾನೂನಿನ ನೆರವು ಮತ್ತು ತಿಳಿವಳಿಕೆ ಎಷ್ಟರ ಮಟ್ಟಿಗೆ ಲಭ್ಯವಾಗಿದೆ? ಜನ ಪ್ರತಿನಿಧಿಗಳು ಮತ್ತು ಮತದಾರರ ನಡುವಿನ ಸಂಬಂಧ ಹೇಗಿದೆ? ಎಂಬೆಲ್ಲ ನೈಜತೆಯ ಸುರುಳಿ ಬಿಚ್ಚಿಕೊಳ್ಳುತ್ತಿವೆ. ಸ್ವಾತಂತ್ರ್ಯ ಬಂದು ಎಂಟು ದಶಕಗಳಾದರೂ ನಮ್ಮ ದೇಶದ ಪರಿಸ್ಥಿತಿ ಹೀಗೆಯೇ ಇರಲು ಏನು ಕಾರಣ? ಭ್ರಷ್ಟ ರಾಜಕಾರಣವೋ? ಅಜಾಗರೂಕ ಮತದಾರರೋ?

ತಾ.ಸಿ. ತಿಮ್ಮಯ್ಯ, ಬೆಂಗಳೂರು

ಚುರುಮುರಿ



ಕೂಲ್ ಕೂಲ್ ಈರುಳ್ಳಿ!

• ಗುರು ಪಿ.ಎಸ್.

'ಥೀ... ಇದೇನ್ರೀ, ನಿಮ್ಮ ಹತ್ತಿರ ಬಂದರೆ ಈರುಳ್ಳಿ ವಾಸನೆ ಬರ್ತಿದೆ, ಯಾಕೆ ಸ್ನಾನ ಮಾಡಿಲ್ವ?' ಎಂದು ಮೂಗು ಮುಚ್ಚಿಕೊಳ್ಳುತ್ತಾ ಹೇಳಿದಳು ಹೆಂಡತಿ.

'ಥಂಡಾ ಥಂಡಾ ಕೂಲ್ ಕೂಲ್...' ಜೇಬಿನಲ್ಲಿಟ್ಟುಕೊಂಡಿದ್ದ ಈರುಳ್ಳಿ ತೆಗೆದು ತೋರಿಸಿದೆ.

'ಥೂ... ನಾನಿಲ್ಲಿ ಅಡುಗೆಗೆ ಇಟ್ಟಿದ್ದ ಈರುಳ್ಳಿ ಕಾಣ್ತಿಲ್ವಲ್ಲ ಅಂತ ಹುಡುಕ್ತಿದೀನಿ, ನೀವು ನೋಡಿದ್ರೆ ಅದನ್ನ ಜೇಬಿನಲ್ಲಿ ಇಟ್ಟುಕೊಂಡು ಓಡಾಡ್ತಿದೀರಾ?'

'ಹೊರಗಡೆ ಎಷ್ಟು ಹೀಟ್ ಇದೆಯಂತ ಗೊತ್ತಾಗ್ತಿಲ್ವ ನಿನಗೆ' ಬೆವರು ಒರೆಸಿಕೊಳ್ಳುತ್ತಾ ಹೇಳಿದೆ.

'ಬಿಸಿಲಿಗೂ, ಈರುಳ್ಳಿಗೂ ಏನ್ರೀ ಸಂಬಂಧ?'

'ನಮ್ ಸೆಂಟ್ರಲ್ ಮಿನಿಸ್ಟರ್ ಸಿಂಧಿಯಾ ಹೇಳಿಲ್ವ, ಬಿಸಿಲ ಧಗೆಯಿಂದ ಪಾರಾಗಬೇಕೆಂದರೆ ಜೇಬಲ್ಲಿ ಈರುಳ್ಳಿ ಇಟ್ಟುಕೊಂಡು ಓಡಾಡಿ ಅಂತ, ಅದನ್ನ ಪಾಲಿಸ್ತಿದೀನಿ'.

'ತಲೆಗೆ ಸಗಣಿ ಕಟ್ಟಿಕೊಂಡರೆ ಇನ್ನೂ ತಂಪಾಗಿ ಇರಬಹುದಲ್ವ? ರೈತರು ನೋಡಿದರೆ ಈರುಳ್ಳಿಗೆ ಸರಿಯಾದ ಬೆಂಬಲ ಬೆಲೆ ಸಿಗದೆ ಬೀದಿಗೆ ಎಸೆಯುತ್ತಿದ್ದಾರೆ, ಇವರಿಗೆ ಈರುಳ್ಳೀನೇ ಎ.ಸಿ. ಅಂತೆ' ಹಣೆ ಚಚ್ಚಿಕೊಂಡಳು.

'ಹಾಂ... ಅದೇ ನಮ್ ಮಿನಿಸ್ಟರ್ ಮಾಸ್ಟರ್ ಸ್ಟ್ರೋಕ್. ಎಲ್ಲರೂ ಈರುಳ್ಳಿನ ಜೇಬಲ್ಲಿ ಇಟ್ಕೊಂಡು ಓಡಾಡೋಕೆ ಶುರು ಮಾಡಿದ್ರೆ ಆಟೊಮೆಟಿಕ್ ಆಗಿ ಉಳ್ಳಾಗಡ್ಡಿಗೆ ಡಿಮಾಂಡ್ ಬಂದೇ ಬರುತ್ತೆ, ರೈತರೂ ಉದ್ಧಾರ ಆಗ್ತಾರೆ'.

'ಆಗ್ತಾರೆ, ಆಗ್ತಾರೆ... ಈ ಹಿಂದೆಯೂ ನಿಮ್ ನಾಯಕರೇ ಅಲ್ವೇನಪ್ಪ ಗಟಾರ್ ಗ್ಯಾಸ್ ಥಿಯರಿ ಅಂತ ಚರಂಡಿ ನೀರಿನಿಂದ ಗ್ಯಾಸ್ ಉತ್ಪಾದಿಸಿ, ಅದರಿಂದಾನೇ ಚಹಾ ಮಾಡಬಹುದು ಅಂತ ಹೇಳಿದ್ದು, ಹಾಗೆ ಮಾಡೋದು ಬಿಟ್ಟು ಮೊನ್ನೆ ಮತ್ಯಾಕೆ ತಾವು ಗ್ಯಾಸ್ ಸಿಲಿಂಡರ್‌ಗಾಗಿ ಏಜೆನ್ಸಿ ಮುಂದೆ ಕ್ಯೂ ನಿಂತಿದ್ದು' ವ್ಯಂಗ್ಯವಾಡಿದಳು.

'ನೋಡು, ನಮ್ ಡೈರೆಕ್ಟರ್ ಪ್ರೇಮ್ ಅಣ್ಣ ಹೇಳಿಲ್ವ, ನಾವ್ ಸಿನಿಮಾ ಮಾಡಿದೀವಿ, ಜನರೇ ಕಥೆ ಬರ್ಕೋಬೇಕು ಅಂತ. ಹಂಗೆ ನಮ್ ನಾಯಕರು ಹೊಸ ಥಿಯರಿ ಹೇಳ್ತಿರ್ತಾರೆ, ಅದರ ಪರಿಣಾಮನ ನಾವೇ ಬರೆದುಕೊಳ್ತಾ ಇರಬೇಕು' ಎನ್ನುತ್ತಾ ಮತ್ತೊಂದೆರಡು ಈರುಳ್ಳಿ ಜೇಬಲ್ಲಿಟ್ಟುಕೊಂಡು ಹೊರಗಡಿಯಿಟ್ಟೆ. ಹೆಂಡತಿಯ ಗೊಣಗಾಟ ಹಿಂಬಾಲಿಸಿತು.

ಸಂಗತ

ರಾಜಮಾರ್ಗ: ಕನ್ನಡಿಗರ ಹೃದಯಮಾರ್ಗ!

ರಾಜ್ ಪುಣ್ಯಭೂಮಿಗೆ ಸಂಬಂಧಿಸಿದ ಚೇತನ್ ಪ್ರಶ್ನೆಗೆ ಸರ್ಕಾರ ಮೌನವಾಗಿದೆ, ಕನ್ನಡ ಚಿತ್ರೋದ್ಯಮ ಬಾಲಿಶವಾಗಿ ಪ್ರತಿಕ್ರಿಯಿಸಿದೆ, ಜನ ತಕ್ಕ ಉತ್ತರ ನೀಡಿದ್ದಾರೆ.

• ಬಿ.ಓ. ದೇವಿ

ರಾಜಕುಮಾರ್ ಪುಣ್ಯಭೂಮಿಗೆ ಎರಡೂವರೆ ಎಕರೆ ಭೂಮಿ ಕೊಟ್ಟಿರುವ ಸರ್ಕಾರವನ್ನು ಪ್ರಶ್ನಿಸಿರುವ ನಟ ಚೇತನ್ ಅವರ ನಿಲುವು ವ್ಯಾಪಕ ಟೀಕೆಗೆ ಒಳಗಾಗಿದೆ. ಅದು ಸಹಜ. ಕೆಲವರು ಆವೇಶಗೊಂಡು, ಕಾನೂನನ್ನು ಕೈಗೆ ತೆಗೆದುಕೊಳ್ಳುವ ಮಾತನಾಡಿದ್ದಾರೆ. ಅದು ಅಸಹಜ.

ರಾಜಕುಮಾರ್ ಪರವಾಗಿ ವಕಾಲತ್ತಿನ ಅವಕಾಶವನ್ನು ಕನ್ನಡಿಗರು ಯಾವತ್ತೂ ಬಿಟ್ಟುಕೊಟ್ಟಿಲ್ಲ. ಯಾಕೆಂದರೆ, ರಾಜ್ ಈಗ ವ್ಯಕ್ತಿಯಾಗಿಯೋ ನಟನಾಗಿಯೋ ಉಳಿದಿಲ್ಲ. ಅವರು ಕನ್ನಡಿಗರ ಭಾವಕೋಶದ ಭಾಗ. ಕನ್ನಡ ವಿವೇಕ ಪರಂಪರೆಯ ಮಾದರಿ. ಹಾಗಾಗಿಯೇ, ರಾಜ್ ಕುರಿತ ತಕರಾರುಗಳು ಕನ್ನಡದ ಅಸ್ಮಿತೆಯನ್ನು ಪ್ರಶ್ನಿಸಿದಂತೆ ಕನ್ನಡಿಗರಿಗೆ ಭಾಸವಾಗುತ್ತದೆ. ಆ ಕಾರಣ ದಿಂದಲೇ, ಚೇತನ್ ಅವರು ಸರ್ಕಾರವನ್ನು ಪ್ರಶ್ನಿಸಿದರೂ ಆ ಪ್ರಶ್ನೆಗೆ ಜನರೇ ಉತ್ತರಿಸಿದರು.

ಅರಿತೋ ಅರಿಯದೆಯೋ ಚೇತನ್, ರಾಜ್ ಪುಣ್ಯಭೂಮಿಯ ಕುರಿತು ಪ್ರಶ್ನೆ ಮಾಡಿದರು. ಪ್ರಶ್ನೆ ಕೇಳಿದ್ದಕ್ಕಾಗಿ ಅವರ ಮೇಲೆ ಕೋಪಿಸಿಕೊಳ್ಳುವ ಅಗತ್ಯವಿಲ್ಲ. ಚೇತನ್ ಪ್ರಶ್ನೆಯನ್ನು ಧನಾತ್ಮಕವಾಗಿ ನೋಡಬೇಕಾಗಿದೆ. ಅವರು ಪ್ರಶ್ನೆ ಕೇಳಿದ ಕಾರಣದಿಂದಾಗಿ, ರಾಜ್ ಯಾವೆಲ್ಲ ಕಾರಣಗಳಿಂದಾಗಿ ಕನ್ನಡಿಗರ ಪ್ರೀತಿ–ಗೌರವಕ್ಕೆ ಅರ್ಹರು ಎನ್ನುವ ಕುರಿತು ದೊಡ್ಡ ವಿಶ್ಲೇಷಣೆಯೇ ಮಾಧ್ಯಮ ಗಳಲ್ಲಿ, ವಿಶೇಷವಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ನಡೆಯಿತು. ಭೌತಿಕವಾಗಿ ನಮ್ಮೊಂದಿಗೆ ಇಲ್ಲದ ವ್ಯಕ್ತಿ, ವ್ಯಕ್ತಿತ್ವಗಳನ್ನು ಹೀಗೆ ನೆನಪಿಸಿಕೊಳ್ಳುವುದು ಹಾಗೂ ಚರ್ಚಿಸುವುದು ಅವರನ್ನು ನಮ್ಮ ಕಾಲಕ್ಕೆ ಪ್ರಸ್ತುತಗೊಳಿಸಿಕೊಳ್ಳುವ ಮಾರ್ಗವಾಗಿರುತ್ತದೆ. ಸಿನಿಮಾಗಳ ರೂಪದಲ್ಲಷ್ಟೇ ರಾಜಕುಮಾರರನ್ನು ನೋಡಲು ಸಾಧ್ಯವಿರುವ ಹೊಸ ತಲೆಮಾರಿನ ಕಣ್ಮಣಿಗಳಿಗೆ ರಾಜ್‌ರ ಬಹುಮುಖಿ ವ್ಯಕ್ತಿತ್ವವನ್ನು ದಾಟಿಸುವುದು ಮಾತು–ಕತೆಗಳಿಂದಷ್ಟೇ ಸಾಧ್ಯ. ಈ ಹಿನ್ನೆಲೆಯಲ್ಲಿ ಚೇತನ್ ಅವರ ಪ್ರಶ್ನೆಗಳಿಂದ ಉಪಯೋಗವಾಗಿದೆ. ಕನ್ನಡಿಗರು ತಮ್ಮ ಎದೆಯೊಳಗಿನ ಆಲ್ಬಮ್‌ನ ಪುಟಗಳ ದೂಳು ಸ್ವಚ್ಛಗೊಳಿಸಿ, ರಾಜ್ ಬಿಂಬದ ಹೊಳಪು ಹೆಚ್ಚಿಸಿದ್ದಾರೆ. ಹೀಗೆ ದೂಳು ತೊಡೆಯುವ ಕೆಲಸಗಳು ರಾಜ್ ಸೇರಿದಂತೆ ಕನ್ನಡದ ಎಲ್ಲ ಅಸ್ಮಿತೆಗಳಿಗೆ ಸಂಬಂಧಿಸಿದಂತೆಯೂ ಆಗಾಗ ನಡೆಯುತ್ತಿರಬೇಕು. ಅದಕ್ಕೆ ಪೂರಕವಾಗಿ, ಚೇತನ್ ಅಂಥವರು ಪ್ರಶ್ನೆಗಳನ್ನು ಕೇಳುವುದು ಸ್ವಾಗತಾರ್ಹ.



ಸಮಸ್ಯೆ ಇದ್ದುದು ಚೇತನ್ ಅವರ ಪ್ರಶ್ನೆಗಳ ಬಗೆಗಲ್ಲ, ಆ ಪ್ರಶ್ನೆಗಳ ಪ್ರಾಮಾಣಿಕತೆಯ ಬಗೆಗೆ. ಮಹಾತ್ಮ ಗಾಂಧೀಜಿ ಒಬ್ಬರಿಂದಲೇ ದೇಶಕ್ಕೆ ಸ್ವಾತಂತ್ರ್ಯ ಬಂತೆ? ಅಂಬೇಡ್ಕರ್ ಒಬ್ಬರೇ ಸಂವಿಧಾನ ಬರೆದಿದ್ದಾರೆಯೆ? ಇಂಥ ಪ್ರಶ್ನೆಗಳ ಹಿಂದಿನ ಮನಃಸ್ಥಿತಿ ಯಾವ ಬಗೆಯದಾಗಿರುತ್ತದೆ ಎನ್ನುವುದನ್ನು ಬಿಡಿಸಿ ಹೇಳಬೇಕಾಗಿಲ್ಲ. ಚೇತನ್ ಅವರು ತಮ್ಮ ಪ್ರಶ್ನೆಗೆ ಪೂರಕವಾಗಿ ನೀಡಿದ ಟಿಪ್ಪಣಿ ಗಳಲ್ಲೂ ಇಂತಹುದೇ ಮನಃಸ್ಥಿತಿ ಇಣುಕುತ್ತಿರುವಂತಿದೆ. ರಾಜಕುಮಾರ್ ಅಷ್ಟೇ ಅಲ್ಲ, ಇಂತಿಂಥವರೆಲ್ಲ ಕನ್ನಡ ಚಿತ್ರರಂಗಕ್ಕೆ ಕೊಡುಗೆ ನೀಡಿದ್ದಾರೆ ಎಂದು ಚೇತನ್ ಪಟ್ಟಿ ನೀಡಿದ್ದಾರೆ. ಚೇತನ್ ಅವರು ಹೆಸರಿಸಿ ರುವ ಸಾಧಕರೆಲ್ಲ ಕನ್ನಡ ಚಿತ್ರರಂಗಕ್ಕೆ ಹೂವು ತಂದವರೇ ಆಗಿದ್ದಾರೆ. ಆದರೆ, ರಾಜ್ ಅವರ ಕೊಡುಗೆಯ ಸಂದರ್ಭದ ಚರ್ಚೆಯಲ್ಲಿ ಹೋಲಿಕೆಗಾಗಿ ಮತ್ತೊಬ್ಬರನ್ನು ಎಳೆದು ತರುವುದು ಸಮಸ್ಯಾತ್ಮಕ. ಒಬ್ಬರನ್ನು ಮತ್ತೊಬ್ಬರೊಂದಿಗೆ ಹೋಲಿಸುವ ಅಗತ್ಯವೂ ಇಲ್ಲ. ಕೊಡುಗೆಯ ಸಹಭಾಗಿತ್ವದ ಬಗ್ಗೆ ಚೇತನ್ ಪ್ರಶ್ನೆ ಎತ್ತಿರುವುದರಿಂದ, ಅವರಿಗೊಂದು ಮಾತನ್ನು ಹೇಳ ಬಹುದು. ಚೇತನ್ ಯಾರೆಲ್ಲ ಹೆಸರುಗಳನ್ನು ಪ್ರಸ್ತಾಪಿಸಿ ದ್ದಾರೋ, ಆ ಸಾಧಕರ ಸಿನಿಮಾಗಳನ್ನು ಪಕ್ಕಕ್ಕಿಟ್ಟು ನೋಡಿದರೂ ಕನ್ನಡ ಸಿನಿಮಾ ಇತಿಹಾಸದಲ್ಲಿ ಹೆಚ್ಚಿನ ವ್ಯತ್ಯಾಸವೇನೂ ಆಗುವುದಿಲ್ಲ. ಆದರೆ, ರಾಜಕುಮಾರರ ಸಿನಿಮಾ ಗಳನ್ನು ಪಕ್ಕಕ್ಕಿಟ್ಟು ನೋಡಿದರೆ ಕನ್ನಡ ಸಿನಿಮಾ ಇತಿಹಾಸದ ತಳಹದಿಯೇ ಕುಸಿದು, ಕೆಲವು ತುಣುಕುಗಳಷ್ಟೇ ಉಳಿಯುತ್ತವೆ. ಇದು ಬಿಡುಬೀಸಾದ ಹೇಳಿಕೆಯಂತೆ ಕಾಣಿಸಿದರೂ, ಸಿನಿಮಾ ವಿದ್ಯಾರ್ಥಿಗಳಿಗೆ ಈ ಮಾತಿನ ಸತ್ಯ ಹೊಳೆಯಬಲ್ಲದು.

ಬೌದ್ಧಿಕತೆಯ ಬಗ್ಗೆ ಅಷ್ಟೇನೂ ನಂಬಿಕೆ ಇಲ್ಲದಂತೆ ವರ್ತಿಸುವ ಕನ್ನಡ ಚಿತ್ರರಂಗ, ಚೇತನ್‌ರ ಪ್ರಶ್ನೆಗಳಿಗೆ ಉತ್ತರಿಸುವಲ್ಲಿಯೂ ತನ್ನ ಅಸಾಮರ್ಥ್ಯ ಸಾಬೀತುಪಡಿಸಿತು. ರಾಜ ಕುಮಾರ್ ಸ್ಮಾರಕಕ್ಕೆ ಸರ್ಕಾರ ಭೂಮಿ ಕೊಟ್ಟಿರುವುದು ಹೇಗೆ ಸರಿ? ಯಾವ ಕಾರಣಕ್ಕಾಗಿ ಕನ್ನಡಿಗರ ಕೃತಜ್ಞತೆಗೆ ರಾಜ ಕುಮಾರ್ ಅರ್ಹರು ಎನ್ನುವುದನ್ನು ಹೇಳುವುದದಲ್ಲಿ ಚಿತ್ರೋದ್ಯಮ ವಿಫಲವಾಯಿತು. ಕನ್ನಡ ಸಿನಿಮಾದವರಿಗೆ ಗೊತ್ತಿರುವುದು ಎರಡೇ: ಕೋಪ ಮತ್ತು ಪ್ರಲಾಪ. ಸ್ಮೃತಿಗಳ ಹಂಗು ಹಾಗೂ ವರ್ತಮಾನದ ಬಾಧ್ಯತೆ ಇಲ್ಲದವರಿಂದ ಏನನ್ನು ತಾನೆ ನಿರೀಕ್ಷಿಸುವುದು?

ಚೇತನ್ ಅವರ ಪ್ರಶ್ನೆಗೆ ಅರ್ಥಪೂರ್ಣ ಉತ್ತರದ ರೂಪದಲ್ಲಿ ಸಿನಿಮಾ ಪತ್ರಕರ್ತ ಶಶಿಧರ ಚಿತ್ರದುರ್ಗ ಅವರ ಅಭಿಪ್ರಾಯವನ್ನು ಗಮನಿಸಬಹುದು. ಸಾಮಾನ್ಯವಾಗಿ ವಿಶ್ವ ವಿದ್ಯಾಲಯವೊಂದು ಐದರಿಂದ ನೂರಾರು ಎಕರೆ ವ್ಯಾಪ್ತಿಯವರೆಗೆ ಇರುತ್ತದೆ. ಅದೇ ರೀತಿ, ರಾಜಕುಮಾರ್ ಎನ್ನುವ ವಿಶ್ವ ವಿದ್ಯಾಲಯ ಎರಡೂವರೆ ಎಕರೆಯಲ್ಲಿದೆ! ಎನ್ನುವುದು ಶಶಿಧರ್ ಪ್ರತಿಕ್ರಿಯೆ. ಉತ್ತರಿಸಬೇಕಾದುದು ಹೀಗಲ್ಲವೆ? ಈ ಉತ್ತರ, ಚೇತನ್ ಅವರ ಪ್ರಶ್ನೆ ಪ್ರಾಮಾಣಿಕವಾದುದೇ ಆಗಿದ್ದಲ್ಲಿ, ಅವರು ತಮ್ಮ ನಿಲುವು ಬದಲಿಸಿಕೊಳ್ಳಲು ಒತ್ತಾಯಿಸುವಂತಿದೆ ಹಾಗೂ ನಿರ್ದಿಷ್ಟ ಪ್ರದೇಶ ಹಾಗೂ ವರ್ಗಕ್ಕೆ ಸೀಮಿತವಾದ ವಿ.ವಿ.ಗಳಿಗೆ ನೂರಾರು ಎಕರೆ ಭೂಮಿ ಇರುವಾಗ, ಅಖಂಡ ಕರ್ನಾಟಕದ ವಿಶ್ವವಿದ್ಯಾಲಯ ರಾಜ ಕುಮಾರ್ ಅವರಿಗೆ ಬರೀ ಎರಡೂವರೆ ಎಕರೆ ಭೂಮಿ ಇರುವುದು ನಾಚಿಕೆಗೇಡು; ಈ ತಾರತಮ್ಯ ಸರಿಯಲ್ಲ ಎಂದವರು ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲು ಒತ್ತಾಯಿಸುವಂತಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಒಪೆಕ್ ಯುಎಇ ನಿರ್ಗಮನ ದುರ್ಬಲವಾಗುವುದೇ ಒಕ್ಕೂಟ?



ಒಪೆಕ್ ಮತ್ತು ಒಪೆಕ್+ ನಿಂದ ಹೊರಬರುವುದಾಗಿ ಯುಎಇ ತಿಳಿಸಿದೆ. ಒಕ್ಕೂಟದಲ್ಲಿ ಸೌದಿ ಅರೇಬಿಯಾದ ಹಿಡಿತ ಪ್ರಬಲವಾಗಿರುವುದು ಮತ್ತು ಕಚ್ಚಾ ತೈಲ ಉತ್ಪಾದನೆಗೆ ಮಿತಿ ಇರುವುದನ್ನು ವಿರೋಧಿಸಿ ಯುಎಇ ಈ ನಿಲುವು ತೆಗೆದುಕೊಂಡಿದೆ ಎಂದು ಹೇಳಲಾಗುತ್ತಿದೆ. ಯುಎಇ ಭವಿಷ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತೈಲ ಉತ್ಪಾದನೆ ಮಾಡಲಿದ್ದು, ಇದರಿಂದ ತೈಲ ಬೆಲೆ ಕಡಿಮೆ ಆಗಲಿದೆ ಎಂದು ರಷ್ಯಾ ಹೇಳಿದೆ. ಇದರಿಂದ ಭಾರತಕ್ಕೂ ಅನುಕೂಲವಾಗಲಿದೆ ಎಂದೂ ಕೆಲವರು ವಿಶ್ಲೇಷಿಸುತ್ತಿದ್ದಾರೆ. ಆದರೆ, ಜಗತ್ತಿನ ಅತ್ಯಂತ ತೀವ್ರವಾದ ಇಂಧನ ಬಿಕ್ಕಟ್ಟಿನ ಸಂದರ್ಭದಲ್ಲಿ ಯುಎಇ ಇಂಥ ನಿರ್ಧಾರ ತೆಗೆದುಕೊಂಡಿರುವುದರಿಂದ ಸದ್ಯದ ಮಟ್ಟಿಗೆ ಪರಿಸ್ಥಿತಿ ಬಿಗಡಾಯಿಸಬಹುದು ಎನ್ನುವ ಆತಂಕ ವ್ಯಕ್ತವಾಗಿದೆ



ಪ್ರಜಾವಾಣಿ ವಾರ್ತೆ

ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದಿಂದ ಜಾಗತಿಕ ಮಟ್ಟದಲ್ಲಿ ಇಂಧನ ಬಿಕ್ಕಟ್ಟು ತಲೆದೋರಿರುವ ಸಂದರ್ಭದಲ್ಲಿಯೇ ದಿಢೀರ್ ಬೆಳವಣಿಗೆಯೊಂದು ಘಟಿಸಿದೆ. ಪೆಟ್ರೋಲಿಯಂ ರಫ್ತುದಾರ ರಾಷ್ಟ್ರಗಳ ಒಕ್ಕೂಟ (ಒಪೆಕ್) ಮತ್ತು ಒಪೆಕ್ + ಕೂಟದಿಂದ ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಹೊರಬರುವ ನಿರ್ಧಾರ ಮಾಡಿದೆ. ಒಪೆಕ್‌ನೊಂದಿಗಿನ ಯುಎಇಯ 60 ವರ್ಷಗಳ ಸಂಬಂಧವು ಮೇ 1ರಿಂದ ಅಂತ್ಯವಾಗಲಿದೆ. ಇದು ಜಾಗತಿಕ ಮಟ್ಟದಲ್ಲಿ ಹಲವು ರೀತಿಯ ಪ್ರತಿಕ್ರಿಯೆ, ಬೆಳವಣಿಗೆಗಳಿಗೆ ಕಾರಣವಾಗಿದ್ದು, ತೈಲ ಉತ್ಪಾದನೆ, ರಫ್ತು ಮತ್ತು ಬಳಕೆಯ ವಿಚಾರದಲ್ಲಿ ಮಹತ್ವದ ಬದಲಾವಣೆಗಳಿಗೆ ನಾಂದಿಯಾಗಲಿದೆ ಎನ್ನಲಾಗುತ್ತಿದೆ.

ಒಪೆಕ್‌ನಲ್ಲಿ ಸೌದಿ ಅರೇಬಿಯಾದೇ ಪಾರುಪತ್ಯ ಎನ್ನುವುದು ಯುಎಇ ಅಸಮಾಧಾನಕ್ಕೆ ಕಾರಣವಾಗಿತ್ತು. ಜತೆಗೆ, ತೈಲ ಉತ್ಪಾದನೆಗೆ ಅಲ್ಲಿ ಕೋಟಾ ವ್ಯವಸ್ಥೆ ಇದ್ದು, ಸದಸ್ಯ ರಾಷ್ಟ್ರಗಳು ನಿರ್ದಿಷ್ಟ ಮಿತಿಯಲ್ಲೇ ಉತ್ಪಾದನೆ ಮಾಡಬೇಕು. ಇದು ಕೂಡ ಅದರ ಅಸಮಾಧಾನ ಹೆಚ್ಚಿಸಿತ್ತು. ದಿನಕ್ಕೆ 48.5 ಲಕ್ಷ ಬ್ಯಾರಲ್ ಉತ್ಪಾದಿಸುವ ಸಾಮರ್ಥ್ಯವಿದ್ದರೂ, 30 ಲಕ್ಷ–35 ಲಕ್ಷ ಬ್ಯಾರಲ್ ಮಾತ್ರವೇ ಅದು ಉತ್ಪಾದನೆ ಮಾಡುತ್ತಿದೆ. ಈ ವಿಚಾರವಾಗಿ ಇರಾನ್ ಯುದ್ಧ ಆರಂಭವಾಗುವ ಮುಂಚೆಯೇ ಎರಡೂ ರಾಷ್ಟ್ರಗಳ ನಡುವೆ ಮನಸ್ತಾಪ ತೀವ್ರಗೊಂಡಿತ್ತು. ಯುದ್ಧದ ವೇಳೆ ಅಮೆರಿಕ–ಇಸ್ರೇಲ್ ದಾಳಿಗೆ ವಿರುದ್ಧವಾಗಿ ಇರಾನ್, ಯುಎಇ ಮೇಲೆ ದಾಳಿ ನಡೆಸಿತ್ತು. ಇದು ಕೂಡ ಯುಎಇ ಅಸಮಾಧಾನಕ್ಕೆ ಕಾರಣವಾಗಿತ್ತು. ಹೀಗೆ ಹಲವು ಕಾರಣಗಳಿಂದ ಯುಎಇ ಒಪೆಕ್‌ನಿಂದ ಹೊರಬರುವ ನಿರ್ಧಾರ ಕೈಗೊಂಡಿದೆ.

ರಾಷ್ಟ್ರದ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಯುಎಇ ಹೇಳಿದೆ. ಇತ್ತೀಚೆಗೆ ತೈಲ ಉತ್ಪಾದನೆ ಕ್ಷೇತ್ರದಲ್ಲಿ ಹೆಚ್ಚು ಬಂಡವಾಳ ತೊಡಗಿಸಲಾಗಿದ್ದು, ಇದರಿಂದ ಮುಂದಿನ ದಿನಗಳಲ್ಲಿ ರಾಷ್ಟ್ರವು ಹೆಚ್ಚು ತೈಲ ಉತ್ಪಾದನೆ ಮಾಡಲು ಸಾಧ್ಯವಾಗುತ್ತದೆ ಎಂದೂ ಅದು ಹೇಳಿದೆ.



ಇದೇ ಮೊದಲಲ್ಲ: ಈ ಹಿಂದೆಯೂ ಕೆಲವು ಸದಸ್ಯ ರಾಷ್ಟ್ರಗಳು ಒಪೆಕ್‌ನಿಂದ ಹೊರನಡೆದಿವೆ. 2019ರಲ್ಲಿ ಕತಾರ್ ಮತ್ತು 2024ರಲ್ಲಿ ಅಂಗೋಲಾ ಒಕ್ಕೂಟದಿಂದ ಹೊರಹೋಗಿದ್ದವು. ಕತಾರ್ ಹೆಚ್ಚು ನೈಸರ್ಗಿಕ ಅನಿಲ ಉತ್ಪಾದಿಸುವ ರಾಷ್ಟ್ರವಾದರೆ, ಅಂಗೋಲಾ ಕಡಿಮೆ ಪ್ರಮಾಣದ ತೈಲ ಉತ್ಪಾದಕ ರಾಷ್ಟ್ರವಾದ್ದರಿಂದ ಅದು ಒಪೆಕ್ ಮೇಲೆ ಹೆಚ್ಚು ಪರಿಣಾಮ ಬೀರಲಿಲ್ಲ. ಆದರೆ, ಯುಎಇಯು ಸೌದಿ ಅರೇಬಿಯಾ, ಇರಾಕ್, ಇರಾನ್‌ನ ನಂತರ ನಾಲ್ಕನೇ ಅತಿ ಹೆಚ್ಚು ತೈಲ ಉತ್ಪಾದನೆ ಮಾಡುವ ರಾಷ್ಟ್ರವಾಗಿದೆ. ಜಾಗತಿಕವಾಗಿ ತೈಲ ಬೆಲೆ ನಿಯಂತ್ರಿಸುವ ಒಪೆಕ್ ಇತಿಹಾಸದಲ್ಲಿಯೇ ಇದು ದೊಡ್ಡ ಪೆಟ್ಟು. ಯುಎಇ ನಿರ್ಗಮನದ ನಂತರ ಒಕ್ಕೂಟ ದುರ್ಬಲವಾಗಲಿದೆ. ಜಾಗತಿಕ ತೈಲ ಪೂರೈಕೆ ಹದ ತಪ್ಪಲಿದೆ ಎನ್ನುವ ವಿಶ್ಲೇಷಣೆಗಳಿವೆ. ಕೆಲವರು ಇದು ಒಪೆಕ್‌ನ ಅಂತ್ಯದ ಆರಂಭ ಎಂದೂ ವ್ಯಾಖ್ಯಾನಿಸುತ್ತಿದ್ದಾರೆ.

ತೈಲ ಪೂರೈಕೆದಾರರು ಭಾರಿ ನಷ್ಟ ಎದುರಿಸಬೇಕಾಗುತ್ತದೆ ಎಂದು ವಿಶ್ವಬ್ಯಾಂಕ್ ಹೇಳಿದ ಬೆನ್ನಲ್ಲೇ ಯುಎಇ ನಿರ್ಧಾರ ಪ್ರಕಟವಾಗಿದೆ. ಯುದ್ಧ ಮುಗಿದ ನಂತರವೂ ತೈಲ ಪೂರೈಕೆ ಸಹಜ ಸ್ಥಿತಿಗೆ ಬರಲು ಆರು ತಿಂಗಳು ಬೇಕಾಗುತ್ತದೆ ಎಂದು ಅದು ಎಚ್ಚರಿಸಿತ್ತು.

ಯುದ್ಧದಿಂದ ಹೊರ್ಮುಜ್ ಜಲಸಂಧಿ ಮೂಲಕ ತೈಲ ಸಾಗಣೆಗೆ ತೊಡಕುಂಟಾಗಿ ಒಪೆಕ್ ರಾಷ್ಟ್ರಗಳು ಈಗಾಗಲೇ ಸಮಸ್ಯೆ ಎದುರಿಸುತ್ತಿವೆ. ಇದೇ ಸಂದರ್ಭದಲ್ಲಿ ಯುಎಇ ಕೂಟ ತೊರೆಯುವ ತೀರ್ಮಾನ ತಳೆದಿರುವುದು ತೈಲ ಮಾರುಕಟ್ಟೆಯಲ್ಲಿ ಮತ್ತಷ್ಟು ತಲ್ಲಣ ಉಂಟುಮಾಡಲಿದೆ. ಪ್ರಸ್ತುತ ಹೊರ್ಮುಜ್ ಜಲಸಂಧಿಯಲ್ಲಿ ನಿಯಂತ್ರಿತ ತೈಲ, ಅನಿಲ ಸಾಗಣೆಗೆ ಮಾತ್ರ ಅವಕಾಶ ಇರುವುದರಿಂದ ಹೆಚ್ಚೇನೂ ಪರಿಣಾಮಗಳಾಗುವುದಿಲ್ಲ. ಆದರೆ, ಮುಂದಿನ ದಿನಗಳಲ್ಲಿ ಅಂತರರಾಷ್ಟ್ರೀಯ ಸಂಬಂಧಗಳಲ್ಲಿ, ತೈಲ ಪೂರೈಕೆ ವ್ಯವಸ್ಥೆಯಲ್ಲಿ ಮತ್ತು ತೈಲ ಬೆಲೆಯಲ್ಲಿ ಗಮನಾರ್ಹ ಬದಲಾವಣೆಗಳು ಸಂಭವಿಸಲಿವೆ ಎನ್ನಲಾಗುತ್ತಿದೆ.

ಆಧಾರ: ರಾಯಿಟರ್ಸ್, ಬಿಬಿಸಿ, ಮಿಡ್ಲ್ ಈಸ್ಟ್ ಇನ್‌ಸ್ಟಿಟ್ಯೂಟ್, ಒಪೆಕ್.ಒಆರ್‌ಜಿ

ಪರಿಣಾಮ ಏನು?

- ಒಪೆಕ್ ರಾಷ್ಟ್ರಗಳು ಉತ್ಪಾದಿಸುವ ಒಟ್ಟು ತೈಲದಲ್ಲಿ ಯುಎಇ ಪಾಲು ಶೇ 15ರಷ್ಟು ಇದೆ. ಅದು ಕೂಟದಿಂದ ಹೊರನಡೆಯುತ್ತಿರುವುದರಿಂದ ಈ ರಾಷ್ಟ್ರಗಳು ಉತ್ಪಾದಿಸುವ ತೈಲದ ಪ್ರಮಾಣ ಕುಸಿತವಾಗಲಿದೆ
- ಪಶ್ಚಿಮ ಏಷ್ಯಾ ಯುದ್ಧದಿಂದ ಜಾಗತಿಕ ತೈಲ ಮಾರುಕಟ್ಟೆಯಲ್ಲಿ ಅನಿಶ್ಚಿತತೆ ತಲೆದೋರಿರುವ ಸಂದರ್ಭದಲ್ಲೇ ಯುಎಇ ಈ ನಿರ್ಧಾರ ಕೈಗೊಂಡಿರುವುದರಿಂದ ಇದರ ಪರಿಣಾಮ ತೈಲ ಮಾರುಕಟ್ಟೆಯ ಮೇಲೆ ಆಗಲಿದೆ
- ತೈಲ ಉತ್ಪಾದನೆ, ಪೂರೈಕೆ ಮತ್ತು ಬೆಲೆಯ ನಿರ್ವಹಣೆಗಾಗಿ ಒಪೆಕ್ ರಾಷ್ಟ್ರಗಳು ಕೋಟಾ ವ್ಯವಸ್ಥೆಯನ್ನು ಅನುಸರಿಸುತ್ತಿದ್ದವು. ಯುಎಇಯ ದಿಢೀರ್ ಘೋಷಣೆಯು ಈ ವ್ಯವಸ್ಥೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ
- ತೈಲ ಮಾರುಕಟ್ಟೆಯು ಪ್ರಸ್ತುತ ಬಿಕ್ಕಟ್ಟಿನ ಸನ್ನಿವೇಶ ಎದುರಿಸುತ್ತಿರುವುದರಿಂದ ಯುಎಇಯ ನಿರ್ಧಾರದ ಪರಿಣಾಮ ತಕ್ಷಣಕ್ಕೆ ಗೊತ್ತಾಗದು. ಅದು ಹೆಚ್ಚು ತೈಲ ಉತ್ಪಾದನೆ ಮಾಡಿದರೂ, ಅದನ್ನು ಮಾರಾಟ ಮಾಡಲು ಸಾಧ್ಯವಾಗದು. ಯುದ್ಧ ಕೊನೆಗೊಂಡು, ತೈಲ ಪೂರೈಕೆ ಸಹಜ ಸ್ಥಿತಿಗೆ ತಲುಪಿದಾಗ, ಯುಎಇಗೆ ಹೆಚ್ಚು ತೈಲ ಪೂರೈಕೆ ಸಾಧ್ಯವಾಗಬಹುದು
- ಯುಎಇ ನಿರ್ಧಾರದಿಂದ ಜಾಗತಿಕ ತೈಲ ಉತ್ಪಾದನೆ ಹೆಚ್ಚಾಗಲಿದ್ದು, ಬೆಲೆ ಇಳಿಕೆಗೆ ಕಾರಣವಾಗಲಿದೆ ಎಂದು ರಷ್ಯಾ ಹೇಳಿದೆ



ಡೊನಾಲ್ಡ್ ಟ್ರಂಪ್ ಗೆಲುವು?

ಒಪೆಕ್‌ನಿಂದ ಯುಎಇ ಹೊರಬಂದಿರುವುದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಗೆಲುವು ಎಂದೂ ವಿಶ್ಲೇಷಿಸಲಾಗುತ್ತಿದೆ. ತೈಲ ದರ ಇಳಿಸಬೇಕು ಎಂದು ಯುದ್ಧ ಆರಂಭವಾಗುವುದಕ್ಕೆ ಕೆಲವೇ ದಿನಗಳ ಮುಂಚೆ ಟ್ರಂಪ್ ಅವರು ಸೌದಿ ಅರೇಬಿಯಾಗೆ ಹೇಳಿದ್ದರು. ಇಲ್ಲದಿದ್ದರೆ ಭಾರಿ ಸುಂಕ ವಿಧಿಸುವುದಾಗಿ ಬೆದರಿಕೆಯನ್ನೂ ಒಡ್ಡಿದ್ದರು. ಒಪೆಕ್ ರಾಷ್ಟ್ರಗಳು ಇತರೆ ರಾಷ್ಟ್ರಗಳನ್ನು ಸುಲಿಯುತ್ತಿವೆ. ಅಮೆರಿಕವು ಒಪೆಕ್ ರಾಷ್ಟ್ರಗಳ ಪರ ಇದೆ. ಆದರೆ, ಅವು ತೈಲ ಬೆಲೆ ಏರಿಸುವ ಮೂಲಕ ಶೋಷಣೆ ಮಾಡುತ್ತಿವೆ ಎಂದಿದ್ದರು. ಈ ಬೆಳವಣಿಗೆಗಳ ನಡುವೆಯೇ ಯುಎಇ, ಅಮೆರಿಕಕ್ಕೆ ಹೆಚ್ಚು ಹತ್ತಿರವಾಗಿತ್ತು. ಯುಎಇ ನಿರ್ಧಾರದಿಂದ ಅಮೆರಿಕ ಸೇರಿದಂತೆ ಹಲವು ರಾಷ್ಟ್ರಗಳಿಗೆ ಹೆಚ್ಚು ಪ್ರಯೋಜನವಿದೆ ಎನ್ನಲಾಗುತ್ತಿದೆ.

ಭಾರತಕ್ಕೆ ಅನುಕೂಲವೇ?

ಯುಎಇನೊಂದಿಗೆ ಭಾರತ ಅತ್ಯುತ್ತಮ ವ್ಯಾಪಾರ ಸಂಬಂಧ ಹೊಂದಿದೆ. ಹಾಗಾಗಿ, ಒಪೆಕ್‌ನಿಂದ ಹೊರ ಬರುವ ಯುಎಇಯ ನಿರ್ಧಾರವು ಭಾರತಕ್ಕೆ ಅನುಕೂಲಕರವಾಗಲಿದೆ ಎಂದು ಹೇಳಲಾಗುತ್ತಿದೆ.


ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವೆ ಸಂಘರ್ಷ ಆರಂಭಗೊಂಡ ನಂತರ ಹೊರ್ಮುಜ್ ಜಲಸಂಧಿಯಲ್ಲಿ ಎಲ್‌ಪಿಜಿ, ತೈಲ ಸಾಗಣೆಗೆ ಅಡಚಣೆ ಉಂಟಾಗಿದ್ದರಿಂದ ಭಾರತವು ಇಂಧನ ಕೊರತೆಯನ್ನು ಎದುರಿಸುತ್ತಿದ್ದು, ಬೇರೆ ಬೇರೆ ರಾಷ್ಟ್ರಗಳಿಂದ ತನಗೆ ಬೇಕಾದಷ್ಟು ಅನಿಲ, ತೈಲ ಖರೀದಿಸಲು ಯತ್ನಿಸುತ್ತಿದೆ.

ಯುಎಇಯು ಒಕ್ಕೂಟದಿಂದ ಹೊರಬಂದಿರುವುದರಿಂದ ತನ್ನ ಇಚ್ಛೆಯಂತೆ ತೈಲ ಉತ್ಪಾದನೆ ಮತ್ತು ಮಾರಾಟ ಮಾಡುವುದಕ್ಕೆ ಅದಕ್ಕೆ ಅವಕಾಶ ಸಿಗಲಿದೆ. ಭಾರತಕ್ಕೂ ಅದು ತೈಲ ಮಾರಾಟ ಮಾಡಬಹುದು, ಕಡಿಮೆ ಬೆಲೆಗೂ ನೀಡಬಹುದು.

ಈ ತಿಂಗಳಲ್ಲಿ (ಏಪ್ರಿಲ್) ಭಾರತವು ಪ್ರತಿ ದಿನ 6.20 ಲಕ್ಷ ಬ್ಯಾರಲ್‌ಗಳಷ್ಟು ತೈಲ ಖರೀದಿಸಿದೆ ಎಂದು ಅಂದಾಜಿಸಲಾಗಿದೆ.

ಯುಎಇ: ಒಪೆಕ್‌ನ ನಾಲ್ಕನೇ ಅತಿ ದೊಡ್ಡ ತೈಲ ಉತ್ಪಾದಕ ರಾಷ್ಟ್ರ

ಪ್ರತಿ ದಿನದ ಕಚ್ಚಾ ತೈಲ ಉತ್ಪಾದನೆ –2024 (ಲಕ್ಷ ಬ್ಯಾರಲ್‌ಗಳಲ್ಲಿ)



ಒಪೆಕ್, ಒಪೆಕ್+ ರಾಷ್ಟ್ರಗಳು

ಒಪೆಕ್ (OPEC)- ಪೆಟ್ರೋಲಿಯಂ ಉತ್ಪನ್ನಗಳನ್ನು ರಫ್ತು ಮಾಡುವ ರಾಷ್ಟ್ರಗಳ ಒಕ್ಕೂಟ (Organisation of the petroleum exporting countries). ಸದ್ಯ ಈ ಕೂಟದಲ್ಲಿ 12 ಸದಸ್ಯ ರಾಷ್ಟ್ರಗಳಿವೆ. ಯುಎಇಯು ಇದರಿಂದ ಹೊರಬರುವ ಘೋಷಣೆ ಮಾಡಿರುವುದರಿಂದ ಮೇ 1ರ ಬಳಿಕ ಸದಸ್ಯರ ಸಂಖ್ಯೆ 11ಕ್ಕೆ ಇಳಿಯಲಿದೆ.

ಒಪೆಕ್ ಸ್ಥಾಪನೆಯಾಗಿದ್ದು 1960ರಲ್ಲಿ ಇರಾಕ್‌ನ ಬಾಗ್ದಾದ್‌ನಲ್ಲಿ. ಇರಾನ್, ಇರಾಕ್, ಕುವೈತ್, ಸೌದಿ ಅರೇಬಿಯಾ ಮತ್ತು ವೆನೆಜುವೆಲಾ ಇದರ ಸಂಸ್ಥಾಪಕ ಸದಸ್ಯರು. ಯುಎಇ ಇದಕ್ಕೆ ಸೇರ್ಪಡೆಗೊಂಡಿದ್ದು 1967ರಲ್ಲಿ.


ಜಾಗತಿಕ ತೈಲ ಮಾರುಕಟ್ಟೆಯಲ್ಲಿ ಪಶ್ಚಿಮದ ರಾಷ್ಟ್ರಗಳ ಪ್ರಾಬಲ್ಯಕ್ಕೆ ಕಡಿವಾಣ ಹಾಕಲು, ಜಾಗತಿಕವಾಗಿ ಕಚ್ಚಾ ತೈಲದ ಬೆಲೆಯ ಸ್ಥಿರತೆ ಕಾಪಾಡಲು, ಪೆಟ್ರೋಲಿಯಂ ನೀತಿಗಳಿಗೆ ಸಂಬಂಧಿಸಿದಂತೆ ಸಮನ್ವಯ ಸಾಧಿಸುವ ಉದ್ದೇಶದಿಂದ ಒಪೆಕ್ ಸ್ಥಾಪಿಸಲಾಗಿತ್ತು.

1961ರಲ್ಲಿ ಕತಾರ್, 1962ರಲ್ಲಿ ಇಂಡೊನೇಷ್ಯಾ, ಲಿಬಿಯಾ, 1969ರಲ್ಲಿ ಅಲ್ಜೀರಿಯಾ, 1971ರಲ್ಲಿ ನೈಜೀರಿಯಾ, 1973ರಲ್ಲಿ ಈಕ್ವೆಡಾರ್, 1975ರಲ್ಲಿ ಗಬಾನ್, 2007ರಲ್ಲಿ ಅಂಗೋಲಾ, 2017ರಲ್ಲಿ ಈಕ್ವಟೋರಿಯಲ್ ಗಿನಿಯಾ ಮತ್ತು 2018ರಲ್ಲಿ ಕಾಂಗೊ ರಾಷ್ಟ್ರಗಳು ಈ ಸಂಘಟನೆಗೆ ಸೇರ್ಪಡೆಗೊಂಡವು.

ಒಪೆಕ್‌ನ ಆರೂವರೆ ದಶಕಗಳ ಇತಿಹಾಸದಲ್ಲಿ ಕೆಲವು ಸದಸ್ಯ ರಾಷ್ಟ್ರಗಳು ಸಂಘಟನೆಯಿಂದ ಹೊರಬರುವುದು, ಕೆಲವು ವರ್ಷಗಳ ನಂತರ ಮತ್ತೆ ಸೇರ್ಪಡೆಗೊಳ್ಳುವ ಪ್ರಕ್ರಿಯೆ ನಡೆಯುತ್ತಾ ಬಂದಿದೆ. ಕತಾರ್, ಈಕ್ವೆಡಾರ್, ಇಂಡೊನೇಷ್ಯಾ, ಅಂಗೋಲಾ ರಾಷ್ಟ್ರಗಳು ಸಂಘಟನೆಯಿಂದ ಹೊರಬಂದಿವೆ.

2016ರಲ್ಲಿ ಒಪೆಕ್ ರಾಷ್ಟ್ರಗಳೊಂದಿಗೆ ರಷ್ಯಾ ಸೇರಿದಂತೆ ಇನ್ನೂ 10 ರಾಷ್ಟ್ರಗಳನ್ನು ಒಳಗೊಂಡು ಒಪೆಕ್ + ಒಕ್ಕೂಟವನ್ನು ಸ್ಥಾಪನೆ ಮಾಡಲಾಯಿತು.

ಒಪೆಕ್ ರಾಷ್ಟ್ರಗಳಲ್ಲದೆ, ರಷ್ಯಾ, ಅಜರ್‌ಬೈಜನ್, ಬಹರೇನ್, ಬ್ರೂನೈ, ಕಜಕಿಸ್ತಾನ್, ಮಲೇಷ್ಯಾ, ಮೆಕ್ಸಿಕೊ, ಒಮಾನ್, ದಕ್ಷಿಣ ಸುಡಾನ್ ಮತ್ತು ಸುಡಾನ್ ಒಪೆಕ್ + ಕೂಟದಲ್ಲಿವೆ.



ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256


‘ಪಶ್ಚಿಮ ಬಂಗಾಳದಲ್ಲಿ ಎರಡನೇ ಹಂತದ ಮತದಾನ ಇನ್ನೂ ಮುಕ್ತಾಯಗೊಂಡಿಲ್ಲ. ಆದರೆ, ನರೇಂದ್ರ ಮೋದಿ ನೇತೃತ್ವದ ಜನ ವಿರೋಧಿ ಸರ್ಕಾರ ಪ್ರತಿ ಲೀಟರ್ ಪೆಟ್ರೋಲ್ ದರವನ್ನು ₹10 ಮತ್ತು ಪ್ರತಿ ಲೀಟರ್ ಡೀಸೆಲ್ ದರವನ್ನು ₹12.50ರಷ್ಟು ಹೆಚ್ಚಿಸಿದೆ’ ಎಂದು ಪ್ರತಿಪಾದಿಸುತ್ತಾ ಪೆಟ್ರೋಲ್ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಹೊರಡಿಸಿರುವ ಆದೇಶ ಎನ್ನಲಾದ ಒಂದು ದಾಖಲೆಯನ್ನೂ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು.



ಸಚಿವಾಲಯವು ಇಂತಹ ಆದೇಶ ಹೊರಡಿಸಿರುವ ಬಗ್ಗೆ ಅಧಿಕೃತ ಮಾಹಿತಿ ಎಲ್ಲೂ ಇಲ್ಲ. ಚುನಾವಣೆಯ ಬಳಿಕ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳವಾಗುತ್ತದೆ ಎಂಬ ವದಂತಿ ಕೆಲವು ದಿನಗಳಿಂದ ದೇಶದಾದ್ಯಂತ ಹರಡಿದ್ದು, ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ಅವರು ಈ ಬಗ್ಗೆ ಮಂಗಳವಾರ ಸ್ಪಷ್ಟನೆ ನೀಡಿದ್ದರು. ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಹೆಚ್ಚಿಸುವ ಆಲೋಚನೆಯನ್ನು ಸರ್ಕಾರ ಹೊಂದಿಲ್ಲ ಎಂದು ಹೇಳಿದ್ದರು. ಈಗ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿರುವ ಆದೇಶದ ಪ್ರತಿಗೆ ಸಂಬಂಧಿಸಿದಂತೆ ಪಿಐಬಿ ಫ್ಯಾಕ್ಟ್‌ಚೆಕ್ ಮಾಡಿದ್ದು, ‘ಇದು ನಕಲಿ ಆದೇಶ ಪತ್ರ. ಪೆಟ್ರೋಲಿಯಂ ಸಚಿವಾಲಯ ಅಂತಹ ಆದೇಶವನ್ನು ಹೊರಡಿಸಿಲ್ಲ’ ಎಂದು ಹೇಳಿದೆ.

ನುಡಿ ಬೆಳಗು

ಮಹತ್ತೇ ಮಾನವನ ಗುರಿ



ಪಿ.ಚಂದ್ರಿಕಾ

ಇಸ್ಲಾಂನ ಗುರು ಪರಂಪರೆಯ ದೊಡ್ಡ ಹೆಸರು ಖಯ್ಯಾಮರದು. ಅವರಿಂದ ಕೆಲ ಮಾತುಗಳನ್ನು ಕೇಳಬೇಕೆಂದು ಜನ ಬಯಸುತ್ತಿದ್ದರು. ಆದರೆ, ಖಯ್ಯಾಮರು ಒಂದು ಕಡೆ ನೆಲೆ ನಿಲ್ಲದೆ ಶಿಷ್ಯರನ್ನೂ ಕರೆದುಕೊಂಡು ತಮ್ಮ ಮನಸ್ಸು ಬಂದಕಡೆ ಸಂಚರಿಸುತ್ತಾ, ಜನರ ಕಷ್ಟಗಳಿಗೆ ಪರಿಹಾರ ಸೂಚಿಸುತ್ತಿದ್ದರು.


ಒಂದು ದಿನ ಖಯ್ಯಾಮರು ಅಲೆದಾಡುತ್ತಾ ತಮ್ಮ ಶಿಷ್ಯರ ಜತೆಯಲ್ಲಿ ಅಡವಿಯೊಂದಕ್ಕೆ ಬಂದರು. ಅದೊಂದು ದುರ್ದಮ್ಯವಾದ ಅರಣ್ಯ. ಹಾವು ಮುಂಗುಸಿಗಳಿಂದ ಹಿಡಿದು ಹುಲಿ ಸಿಂಹದವರೆಗೆ ಎಲ್ಲಾ ಪ್ರಾಣಿಗಳೂ ಅಲ್ಲಿ ವಾಸವಾಗಿದ್ದವು. ಹೀಗೆ ನಡೆಯುತ್ತಾ ಬರುವಾಗ ಪ್ರಾರ್ಥನೆಯ ಹೊತ್ತು ಸಮೀಪಿಸಿತು. ನಾಡಾದರೇನು, ಕಾಡಾದರೇನು? ನಮ್ಮನ್ನು ಹೀಗೆ ಸೃಷ್ಟಿಸಿರುವ ಭಗವಂತನಿಗೆ ಕೃತಜ್ಞತಾಪೂರ್ವಕವಾಗಿ ಪ್ರಾರ್ಥನೆಯನ್ನು ಸಲ್ಲಿಸಲೇಬೇಕಲ್ಲವೇ? ಗುರುಗಳ ಆದೇಶದ ಮೇರೆಗೆ ಅವರ ಜೊತೆ ಶಿಷ್ಯರೂ ಕಾಡಿನ ಮಧ್ಯದಲ್ಲೆ ಪ್ರಾರ್ಥನೆಗೆ ಕುಳಿತರು.

ಹೀಗೆ ಪ್ರಾರ್ಥಿಸುತ್ತಿರುವಾಗ ಶಿಷ್ಯರಿಗೆ ಸ್ವಲ್ಪ ದೂರದಲ್ಲೇ ಸಿಂಹದ ಗರ್ಜನೆ ಕೇಳಿತು. ಅದನ್ನು ಕೇಳಿದ ತಕ್ಷಣ ಅವರೆಲ್ಲರೂ ತಮ್ಮ ತಮ್ಮ ಜೀವವನ್ನು ಉಳಿಸಿಕೊಳ್ಳಲು ದಿಕ್ಕಾಪಾಲಾಗಿ ಓಡಿದರು. ಕೆಲವರು ಮರವನ್ನೇರಿದರೆ, ಕೆಲವರು ಗುಡ್ಡಗಳನ್ನೇರಿದರು. ಖಯ್ಯಾಮರು ಮಾತ್ರ ಇದ್ಯಾವುದರ ಪರಿವೆಯೂ ಇಲ್ಲದೆ ಪ್ರಾರ್ಥನೆಯಲ್ಲಿ ಲೀನವಾಗಿದ್ದರು. ನೋಡನೋಡುತ್ತಿದ್ದಂತೆ ಸಿಂಹ ಅದೇ ದಾರಿಯಲ್ಲಿ ಗಂಭೀರವಾಗಿ ನಡೆಯುತ್ತಾ ಬಂದಿತು. ಅದರ ಹೊಟ್ಟೆ ತುಂಬಿದ್ದರಿಂದಲೋ ಏನೋ, ಖಯ್ಯಾಮರನ್ನು ನೋಡಿಯೂ ನೋಡದಂತೆ ಹೊರಟುಹೋಯಿತು. ಅದು ಹೋದ ಮೇಲೆ ಶಿಷ್ಯರೆಲ್ಲರೂ ಗುರುವಿನ ಬಳಿ ಬಂದರು. ಖಯ್ಯಾಮರಿಗೆ ತಮ್ಮ ಬಳಿ ಸಿಂಹವೊಂದು ಹೋದದ್ದರಿಂದ ಶಿಷ್ಯರು ಪ್ರಾರ್ಥನೆ ಮಾಡಿಲ್ಲ ಎನ್ನುವುದರ ಅರಿವೇ ಇರಲಿಲ್ಲ.

ತಮ್ಮ ಪಯಣವನ್ನು ಖಯ್ಯಾಮರು ಮುಂದುವರಿಸಿದರು. ಸ್ವಲ್ಪ ದೂರವಷ್ಟೇ, ದಟ್ಟ ಅಡವಿಯಲ್ಲಿ ಸೊಳ್ಳೆಗಳು ಕಚ್ಚತೊಡಗಿದವು. ಖಯ್ಯಾಮರು ಅಯ್ಯೋ ಅಯ್ಯೋ ಎನ್ನತೊಡಗಿದರು. ಶಿಷ್ಯರಿಗೆ ಅಚ್ಚರಿ. ಅವರು, ‘ಗುರುಗಳೇ ಇದು ಬಹಳ ಅಚ್ಚರಿಯ ವಿಷಯ. ನೀವು ಪ್ರಾರ್ಥನೆಯಲ್ಲಿದ್ದಾಗ ಸಿಂಹವು ನಿಮ್ಮ ಬಳಿ ಹಾದುಹೋದರೂ ನಿಮಗೆ ಅದರ ಅರಿವಾಗಲಿಲ್ಲ. ಭಯವಿಲ್ಲದೆ ಕುಳಿತಿದ್ದಿರಿ. ಈಗ ಈ ಸಣ್ಣ ಸೊಳ್ಳೆ ಕಚ್ಚಿದ್ದಕ್ಕೆ ಕೂಗುತ್ತಿದ್ದೀರಲ್ಲಾ’ ಎಂದು ಕೇಳಿದರು. ‘ಹೌದೇ, ನನ್ನ ಬಳಿ ಸಿಂಹವೊಂದು ಹಾದುಹೋಯಿತೇ? ನನಗದು ಗೊತ್ತೇ ಆಗಲಿಲ್ಲ’ ಎಂದರು ಖಯ್ಯಾಮರು. ‘ಗೊತ್ತಾಗಲಿಲ್ಲ? ಸಿಂಹ ಗರ್ಜನೆಗೆ ನಮ್ಮ ಮೈಪೂರ ಬೆವರಿನಿಂದ ನೆಂದು ಒದ್ದೆ ಆಗಿಬಿಟ್ಟಿತ್ತು. ನಿಮಗೆ ಕೇಳಲಿಲ್ಲವೆಂದರೆ ಹೇಗೆ? ಸಣ್ಣ ಸೊಳ್ಳೆ ಕಚ್ಚಿದರೆ ನೋವಾಗುವ ನಿಮಗೆ, ಸಿಂಹ ತಿನ್ನಬಹುದು ಎನ್ನುವ ಭೀತಿ ಕಾಡಲಿಲ್ಲವೇ?’ ಎಂದರು. ಖಯ್ಯಾಮರು ನಕ್ಕು, ‘ಅಯ್ಯಾ, ನಾನು ಪ್ರಾರ್ಥನೆಯ ಹೊತ್ತಲ್ಲಿ ಜಗತ್ತಿನ ಮಹತ್ತಿನ ಶಕ್ತಿಯಾದ ಭಗವಂತನ ಸಾನ್ನಿಧ್ಯದಲ್ಲಿದ್ದೆ. ಹಾಗಾಗಿ ನನ್ನ ಜೀವವೇ ಹೋಗಿದ್ದರೂ ತಿಳಿಯುತ್ತಿರಲಿಲ್ಲ. ಅದೇ ಸೊಳ್ಳೆ ಕಚ್ಚುವಾಗ ಮನುಷ್ಯರ ಜೊತೆಗಿದ್ದೇನೆ, ಅದಕ್ಕೆ ನೋವು ಗೊತ್ತಾಯಿತು. ಅರ್ಥವಾಯಿತೇ, ನಾವು ಯಾವುದರ ಜೊತೆ ಇದ್ದರೆ ನಿರ್ಭೀತರಾಗಿರುತ್ತೇವೆಯೋ ಅದೇ ಮಹತ್ತದಾದ್ದು. ಮತ್ತು ನಾವು ಸದಾ ಅದರ ಜೊತೆ ಮಾತ್ರ ಇರಬೇಕು ಎಂದರು.

ನಿರ್ಭೀತವಾಗಿರುವುದೇ ಮನುಷ್ಯನ ಆತ್ಯಂತಿಕ ಸ್ಥಿತಿ ಕೂಡಾ. ❖

ಗುಂಡಣ್ಣ



ಪದಬಂಧ 6389


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಪರಿವರ್ತನೆಯ ಯುಗ (4)
3. ಗೋವಿನ ಹತ್ತಿರ ನುಡಿಸಿರುವ ಕೊಳಲು (4)
5. ಲಕಲಕ ಹೊಳೆಯುತ್ತಿರುವ ಕುಂಕುಮ (3)
7. ಪತ್ರ ಬರೆದಿರುವ ಸ್ನೇಹಿತ (2)
9. ಕಾಡಿನ ರಕ್ಷಕ ಇಲ್ಲಿದಾನೆ (5)
11. ಒಂದು ಸ್ಥಳದ ಬಗ್ಗೆ ಹೇಳುವ ಸಾಂಪ್ರದಾಯಿಕ ಕಥೆ (5)
13. ತರಾತುರಿ ಏಕೆ? ಇದು ನೀರಾವರಿ ಭೂಮಿ! (2)
16. ನಾಯಕನ ಹತ್ತಿರವಿರುವ ಹಾಡುಗಾರ (3)
18. ಸನ್ನಿ ಹಿಡಿದವನ ಎದುರು! (4)
19. ಸರಿ ರಾತ್ರಿಯಲ್ಲಿ ಕಾಣಿಸಿದ ಸಮುದ್ರ! (4)

ಮೇಲಿಂದ ಕೆಳಕ್ಕೆ

1. ಗಿಡಮರಗಳೇನೂ ಬೆಳೆಯದ ಬಂಜರು ನೆಲ (4)
2. ಮನ್ಮಥನ ಪತ್ನಿ (2)
3. ಕಪಿ ಲಾಗಾ ಹಾಕಿದರೆ ಗಿಳಿ ಕಾಣುವುದಲ್ಲಾ! (2)
4. ವಿಧ್ವಂಸಕವನ್ನು ತಡೆಗಟ್ಟಿದ ಪಂಡಿತ (3)
6. ಗಿಡ್ಡಿಯನ್ನು ಗುದ್ದಿದರೆ ನೂರು ಮಕ್ಕಳು! ಈ ಒಗಟಿನ ಉತ್ತರ (3)
8. ನ್ಯಾಯ ತೀರ್ಮಾನ ಮಾಡುವವನು (3)
10. ತಡಿಕೆಯಲ್ಲಿದ್ದಾಗ ಉಂಟಾದ ನವೆ (3)
12. ಕರ್ಣನ ಇನ್ನೊಂದು ಹೆಸರು (3)
14. ರೀತಿ ನಿಯಮದಂತೆ ಸಿಕ್ಕಿರುವ ಸೋಡಿ (4)
15. ಆಯಾಳಿಗೆ ಆಗಿರುವ ಸುಸ್ತು (3)
16. ಗಾಂಪನ ಬಾಯಲ್ಲಿ ಹೇಳಿಸಿದ ಹಾಡು (2)
17. ಸರೀಕನ ಮನೆಯಲ್ಲಿರುವ ಗಲೀಜು (2)



6388ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಷಾದ 3.ಗುಮಾನಿ 5.ನರ 6.ರಿಪೇರಿ 7.ಯಮ 9.ಶಿಶಿರ 10.ಅಡವಿ 11.ತಟ 13.ಪರಾಗ 15.ಸರ 16.ಲುಬ್ಧಕ 17.ಕ್ಷಿತಿಜ

ಮೇಲಿಂದ ಕೆಳಕ್ಕೆ:
1.ವಿವರ 2.ದಳ್ಳುರಿ 3.ಗುಜರಿ 4.ನಿಶ್ಚಯ 5.ನಖಶಿಖಾಂತ 8.ಮನೋವಿಕಾರ 12.ಟಪಾಲು 13.ಪದಕ 14.ಗವಾಕ್ಷಿ 15.ಸರೋಜ

ಸುಡೊಕು 6772

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2		9			7	1		4
				3				
5		7	4		6	2		3
					5		3	1
	5	1		8	3		2	
3			9					8
		2		1		8		5
9			7		8			
	8			2		4		

6771 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

30 ಏಪ್ರಿಲ್ 2026 ಗುರುವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ಚತುರ್ದಶಿ ಗಂ. 21-13 ನಕ್ಷತ್ರ: ಚಿತ್ರಾ ಗಂ. 26-17 ಯೋಗ: ವಜ್ರ ಗಂ. 20-55 ಕರಣ: ಗರ ಗಂ. 8-30, ಮೇಷ ಮಾಸದ 17 ನೇ ದಿನ. ಮಳೆ ನಕ್ಷತ್ರ : ಭರಣಿ 1 ನೇ ಪಾದ. ರಾಹುಕಾಲ : ಮಧ್ಯಾಹ್ನ 01-30 - 03-00 , ಸೂರ್ಯೋದಯ : 06-13 ಸೂರ್ಯಾಸ್ತ : 06-42, ಮುಸ್ಲಿಂ ದಿನಾಂಕ : 11 ಜುಲ್ಕಾದಾ ದಿನ ವಿಶೇಷ : ನರಸಿಂಹ ಜಯಂತಿ , ಅದೃಷ್ಟ ಸಂಖ್ಯೆ : 9, 1

ಮೇಷ: ಸಹೋದ್ಯೋಗಿಗಳೊಡನೆ ಅಥವಾ ಆಪ್ತ ಸ್ನೇಹಿತರೊಡನೆ ಹಣಕಾಸಿನ ವ್ಯವಹಾರದಿಂದ ಸಂಬಂಧಕ್ಕೆ ಹುಳಿ ಹಿಂಡಿದಂತಾಗಲಿದೆ. ಪ್ರೀತಿ ಪಾತ್ರರೊಡನೆ ಆತ್ಮೀಯ ಗೆಳತನ ಇಟ್ಟುಕೊಳ್ಳಿ. ಕಾಗದಪತ್ರ ನಿರ್ವಹಣೆಯಲ್ಲಿ ಎಚ್ಚರವಹಿಸಿ.

ವೃಷಭ: ಕಲಾವಿದರಿಗೆ ಉತ್ತಮ ಅವಕಾಶವಿದ್ದರೂ ಅದನ್ನು ಸದುಪಯೋಗ ಪಡಿಸಿಕೊಳ್ಳುವುದು ಕಷ್ಟಕರವಾಗಲಿದೆ. ಸಂಸ್ಥೆಯ ಆರ್ಥಿಕ ಆದಾಯ ಹೆಚ್ಚಿಸಲು ಶ್ರಮ ಅಗತ್ಯ.

ಮಿಥುನ: ಬಹುದಿನಗಳಿಂದ ಕಾಡುತ್ತಿರುವ ಅಜೀರ್ಣದ ಸಮಸ್ಯೆಯಿಂದ ಜೀವನ ಉತ್ಸಾಹ ಕಳೆದುಕೊಂಡು ಆಲಸ್ಯವನ್ನು ಹೊಂದುವಿರಿ. ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಲು ಕಾದು ನೋಡುವ ತಂತ್ರ ಅನುಸರಿಸಿ.

ಕರ್ಕಾಟಕ: ನಿದ್ರಾಹೀನತೆಯಿಂದಾಗಿ ಸಂಭ್ರಮದ ಸಂದರ್ಭಗಳನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ. ಮೆಕ್ಯಾನಿಕ್‌ಗಳಿಗೆ ಹೆಚ್ಚು ಆದಾಯ ತರುವ ದಿನ. ನಂಬಿಸಿ ಮೋಸ ಮಾಡುವವರ ಬಲೆಗೆ ನೀವಿಂದು ಬೀಳುವ ಸಾಧ್ಯತೆ.

ಸಿಂಹ: ಕೆಲಸದಲ್ಲಿ ಸಾಗುತ್ತಿರುವ ಮಾರ್ಗವು ಸರಿಯಾಗಿದೆ ಎಂಬ ದೃಢತೆ ನಿಮಗೆ ಬರಲಿದೆ. ದುರಭ್ಯಾಸದಿಂದ ದೂರ ಉಳಿಯುವ ಪ್ರಯತ್ನಕ್ಕೆ ಸ್ನೇಹಿತರು ತೊಂದರೆ ಮಾಡಬಹುದು.

ಕನ್ಯಾ: ಸಾರ್ವಜನಿಕರಲ್ಲಿ ಹೆಚ್ಚಾಗಿ ಬೆರೆಯುವ ಸಂದರ್ಭ ಬರುವುದರಿಂದ ಆರೋಗ್ಯದಲ್ಲಿ ಗಮನವಹಿಸಿ. ಸುದ್ದಿಗೋಷ್ಠಿಗಳಲ್ಲಿ ಭಾಗವಹಿಸುವ ಉತ್ತಮ ಅವಕಾಶ ಪಡೆಯುವಿರಿ. ವಿದ್ಯಾಭ್ಯಾಸ ನಿಶ್ಚಿಂತೆಯಿಂದ ಸಾಗಲಿದೆ.

ತುಲಾ: ಬಹುಕಾಲ ನೆನಪಿನಲ್ಲಿ ಉಳಿಯುವಂಥ ಮಧುರ ಘಟನೆ ಮನೆಯಲ್ಲಿ ನಡೆಯಲಿದೆ. ವಾಹನ ಚಾಲನೆಯಲ್ಲಿ ಅಥವಾ ಕಬ್ಬಿಣ ಕೆಲಸ ಮಾಡುವವರು ಕಾಳಜಿ ವಹಿಸಿ. ಸಿದ್ಧ ಉಡುಪು ಮಾರಾಟಗಾರರಿಗೆ ಶುಭದಿನ.

ವೃಶ್ಚಿಕ: ವೈಯಕ್ತಿಕವಾದ ಕಷ್ಟಗಳನ್ನು ಯಾರಲ್ಲಿಯೂ ಹೇಳಿಕೊಳ್ಳಬೇಡಿ. ಅನುಕಂಪ ತೋರುವ ಬದಲು ಗೇಲಿ ಮಾಡುವವರೇ ಅಧಿಕವಾಗಿ ಸಿಗುತ್ತಾರೆ. ತಲೆನೋವಿನಂತ ಸಮಸ್ಯೆ ಎದುರಾಗಬಹುದು.


ಧನು: ಕೆಲಸವನ್ನು ಮುಂದೂಡುವ ಅಭ್ಯಾಸ ಕಡಿಮೆ ಮಾಡಿಕೊಳ್ಳುವುದು ಒಳ್ಳೆಯದು. ಅನಗತ್ಯವಾಗಿ ಮಧ್ಯಸ್ಥಿಕೆ ವಹಿಸುವುದು ಸಮಸ್ಯೆಯನ್ನು ಕೈಬೀಸಿ ಕರೆದಂತಾಗುತ್ತದೆ. ಜಾಗರೂಕರಾಗಿ ಇರುವುದು ಕ್ಷೇಮ.

ಮಕರ: ವ್ಯವಹಾರಕ್ಕೆ ಸಂಬಂಧಿಸಿದಂತೆ ಕಾನೂನು ವಿಷಯದಲ್ಲಿ ಸಲಹೆ ಪಡೆದುಕೊಳ್ಳುವುದು ಅನಿವಾರ್ಯ. ಇತರರಿಗೆ ಅನುಮಾನಕ್ಕೆ ಎಡೆ ಮಾಡಿಕೊಡುವಂತಹ ಕೆಲಸಗಳು ನಿಮ್ಮಿಂದ ನಡೆಯಲಿದೆ.

ಕುಂಭ: ಹಣಕಾಸಿನ ವಿಚಾರದಲ್ಲಿ ವ್ಯವಹರಿಸುವಾಗ ದಾಕ್ಷಿಣ್ಯಕ್ಕೆ ಸಿಕ್ಕಿಕೊಳ್ಳದೇ ಇರುವ ರೀತಿಯಲ್ಲಿ ವ್ಯವಹರಿಸಿ. ಗೋವಿನ ಉತ್ಪನ್ನಗಳ ಮಾರಾಟಗಾರರಿಗೆ ಲಾಭ ಬರುವುದು. ಆರೋಗ್ಯದಲ್ಲಿ ಜಾಗ್ರತೆ ವಹಿಸಿ.

ಮೀನ: ಅಭಿವೃದ್ಧಿಯ ಅವಕಾಶಗಳು ಸಿಕ್ಕಿದರೂ, ಬಳಸಿಕೊಳ್ಳಲು ಅಸಾಧ್ಯ-ವಾಗುವಂತಹ ಪರಿಸ್ಥಿತಿಗೆ ತಲುಪುವಿರಿ. ಮಾನಸಿಕ ಕೊರಗು ಸಂತೋಷಕ್ಕೆ ಭಂಗವನ್ನು ಉಂಟುಮಾಡುವುದು. ಮದುವೆ ವಿಷಯ ಪ್ರಸ್ತಾಪವಾಗಲಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	23,995
ಇಂದಿನ ಅಂತ್ಯ:	24,177
ದಿನದ ಗರಿಷ್ಠ:	24,334
▲	181

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹580
	12 ಕ್ಕೆ	₹78
ಮೈಸೂರು:	100 ಕ್ಕೆ	₹585

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹241
ಆರ್‌ಎಸ್‌ಎಸ್-5	₹236
ಗುಡ್ ಲಾಟ್	₹210

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹311-595
ದ್ವಿತಳಿ (ಬಿ.ವಿ)	₹311-771

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹23900
ಎಸಿ	₹14050
ಆರ್‌ಪಿ	₹18200
ಆರ್‌ಸಿ	₹9830

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1600 (1600)
ಸೋಯಾ (ರಿಫೈನ್ಡ್)	₹1490 (1490)
ಸೂರ್ಯಕಾಂತಿ (ರಿಫೈನ್ಡ್)	₹1650 (1660)
ಪಾಮೋಲಿನ್	₹1445 (1445)

ಚಿನ್ನಕ್ಕೆ ಬೇಡಿಕೆ ಶೇ 10 ಹೆಚ್ಚಳ

ಚಿನ್ನದ ಮೇಲಿನ ಹೂಡಿಕೆ ಜಾಸ್ತಿ ಆಗಿರುವುದು ಬೇಡಿಕೆ ಹೆಚ್ಚಳಕ್ಕೆ ಕಾರಣ

ಮುಂಬೈ (ಪಿಟಿಐ): ಮಾರ್ಚ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಭಾರತದಲ್ಲಿ ಚಿನ್ನದ ಬೇಡಿಕೆಯು ಶೇಕಡ 10ರಷ್ಟು ಹೆಚ್ಚಳ ಕಂಡಿದ್ದು, 151 ಟನ್‌ಗಳಿಗೆ ತಲುಪಿದೆ ಎಂದು ವಿಶ್ವ ಚಿನ್ನ ಸಮಿತಿ (ಡಬ್ಲ್ಯುಜಿಸಿ) ಹೇಳಿದೆ.

ಹೂಡಿಕೆಯ ಉದ್ದೇಶದಿಂದ ಚಿನ್ನವನ್ನು ಖರೀದಿಸುವುದು ಹೆಚ್ಚಾದ ಪರಿಣಾಮವಾಗಿ ಒಟ್ಟಾರೆಯಾಗಿ ಚಿನ್ನದ ಬೇಡಿಕೆ ಜಾಸ್ತಿಯಾಗಿದೆ ಎಂದು ಸಮಿತಿ ಹೇಳಿದೆ.

ಸಮಿತಿ ಸಿದ್ಧಪಡಿಸಿರುವ ವರದಿ ಪ್ರಕಾರ ದೇಶದಲ್ಲಿ ಚಿನ್ನದ ಬೇಡಿಕೆಯಲ್ಲಿ ಮಹತ್ವದ ಹಾಗೂ ಸ್ಪಷ್ಟವಾಗಿ ಗೋಚರಿಸುವಂತಹ ಬದಲಾವಣೆಯೊಂದು ಆಗಿದೆ. ಹೂಡಿಕೆಯ ಉದ್ದೇಶದಿಂದ ಚಿನ್ನವನ್ನು ಖರೀದಿಸುವುದು ದೇಶದಲ್ಲಿ ಜಾಸ್ತಿ ಆಗಿದೆ, ಚಿನ್ನದ ಗಟ್ಟಿ, ನಾಣ್ಯ ಖರೀದಿ ಹಾಗೂ ಇಟಿಎಫ್‌ಗಳಲ್ಲಿ ಹೂಡಿಕೆಯು ಶೇ 54ರಷ್ಟು ಹೆಚ್ಚಳ ಕಂಡಿದೆ. ಹೂಡಿಕೆಯ ಉದ್ದೇಶದಿಂದ ಒಟ್ಟು 81 ಟನ್ ಚಿನ್ನವನ್ನು ಖರೀದಿಸಲಾಗಿದೆ.

ಮುಖ್ಯಾಂಶಗಳು

- ಹೂಡಿಕೆಯ ಉದ್ದೇಶದಿಂದ ಒಟ್ಟು 81 ಟನ್ ಚಿನ್ನ ಖರೀದಿ
- ಇಡೀ ವರ್ಷದಲ್ಲಿ ಚಿನ್ನದ ಬೇಡಿಕೆಯು 650ರಿಂದ 750 ಟನ್ ಆಗಬಹುದು
- ಚಿನ್ನದ ಗಟ್ಟಿ ಹಾಗೂ ನಾಣ್ಯಗಳಿಗೆ ಬೇಡಿಕೆಯು ಶೇ 34ರಷ್ಟು ಜಾಸ್ತಿ

ಮಾರ್ಚ್ ತ್ರೈಮಾಸಿಕದಲ್ಲಿ ಆಭರಣಗಳಿಗೆ ಬೇಡಿಕೆಯು ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ



ಶೇ 19ರಷ್ಟು ಕಡಿಮೆ ಆಗಿದ್ದು, 66 ಟನ್‌ಗಳಿಗೆ ತಲುಪಿದೆ. ಚಿನ್ನದ ಬೆಲೆ ಜಾಸ್ತಿ ಆಗಿದ್ದುದು ಕೂಡ ಆಭರಣಗಳಿಗೆ ಬೇಡಿಕೆ ಕಡಿಮೆ ಆಗುವುದಕ್ಕೆ ಒಂದು ಕಾರಣವಾಗಿದೆ.

ಇಡೀ ವರ್ಷದಲ್ಲಿ ಚಿನ್ನದ ಬೇಡಿಕೆಯು 650ರಿಂದ 750 ಟನ್ ಆಗಬಹುದು ಎಂದು ವರದಿ ಅಂದಾಜು ಮಾಡಿದೆ. ಹಿಂದಿನ ವರ್ಷದಲ್ಲಿ ಬೇಡಿಕೆಯು 712 ಟನ್ ಆಗಿತ್ತು.

'ಮೌಲ್ಯದ ಲೆಕ್ಕದಲ್ಲಿ ಮಾರ್ಚ್ ತ್ರೈಮಾಸಿಕದಲ್ಲಿನ ಚಿನ್ನದ ಬೇಡಿಕೆಯು ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ದುಪ್ಪಟ್ಟಾಗಿದೆ. ಚಿನ್ನದ ಬೆಲೆಯಲ್ಲಿ ಆದ ಹೆಚ್ಚಳ ಕೂಡ ಇದಕ್ಕೆ ಕಾರಣವಾಗಿದೆ' ಎಂದು ಡಬ್ಲ್ಯುಜಿಸಿ ಭಾರತ ಸಿಇಒ ಸಚಿನ್ ಜೈನ್ ತಿಳಿಸಿದ್ದಾರೆ.

ದೇಶದ ಮಾರುಕಟ್ಟೆಯಲ್ಲಿ ಮಾರ್ಚ್ ತ್ರೈಮಾಸಿಕದಲ್ಲಿನ ಚಿನ್ನದ ಬೆಲೆಯು ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 81ರಷ್ಟು ಹೆಚ್ಚಾಗಿತ್ತು. ಚಿನ್ನದ ಗಟ್ಟಿ ಹಾಗೂ ನಾಣ್ಯಗಳಿಗೆ ಬೇಡಿಕೆಯು ಶೇ 34ರಷ್ಟು ಜಾಸ್ತಿ ಆಯಿತು.

'ಚಿನ್ನದ ಬೆಲೆಯು ಹೆಚ್ಚಿನ ಮಟ್ಟದಲ್ಲಿ ಇರುವುದು ಅಲ್ಪಾವಧಿಯಲ್ಲಿ ಆಭರಣ ಬೇಡಿಕೆಯನ್ನು ತಗ್ಗಿಸಬಹುದು. ಆದರೆ ಬೇಸಿಗೆಯಲ್ಲಿ ನಡೆಯುವ ಮದುವೆ ಕಾರ್ಯಕ್ರಮಗಳು ಹಾಗೂ ಪ್ರಾದೇಶಿಕ ಮಟ್ಟದ ಹಬ್ಬಗಳು ಬೇಡಿಕೆಗೆ ಒಂದಿಷ್ಟು ಒತ್ತಾಸೆ ಒದಗಿಸಲಿವೆ' ಎಂದು ಜೈನ್ ಅಭಿಪ್ರಾಯಪಟ್ಟಿದ್ದಾರೆ.

ಮಾರ್ಚ್ ತ್ರೈಮಾಸಿಕದಲ್ಲಿ ಒಟ್ಟು 20 ಟನ್ ಚಿನ್ನಕ್ಕೆ ಬೇಡಿಕೆಯು ಇಟಿಎಫ್‌ಗಳ ಮೂಲಕ ಬಂದಿದೆ.

ಲಿಡ್ಕರ್ ಸಹಯೋಗದಲ್ಲಿ 'ಪ್ರಾಡಾ'ದಿಂದ ಪಾದರಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಗತಿಕ ಮಟ್ಟದ ಐಷಾರಾಮಿ ಫ್ಯಾಷನ್ ಬ್ರ್ಯಾಂಡ್ ಆಗಿರುವ ಪ್ರಾಡಾ, ಭಾರತದ ಕೊಲ್ಹಾಪುರಿ ಶೈಲಿಯ ಚಪ್ಪಲಿಗಳಿಂದ ಪ್ರೇರಣೆ ಪಡೆದು, ರಾಜ್ಯದ 'ಲಿಡ್ಕರ್' ಸಹಯೋಗದಲ್ಲಿ ಸಿದ್ಧಪಡಿಸಿದ ಸೀಮಿತ ಆವೃತ್ತಿಯ ಪಾದರಕ್ಷೆಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಈ ಮಾದರಿಯ ಪಾದರಕ್ಷೆಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಾಡಾದ 40 ಮಳಿಗೆಗಳಲ್ಲಿ ಹಾಗೂ prada.com ಮೂಲಕ ಲಭ್ಯವಿವೆ. ಸಾಂಪ್ರದಾಯಿಕವಾದ ಕೊಲ್ಹಾಪುರಿ ಚಪ್ಪಲಿಗಳನ್ನು ತಯಾರಿಸುವ ಕರ್ನಾಟಕ ಮತ್ತು ಮಹಾರಾಷ್ಟ್ರದ ನುರಿತ ಕುಶಲಕರ್ಮಿಗಳಿಂದ ಈ ಪಾದರಕ್ಷೆಗಳನ್ನು ಸಿದ್ಧಪಡಿಸಲಾಗಿದೆ.

'ಈ ಸಂಗ್ರಹವನ್ನು ಕರ್ನಾಟಕದ ಡಾ. ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ (ಲಿಡ್ಕರ್) ಮತ್ತು ಮಹಾರಾಷ್ಟ್ರದ ಸಂತ ರೋಹಿದಾಸ್ ಲೆದರ್ ಇಂಡಸ್ಟ್ರೀಸ್ ಮತ್ತು ಚರ್ಮಕಾರ್ ಡೆವಲಪ್‌ಮೆಂಟ್ ಕಾರ್ಪೊರೇಷನ್ (ಲಿಡ್ಕಾಂ) ಸಹಯೋಗದಲ್ಲಿ ಅಭಿವೃದ್ಧಿಪಡಿಸಲಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

'ಈ ಎರಡೂ ಸರ್ಕಾರಿ ಸಂಸ್ಥೆಗಳು ಕೊಲ್ಹಾಪುರಿ ಚಪ್ಪಲಿಗಳ ಪರಂಪರೆಯನ್ನು ರಕ್ಷಿಸುವ, ಉತ್ತೇಜಿಸುವ ಮತ್ತು ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಿವೆ' ಎಂದು ಕೂಡ ಪ್ರಕಟಣೆಯಲ್ಲಿ ಹೇಳಲಾಗಿದೆ.

ರಾಜ್ಯ ಸರ್ಕಾರದ 'ಲಿಡ್ಕರ್' ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕಿ ಕೆ.ಎಂ. ವಸುಂಧರಾ ಅವರು, 'ಪ್ರಾಡಾ ಜೊತೆಗಿನ ಈ ಸಹಯೋಗವು ರಾಜ್ಯದ ಸಾಂಪ್ರದಾಯಿಕ ಕೌಶಲವನ್ನು ಜಾಗತಿಕ ಹಂತಕ್ಕೆ ಎತ್ತರಿಸುವ ನಿಟ್ಟಿನಲ್ಲಿ ಇರಿಸಿರುವ ಮಹತ್ವದ ಹೆಜ್ಜೆಯಾಗಿದೆ' ಎಂದು ಹೇಳಿದ್ದಾರೆ.

ಪ್ರಾಡಾ ಕಂಪನಿಯು ಕರ್ನಾಟಕ ಮತ್ತು ಮಹಾರಾಷ್ಟ್ರದ ಚರ್ಮದ ಪಾದರಕ್ಷೆ ತಯಾರಿಕೆಯಲ್ಲಿ ತೊಡಗಿಸಿಕೊಂಡಿರುವ ಕುಶಲ ಕರ್ಮಿಗಳಿಗೆ ತರಬೇತಿಯನ್ನು ಕೂಡ ಆಯೋಜಿಸುತ್ತಿದೆ. ಈ ತರಬೇತಿ ಕಾರ್ಯಕ್ರಮದಲ್ಲಿ ರಾಜ್ಯದ 'ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಲೆದರ್ & ಫ್ಯಾಷನ್ ಟೆಕ್ನಾಲಜಿ' ಸಂಸ್ಥೆಯ ಸಹಭಾಗಿತ್ವ ಇದೆ.

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 609 ಅಂಶ ಏರಿಕೆ

ಮುಂಬೈ (ಪಿಟಿಐ): ಎಫ್‌ಎಂಸಿಜಿ, ವಾಹನ ಮತ್ತು ದೂರಸಂಪರ್ಕ ಕಂಪನಿಗಳ ಷೇರುಗಳ ಖರೀದಿ ಹೆಚ್ಚಳದಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಬುಧವಾರದ ವಹಿವಾಟಿನಲ್ಲಿ ಏರಿಕೆಯಾಗಿವೆ.

ಏಷ್ಯಾದ ಮಾರುಕಟ್ಟೆಯು ಸಕಾರಾತ್ಮಕ ವಹಿವಾಟು ನಡೆಸಿದೆ. ಇದು ಕೂಡ ದೇಶದ ಷೇರುಪೇಟೆಗೆ ಸೂಚ್ಯಂಕಗಳ ಏರಿಕೆಗೆ ನೆರವಾಯಿತು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 609 ಅಂಶ ಹೆಚ್ಚಳವಾಗಿ, 77,496ಕ್ಕೆ ವಹಿವಾಟು ಅಂತ್ಯಗೊಂಡಿದೆ. ವಹಿವಾಟಿನ ವೇಳೆ ಸೂಚ್ಯಂಕವು 1,095 ಅಂಶಗಳವರೆಗೆ ಜಿಗಿದಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 181 ಅಂಶ ಏರಿಕೆಯಾಗಿ, 24,177ಕ್ಕೆ ಕೊನೆಗೊಂಡಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 2.85ರಷ್ಟು ಏರಿಕೆಯಾಗಿದ್ದು, ಪ್ರತೀ ಬ್ಯಾರಲ್ ದರವು 114.4 ಡಾಲರ್ ಆಗಿದೆ.

ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿಗಳ ಗಳಿಕೆ ಉತ್ತಮವಾಗಿರುವ ನಿರೀಕ್ಷೆಯನ್ನು ಹೂಡಿಕೆದಾರರು ಹೊಂದಿದ್ದಾರೆ. ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಸಂಘರ್ಷವು ಕಡಿಮೆ ಆಗುವ ನಿರೀಕ್ಷೆ ಇದೆ. ಇದು ದೇಶದ ಷೇರುಪೇಟೆ ಸೂಚ್ಯಂಕಗಳ ಏರಿಕೆಗೆ ಕಾರಣವಾದವು ಎಂದು ಲೈವ್‌ಲಾಂಗ್ ವೆಲ್ತ್‌ನ ಸಂಶೋಧನಾ ವಿಶ್ಲೇಷಕ ಮತ್ತು ಸಂಸ್ಥಾಪಕ ಹರಿಪ್ರಸಾದ್ ಕೆ. ಹೇಳಿದ್ದಾರೆ.



ರೂಪಾಯಿ ಮೌಲ್ಯ ಇಳಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಬುಧವಾರ ಡಾಲರ್ ಎದುರು ರೂಪಾಯಿ ಮೌಲ್ಯ 20 ಪೈಸೆ ಇಳಿದಿದೆ. ವಹಿವಾಟಿನ ಅಂತ್ಯದ ವೇಳೆಗೆ ರೂಪಾಯಿ ಮೌಲ್ಯ 94.88 ಆಗಿದೆ. ಇದು ಸಾರ್ವಕಾಲಿಕ ಕನಿಷ್ಠ ಮಟ್ಟವಾಗಿದೆ. ಕಚ್ಚಾ ತೈಲ ಬೆಲೆ ಏರಿಕೆ ಮತ್ತು ವಿದೇಶಿ ಬಂಡವಾಳದ ಹೊರಹರಿವು ರೂಪಾಯಿ ಮೌಲ್ಯ ಇಳಿಕೆಗೆ ಕಾರಣ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮೊಬಿಕ್ವಿಕ್‌ಗೆ ಎನ್‌ಬಿಎಫ್‌ಸಿ ಪರವಾನಗಿ ನೀಡಿದ ಆರ್‌ಬಿಐ

ಬೆಂಗಳೂರು: ಬ್ಯಾಂಕೇತರ ಹಣಕಾಸು ಕಂಪನಿಯಾಗಿ (ಎನ್‌ಬಿಎಫ್‌ಸಿ) ಕೆಲಸ ಮಾಡಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) 'ಒನ್ ಮೊಬಿಕ್ವಿಕ್ ಸಿಸ್ಟಮ್ಸ್ ಲಿಮಿಟೆಡ್'ಗೆ ಅನುಮತಿ ನೀಡಿದೆ.

ಈ ಪರವಾನಗಿ ಲಭಿಸಿರುವ ಕಾರಣದಿಂದಾಗಿ ಸಾಲ ನೀಡುವ ವಹಿವಾಟು ಆರಂಭಿಸಲು ಮೊಬಿಕ್ವಿಕ್‌ಗೆ ಸಾಧ್ಯವಾಗಲಿದೆ. 'ಹೊಸ ಬಗೆಯ ಸಾಲಗಳನ್ನು ನೀಡಲು, ಹೆಚ್ಚಿನ ಸಂಖ್ಯೆಯ ಗ್ರಾಹಕರಿಗೆ ಸೇವೆ ಒದಗಿಸಲು ಇದರಿಂದಾಗಿ ಅವಕಾಶ ಸಿಗಲಿದೆ' ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ. ಮೊಬಿಕ್ವಿಕ್ ಸಮೂಹವು 18.6 ಕೋಟಿಗೂ ಹೆಚ್ಚಿನ ಗ್ರಾಹಕರನ್ನು ಹೊಂದಿದೆ. ಎನ್‌ಬಿಎಫ್‌ಸಿ ಪರವಾನಗಿ ಪಡೆದಿರುವ ಮೊಬಿಕ್ವಿಕ್ ಫೈನಾನ್ಶಿಯಲ್ ಸರ್ವಿಸಸ್ ಪ್ರೈ.ಲಿ. ಕಂಪನಿಯು ಎಂಎಸ್‌ಎಂಇ ವಲಯದ ಉದ್ಯಮಗಳಿಗೆ ಕೂಡ ಸಾಲದ ಸೌಲಭ್ಯ ಒದಗಿಸಲಿದೆ ಎಂದು ಹೇಳಿದೆ.

ಕಾಯ್ದೆ ಜಾರಿ: ಅಧಿಸೂಚನೆ ಹೊರಡಿಸಿದ ರಾಜ್ಯ ಸರ್ಕಾರ

ಹೊರ ರಾಜ್ಯದ ನೋಂದಣಿ ವಾಹನಕ್ಕೆ ತೆರಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇರೆ ರಾಜ್ಯಗಳಲ್ಲಿ ನೋಂದಣಿಯಾಗಿ ರಾಜ್ಯದಲ್ಲಿ ಕಾರ್ಯನಿರ್ವಹಿಸುವ ವಾಹನಗಳಿಗೆ ರಾಜ್ಯದಲ್ಲೂ ತೆರಿಗೆ ವಿಧಿಸಲು ಅವಕಾಶ ಕಲ್ಪಿಸುವ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ಕಾಯ್ದೆ ಜಾರಿಗೆ ಸರ್ಕಾರ ಮುಂದಾಗಿದೆ.

ಈ ಉದ್ದೇಶಕ್ಕಾಗಿ ತರಲಾದ ಕಾಯ್ದೆಗೆ ಬುಧವಾರ ಅಧಿಸೂಚನೆ ಹೊರಡಿಸಲಾಗಿದೆ.

ತೆರಿಗೆ ಕಡಿಮೆ ಎಂಬ ಕಾರಣಕ್ಕೆ ಅನ್ಯರಾಜ್ಯಗಳಲ್ಲಿ ವಾಹನಗಳ ನೋಂದಣಿಯಾಗುತ್ತಿರುವುದನ್ನು ತಪ್ಪಿಸಿ ರಾಜ್ಯದಲ್ಲಿಯೇ ನೋಂದಣಿಗೆ ಪ್ರೋತ್ಸಾಹ ನೀಡಲು, ವಾಣಿಜ್ಯ ಉದ್ದೇಶದ ಟ್ರ್ಯಾಕ್ಟರ್, ಪವರ್ ಟಿಲ್ಲರ್, ಟ್ರೇಲರ್‌ಗಳ ನೋಂದಣಿ, ಜೀವಿತಾವಧಿ ತೆರಿಗೆ ಪರಿಷ್ಕರಿಸಲು ಹಾಗೂ ಕಾರು, ಜೀಪು, ಓಮ್ನಿ ಸೇರಿದಂತೆ ಖಾಸಗಿ ಸೇವಾ ವಾಹನಗಳ ನೋಂದಣಿ ತೆರಿಗೆಯಲ್ಲಿ ಹೆಚ್ಚಳ ಮಾಡಲು ತಿದ್ದುಪಡಿ ಕಾಯ್ದೆಯನ್ನು ಜಾರಿಗೆ ತರಲಾಗಿದೆ.

ಕರ್ನಾಟಕದಿಂದ ಹೊರಗೆ ನೋಂದಣಿಯಾಗುವ ವಾಹನಗಳಿಗೆ ಶೇ 5ರಿಂದ 15ರಷ್ಟು ತೆರಿಗೆ ವಿಧಿಸಲಾಗುತ್ತದೆ. ₹10 ಲಕ್ಷದ ಒಳಗಿನ ವಾಹನಗಳಿಗೆ ಶೇ 5, ₹10 ಲಕ್ಷದಿಂದ ₹15 ಲಕ್ಷದ ಒಳಗಿನ ವಾಹನಗಳಿಗೆ



ಶೇ 10 ಹಾಗೂ ₹15 ಲಕ್ಷಕ್ಕಿಂತ ಅಧಿಕ ಮೌಲ್ಯದ ವಾಹನಗಳಿಗೆ ಶೇ 15ರಷ್ಟು ತೆರಿಗೆ ವಿಧಿಸಲಾಗುತ್ತದೆ. ಈಗಾಗಲೇ ನೋಂದಣಿಯಾಗಿರುವ ವಾಹನಗಳು ನೋಂದಣಿಯಾದ ವರ್ಷದ ಆಧಾರದಲ್ಲಿ ಆಜೀವ ತೆರಿಗೆಯ ಶೇ 25ರಿಂದ ಶೇ 93ರಷ್ಟು ಮೊತ್ತ ನೀಡಬೇಕಾಗುತ್ತದೆ.

ರಾಜ್ಯದಲ್ಲಿ ನೋಂದಣಿಯಾಗುವ ಹೊಸ ಟ್ರ್ಯಾಕ್ಟರ್, ಟ್ರೇಲರ್‌ಗಳಿಗೆ ಅದರ ಮೌಲ್ಯದ ಶೇ 10ರಷ್ಟು ತೆರಿಗೆ, ಕಾರು, ಜೀಪ್, ಬಸ್, ಖಾಸಗಿ ಸೇವಾ ವಾಹನಗಳಿಗೆ ಅವುಗಳ ಮೌಲ್ಯದ ಶೇ 13ರಷ್ಟು ತೆರಿಗೆ ವಿಧಿಸಲಾಗುತ್ತದೆ. ನಿರ್ಮಾಣ ಸಾಧನಾ ಸಾಮಗ್ರಿ ವಾಹನಗಳಿಗೆ, ಡ್ರಿಲ್ಲಿಂಗ್ ರಿಂಗ್, ಕಂಪ್ರೆಸರ್ ಜೋಡಿಸಿದ ವಾಹನಗಳಿಗೆ ಅವುಗಳ ಮೌಲ್ಯದ ಶೇ 10ರಷ್ಟು ತೆರಿಗೆ ಹಾಕಲಾಗುತ್ತದೆ.

ಬಾಡಿಗೆ ಉದ್ದೇಶಕ್ಕಾಗಿ ಬಳಸುವ ವಾಹನಗಳಿಗೆ ಪ್ರತಿ ಪ್ರಯಾಣಿಕರಿಗೆ ₹1,500 ಆಧಾರದಲ್ಲಿ ಒಟ್ಟು ಆಸನಗಳ ಸಾಮರ್ಥ್ಯದಲ್ಲಿ ತೆರಿಗೆ ನಿಗದಿ ಮಾಡಲಾಗುತ್ತದೆ. 12ಕ್ಕಿಂತ ಹೆಚ್ಚು ಪ್ರಯಾಣಿಕರನ್ನು ಸಾಗಿಸುವ ಬಸ್ ಸೇರಿದಂತೆ ಐಷಾರಾಮಿ ವಾಹನಗಳಿಗೆ ₹2,500ರಂತೆ, ನಿದ್ರಾಸೀನ ಸೀಟು ಒಳಗೊಂಡ ವಾಹನಗಳಿಗೆ ₹3,000 ತೆರಿಗೆ ನಿಗದಿ ಮಾಡಲಾಗಿದೆ. ಉದಾಹರಣೆಗೆ ಚಾಲಕ, ನಿರ್ವಾಹಕರನ್ನು ಹೊರತುಪಡಿಸಿ 32 ಆಸನಗಳ ಒಂದು ಬಸ್‌ಗೆ ₹96,000 ತೆರಿಗೆ ಪಾವತಿಸಬೇಕಾಗುತ್ತದೆ.

ಇವಿ ವಾಹನಗಳಿಗೂ ತೆರಿಗೆ

ಬ್ಯಾಟರಿ ಚಾಲಿತ (ಇ.ವಿ) ಕಾರು, ಜೀಪ್, ಬಸ್ ಹಾಗೂ ಖಾಸಗಿ ಸೇವಾ ವಾಹನಗಳಿಗೆ ಅವುಗಳ ಮೌಲ್ಯದ ಶೇ 5ರಿಂದ ಶೇ 10ರವರೆಗೆ ತೆರಿಗೆ ವಿಧಿಸಲು ಹೊಸ ಕಾಯ್ದೆ ಅವಕಾಶ ನೀಡಿದೆ.

₹10 ಲಕ್ಷದ ಒಳಗಿನ ವಾಹನಗಳಿಗೆ ಶೇ 5, ₹10 ಲಕ್ಷದಿಂದ ₹25 ಲಕ್ಷದವರೆಗಿನ ವಾಹನಗಳಿಗೆ ಶೇ 8 ಹಾಗೂ ₹25 ಲಕ್ಷ ಮೇಲ್ಪಟ್ಟ ವಾಹನಗಳಿಗೆ ಶೇ 10ರಷ್ಟು ತೆರಿಗೆ ವಿಧಿಸಲಾಗುತ್ತದೆ. ಈಗಾಗಲೇ ನೋಂದಣಿಯಾಗಿರುವ ವಾಹನಗಳಿಗೆ ಆಜೀವ ತೆರಿಗೆಯ ಶೇ 25ರಿಂದ ಶೇ 93ರವರೆಗೆ ತೆರಿಗೆ ಹಾಕಲಾಗುತ್ತದೆ.

ಹಡಗುಗಳ ಮೇಲೆ ಅಮೆರಿಕ ಸೇನೆ ನಿಗಾ

ವಾಷಿಂಗ್ಟನ್(ಎಪಿ): ಹೊರ್ಮುಜ್ ಜಲಸಂಧಿ ಮೇಲೆ ತಾನು ವಿಧಿಸಿರುವ ನಿರ್ಬಂಧಗಳನ್ನು ಉಲ್ಲಂಘಿಸಿ ಇರಾನ್‌ನತ್ತ ಸಾಗುತ್ತಿದೆ ಎಂಬ ಸಂಶಯದ ಮೇಲೆ, ಅರಬ್ಬಿ ಸಮುದ್ರದಲ್ಲಿ ಸಂಚರಿಸುತ್ತಿದ್ದ ಹಡಗೊಂದರಲ್ಲಿ ಅಮೆರಿಕ ನೌಕಾಪಡೆ ಯೋಧರು ಇಳಿದು, ಶೋಧ ಕೈಗೊಂಡಿದ್ದರು.

ಹಡಗು, ಇರಾನ್‌ನ ಬಂದರಿನತ್ತ ಸಂಚರಿಸುತ್ತಿಲ್ಲ ಎಂಬುದನ್ನು ಖಾತ್ರಿಪಡಿಸಿಕೊಂಡ ನಂತರ ಅದು ಪ್ರಯಾಣ ಮುಂದುವರಿಸಲು ಅವಕಾಶ ಕಲ್ಪಿಸಲಾಯಿತು ಎಂದು ಅಮೆರಿಕ ಸೆಂಟ್ರಲ್ ಕಮಾಂಡ್ ಹೇಳಿದೆ.

ಹೊರ್ಮುಜ್ ಜಲಸಂಧಿಯ ಪೂರ್ವಭಾಗದ ಜಲಪ್ರದೇಶದಲ್ಲಿ ಈ ಘಟನೆ ನಡೆದಿದ್ದು, ಸೆಂಟ್ರಲ್ ಕಮಾಂಡ್ ಈ ಕುರಿತಂತೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

'ಕೊಮರೂಸ್ ದೇಶದ ಬಾವುಟ ಹೊಂದಿದ್ದ ಹಡಗು 'ಎಂವಿ ಬ್ಲೂಸ್ಟಾರ್-3' ಮೇಲೆ ಹೆಲಿಕಾಪ್ಟರ್‌ನಿಂದ ಧುಮುಕಿದ ಯೋಧರು, ಸಮಗ್ರ ಪರಿಶೀಲನೆ ನಡೆಸಿ, ನಂತರ ಸಂಚಾರ ಮುಂದುವರಿಸಲು ಅವಕಾಶ ನೀಡಿದರು' ಎಂದು ಹೇಳಿದೆ.

ಇರಾನ್‌ನ ಬಂದರುಗಳತ್ತ ಹಾಗೂ ಅವುಗಳಿಂದ ಹೊರಡುವ ಹಡಗುಗಳ ಸಂಚಾರದ ಮೇಲೆ ದಿಗ್ಬಂಧನ ಹೇರಿದ ನಂತರ ಇದುವರೆಗೆ 39 ನೌಕೆಗಳನ್ನು ವಾಪಸು ಕಳುಹಿಸಲಾಗಿದೆ ಎಂದಿದೆ.

'ಎಂವಿ ಬ್ಲೂಸ್ಟಾರ್-3' ಹಡಗು ಓಮಾನ್‌ನ ಸೋಹರ್ ಬಂದರಿನತ್ತ ಸಾಗುತ್ತಿತ್ತು ಎಂದು ಮೂಲಗಳು ಹೇಳಿವೆ.

ಮುಂಬೈ ಧಾರಣೆ (ಶೇಂಗಾ)

29-04-2026	
ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ (ಹೊಸ)	8200-8300
ದಪ್ಪ ಗುಜರಾತ್ (ಹೊಸ)	9200-9300
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1610 (1610)
ಒಂದು ವಾರದ ಡೆಲಿವರಿ	1605 (1605)
ಪಾಮ್ ವಾರದ ಡೆಲಿವರಿ	1443 (1443)
ಸೂರ್ಯಕಾಂತಿ ಎಣ್ಣೆ ಕಚ್ಚಾ	1550 (1550)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,46,400 (1,48,900)
ಬೆಳ್ಳಿ ಕೆ.ಜಿಗೆ	2,34,000 (2,36,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹20000-20000
ದಾವಣಗೆರೆ	₹11700-13550

ಸ್ಮಾರ್ಟ್ ಬಜಾರ್ ಪೈಸಾ ವಸೂಲ್ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಮಾಲೀಕತ್ವದ 'ಸ್ಮಾರ್ಟ್ ಬಜಾರ್'ಗಳಲ್ಲಿ ಮೇ 3ರವರೆಗೆ 'ಸ್ಮಾರ್ಟ್ ಬಜಾರ್ ಫುಲ್ ಪೈಸಾ ವಸೂಲ್' ಮಾರಾಟ ಮೇಳ ನಡೆಯಲಿದೆ.

ಈ ಮೇಳದಲ್ಲಿ ಗೋಧಿ ಹಿಟ್ಟು, ಅಕ್ಕಿ, ಧಾನ್ಯಗಳು, ಅಡುಗೆ ಎಣ್ಣೆ, ಅಡುಗೆ ಮನೆಯ ಇತರೆ ವಸ್ತುಗಳು ಹಾಗೂ ಗೃಹ ಬಳಕೆಯ ವಸ್ತುಗಳ ಖರೀದಿಗೆ ಹೆಚ್ಚಿನ ರಿಯಾಯಿತಿ ಇರಲಿದೆ ಎಂದು ಕಂಪನಿ ಪ್ರಕಟಣೆಯಲ್ಲಿ ತಿಳಿಸಿದೆ.

ವೇದಾಂತ ಲಾಭ ಶೇ 89ರಷ್ಟು ಜಿಗಿತ

ನವದೆಹಲಿ (ಪಿಟಿಐ): ಉದ್ಯಮಿ ಅನಿಲ್ ಅಗರ್ವಾಲ್ ಒಡೆತನದ ಗಣಿಗಾರಿಕೆ ಕಂಪನಿ ವೇದಾಂತ ಲಿಮಿಟೆಡ್ 2025–26ನೆಯ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ತೆರಿಗೆ ನಂತರದ ಲಾಭದಲ್ಲಿ (ಪಿಎಟಿ) ಶೇ 89ರಷ್ಟು ಏರಿಕೆ ಕಂಡಿದೆ.

2024–25ರ ಇದೇ ತ್ರೈಮಾಸಿಕದಲ್ಲಿ ಕಂಪನಿಯು ₹4,961 ಕೋಟಿ ತೆರಿಗೆ ನಂತರ ಲಾಭ ಗಳಿಸಿತ್ತು. ಅದು ಈ ಬಾರಿ ₹9,352 ಕೋಟಿಗೆ ಹೆಚ್ಚಳವಾಗಿದೆ. ವರಮಾನವು ಶೇ 29ರಷ್ಟು ಏರಿಕೆಯಾಗಿದ್ದು, ₹51,524 ಕೋಟಿಗೆ ತಲುಪಿದೆ. ವೆಚ್ಚವು ₹13,702 ಕೋಟಿಯಿಂದ ₹19,119 ಕೋಟಿಗೆ ಹೆಚ್ಚಳವಾಗಿದೆ. ಕಂಪನಿಯ ಒಟ್ಟು ಸಾಲವು ಮಾರ್ಚ್ 31ರ ವೇಳೆಗೆ ₹81,740 ಕೋಟಿಯಷ್ಟಾಗಿದೆ ಎಂದು ಕಂಪನಿ ತಿಳಿಸಿದೆ.

ಬಾಗ್ಮನೆ ಐಪಿಒ: ಯೂನಿಟ್ ಬೆಲೆ ₹100

ನವದೆಹಲಿ (ಪಿಟಿಐ): ಐಪಿಒ ಮೂಲಕ ಬಾಗ್ಮನೆ ಪ್ರೈಮ್ ಆಫೀಸ್ ಆರ್‌ಇಐಟಿ, ₹3,405 ಕೋಟಿ ಬಂಡವಾಳ ಸಂಗ್ರಹಿಸಲು ಮುಂದಾಗಿದ್ದು, ಪ್ರತಿ ಯೂನಿಟ್ ಬೆಲೆಯನ್ನು ₹95ರಿಂದ ₹100ಕ್ಕೆ ನಿಗದಿಪಡಿಸಿದೆ.

ಮೇ 5ರಿಂದ 7ರವರೆಗೆ ಷೇರುಗಳಿಗೆ ಬಿಡ್ ಸಲ್ಲಿಕೆಗೆ ಅವಕಾಶ ಇರಲಿದೆ. ಆರಂಭಿಕ ಹೂಡಿಕೆದಾರರು (ಆ್ಯಂಕರ್ ಇನ್‌ವೆಸ್ಟರ್ಸ್) ಮೇ 4ರಂದು ಅರ್ಜಿ ಸಲ್ಲಿಸಬೇಕಾಗಿದೆ. ಹೂಡಿಕೆದಾರರು ಕನಿಷ್ಠ 150 ಷೇರುಗಳಿಗೆ ಬಿಡ್ ಸಲ್ಲಿಸಬೇಕಿದೆ ಎಂದು ಕಂಪನಿ ಬುಧವಾರ ತಿಳಿಸಿದೆ.

ಅಡಿಕೆ ಧಾರಣೆ

ಕುಮಟಾ		ಪುತ್ತೂರು			
ಬೆಟ್ಟೆ	39199-46099	ಕೋಕ	20000-34500	ಗೊರಬಲು	19100-44119
ಚಿಪ್ಪು	30919-36589	ಹೊಸತು	30000-47500	**ಶಿರಸಿ**	
ಕೋಕ	17599-34099	**ಶಿವಮೊಗ್ಗ**		ಬೆಟ್ಟೆ	41099-51699
ಫ್ಯಾಕ್ಟರಿ	11029-27500	ಸರಕು	55099-94996	ಬಿಳಿಗೋಟು	22199-37699
ಹಳೆಚಾಲಿ	46899-49119	ಬೆಟ್ಟೆ	54619-64399	ಚಾಲಿ	43100-48300
ಹೊಸಚಾಲಿ	38299-47519	ರಾಶಿ	44009-56599	ಕೆಂಪುಗೋಟು	23118-36999
				ರಾಶಿ	50111-53699

ಎಥೆನಾಲ್ ಬಳಕೆ ಹೆಚ್ಚಿಸಲು ಪ್ರಸ್ತಾವ

ನವದೆಹಲಿ (ಪಿಟಿಐ): ಪೆಟ್ರೋಲ್‌ನಲ್ಲಿ ಎಥೆನಾಲ್ ಪ್ರಮಾಣವನ್ನು ಇನ್ನಷ್ಟು ಹೆಚ್ಚು ಮಾಡಲು ಅವಕಾಶ ಕಲ್ಪಿಸುವ ಬಗೆಯಲ್ಲಿ ನಿಯಮಗಳಿಗೆ ಬದಲಾವಣೆ ತರುವ ಪ್ರಸ್ತಾವವನ್ನು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಸಾರ್ವಜನಿಕರ ಮುಂದಿರಿಸಿದೆ.

ಈ ನಿಯಮಗಳು ಜಾರಿಗೆ ಬಂದಲ್ಲಿ ಹೆಚ್ಚಿನ ಎಥೆನಾಲ್ ಮಿಶ್ರಣದ ಹಾಗೂ ಸಂಪೂರ್ಣವಾಗಿ ಜೈವಿಕ ಇಂಧನ ಬಳಸುವ ವಾಹನಗಳನ್ನು ಎಲ್ಲ ವರ್ಗಗಳಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡಲು ಅವಕಾಶ ಸಿಗಲಿದೆ.

ಕೇಂದ್ರ ಮೋಟಾರು ವಾಹನಗಳ ನಿಯಮ – 1989ಕ್ಕೆ ತಿದ್ದುಪಡಿ ತರಲು ಸಚಿವಾಲಯ ಉದ್ದೇಶಿಸಿದೆ. ಇ85 (ಪೆಟ್ರೋಲ್‌ನಲ್ಲಿ ಶೇ 85ರಷ್ಟು ಎಥೆನಾಲ್ ಮಿಶ್ರಣ) ಮತ್ತು ಇ100 (ಪೂರ್ತಿಯಾಗಿ ಎಥೆನಾಲ್ ಬಳಕೆ) ಹಾಗೂ ಬಿ100 ಜೈವಿಕ ಡೀಸೆಲ್ ಬಳಸುವ ವಾಹನಗಳನ್ನು ವ್ಯಾಪಕವಾಗಿ ಬಳಕೆಗೆ ತರಲು ಈ ತಿದ್ದುಪಡಿಗಳು ಅವಕಾಶ ಕಲ್ಪಿಸುತ್ತವೆ.

ದೇಶದಲ್ಲಿ ಇ20 ಪೆಟ್ರೋಲ್ ಬಳಕೆ ಈಗಾಗಲೇ ಜಾರಿಗೆ ಬಂದಿದೆ. ಹೊಸ ಪ್ರಸ್ತಾವಿತ ನಿಯಮಗಳ ಬಗ್ಗೆ ಸಚಿವಾಲಯವು ಸಾರ್ವಜನಿಕರಿಂದ ಸಲಹೆ, ಆಕ್ಷೇಪ ಆಹ್ವಾನಿಸಿದೆ.

'ಪಾಕ್ ಆರ್ಥಿಕತೆಗೆ ಭಾರಿ ಪೆಟ್ಟು'

ಇಸ್ಲಾಮಾಬಾದ್(ಪಿಟಿಐ): 'ಕಳೆದ ಎರಡು ವರ್ಷಗಳಲ್ಲಿ ಪಾಕಿಸ್ತಾನ ಆರ್ಥಿಕ ವಾಗಿ ಸಾಕಷ್ಟು ಪ್ರಗತಿ ಸಾಧಿಸಿತ್ತು. ಅಮೆರಿಕ–ಇರಾನ್ ನಡುವಿನ ಯುದ್ಧದಿಂದ ದೇಶದ ಅರ್ಥ ವ್ಯವಸ್ಥೆಗೆ ಭಾರಿ ಪೆಟ್ಟು ಬಿದ್ದಿದೆ' ಎಂದು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಶರೀಫ್ ಹೇಳಿದ್ದಾರೆ.

'ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ಫೆಬ್ರುವರಿಯಲ್ಲಿ ದಾಳಿ ಆರಂಭಿಸಿದಾಗಿನಿಂದ ಜಾಗತಿಕ ಮಾರುಕಟ್ಟೆಗಳಲ್ಲಿ ಇಂಧನ ದರದಲ್ಲಿ ವಿಪರೀತ ಹೆಚ್ಚಳವಾಗುತ್ತಿದೆ. ಇದರಿಂದ ಇಂಧನಕ್ಕಾಗಿ ಪಾಕಿಸ್ತಾನ ಮಾಡುತ್ತಿರುವ ವೆಚ್ಚವೂ ಹೆಚ್ಚುತ್ತಿದೆ' ಎಂದು ಹೇಳಿದ್ದಾರೆ.

ಸಚಿವ ಸಂಪುಟ ಸಭೆಯಲ್ಲಿ ಮಾತನಾಡಿದ ಅವರು, ಯುದ್ಧದಿಂದಾಗಿ ಉದ್ಭವಿಸಿರುವ ಪರಿಸ್ಥಿತಿ ಮೇಲೆ ಕಾರ್ಯಪಡೆಯೊಂದು ನಿಗಾ ವಹಿಸಿದೆ ಎಂದು ಶರೀಫ್ ಹೇಳಿದ್ದಾಗಿ ಜಿಯೊ ಟಿವಿ ವರದಿ ಮಾಡಿದೆ.

'ಇಂಥ ಹಿನ್ನಡೆ ಹೊರತಾಗಿಯೂ ಯುದ್ಧ ನಿರತ ದೇಶಗಳ ನಡುವೆ ಮಾತುಕತೆಗೆ ವೇದಿಕೆ ಕಲ್ಪಿಸಿ, ಪಶ್ಚಿಮ ಏಷ್ಯಾದಲ್ಲಿ ಶಾಂತಿ ನೆಲಸುವಂತೆ ಮಾಡುವುದಕ್ಕೆ ನನ್ನ ಸರ್ಕಾರ ಪ್ರಯತ್ನ ಮುಂದುವರಿಸಲಿದೆ' ಎಂದು ಸಭೆಗೆ ತಿಳಿಸಿದ್ದಾರೆ.

ಅಮೆರಿಕ ಮತ್ತು ಇರಾನ್ ನಡುವೆ ಶಾಂತಿ ಮಾತುಕತೆಯಲ್ಲಾದ ಪ್ರಗತಿ ಕುರಿತು ಸಭೆಗೆ ವಿವರಿಸಿದ ಶರೀಫ್, 'ಉಭಯ ದೇಶಗಳ ನಡುವೆ ಎರಡನೇ ಸುತ್ತಿನ ಮಾತುಕತೆಯನ್ನು ಶೀಘ್ರವೇ ಆಯೋಜಿಸಲು ಪಾಕಿಸ್ತಾನ ಯೋಜಿಸಿದೆ. ಬಿಕ್ಕಟ್ಟು ಕೊನೆಗೊಂಡು ಪಶ್ಚಿಮ ಏಷ್ಯಾದಲ್ಲಿ ಶಾಂತಿ ನೆಲಸುವ ವಿಶ್ವಾಸ ಇದೆ' ಎಂದಿದ್ದಾರೆ.

ಏಳು ಜನರ ಜೀವ ತೆಗೆದ ಕಾಂಪೌಂಡ್

ಒಂದನೇ ಪುಟದಿಂದ...

ಅನಾಹುತ ಸಂಭವಿಸಿದ್ದು ಗೊತ್ತಾಗುತ್ತಲೇ ಸುರಿಯುತ್ತಿದ್ದ ಮಳೆಯನ್ನೂ ಲೆಕ್ಕಿಸದೇ ಅಕ್ಕಪಕ್ಕದಲ್ಲಿದ್ದ ನೂರಾರು ಜನರು ಧಾವಿಸಿ, ಕುಸಿದ ಗೋಡೆಯ ಅವಶೇಷಗಳನ್ನು ಎತ್ತಿ, ಕೆಳಗೆ ಬಿದ್ದವರನ್ನು ಮೇಲೆತ್ತುವ ಸಾಹಸ ಮಾಡಿದರು. ಜೆಸಿಬಿ ಯಂತ್ರಗಳು ದೌಡಾಯಿಸಿ, ಕಲ್ಲು ಮಣ್ಣನ್ನು ತೆಗೆದು ಉಳಿದವರನ್ನು ಬದುಕಿಸುವ ಯತ್ನಕ್ಕೆ ನೆರವಾದವು.

ಮಾಹಿತಿ ತಿಳಿದು ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ, ಪೊಲೀಸರು ಮಳೆಯ ನಡುವೆ ಕಾರ್ಯಾಚರಣೆ ನಡೆಸಿ ಅವಶೇಷಗಳ ಅಡಿ ಸಿಲುಕಿದ್ದವರನ್ನು ರಕ್ಷಿಸಿ ಬೌರಿಂಗ್ ಆಸ್ಪತ್ರೆಗೆ ದಾಖಲಿಸಿದರು. ಮೃತದೇಹಗಳನ್ನು ಹೊರಕ್ಕೆ ತೆಗೆದರು.

ಒಂಬತ್ತು ಗಾಯಾಳುಗಳ ಪೈಕಿ ಮೂವರನ್ನು ಬೌರಿಂಗ್ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆಗೆ ದಾಖಲು ಮಾಡಲಾಗಿದೆ. ಇಬ್ಬರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸ್ಥಳಾಂತರ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಕುಸಿದಿರುವ ಕಾಂಪೌಂಡ್ ಅನ್ನು ಹಲವು ವರ್ಷಗಳ ಹಿಂದೆಯೇ ನಿರ್ಮಿಸಲಾಗಿತ್ತು ಎನ್ನಲಾಗಿದೆ. ಆಸ್ಪತ್ರೆಯ ವಿವಿಧ ವಿಭಾಗಗಳನ್ನು ಕೆಲವು ವರ್ಷಗಳ ಹಿಂದೆ ತೆರವು ಮಾಡಿ ಹೊಸದಾಗಿ ನಿರ್ಮಿಸಲಾಗಿತ್ತು. ಆದರೆ, ಶವಾಗಾರದ ಬಳಿಯ ಕಾಂಪೌಂಡ್ ತೆರವು ಮಾಡಿರಲಿಲ್ಲ. ಶಿಥಿಲ ಕಾಂಪೌಂಡ್ ಬದಿಯಲ್ಲೇ ಹಲವು ವರ್ಷಗಳಿಂದ ವ್ಯಾಪಾರಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಅದೇ ಸ್ಥಳದಲ್ಲಿ ವ್ಯಾಪಾರ ನಡೆಸುತ್ತಾ ವ್ಯಾಪಾರಿಗಳು ಬದುಕು ಕಟ್ಟಿಕೊಂಡಿದ್ದರು.

ಕೇರಳದಿಂದ ಬೆಂಗಳೂರು ಪ್ರವಾಸಕ್ಕೆ ಬಂದಿದ್ದ ಪ್ರೀತಿ, ಸಿಜಿ ಹಾಗೂ ಮಾಯಾ ಘಟನೆಯಲ್ಲಿ ಗಾಯಗೊಂಡಿದ್ದಾರೆ. ಮೂವರೂ ಶಿವಾಜಿನಗರದ ಸುತ್ತಮುತ್ತ ಓಡಾಟ ನಡೆಸುತ್ತಿರುವಾಗ ಮಳೆ ಆರಂಭವಾಗಿತ್ತು. ಮಳೆಯಿಂದ ರಕ್ಷಣೆ ಪಡೆಯಲು ಮೂವರೂ ಕಾಂಪೌಂಡ್ ಸಮೀಪದಲ್ಲಿ ನಿಂತಿದ್ದರು. ಮಳೆ, ಜೋರು ಗಾಳಿಯ ಪರಿಣಾಮ ಅಲ್ಲಿದ್ದವರಿಗೆ ಮುಂದಕ್ಕೆ ಸಾಗಲು ಸಾಧ್ಯವಾಗಿರಲಿಲ್ಲ.

ಆಸ್ಪತ್ರೆಯ ಶವಾಗಾರದ ಹೊರವಲಯದ ಎರಡೂ ಕಡೆಯ ರಸ್ತೆಬದಿಯಲ್ಲಿ ಮಹಿಳೆಯರು, ವೃದ್ಧರು ಬಟ್ಟೆ, ಹಣ್ಣು, ಚಪ್ಪಲಿ, ಪರ್ಸ್ ಹಾಗೂ ಆಟಿಕೆಗಳನ್ನು 30ಕ್ಕೂ ಹೆಚ್ಚು ಮಂದಿ ಮಾರಾಟ ಮಾಡುತ್ತಿದ್ದರು. ದಿಢೀರ್ ಎಂದು ಗುಡುಗು ಸಹಿತ ಮಳೆ ಸುರಿಯಿತು. ವ್ಯಾಪಾರಕ್ಕೆ ಇಡಲಾಗಿದ್ದ ವಸ್ತುಗಳನ್ನು ಮಳೆಯಿಂದ ರಕ್ಷಿಸಲು ಹಾಗೂ ಮಳೆಯ ನೀರಿನಲ್ಲಿ ವಸ್ತುಗಳು ಕೊಚ್ಚಿ ಹೋಗುವ ಭಯದಿಂದ ವ್ಯಾಪಾರಿಗಳು ಸ್ಥಳದಲ್ಲೇ ನಿಂತಿದ್ದರು. ಇನ್ನು ಕೆಲವರು ವ್ಯಾಪಾರಕ್ಕಿಟ್ಟಿದ್ದ ವಸ್ತುಗಳ ಮೇಲೆ ಟಾರ್ಪಲ್ ಹೊದಿಸುತ್ತಿದ್ದರು. ಶಿಥಿಲಗೊಂಡಿದ್ದ ಕಾಂಪೌಂಡ್ ಏಕಾಏಕಿ ವ್ಯಾಪಾರಿಗಳು ಹಾಗೂ ಹೊರ ರಾಜ್ಯದಿಂದ ಬಂದು ಮಳೆಯಿಂದ ರಕ್ಷಣೆ ಪಡೆಯಲು ನಿಂತಿದ್ದವರ ಮೇಲೆ ಕುಸಿದು ದುರಂತ ಸಂಭವಿಸಿದೆ.

ಅಧಿಕಾರಿಗಳಿಗೆ ತರಾಟೆ: ದುರಂತದ ಸ್ಥಳಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಸತಿ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಚಿವ ಬಿ.ಝಡ್. ಜಮೀರ್ ಅಹಮದ್ ಖಾನ್, ವಿರೋಧ ಪಕ್ಷದ ನಾಯಕ ಆರ್. ಅಶೋಕ ಹಾಗೂ ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಭೇಟಿ ನೀಡಿ ಪರಿಶೀಲಿಸಿದರು. ಘಟನೆಯ ಸಂಬಂಧ ಮಾಹಿತಿ ಪಡೆದುಕೊಂಡರು.

ಬೌರಿಂಗ್ ಆಸ್ಪತ್ರೆಯ ವೈದ್ಯಾಧಿಕಾರಿ ಹಾಗೂ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಅಧಿಕಾರಿಗಳನ್ನು ಮುಖ್ಯಮಂತ್ರಿ ತರಾಟೆಗೆ ತೆಗೆದುಕೊಂಡರು.

'ನಿಮ್ಮ ನಡುವೆ ಹೊಂದಾಣಿಕೆ ಕೊರತೆಯಿದೆ. ಇದೇ ಕಾರಣಕ್ಕೆ ದುರಂತ ಸಂಭವಿಸಿದೆ. ಕಾಂಪೌಂಡ್ ಶಿಥಿಲವಾಗಿದ್ದರೂ ಏಕೆ ತೆರವುಗೊಳಿಸಿರಲಿಲ್ಲ. ಎಚ್ಚರಿಕೆ ವಹಿಸಿದ್ದರೆ ಈ ದುರಂತ ಸಂಭವಿಸುತ್ತಿರಲಿಲ್ಲ' ಎಂದು ಸಿದ್ದರಾಮಯ್ಯ ಅವರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಗಾಯಾಳುಗಳು

- ಪ್ರೀತಿ (51), ಕೇರಳ
- ಸಿಜಿ (45), ಕೇರಳ
- ಮಾಯಾ (51) ಕೇರಳ
- ತಬ್ರೀನ್ ತಾಜ್ (47)
- ಮುಬಿನ್ ತಾಜ್ (49)
- ಅಜು (35)
- ಸಾಜಿದ್ (20)
- ಸೈಯದ್ ಜಮೀರ್
- ಸಮೀವುಲ್ಲಾ

ಬದುಕು ಕೊಟ್ಟ ಗೋಡೆಯೇ ಜೀವ ಕಸಿದಾಗ...

ಒಂದನೇ ಪುಟದಿಂದ...

ಅಂತಹ ಅಂಗಡಿಗಳಿಗೆಲ್ಲಾ ಬೌರಿಂಗ್ ಆಸ್ಪತ್ರೆಯ ಹಿಂಭಾಗದ ಗೋಡೆಯೇ ಆಸರೆ.

ಅಂಗಡಿಗಳೆಂದರೆ ಅಂಗಡಿಗಳಲ್ಲ. ಆಸ್ಪತ್ರೆಯ ಕೌಂಪೌಂಡ್‌ಗೆ ಆತು ನಿಂತೋ ಅಥವಾ ಕುಳಿತೋ ನಾಲ್ಕಾರು ಬಟ್ಟೆ, ಷೂ, ಚಪ್ಪಲಿ, ಮಕ್ಕಳ ಆಟಿಕೆಗಳನ್ನು ಮಾರಾಟ ಮಾಡುವುದು.

'ಚರ್ಚ್‌ಗೆ ಬರುವ ಮಕ್ಕಳಿಗೆ ಆಟಿಕೆ ಮಾರುತ್ತಿದ್ದೆ. 50–60 ವರ್ಷಗಳಾಗಿರಬಹುದೇನೋ. ಆಗಿನಿಂದಲೂ ಇಲ್ಲಿಯೇ ಅಂಗಡಿ ಇಡುತ್ತಿದ್ದೇನೆ. ಬಟ್ಟೆಯ ಹ್ಯಾಂಗರ್, ಆಟಿಕೆ ಸ್ಟ್ಯಾಂಡ್ ಒರಗಿಸಿ ಇಡುತ್ತಿದ್ದು, ಕಡೆಗೆ ಮಳೆ–ಬಿಸಿಲಿನಿಂದ ರಕ್ಷಿಸಲು ಟಾರ್ಪಲ್ ಕಟ್ಟಿಕೊಳ್ಳುತ್ತಿದ್ದದ್ದು ಇದೇ ಗೋಡೆಗೆ' ಎಂದು ಸುಲೇಮಾನ್ ದೀರ್ಘ ಉಸಿರು ಎಳೆದುಕೊಂಡರು.

ಬುಧವಾರ ಸಂಜೆಯವರೆಗೂ ಎಲ್ಲವೂ ಸಾಮಾನ್ಯವಾಗಿಯೇ ಇತ್ತು. ಮಧ್ಯಾಹ್ನದ ನಂತರ ಮೋಡ ಇದ್ದುದ್ದರಿಂದ ಯಾರೂ ಟಾರ್ಪಲ್ ಬಿಚ್ಚಿರಲಿಲ್ಲ. ಮಕ್ಕಳ ಫ್ರಾಕ್ ಮಾರುವ ಸಿಜಿ ಮಾತ್ರ ಟಾರ್ಪಲ್ ಹರಡಿ ಅದರಡಿಯಲ್ಲಿ ನಿಂತಿದ್ದರು.

'ಸಿಜಿಯ ಟಾರ್ಪಲ್ ಹರಿದುಹೋಗಿತ್ತು. ಕಳೆದ ವಾರವಷ್ಟೇ 700 ರೂಪಾಯಿ ಕೊಟ್ಟು ಟಾರ್ಪಲ್ ಹಾಕಿಸಿದ್ದ. ಬುಧವಾರವಾದ್ದರಿಂದ ಅಂಥ ವ್ಯಾಪಾರವೇನೂ ಇರಲಿಲ್ಲ. ಸಂಜೆ ಹೊತ್ತಿಗೆ ಮಳೆ ಹನಿಯಲಾರಂಭಿಸಿತು. ನನಗೆ ಟಾರ್ಪಲ್ ಇಲ್ಲದ್ದರಿಂದ ಆಟಿಕೆಗಳನ್ನು ಚೀಲಕ್ಕೆ ತುಂಬುತ್ತಿದ್ದೆ. ಮಳೆ ಜೋರಾದ ಕಾರಣ. ಅಕ್ಕಪಕ್ಕದವರೆಲ್ಲಾ ತಮ್ಮ ಚೀಲ ಎತ್ತಿಕೊಂಡು ಸಿಜಿಯ ಟಾರ್ಪಲ್ ಅಡಿಗೆ ಹೋದರು. ನನಗೆ ಜಾಸ್ತಿ ವಯಸ್ಸು. ಬೇಗ ಹೋಗಲು ಆಗಲಿಲ್ಲ. ಎದ್ದು ಅತ್ತ ಹೋಗಬೇಕು ಎನ್ನುವಷ್ಟರಲ್ಲೇ ಗೋಡೆ ಬಿತ್ತು. ಸಿಜಿಯ ಟಾರ್ಪಲ್ ಅಡಿ ನಿಂತಿದ್ದವರು ಗೋಡೆ ಕೆಳಗೆ ಸಿಕ್ಕಿಕೊಂಡರು' ಎಂದು ಮೌನಕ್ಕೆ ಜಾರಿದರು.

ಆ ಹೊತ್ತಿಗೆ ಅಲ್ಲಿಗೆ ಬಂದ ಯುವಕನೊಬ್ಬ, 'ಅಬ್ಬು, ಬಾ. ನೋಡಿಕೊಂಡು ಬರೋಣ' ಎಂದು ಒತ್ತಾಯಿಸಿದ. ಸುಲೇಮಾನ್, 'ನನ್ನ ಜೊತೆ ವ್ಯಾಪಾರ ಮಾಡುತ್ತಿದ್ದವರು. ಬದುಕಿದ್ದವರನ್ನು ಸತ್ತಮೇಲೆ ನೋಡೋದು ಕಷ್ಟ' ಎಂದು ನಿರಾಕರಿಸಿದರು. 'ಇದೇ ಗೋಡೆ ಪಕ್ಕ ನಿಂತು ಸಾವಿರಾರು ಮಕ್ಕಳಿಗೆ ಗೊಂಬೆ, ಗಿರಗಿಟ್ಲೆ ಮಾರಿದ್ದೇನೆ. ನನ್ನಂಥ ಹತ್ತಾರು ಜನ ಇಲ್ಲೇ ಬದುಕು ಕಟ್ಟಿಕೊಂಡಿದ್ದು. ಆಗ ಬಂದಿದ್ದನಲ್ಲ, ಅವ ನನ್ನ ಮಗ. ಅವನು ಮಗುವಾಗಿದ್ದಾಗ, ಎಷ್ಟೋ ದಿನ ಈ ಗೋಡೆಯ ನೆರಳಲ್ಲೇ ಅವನನ್ನು ಮಲಗಿಸಿದ್ದೆ. ಅಂಥ ಗೋಡೆಯೇ ಜೀವ ಕಿತ್ತುಕೊಂಡಿತೆಂದರೆ ನಂಬಲಾಗುತ್ತಿಲ್ಲ' ಎಂದು ನಿಟ್ಟುಸಿರು ಬಿಟ್ಟರು.

ಜಡಿ ಮಳೆ, ನೂರಾರು ಪೊಲೀಸರು, ಕುತೂಹಲಕ್ಕೆ ನೆರೆದ ಜನರ ಗದ್ದಲದ ಮಧ್ಯ ಸುಲೇಮಾನ್ ಅವರ ಕಣ್ಣೀರು ಕಾಣಲಿಲ್ಲ, ಸುಕ್ಕುಗಟ್ಟಿದ ಅವರ ಮುಖದ ಭಾವಗಳೂ ಗೊತ್ತಾಗಲಿಲ್ಲ. ಗೋಡೆಯಡಿ ನುಜ್ಜುಗುಜ್ಜಾದ ಆಟಿಕೆಗಳು, ಬಣ್ಣದ ಫ್ರಾಕುಗಳು, ಅಡಿಮೇಲಾಗಿದ್ದ ತಳ್ಳುಗಾಡಿ ನಿಸ್ತೇಜವಾಗಿ ಬಿದ್ದಿದ್ದವು. ಸಿಜಿಯ ಟಾರ್ಪಲ್ ಗೋಡೆಯ ಅಳಿದುಳಿದ ಕಂಬಿಗೆ ಜೋತುಬಿದ್ದಿತ್ತು.

ತಲಾ ₹5 ಲಕ್ಷ ಪರಿಹಾರ, ತನಿಖೆ

ಒಂದನೇ ಪುಟದಿಂದ...

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ಬೌರಿಂಗ್ ಆಸ್ಪತ್ರೆ ಆವರಣದಕ್ಕು ಕಾಮಗಾರಿ ನಡೆಯುತ್ತಿತ್ತು. ಅಲ್ಲಿನ ಮಣ್ಣು ತಂದು ಕಾಂಪೌಂಡ್ ಪಕ್ಕ ಸುರಿಯುತ್ತಿದ್ದರು. ಇದರ ಒತ್ತಡ ಬಿದ್ದು ಗೋಡೆ ಬಿದ್ದಿರಬಹುದು. ಕಾಂಪೌಂಡ್ ಶಿಥಿಲ ಆಗಿತ್ತೊ ಇಲ್ಲವೊ ಎಂಬುದನ್ನು ಎಂಜಿನಿಯರ್‌ಗಳು ಪರಿಶೀಲನೆ ನಡೆಸಿದ್ದಾರೆಯೇ ಇಲ್ಲವೆ ಎಂಬುದು ತನಿಖೆ ವೇಳೆ ಗೊತ್ತಾಗುತ್ತದೆ ಎಂದರು.

ಬೀದಿ ಬದಿ ವ್ಯಾಪಾರಿಗಳು ಶಿಥಿಲಗೊಂಡ ಕಾಂಪೌಂಡ್ ಪಕ್ಕದಲ್ಲೇ ವ್ಯಾಪಾರಕ್ಕೆ ಕೂರುತ್ತಿದ್ದರು. ಗೋಡೆಯ ಸುರಕ್ಷತೆ ಬಗ್ಗೆ ಅಧಿಕಾರಿಗಳು ಎಚ್ಚರಿಸಿದ್ದರೊ ಇಲ್ಲವೊ ಎಂಬುದರ ತನಿಖೆಯೂ ಆಗಲಿದೆ. ತಪ್ಪಿಸ್ಥರಿದ್ದರೆ, ಕ್ರಮ ಕೈಗೊಳ್ಳಲಾಗುವುದು ಎಂದು ಸಿದ್ದರಾಮಯ್ಯ ತಿಳಿಸಿದರು.

ಬಹುನಿರೀಕ್ಷಿತ ಟಾಕ್ಸಿಕ್ ಸದ್ಯಕ್ಕಿಲ್ಲ


ಯಶ್

ಯಶ್ ನಟನೆಯ 'ಟಾಕ್ಸಿಕ್' ಚಿತ್ರ ಬಿಡುಗಡೆ ದಿನಾಂಕ ಮತ್ತೆ ಮುಂದಕ್ಕೆ ಹೋಗಿದೆ. 'ಈ ಮೊದಲು ಘೋಷಿಸಿದಂತೆ ಜೂನ್ 4 ರಂದು ಸಿನಿಮಾ ಬಿಡುಗಡೆಯಾಗುವುದಿಲ್ಲ, ಬದಲಾಗಿ ಜಾಗತಿಕ ಮಾರುಕಟ್ಟೆಗೆ ಪೂರಕವಾದ ದಿನಾಂಕದಂದು ವಿಶ್ವದಾದ್ಯಂತ ತೆರೆಕಾಣಲಿದೆ ಎಂದು ಯಶ್ ತಮ್ಮ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದಾರೆ.

ಕೆವಿಎನ್ ಪ್ರೊಡಕ್ಷನ್ ಹಾಗೂ ಯಶ್ ಅವರ ಮಾನ್‌ಸ್ಟರ್ ಮೈಂಡ್ ಕ್ರಿಯೇಷನ್ಸ್ ನಿರ್ಮಾಣದ ಸಿನಿಮಾ ಮಾ.19ರಂದು ಬಿಡುಗಡೆಗೊಳ್ಳಬೇಕಿತ್ತು. ಯುದ್ಧದ ಕಾರಣ ನೀಡಿ ಅದನ್ನು ಜೂ.4ಕ್ಕೆ ಮುಂದೂಡಲಾಗಿತ್ತು.

'ಇತ್ತೀಚೆಗೆ ನಡೆದ ಸಿನಿಮಾಕಾನ್ ಸಮ್ಮೇಳನದಲ್ಲಿ 'ಟಾಕ್ಸಿಕ್' ಪ್ರದರ್ಶಿಸಿದಾಗ ಜಾಗತಿಕ ವಿತರಕರು ಮತ್ತು ಚಿತ್ರೋದ್ಯಮದ ಪ್ರಮುಖರಿಂದ ಚಿತ್ರಕ್ಕೆ ದೊರೆತ ಪ್ರತಿಕ್ರಿಯೆಯಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಅಲ್ಲಿ ಸಿಕ್ಕ ಪ್ರೋತ್ಸಾಹ ಚಿತ್ರವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಇನ್ನೂ ದೊಡ್ಡಮಟ್ಟದಲ್ಲಿ ಬಿಡುಗಡೆ ಮಾಡಲು ಹೊಸ ಅವಕಾಶಗಳನ್ನು ಕಲ್ಪಿಸಿಕೊಟ್ಟಿದೆ. ಈ ಕಾರಣದಿಂದಾಗಿ ಬಿಡುಗಡೆಯ ಯೋಜನೆಯನ್ನು ಮರುಪರಿಶೀಲಿಸಿ, ಜಾಗತಿಕ ಮಾರುಕಟ್ಟೆಗೆ ಅನುಗುಣವಾಗಿ ಬದಲಾಯಿಸಿಕೊಂಡಿದ್ದೇವೆ' ಎಂದು ಯಶ್ ತಮ್ಮ ಪೋಸ್ಟ್‌ನಲ್ಲಿ ಹೇಳಿದ್ದಾರೆ.

ಈ ಚಿತ್ರಕ್ಕೆ ಯಶ್ ಮತ್ತು ಗೀತು ಮೋಹನ್ ದಾಸ್ ಕಥೆ ಬರೆದಿದ್ದು, ಗೀತು ಮೋಹನ್ ದಾಸ್ ನಿರ್ದೇಶನವಿದೆ. 'ಟಾಕ್ಸಿಕ್: ಎ ಫೇರಿ ಟೇಲ್ ಫಾರ್ ಗ್ರೋನ್-ಅಪ್ಸ್' ಚಿತ್ರದಲ್ಲಿ ಯಶ್ ಅವರೊಂದಿಗೆ ನಯನತಾರಾ, ಕಿಯಾರಾ ಅಡ್ವಾಣಿ, ಹುಮಾ ಖುರೇಷಿ, ರುಕ್ಮಿಣಿ ವಸಂತ್ ಮತ್ತು ತಾರಾ ಸುತಾರಿಯಾ ನಟಿಸಿದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಚಿತ್ರೀಕರಿಸಲಾದ ಈ ಚಿತ್ರವು ಹಿಂದಿ, ತಮಿಳು, ತೆಲುಗು ಸೇರಿ ಹಲವು ಭಾಷೆಗಳಿಗೆ ಡಬ್ ಆಗಿದೆ.

ಚಿತ್ರರಂಗಕ್ಕೆ ಸಣ್ಣ ಕೊಡುಗೆ

'ನಾವು ಕೆಲವು ಸಿನಿಮಾಗಳನ್ನು ಮಾಡುತ್ತೇವೆ, ಆದರೆ ಮತ್ತೆ ಕೆಲವು ಸಿನಿಮಾಗಳು ನಾವು ಚಿತ್ರರಂಗವನ್ನು ಏಕೆ ಇಷ್ಟಪಟ್ಟೆವು ಎಂಬುದನ್ನು ನೆನಪಿಸುತ್ತವೆ. 'ಟಾಕ್ಸಿಕ್' ಅಂತಹ ಒಂದು ಪಯಣ. ಚಿತ್ರ ಸಿದ್ಧವಾಗಿದೆ. ಸದ್ಯ ನಾವು ಜಾಗತಿಕ ವಿತರಣೆ ಮತ್ತು ಸಹಭಾಗಿತ್ವದ ಕಾರ್ಯಗಳಲ್ಲಿ ಮಗ್ನರಾಗಿದ್ದೇವೆ. ಭಾರತೀಯ ಚಿತ್ರರಂಗದ ಧ್ವನಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಕೇಳಿಸುವಂತೆ ಮಾಡುವ ಜವಾಬ್ದಾರಿ ನಮ್ಮ ಮೇಲಿದೆ. ಈ ಸಿನಿಮಾ ಚಿತ್ರರಂಗಕ್ಕೆ ನಮ್ಮ ಸಣ್ಣ ಕೊಡುಗೆ ಎಂದು ಭಾವಿಸುತ್ತೇನೆ' ಎಂದು ಯಶ್ ಹೇಳಿದ್ದಾರೆ.

'ಜನ ನಾಯಗನ್' ಬಿಡುಗಡೆ ಪರಿಣಾಮ?

ಕೆವಿಎನ್ ಪ್ರೊಡಕ್ಷನ್ ನಿರ್ಮಾಣದಲ್ಲಿ ದಳಪತಿ ವಿಜಯ್ ನಟಿಸಿರುವ 'ಜನ ನಾಯಗನ್' ಶೀಘ್ರದಲ್ಲಿ ತೆರೆ ಕಾಣಲಿದ್ದು, ಆ ಕಾರಣಕ್ಕಾಗಿ 'ಟಾಕ್ಸಿಕ್' ಮುಂದೂಡಲಾಗಿದೆ ಎಂಬ ಮಾತಿದೆ.

ತಮಿಳಿನ 'ಜನ ನಾಯಗನ್' ಚಿತ್ರ ಸಂಕ್ರಾಂತಿಗೆ ತೆರೆ ಕಾಣಬೇಕಿತ್ತು. ಆದರೆ ಸೆನ್ಸಾರ್ ಸಮಸ್ಯೆಯಿಂದಾಗಿ ಬಿಡುಗಡೆಗೊಂಡಿರಲಿಲ್ಲ. ಇದೀಗ ಸೆನ್ಸಾರ್ ಮಂಡಳಿಯಿಂದ ಚಿತ್ರ ಬಿಡುಗಡೆಗೆ ಅನುಮತಿ ಸಿಕ್ಕಿದ್ದು, ಮೇ ಎರಡನೇ ವಾರದಲ್ಲಿ ಚಿತ್ರ ತೆರೆಗೆ ಬರುವ ನಿರೀಕ್ಷೆಯಿದೆ.

ಉತ್ತರದಿಂದ ಮರಳಿದ ಪಬ್ಬಾರ್


ಧೀರೆನ್

'ಶಾಖಾಹಾರಿ' ಸಿನಿಮಾ ನಿರ್ದೇಶಕ ಸಂದೀಪ್ ಸುಂಕದ್ ನಿರ್ದೇಶನದ 'ಪಬ್ಬಾರ್'ನ ಶೂಟಿಂಗ್ ಶೇ 90ರಷ್ಟು ಪೂರ್ಣಗೊಂಡಿದೆ. ಹಿಮಾಚಲ ಪ್ರದೇಶದಲ್ಲಿ ಚಿತ್ರೀಕರಣ ನಡೆಸಿ ಚಿತ್ರತಂಡ ಇತ್ತೀಚೆಗೆ ಮರಳಿದೆ.

ಸಿನಿಮಾದಲ್ಲಿ ನಾಯಕರಾಗಿ ಧೀರೆನ್ ಆರ್.ರಾಜ್‌ಕುಮಾರ್ ನಟಿಸಿದ್ದು, ಬುಧವಾರ (ಏ.29) ಅವರ ಜನ್ಮದಿನದಂದು ಚಿತ್ರತಂಡ ಹೊಸ ಪೋಸ್ಟರ್ ಬಿಡುಗಡೆ ಮಾಡಿದೆ. ಶಿಮ್ಲಾ, ಸಾಂಗ್ಲಾ, ಪಬ್ಬಾರ್ ನದಿ ಪ್ರದೇಶದಲ್ಲಿ ಚಿತ್ರತಂಡ ಶೂಟಿಂಗ್ ನಡೆಸಿದೆ. ಧೀರೆನ್, 'ಸಕುಟುಂಬ ಸಮೇತ', 'ಟೋಬಿ' ಖ್ಯಾತಿಯ ಭರತ್, ಗೋಪಾಲಕೃಷ್ಣ ದೇಶಪಾಂಡೆ, ಅಮೃತಾ ಪ್ರೇಮ್ ಸೇರಿದಂತೆ ಹಲವು ಕಲಾವಿದರು ಇಲ್ಲಿ ಚಿತ್ರೀಕರಣದಲ್ಲಿ ಭಾಗವಹಿಸಿದ್ದರು.

'ಚಿತ್ರದ ಮೊದಲ ಹಂತದ ಡಬ್ಬಿಂಗ್ ಮತ್ತು ಹಿನ್ನೆಲೆ ಸಂಗೀತದ ಕೆಲಸಗಳು ಪೂರ್ಣಗೊಂಡಿವೆ. ಧೀರೆನ್ ಈ ಸಿನಿಮಾದಲ್ಲಿ ಎರಡು–ಮೂರು ಶೇಡ್‌ಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಒಂದಿಷ್ಟು ಹೊಸ ಪಾತ್ರಧಾರಿಗಳ ಸೇರ್ಪಡೆಯಾಗಿವೆ. ಅದರ ಮಾಹಿತಿಯನ್ನು ಶೀಘ್ರದಲ್ಲೇ ಹಂಚಿಕೊಳ್ಳಲಿದ್ದೇವೆ. ಸಿನಿಮಾದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಚಿತ್ರೀಕರಣದ ಜೊತೆ ಜೊತೆಯಲ್ಲೇ ನಡೆಯುತ್ತಿದೆ. ಒಂದು ಹಾಡು ಮತ್ತು ಸಾಹಸ ದೃಶ್ಯದ ಚಿತ್ರೀಕರಣ ಬಾಕಿ ಇದೆ. ಸಿನಿಮಾವನ್ನು ಇದೇ ಆಗಸ್ಟ್ ಅಥವಾ ಅಕ್ಟೋಬರ್‌ನಲ್ಲಿ ತೆರೆಗೆ ತರುವ ಯೋಚನೆಯಲ್ಲಿದ್ದೇವೆ' ಎಂದಿದ್ದಾರೆ ಸಂದೀಪ್ ಸುಂಕದ್.

ಚಿತ್ರದಲ್ಲಿ ಪೊಲೀಸ್ ಅಧಿಕಾರಿಯಾಗಿ ಅಯ್ಯಪ್ಪ ನಟಿಸುತ್ತಿದ್ದಾರೆ. ಸಿನಿಮಾವನ್ನು ಗೀತಾ ಪಿಕ್ಚರ್ಸ್ ನಿರ್ಮಾಣ ಮಾಡುತ್ತಿದೆ. ಇದೊಂದು ಕ್ರೈಂ, ಅಡ್ವೆಂಚರಸ್ ಥ್ರಿಲ್ಲರ್ ಸಿನಿಮಾವಾಗಿದ್ದು, ಹಿಮಾಚಲ ಪ್ರದೇಶದ ಶಿಮ್ಲಾ ಬಳಿಯ 'ಪಬ್ಬಾರ್' ನದಿ ಈ ಚಿತ್ರದ ಕಥೆಯ ಕೇಂದ್ರಬಿಂದುವಾಗಿದೆ. ಹೀಗಾಗಿಯೇ ಚಿತ್ರಕ್ಕೆ 'ಪಬ್ಬಾರ್' ಎಂಬ ಶೀರ್ಷಿಕೆ ಇಡಲಾಗಿದೆ.

ಮೀರಾ ಮಾಳವಿಕ ಶರ್ಮ


ಮಾಳವಿಕ ಶರ್ಮ

ಗಣೇಶ್ ನಟನೆಯ 'ಬೃಂದಾವಿಹಾರಿ' ಸಿನಿಮಾ ಶೀಘ್ರದಲ್ಲೇ ತೆರೆಕಾಣಲಿದೆ. ನಾಯಕಿಯಾಗಿ ನಟಿಸಿರುವ ಮಾಳವಿಕ ಶರ್ಮ ಸಿನಿಮಾದಲ್ಲಿ 'ಮೀರಾ' ಎಂಬ ಪಾತ್ರದಲ್ಲಿ ನಟಿಸಲಿದ್ದು, ಅವರ ಪಾತ್ರದ ಪೋಸ್ಟರ್ ರಿಲೀಸ್ ಮಾಡಿದೆ ಚಿತ್ರತಂಡ.

ತೆಲುಗಿನ ನಟ ಗೋಪಿಚಂದ್ ನಟನೆಯ 'ಭೀಮ', 'ಹರೋಂಹರ', 'ಕಾಫಿ ವಿದ್ ಕಾದಲ್', 'ರೆಡ್' ಮುಂತಾದ ಸಿನಿಮಾಗಳಲ್ಲಿ ನಟಿಸಿದ್ದಾರೆ ಮಾಳವಿಕ. ಈಗಾಗಲೇ ಬಿಡುಗಡೆಯಾಗಿರುವ 'ಹೇ ರಾಮ ರಾಮ' ಹಾಡು ವೀಕ್ಷಕರನ್ನು ಸೆಳೆದಿದ್ದು, 'ರಾಧ'ಳಾಗಿ ದೇವಿಕಾ ಭಟ್ ಕಾಣಿಸಿಕೊಂಡಿದ್ದರು. 'ಕೃಷ್ಣಂ ಪ್ರಣಯ ಸಖಿ' ಖ್ಯಾತಿಯ ಶ್ರೀನಿವಾಸರಾಜು ಈ ಸಿನಿಮಾವನ್ನು ನಿರ್ದೇಶಿಸಿದ್ದಾರೆ. ಈ ಚಿತ್ರದ ಏಳು ಹಾಡುಗಳಿಗೆ ವಿ.ನಾಗೇಂದ್ರ ಪ್ರಸಾದ್ ಸಾಹಿತ್ಯ ಬರೆದಿದ್ದು, ಹೇಶಮ್ ಅಬ್ದುಲ್ ವಹಾಬ್ ಸಂಗೀತ ಸಂಯೋಜಿಸಿದ್ದಾರೆ.

ವಿರಾಟ್ ಸಾಯಿ ಕ್ರಿಯೇಷನ್ಸ್ ಅರ್ಪಿಸುವ ಈ ಚಿತ್ರವನ್ನು ಸಮೃದ್ಧಿ ವಿ. ಮಂಜುನಾಥ್ ನಿರ್ಮಾಣ ಮಾಡಿದ್ದಾರೆ. ಶ್ರೀನಿವಾಸರಾಜು ಅವರೇ ಕಥೆ, ಚಿತ್ರಕಥೆ ಬರೆದಿದ್ದಾರೆ. ವೆಂಕಟ್ ಪ್ರಸಾದ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಗಣೇಶ್‌ಗೆ ಜೋಡಿಯಾಗಿ ದೇವಿಕಾ ಭಟ್ ಹಾಗೂ ಮಾಳವಿಕ ಶರ್ಮ ಅಭಿನಯಿಸಿದ್ದಾರೆ.

'KD' ಇಂದು ತೆರೆಗೆ


ಧ್ರುವ ಸರ್ಜಾ

ಧ್ರುವ ಸರ್ಜಾ ನಟನೆಯ 'KD' ಚಿತ್ರ ಇಂದು (ಏ.30) ತೆರೆ ಕಾಣುತ್ತಿದೆ. ಜೋಗಿ ಪ್ರೇಮ್ ನಿರ್ದೇಶನದ ಚಿತ್ರ 'ಸರ್ಜೆ ನಿನ್ನ ಸೆರಗ ಸರ್ಜೆ' ಹಾಡಿನ ವಿವಾದದಿಂದ ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗಿತ್ತು. ಇದರಿಂದಾಗಿ ಚಿತ್ರಕ್ಕೆ ಸೆನ್ಸಾರ್ ಸಮಸ್ಯೆಯೂ ಎದುರಾಗಿತ್ತು. ಎಲ್ಲ ಅಡ್ಡಿಗಳನ್ನು ದಾಟಿ ಚಿತ್ರ ತೆರೆಗೆ ಬಂದಿದೆ.

ಕೆವಿಎನ್ ಪ್ರೊಡಕ್ಷನ್ ನಿರ್ಮಾಣದ ಸಿನಿಮಾ ಮೂರು ವರ್ಷಗಳ ಹಿಂದೆ ಸೆಟ್ಟೇರಿತ್ತು. ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಕಳೆದ ವರ್ಷ ಡಿಸೆಂಬರ್‌ನಲ್ಲಿಯೇ ಚಿತ್ರ ಬಿಡುಗಡೆಗೊಳ್ಳಬೇಕಿತ್ತು.

ರೀಷ್ಮಾ ನಾಣಯ್ಯ ಚಿತ್ರದ ನಾಯಕಿ. ಸಂಜಯ್ ದತ್, ಶಿಲ್ಪಾ ಶೆಟ್ಟಿ, ರವಿಚಂದ್ರನ್, ರಮೇಶ್ ಅರವಿಂದ್ ಮುಂತಾದವರು ಚಿತ್ರದಲ್ಲಿದ್ದಾರೆ. ಸುದೀಪ್ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತ, ವಿಲಿಯಂ ಡೇವಿಡ್ ಛಾಯಾಚಿತ್ರಗ್ರಹಣವಿದೆ.

'ನಾಸ್ತಿಕನಿಗೇಕೆ ದೇಗುಲ ಪ್ರವೇಶದ ಹಕ್ಕು?'

ಧಾರ್ಮಿಕ ಸ್ಥಳಗಳಲ್ಲಿ ಮಹಿಳೆಯರ ಕುರಿತ ತಾರತಮ್ಯ ವಿರುದ್ಧದ ಅರ್ಜಿ; 'ಸುಪ್ರೀಂ' ಪ್ರಶ್ನೆ

ನವದೆಹಲಿ (ಪಿಟಿಐ): ಉತ್ತರ ಭಾರತದ ನಂಬಿಕೆಯಿಲ್ಲದ ವ್ಯಕ್ತಿ ಶಬರಿಮಲೆ ದೇವಸ್ಥಾನದ ಪ್ರವೇಶದ ಹಕ್ಕು ಹೇಗೆ ಪಡೆಯಲು ಸಾಧ್ಯ ಎಂದು ಪ್ರಶ್ನಿಸಿರುವ ಸುಪ್ರೀಂ ಕೋರ್ಟ್, ದೇವಾಲಯಕ್ಕೆ ಪ್ರವೇಶಿಸುವ ಹಕ್ಕನ್ನು ನಿರ್ಧರಿಸುವ ವೇಳೆ ಭಕ್ತನೇ ಅಥವಾ ಭಕ್ತನಲ್ಲದ ವ್ಯಕ್ತಿಯೂ ಹಕ್ಕನ್ನು ಪಡೆಯುತ್ತಿದ್ದಾರೆಯೇ ಎಂಬುದನ್ನು ಪರಿಶೀಲಿಸಬೇಕು ಎಂದು ತಿಳಿಸಿದೆ.

ಶಬರಿಮಲೆ ದೇವಾಲಯ ಸೇರಿದಂತೆ ಧಾರ್ಮಿಕ ಸ್ಥಳಗಳಲ್ಲಿ ಮಹಿಳೆಯರ ವಿಷಯದಲ್ಲಿ ತಾರತಮ್ಯ ಮಾಡಲಾಗುತ್ತಿದೆ ಎಂಬ ಅರ್ಜಿಗೆ ಸಂಬಂಧಿಸಿ ಮುಖ್ಯ ನ್ಯಾಯಮೂರ್ತಿ ಸೇರಿದಂತೆ 9 ನ್ಯಾಯಮೂರ್ತಿಗಳನ್ನು ಒಳಗೊಂಡ ಸಾಂವಿಧಾನಿಕ ನ್ಯಾಯಪೀಠ ಈ ಅಭಿಪ್ರಾಯಪಟ್ಟಿದೆ.

2018ರ ತೀರ್ಪು ಬೆಂಬಲಿಸಿ ಬಿಂದು ಅಮ್ಮಿಣಿ ಹಾಗೂ ಕನಕದುರ್ಗ ಪರವಾಗಿ ಹಾಜರಾದ ಹಿರಿಯ ವಕೀಲೆ ಇಂದಿರಾ ಜೈಸಿಂಗ್, 'ಅರ್ಜಿದಾರರಾದ ಒಬ್ಬ ಮಹಿಳೆಯು ಪರಿಶಿಷ್ಟ ಜಾತಿಗೆ ಸೇರಿದ್ದು, ಅವರು ದೇವಾಲಯ ಪ್ರವೇಶಿಸುವುದನ್ನು ತಡೆಯುವುದು ಸಂವಿಧಾನದ 17ವಿಧಿಯ (ಅಸ್ಪೃಶ್ಯತಾ ನಿರ್ಮೂಲನೆ) ಉಲ್ಲಂಘನೆಯಾಗುತ್ತದೆ' ಎಂದು ತಿಳಿಸಿದರು. ಶಬರಿಮಲೆ ಅಯ್ಯಪ್ಪ ದೇವಾಲಯದಲ್ಲಿ 10ರಿಂದ 50 ವರ್ಷದ ಮಹಿಳೆಯರಿಗೆ ನಿಷೇಧಿಸಲಾಗಿದ್ದ ಪ್ರವೇಶವನ್ನು ಹಿಂದಕ್ಕೆ ಪಡೆದು 2018ರ ಸೆಪ್ಟೆಂಬರ್‌ನಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಶತಮಾನದಷ್ಟು ಹಳೆಯದಾದ ಧಾರ್ಮಿಕ ಆಚರಣೆಯು ಅಕ್ರಮ ಹಾಗೂ ಅಸಾಂವಿಧಾನಿಕ ಎಂದು ಸ್ಪಷ್ಟಪಡಿಸಿತ್ತು.

'ಇಂದು ಯಾವುದೇ ಜಾತಿಯ ಹಿಂದೂಗಳು ಶಬರಿಮಲೆ ಪ್ರವೇಶಿಸಬಹುದು. ಮಹಿಳೆಯರಿಗೆ ಅವಕಾಶವಿಲ್ಲ ಎಂದು ಹೇಳಲಾಗುತ್ತಿದೆ. ಸಂವಿಧಾನದ 17ನೇ ವಿಧಿ ಪ್ರಕಾರ, ಎಲ್ಲ ಜಾತಿಯ ಪುರುಷರು ದೇವಾಲಯ ಪ್ರವೇಶಿಸಬಹುದಾಗಿದೆ' ಎಂದು ಪೀಠದ ಗಮನಸೆಳೆದರು. ಇದಕ್ಕೆ ಪ್ರತಿಕ್ರಿಯಿಸಿದ ಪೀಠ, 'ಮಹಿಳೆಯು ಪರಿಶಿಷ್ಟ ಜಾತಿಗೆ ಸೇರಿದವಳು ಎಂಬ ಕಾರಣಕ್ಕೆ ನಿರ್ಬಂಧಿಸಿಲ್ಲ; ಆಕೆಯು 10ರಿಂದ 50 ವರ್ಷದೊಳಗಿನ ಮಹಿಳೆ ಎಂಬ ಕಾರಣಕ್ಕಾಗಿ ಅವಕಾಶ ನೀಡಿಲ್ಲ' ಎಂದು ತಿಳಿಸಿತು.

'ನಾನು ಶಬರಿ.. ಶಬರಿಮಲೆ ಪ್ರವೇಶಕ್ಕೆ ಕಾಯುತ್ತಿದ್ದೇನೆ...'

ನವದೆಹಲಿ (ಪಿಟಿಐ): ಶಬರಿಮಲೆ ದೇವಾಲಯ ಪ್ರವೇಶಕ್ಕೆ ಸಂಬಂಧಿಸಿ ಅರ್ಜಿ ವಿಚಾರಣೆ ವೇಳೆ ಸಾಂವಿಧಾನಿಕ ಪೀಠದ ಮುಂದೆ ರಾಮಾಯಣದ ಶಬರಿ ಕಥೆಯೂ ಪ್ರಸ್ತಾಪವಾಯಿತು.

ಇಬ್ಬರು ಮಹಿಳೆಯರ ಪರವಾಗಿ ಹಾಜರಾದ ಇಂದಿರಾ ಜೈಸಿಂಗ್, ಶಬರಿ ಪಾತ್ರವನ್ನು ಉಲ್ಲೇಖಿಸಿದರು.

'ರಾಮನ ಕುರಿತು ನಿಸ್ವಾರ್ಥ ಭಕ್ತಿ ಹೊಂದಿರುವ ಬುಡಕಟ್ಟು ಸಮುದಾಯದ ತಪಸ್ವಿ ಮಹಿಳೆಯು ಆತನಿಗಾಗಿ ಕಾದಿದ್ದಳು. ಶಬರಿ ಯಾರು? ನಾವೆಲ್ಲರೂ ರಾಮಾಯಣ ಓದಿದ್ದೇವೆ. ಅವಳೂ ಮಹಿಳೆ. ಶ್ರೀರಾಮನಿಗಾಗಿ ಬೋರೆ ಹಣ್ಣುಗಳನ್ನು ಅರ್ಪಿಸಿದ್ದಳು. ರಾಮನ ಭೇಟಿಗಾಗಿ ಇಡೀ ಜೀವನವೇ ಕಾದಿದ್ದಳು. ಅದು ಆಕೆಯ ಇಚ್ಛೆ. ಶಬರಿಮಲೆ ಎಂದರೆ ಏನು? ಮಲೆ ಅಂದರೆ ಬೆಟ್ಟ. ಅಲ್ಲಿ ವಾಸಿಸುವವರು ಬುಡಕಟ್ಟು ಸಮುದಾಯವರಾಗಿದ್ದು, ಅವರೇ ಅಲ್ಲಿನ ನಿವಾಸಿಗಳಾಗಿದ್ದಾರೆ. ಆಕೆಗೆ ಕೊನೆಗೂ ಕನಸು ಹತ್ತಿರವಾಗುವ ಸಮಯ ಬಂದಿದ್ದು, ರಾಮನನ್ನು ಭೇಟಿಯಾಗುವ ಅವಕಾಶ ಸಿಗಲಿದೆ ಎಂದು ನಂಬಿದ್ದಳು.'

'ಆತ ಭೇಟಿಯಾದ ವೇಳೆ ಸಿಹಿಹಣ್ಣು ಮಾತ್ರ ನೀಡಬೇಕು ಎಂದು ನಿರ್ಧರಿಸಿ ಪ್ರತಿ ಹಣ್ಣನ್ನು ಕಚ್ಚಿ ತಿಂದು ಸಿಹಿಹಣ್ಣನ್ನು ಮಾತ್ರ ನೀಡಲು ನಿರ್ಧರಿಸಿದ್ದಳು. ಶಬರಿ ಹಣ್ಣು ನೀಡಲು ಮುಂದೆ ಬಂದಾಗ, ಆಕೆಯು ಕಚ್ಚಿ ತಿಂದಿರುವುದನ್ನು ಲಕ್ಷ್ಮಣನು ಶ್ರೀರಾಮನ ಗಮನಕ್ಕೆ ತಂದನು. ಇದಕ್ಕೆ ಉತ್ತರಿಸಿದ ರಾಮ, ನಾನು ಆಕೆಯ ನಂಬಿಕೆಯನ್ನು ಗೌರವಿಸುತ್ತೇನೆ. ಅವಳ ಪ್ರೀತಿಯನ್ನು ಸ್ವೀಕರಿಸಿ ಹಣ್ಣು ತಿನ್ನುತ್ತೇನೆ ಎಂದು ಸ್ವೀಕರಿಸಿದ್ದ.'

'ನಾನು ಕೂಡ ಶಬರಿ. ಆದರೆ, ನೀವು ನನ್ನನ್ನು ದೇವಾಲಯದಿಂದಲೇ ಹೊರಗಿಟ್ಟಿದ್ದೀರಿ' ಎಂದು ನ್ಯಾಯಪೀಠದ ಗಮನಸೆಳೆದರು.

ಇದಕ್ಕೆ ಉತ್ತರಿಸಿದ ಜೈಸಿಂಗ್, 'ಶಬರಿಮಲೆ ದೇಗುಲವನ್ನು ಮಹಿಳೆಯರು ಸಂತಾನೋತ್ಪತ್ತಿ ಸಾಮರ್ಥ್ಯದ ವಯಸ್ಸಿನಲ್ಲಿ (10ರಿಂದ 50) ಪ್ರವೇಶಿಸದಂತೆ ಹೊರಗಿಡುತ್ತಾರೆ. ಈ ಅವಧಿಯಲ್ಲಿ ಮಹಿಳೆಯ ಸ್ಥಾನಮಾನ ಹೇಗಿರುತ್ತದೆ? ಇದು ಅತ್ಯಂತ 'ಫಲವತ್ತಾದ' ಅವಧಿಯಲ್ಲವೇ? ಇದು ಆಕೆಯನ್ನು ಅತ್ಯಂತ ಸಂಕಷ್ಟದ ಸ್ಥಿತಿಗೆ ದೂಡುತ್ತದೆ' ಎಂದು ತಿಳಿಸಿದರು.

'ಸಂವಿಧಾನದ 25(1) ವಿಧಿಯ ಪ್ರಕಾರ, ದೇವಾಲಯ ಪ್ರವೇಶಿಸಿ ಪೂಜೆ ಸಲ್ಲಿಸಲು ಅವಕಾಶ ಪಡೆಯುವುದು ಸಾಂವಿಧಾನಿಕ ಹಕ್ಕು. 2018ರ ತೀರ್ಪಿನ ಬಳಿಕ ಇಬ್ಬರು ಮಹಿಳೆಯರಷ್ಟೇ ದೇವಾಲಯ ಪ್ರವೇಶಿಸಿದರು. ಅವರು ಹೊರಬಂದ ಬಳಿಕ ಸಂಘದ ಕೆಲವು ನಾಯಕರು ಶುದ್ಧೀಕರಣದ ಮಾತನಾಡಿದರು. ಈ ಕುರಿತು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದೆ. ನಂತರ ನ್ಯಾಯಾಲಯದ ತೀರ್ಪಿನಂತೆ, ಇಬ್ಬರು ಮಹಿಳೆಯರಿಗೆ ಮಾತ್ರ ದೇವಾಲಯದ ಪ್ರವೇಶಿಸಲು ಸಾಧ್ಯವಾಯಿತು' ಎಂದು ನ್ಯಾಯಪೀಠದ ಗಮನ ಸೆಳೆದರು.

'ಆದಾದ ಬಳಿಕ ಯಾರೂ ಒಳಗೆ ಪ್ರವೇಶಿಸಲಿಲ್ಲ. ಸರ್ಕಾರವೂ ಸೂಕ್ತ ರಕ್ಷಣೆ ಒದಗಿಸುವ ಭರವಸೆ ನೀಡಲಿಲ್ಲ' ಎಂದು ತಿಳಿಸಿದರು.

ಈ ವೇಳೆ ಮಧ್ಯಪ್ರವೇಶಿಸಿದ ನ್ಯಾಯಮೂರ್ತಿ ನಾಗರತ್ನ, 'ದೇವಾಲಯ ಪ್ರವೇಶಿಸುವಂತೆ ಕೋರಿ ಯಾರು ಹಕ್ಕು ಪ್ರತಿಪಾದಿಸುತ್ತಿದ್ದಾರೆ. ಭಕ್ತರಲ್ಲದವರೂ ಹಕ್ಕು ಪ್ರತಿಪಾದಿಸಬಹುದೇ? ಉತ್ತರ ಭಾರತದ ದೇವರಲ್ಲಿ ನಂಬಿಕೆ ಹೊಂದದ ವ್ಯಕ್ತಿ ದಕ್ಷಿಣ ಭಾರತದ ದೇವಾಲಯ ಪ್ರವೇಶಿಸುವ ಕುರಿತು ಹಕ್ಕು ಕೇಳಬಹುದೇ? ಇದು ಕೂಡ ಪರಿಶೀಲನೆಗೆ ಒಳಪಡಬೇಕಿದೆ' ಎಂದು ಹೇಳಿದರು.

ತನಿಖೆ ಸಿಬಿಐಗೆ ವಹಿಸಿದ ಹೈಕೋರ್ಟ್

ಟ್ರಾನ್ಸ್‌ಫಾರ್ಮರ್ ಖರೀದಿಯಲ್ಲಿ ₹397 ಕೋಟಿ ಅಕ್ರಮ

ಚೆನ್ನೈ (ಪಿಟಿಐ): ತಮಿಳುನಾಡು ಸರ್ಕಾರ ವಿತರಿಸಿದ್ದ 45,000 ವಿದ್ಯುತ್ ಪರಿವರ್ತಕಗಳ ಖರೀದಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಕ್ಕೆ ಸಂಬಂಧಿಸಿದ ತನಿಖೆಯನ್ನು ಮದ್ರಾಸ್ ಹೈಕೋರ್ಟ್ ಬುಧವಾರ ಸಿಬಿಐಗೆ ವಹಿಸಿದೆ.

2021 ಮತ್ತು 2023ರ ಮಧ್ಯೆ ನಡೆದ ಈ ವ್ಯವಹಾರದಲ್ಲಿ ಸರ್ಕಾರದ ಬೊಕ್ಕಸಕ್ಕೆ ₹397 ಕೋಟಿ ನಷ್ಟ ಆಗಿದೆ ಎಂಬ ಆರೋಪದ ಕಾರಣಕ್ಕೆ ತನಿಖೆಗೆ ವಹಿಸಲಾಗಿದೆ.

ಸ್ವಯಂ ಸೇವಾ ಸಂಸ್ಥೆ (ಎನ್‌ಜಿಒ) ಅರಪ್ಪೋರ್ ಇಯಕ್ಕಮ್ ವಿಶೇಷ ತನಿಖೆಗೆ ಕೋರಿ ಅರ್ಜಿ ಸಲ್ಲಿಸಿತ್ತು. ಎಐಎಡಿಎಂಕೆ ಕಾನೂನು ಘಟಕದ ಇ. ಶರವಣನ್ ಮತ್ತು ರಾಜ್‌ಕುಮಾರ್ ಎಂಬುವರು ಸಿಬಿಐ ತನಿಖೆಗೆ ಕೋರಿದ್ದರು. ಡಿಎಂಕೆ ಸರ್ಕಾರದಲ್ಲಿ ಸೆಂಥಿಲ್ ಬಾಲಾಜಿ ಅವರು ಇಂಧನ ಸಚಿವರಾಗಿದ್ದ ವೇಳೆ 45,000 ಟ್ರಾನ್ಸ್‌ಫಾರ್ಮರ್‌ಗಳ ಖರೀದಿಯಲ್ಲಿ ₹397 ಕೋಟಿಯಷ್ಟು ಅವ್ಯವಹಾರ ನಡೆದಿದೆ ಎಂದು ಆರೋಪಿಸಲಾಗಿತ್ತು.

ಮುಖ್ಯನ್ಯಾಯಮೂರ್ತಿ ಎಸ್.ಎ. ಧರ್ಮಾಧಿಕಾರಿ ಮತ್ತು ನ್ಯಾಯಮೂರ್ತಿ ಜಿ.ಅರುಳ್ ಮುರುಗನ್ ಅವರು ಇದ್ದ ಪೀಠ ಅರ್ಜಿಗಳ ವಿಚಾರಣೆ ನಡೆಸಿ, ಎಲ್ಲಾ ದೂರುಗಳನ್ನು ಸಿಬಿಐಗೆ ವರ್ಗಾಯಿಸಿತು.

ಪ್ರಕರಣದ ದಾಖಲೆಗಳನ್ನು ಎರಡು ವಾರಗಳಲ್ಲಿ ಸಿಬಿಐಗೆ ಹಸ್ತಾಂತರಿಸುವಂತೆ ಈಗಾಗಲೇ ತನಿಖೆ ನಡೆಸುತ್ತಿರುವ ರಾಜ್ಯ ವಿಚಕ್ಷಣ ಮತ್ತು ಭ್ರಷ್ಟಾಚಾರ ನಿಗ್ರಹ ನಿರ್ದೇಶನಾಲಯಕ್ಕೆ (ಡಿವಿಎಸಿ) ಪೀಠ ಸೂಚನೆ ನೀಡಿದೆ. ತನಿಖೆಗೆ ಪೂರ್ಣ ಸಹಕಾರ ನೀಡುವಂತೆ ತಮಿಳುನಾಡು ಸರ್ಕಾರ ಮತ್ತು ರಾಜ್ಯ ವಿದ್ಯುತ್ ಪ್ರಸರಣ ಸಂಸ್ಥೆಗೆ ಪೀಠ ನಿರ್ದೇಶನ ನೀಡಿದೆ.

ಅಕ್ರಮ ಅಲ್ಲಗಳೆದ ಸೆಂಥಿಲ್ ಬಾಲಾಜಿ


ಸೆಂಥಿಲ್ ಬಾಲಾಜಿ

ಡಿಎಂಕೆ ಮುಖಂಡ, ಮಾಜಿ ಸಚಿವ ಸೆಂಥಿಲ್ ಬಾಲಾಜಿ ಅವರು ಈ ಬಗ್ಗೆ ಪ್ರತಿಕ್ರಿಯೆ ನೀಡಿದ್ದು, 'ಟ್ರಾನ್ಸ್ ಫಾರ್ಮರ್‌ಗಳ ಖರೀದಿಯಲ್ಲಿ ಯಾವುದೇ ರೀತಿಯ ಅವ್ಯವಹಾರ ನಡೆದಿಲ್ಲ. ಎಲ್ಲವೂ ನಿಯಮಗಳ ಅನುಸಾರವೇ ಇದೆ' ಎಂದು ಸ್ಪಷ್ಟನೆ ನೀಡಿದ್ದಾರೆ.

'1987ರಿಂದಲೇ ಖರೀದಿ ಪ್ರಕ್ರಿಯೆ ಆರಂಭವಾಗಿತ್ತು. ಅದನ್ನೇ ಈಗಲೂ ಅನುಸರಿಸಿದ್ದೇವೆ. ಟೆಂಡರ್‌ನಲ್ಲಿ 20 ಬಿಡ್ಡುದಾರರು ಪಾಲ್ಗೊಂಡಿದ್ದರು. ಹಲವರು ಒಂದೇ ದರ ನಮೂದಿಸಿದ್ದರು. ಅದೂ ಅಲ್ಲದೇ ಪರಿಶೀಲನಾ ಸಮಿತಿ ಮತ್ತು ವ್ಯವಸ್ಥಾಪಕ ಮಂಡಳಿಯೇ ಗುತ್ತಿಗೆದಾರರನ್ನು ಅಂತಿಮಗೊಳಿಸಿ, ಖರೀದಿ ಆದೇಶ ನೀಡುತ್ತದೆ' ಎಂದರು.

'ಖರೀದಿಯಲ್ಲಿ ಅಕ್ರಮ ನಡೆದಿಲ್ಲ, ಸರ್ಕಾರಕ್ಕೆ ನಷ್ಟವೂ ಆಗಿಲ್ಲ. ಬಿಜೆಪಿ ಮತ್ತು ಎಐಎಡಿಎಂಕೆ ಪಿತೂರಿ ಮಾಡುತ್ತಿವೆ. ಕೆಲವರನ್ನಷ್ಟೇ ಗುರಿ ಮಾಡಲಾಗುತ್ತಿದೆ. ದೆಹಲಿಯಲ್ಲಿ ಅರವಿಂದ ಕೇಜ್ರಿವಾಲ್ ಅವರನ್ನೂ ಇದೇ ರೀತಿ ಸಿಲುಕಿಸಲಾಯಿತು' ಎಂದು ಸೆಂಥಿಲ್ ಆರೋಪಿಸಿದರು.

26/11 ಪ್ರಕರಣ: ಫಹೀಂ ಅನ್ಸಾರಿ ಅರ್ಜಿ ವಜಾ

ಮುಂಬೈ (ಪಿಟಿಐ): 26/11 ಮುಂಬೈ ಭಯೋತ್ಪಾದಕ ದಾಳಿ ಪ್ರಕರಣದಲ್ಲಿ ಖುಲಾಸೆಗೊಂಡಿರುವ ಫಹೀಂ ಅನ್ಸಾರಿ ಸಲ್ಲಿಸಿದ್ದ ಅರ್ಜಿಯೊಂದನ್ನು ಬಾಂಬೆ ಹೈಕೋರ್ಟ್ ಬುಧವಾರ ತಿರಸ್ಕರಿಸಿದೆ.

ಜೀವನೋಪಾಯಕ್ಕಾಗಿ ತಾನು ರಿಕ್ಷಾ ಚಾಲನೆ ಮಾಡಲು ಬಯಸಿದ್ದು, ಇದಕ್ಕೆ ಅಗತ್ಯವಾಗಿರುವ ಪೊಲೀಸ್ ಪರಿಶೀಲನಾ ಪ್ರಮಾಣ ಪತ್ರ (ಪಿಸಿಸಿ) ನೀಡಲು ಆಡಳಿತವು ತಿರಸ್ಕರಿಸಿದೆ ಎಂದು ಆರೋಪಿಸಿ ಅನ್ಸಾರಿ ಅರ್ಜಿ ಸಲ್ಲಿಸಿದ್ದಾರೆ. ಪಿಸಿಸಿ ನೀಡಲು ಆಡಳಿತಕ್ಕೆ ನಿರ್ದೇಶನ ನೀಡುವಂತೆ ಅರ್ಜಿಯಲ್ಲಿ ಕೋರಿದ್ದಾರೆ.

ನ್ಯಾಯಮೂರ್ತಿ ಎ.ಎಸ್. ಗಡ್ಕರಿ ಹಾಗೂ ನ್ಯಾ.ರಣಜಿತ್‌ಸಿಂಹ ಭೋಂಸ್ಲೆ ಅವರಿದ್ದ ಪೀಠವು ಅನ್ಸಾರಿಯ ಅವರ ಅರ್ಜಿಯನ್ನು ತಿರಸ್ಕರಿಸಿದ್ದು, ಪಿಸಿಸಿ ನೀಡಲು ನಿರಾಕರಿಸಿರುವ ಆಡಳಿತದ ನಿರ್ಧಾರ ಸರಿಯಾಗಿದೆ ಎಂದು ಹೇಳಿದೆ.

'ಮುಂಬೈ ಭಯೋತ್ಪಾದಕ ದಾಳಿ ಪ್ರಕರಣದಲ್ಲಿ ಸಾಕ್ಷ್ಯಾಧಾರಗಳ ಕೊರತೆಯಿಂದ ಅನ್ಸಾರಿ ಖುಲಾಸೆಗೊಂಡಿದ್ದು, ಉಗ್ರ ಸಂಘಟನೆ ಲಷ್ಕರ್–ಎ–ತಯಬಾ (ಎಲ್‌ಇಟಿ) ಜತೆಗೆ ಅವರು ಸಂಪರ್ಕ ಹೊಂದಿದ್ದಾರೆ ಎಂಬ ಆರೋಪವೂ ಇತ್ತು. ಹೀಗಾಗಿ ಅವರು ಇನ್ನೂ ಕಾನೂನಿನ ನಿಗಾದಲ್ಲಿದ್ದಾರೆ' ಎಂಬ ಕಾರಣ ನೀಡಿ, ಆಡಳಿತವು ಪಿಸಿಸಿ ನೀಡಲು ತಿರಸ್ಕರಿಸಿದೆ.

ನಕ್ಸಲರೊಂದಿಗೆ ಗುಂಡಿನ ಚಕಮಕಿ

ಚಾಯಿಬಾಸಾ (ಜಾರ್ಖಂಡ್) (ಪಿಟಿಐ): ಜಾರ್ಖಂಡ್‌ನ ಪಶ್ಚಿಮ ಸಿಂಗಬುಮ್ ಜಿಲ್ಲೆಯ ಕೊಲ್ಹಾನ್ ಅರಣ್ಯ ಪ್ರದೇಶದಲ್ಲಿ ಬುಧವಾರ ನಕ್ಸಲರು ಮತ್ತು ಭದ್ರತಾ ಪಡೆಗಳ ನಡುವೆ ನಿರಂತರ ಗುಂಡಿನ ಕಾಳಗ ನಡೆಯಿತು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗೋಯಿಲ್ಕೆರಾ ಮತ್ತು ಟೊಂಟೊ ಪೊಲೀಸ್ ಠಾಣೆ ವ್ಯಾಪ್ತಿಯ ಅರಣ್ಯ ಪ್ರದೇಶದಲ್ಲಿ ನಕ್ಸಲರ ವಿರುದ್ಧ ಜಿಲ್ಲಾ ಪೊಲೀಸರು ಮತ್ತು ಸಿಆರ್‌ಪಿಎಫ್ ಜಂಟಿಯಾಗಿ ನಡೆಸಿದ ಶೋಧ ಕಾರ್ಯಾಚರಣೆಯ ವೇಳೆ ಗುಂಡಿನ ಚಕಮಕಿ ನಡೆದಿದೆ ಎಂದು ಪಶ್ಚಿಮ ಸಿಂಗಬುಮ್ ಪೊಲೀಸ್ ವರಿಷ್ಠಾಧಿಕಾರಿ ಅಮಿತ್ ರೇಣು ತಿಳಿಸಿದ್ದಾರೆ.

ಈ ವರ್ಷದ ಆರಂಭದಲ್ಲಿ ಪ್ರದೇಶದ ಹಲವು ನಕ್ಸಲ್ ಉನ್ನತ ನಾಯಕರನ್ನು ಹತ್ಯೆ ಮಾಡಲಾಗಿತ್ತು. ಅದರ ನಂತರ, ಸಿಪಿಐ (ಮಾವೋವಾದಿ) ಪಾಲಿಟ್‌ಬ್ಯೂರೊ ಸದಸ್ಯ ಮಿಸಿರ್ ಬೆಸ್ರಾ ಮಾತ್ರ ತಮ್ಮ ಗುಂಪಿನೊಂದಿಗೆ ಇಲ್ಲಿ ಸಕ್ರಿಯರಾಗಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಅವರ ಪತ್ತೆಗಾಗಿ ₹1 ಕೋಟಿ ಬಹುಮಾನ ಘೋಷಿಸಲಾಗಿದೆ.

ಮಣಿಪುರ ಮುಖ್ಯಮಂತ್ರಿ ವೈ. ಖೇಮ್‌ಚಂದ್ ಸಿಂಗ್ ಹೇಳಿಕೆ

'ಮಕ್ಕಳ ಹತ್ಯೆ: ಶಾಂತಿ ಮಾತುಕತೆಗೆ ತೊಡಕು'

ಪ್ರಜಾವಾಣಿ ವಾರ್ತೆ

ಗುವಾಹಟಿ: 'ರಾಜ್ಯದಲ್ಲಿ ಹಿಂಸಾಚಾರ ಕೊನೆಗೊಂಡು, ಶಾಂತಿ ನೆಲಸಬೇಕು ಎನ್ನುವುದು ಎಲ್ಲ ಸಮುದಾಯದ ಜನರ ಒಕ್ಕೊರಲ ಅಭಿಲಾಷೆ. ಆದರೆ, ಉಖ್ರುಲ್ ಜಿಲ್ಲೆಯಲ್ಲಿ ಏಪ್ರಿಲ್ 7ರಂದು ಇಬ್ಬರು ಮಕ್ಕಳು ಕೊಲೆಯಾದ ಘಟನೆಯಿಂದಾಗಿ ಶಾಂತಿ ಮಾತುಕತೆಗೆ ತೊಡಕಾಗಿದೆ' ಎಂದು ಮಣಿಪುರ ಮುಖ್ಯಮಂತ್ರಿ ವೈ. ಖೇಮ್‌ಚಂದ್ ಸಿಂಗ್ ಬುಧವಾರ ಹೇಳಿದರು.

ಪಶ್ಚಿಮ ಇಂಫಾಲ್‌ನಲ್ಲಿ ವಿವಿಧ ಯೋಜನೆಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ನಾಗಾ ಸಮುದಾಯದ ಪ್ರಾಬಲ್ಯ ಇರುವ ಉಖ್ರುಲ್ ಜಿಲ್ಲೆಯ ವಿವಿಧೆಡೆ ನಾನು ಭೇಟಿ ನೀಡುತ್ತಿದ್ದೇವೆ. ಜನರ ಸಂಕಷ್ಟಗಳನ್ನು ಆಲಿಸುತ್ತಿದ್ದೇನೆ. ಮಕ್ಕಳ ಹತ್ಯೆ ಪ್ರಕರಣದಲ್ಲಿ ಭಾಗಿಯಾಗಿರುವವರನ್ನು ಶೀಘ್ರದಲ್ಲಿಯೇ ಬಂಧಿಸಲಾಗುವುದು' ಎಂದು ಭರವಸೆ ನೀಡಿದರು. ಏಪ್ರಿಲ್ 7ರಿಂದ ಈಚೆಗೆ ರಾಜ್ಯದ ವಿವಿಧೆಡೆ ಒಟ್ಟು 11 ಸಾವುಗಳಾಗಿವೆ.

ಮೇ 3ಕ್ಕೆ ಮೂರು ವರ್ಷ: ಮೈತೇಯಿ ಮತ್ತು ಕುಕಿ ಬುಡಕಟ್ಟು ಸಮುದಾಯಗಳ ಮಧ್ಯೆ ಸಂಘರ್ಷ ಭುಗಿಲೆದ್ದು ಮೇ 3ಕ್ಕೆ ಮೂರು ವರ್ಷ ಪೂರ್ಣಗೊಳ್ಳಲಿದೆ. ಈ ಕಾರಣ ಮಣಿಪುರ ಒಗ್ಗಟ್ಟು ಸಹಕಾರ ಸಮಿತಿಯು (ಸಿಒಸಿಒಎಂಐ) ಅದೇ ದಿನ ಇಂಫಾಲ್‌ನಲ್ಲಿ ಕಾರ್ಯಕ್ರಮವೊಂದನ್ನು ಆಯೋಜಿಸಿದೆ. ಸರ್ಕಾರದೊಂದಿಗೆ ಶಾಂತಿ ಮಾತುಕತೆ ನಡೆಸುವ ಬಗ್ಗೆ ಈ ಕಾರ್ಯಕ್ರಮದಲ್ಲಿಯೇ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಸಮಿತಿ ಹೇಳಿತ್ತು. ಈ ವೇಳೆಯೇ ಮುಖ್ಯಮಂತ್ರಿ ಅವರು ಈ ಹೇಳಿಕೆ ನೀಡಿದ್ದಾರೆ.

ಕುಕಿ ಸಮುದಾಯದಿಂದ ಪ್ರತಿಭಟನೆ


ಇಂಫಾಲ್‌ನಲ್ಲಿ ಕುಕಿ ಸಮುದಾಯದ ಪ್ರತಿಭಟನಕಾರರು ಮುಖ್ಯಮಂತ್ರಿ ನಿವಾಸದ ಕಡೆಗೆ ಬುಧವಾರ ಮೆರವಣಿಗೆಯಲ್ಲಿ ತೆರಳಿದರು — ಪಿಟಿಐ ಚಿತ್ರ

ಚುರಾಚಾಂದಪುರ (ಪಿಟಿಐ): ಏಪ್ರಿಲ್ 24ರಂದು ಉಖ್ರುಲ್ ಜಿಲ್ಲೆಯಲ್ಲಿ ಗುಂಡಿನ ದಾಳಿಗೆ ಇಬ್ಬರು ಬಲಿಯಾದ ಘಟನೆ ಖಂಡಿಸಿ ಕುಕಿ ಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿರುವ ಮಣಿಪುರದ ನಾಲ್ಕು ಜಿಲ್ಲೆಗಳಲ್ಲಿ ಬುಧವಾರ ಪ್ರತಿಭಟನೆ ಮತ್ತು ರ್‍ಯಾಲಿಗಳು ನಡೆದವು. ಸಾವಿರಾರು ಮಂದಿ ಪಾಲ್ಗೊಂಡಿದ್ದರು.

ಮಾಜಿ ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ಅವರಿಗೆ ಸಂಬಂಧಿಸಿದ್ದು ಎನ್ನಲಾದ ಧ್ವನಿ ಮುದ್ರಿಕೆ ಕುರಿತು ಕಠಿಣ ಕ್ರಮ ಜರುಗಿಸಬೇಕೆಂಬುದು ಪ್ರತಿಭಟನಕಾರರ ಪ್ರಮುಖ ಬೇಡಿಕೆಯಾಗಿತ್ತು. 2024ರಲ್ಲಿ ಈ ಧ್ವನಿ ಮುದ್ರಿಕೆ ಮಣಿಪುರದಲ್ಲಿ ಜನಾಂಗೀಯ ಹಿಂಸಾಚಾರ ತೀವ್ರಗೊಳ್ಳಲು ಕಾರಣವಾಗಿತ್ತು. ಮಾನವ ಹಕ್ಕುಗಳಿಗಾಗಿನ ಕುಕಿ ಮಹಿಳಾ ಸಂಘಟನೆ, ಕುಕಿ ಮಹಿಳಾ ಒಕ್ಕೂಟಗಳ ನೇತೃತ್ವದಲ್ಲಿ ಚುರಾಚಾಂದಪುರ ಸೇರಿ ಮೂರು ಜಿಲ್ಲೆಗಳಲ್ಲಿ ಪ್ರತಿಭಟನೆಗಳು ನಡೆದವು.

ಅದಾನಿ ಕನಸು ಈಡೇರಿಸಲು ಅರಣ್ಯ ನಾಶ: ರಾಹುಲ್

ಪ್ರಜಾವಾಣಿ ವಾರ್ತೆ/ ಪಿಟಿಐ

ಶ್ರೀವಿಜಯಪುರಂ (ಪಿಟಿಐ): ಅದಾನಿ ಕನಸುಗಳನ್ನು ಈಡೇರಿಸಲು ನಿಕೋಬಾರ್ ದ್ವೀಪಗಳ ಅರಣ್ಯವನ್ನು ನಾಶ ಮಾಡಲಾಗುತ್ತಿದೆ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಬುಧವಾರ ಆರೋಪಿಸಿದ್ದಾರೆ. ರಾಹುಲ್ ಗಾಂಧಿ ಅವರು ಮಂಗಳವಾರ ನಿಕೋಬಾರ್ ಜಿಲ್ಲೆಯ ಕ್ಯಾಂಪ್‌ಬೆಲ್ ಕೊಲ್ಲಿಗೆ ತೆರಳಿ ಯೋಜನೆಯ ವಿರುದ್ಧ ಇರುವ ಅಲ್ಲಿನ ಬುಡಕಟ್ಟು ನಾಯಕರನ್ನು ಭೇಟಿಯಾಗಿದ್ದರು.

ಯೋಜನೆಯ ಕುರಿತು ಕೇಂದ್ರ ಸರ್ಕಾರ ಪಾರದರ್ಶಕವಾಗಿಲ್ಲ ಎಂದು ಆರೋಪಿಸಿರುವ ಅಲ್ಲಿನ ಬುಡಕಟ್ಟು ಸಮುದಾಯವು, ಯೋಜನೆಯು ಪರಿಸರ ವಿನಾಶ ಮತ್ತು ಬುಡಕಟ್ಟು ಹಕ್ಕುಗಳ ನಿರಂತರ ನಿರ್ಲಕ್ಷ್ಯ ಮಾಡುತ್ತಿದೆ ಎಂದು ದೂರಿತು.

ಈ ಬಗ್ಗೆ ಸಾಮಾಜಿಕ ಮಾಧ್ಯಮದ ವಿಡಿಯೊದಲ್ಲಿ ಮಾತನಾಡಿರುವ ರಾಹುಲ್ ಗಾಂಧಿ ಅವರು, 'ನಾನು ಇಲ್ಲಿಗೆ ಬರದಂತೆ ಸರ್ಕಾರ ತಡೆಯುತ್ತಿರುವುದೇಕೆ ಎಂದು ಈಗ ತಿಳಿಯುತ್ತಿದೆ' ಎಂದು ಹೇಳಿದ್ದಾರೆ.



ಜಯದ ಓಟದತ್ತ ಆರ್‌ಸಿಬಿ ನೋಟ

ಗಿಲ್ ಬಳಗಕ್ಕೆ ರಜತ್ ಪಡೆ ಸವಾಲು ಇಂದು • ಪಡಿಕ್ಕಲ್–ಪ್ರಸಿದ್ಧ ಕೃಷ್ಣ ಮುಖಾಮುಖಿ

ಅಹಮದಾಬಾದ್ (ಪಿಟಿಐ): ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಯಶಸ್ಸಿನ ಓಟವನ್ನು ಮುಂದುವರಿಸುವ ಛಲದೊಂದಿಗೆ ಇಲ್ಲಿಗೆ ಬಂದಿಳಿದಿದೆ.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಗುರುವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಆರ್‌ಸಿಬಿ ತಂಡವು ಶುಭಮನ್ ಗಿಲ್ ನಾಯಕತ್ವದ ಗುಜರಾತ್ ಟೈಟನ್ಸ್ ಎದುರು ಕಣಕ್ಕಿಳಿಯಲಿದೆ.

ಹಾಲಿ ಚಾಂಪಿಯನ್ ಬೆಂಗಳೂರು ತಂಡವೂ ಮೂರು ದಿನಗಳ ಹಿಂದಷ್ಟೇ ಡೆಲ್ಲಿ ಕ್ಯಾಪಿಟಲ್ಸ್ ಬಳಗವನ್ನು ಅದರ ತವರಿನಂಗಳದಲ್ಲಿಯೇ ಸೋಲಿಸಿತ್ತು. ಆರ್‌ಸಿಬಿಯ 'ಸ್ವಿಂಗ್ ಜೋಡಿ' ಭುವನೇಶ್ವರ್ ಕುಮಾರ್ ಮತ್ತು ಜೋಶ್ ಹೇಜಲ್‌ವುಡ್ ಅವರ ಬೌಲಿಂಗ್ ಮುಂದೆ ಡೆಲ್ಲಿ ತಂಡ ದೂಳೀಪಟವಾಗಿತ್ತು. ಕೇವಲ 75 ರನ್‌ಗಳಿಗೇ ಡೆಲ್ಲಿಯ ದಿಂಡುರುಳಿತ್ತು. ನಂತರ ಗುರಿಯನ್ನು ಸುಲಭವಾಗಿ ತಲುಪಿದ್ದ ಆರ್‌ಸಿಬಿ (12 ಅಂಕ) ಅಂಕಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿತ್ತು.

ಇದೀಗ ಗುಜರಾತ್ ಎದುರು ಜಯಿಸಿ ಅಗ್ರಸ್ಥಾನಕ್ಕೇರುವತ್ತ ಚಿತ್ತ ನೆಟ್ಟಿದೆ.



ದೇವದತ್ತ ಪಡಿಕ್ಕಲ್



ಗುಜರಾತ್ ಟೈಟನ್ಸ್ ತಂಡದ ವೇಗದ ಬೌಲರ್ ಪ್ರಸಿದ್ಧ ಕೃಷ್ಣ

ಅದಕ್ಕೆ ತಕ್ಕಂತೆ ಆರ್‌ಸಿಬಿಯ ಬ್ಯಾಟಿಂಗ್ ಮತ್ತು ಬೌಲಿಂಗ್ ವಿಭಾಗಗಳು ಬಲಿಷ್ಠವಾಗಿವೆ. ಸ್ಪಿನ್‌ನಲ್ಲಿ ಕೃಣಾಲ್ ಪಾಂಡ್ಯ ಮತ್ತು ಸುಯಶ್ ಶರ್ಮಾ ಅವರು ಮೋಡಿ ಮೆರೆಯುತ್ತಿದ್ದಾರೆ.

ಇದರಿಂದಾಗಿ ಆತಿಥೇಯ ತಂಡದ ಬ್ಯಾಟರ್‌ಗಳಾದ ಗಿಲ್, ಜೋಸ್ ಬಟ್ಲರ್, ಸಾಯಿ ಸುದರ್ಶನ್, ಶಾರೂಕ್ ಖಾನ್ ಹಾಗೂ ರಾಹುಲ್ ತೆವಾಟಿಯಾ ಅವರ ಹಾದಿ ಕಠಿಣವಾಗಬಹುದು. ಸಾಯಿ ಸುದರ್ಶನ್ ಅವರು ಮೊದಲ ಸುತ್ತಿನ ಪಂದ್ಯದಲ್ಲಿ ಆರ್‌ಸಿಬಿ ಎದುರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶತಕ ಹೊಡೆದಿದ್ದರು. ಆದರೆ ಆ ಪಂದ್ಯದಲ್ಲಿ ವಿರಾಟ್ ಅಬ್ಬರದ ಮುಂದೆ ಟೈಟನ್ಸ್ ತಂಡ ಸೋಲನುಭವಿಸಿತ್ತು.

ಬ್ಯಾಟಿಂಗ್‌ನಲ್ಲಿ ವಿರಾಟ್ ಅಲ್ಲದೇ ದೇವದತ್ತ ಪಡಿಕ್ಕಲ್, ಟಿಮ್ ಡೇವಿಡ್, ನಾಯಕ ರಜತ್ ಪಾಟೀದಾರ್, ಜಿತೇಶ್ ಶರ್ಮಾ ಅವರ ಬೀಸಾಟಕ್ಕೆ ಕಡಿವಾಣ ಹಾಕುವುದು ಎದುರಾಳಿ ಬೌಲರ್‌ಗಳಿಗೆ ಸುಲಭವಲ್ಲ. ಫಿಲ್ ಸಾಲ್ಟ್ ಗಾಯದಿಂದ ಚೇತರಿಸಿಕೊಳ್ಳದಿದ್ದರೆ ಜೇಕಬ್ ಬೆಥೆಲ್ ಮತ್ತೊಂದು ಅವಕಾಶ ಪಡೆಯಬಹುದು.

ಆದರೆ ಆತಿಥೇಯ ತಂಡದ ಬೌಲಿಂಗ್ ಪಡೆಯೂ ಉತ್ತಮವಾಗಿದೆ. ಕಗಿಸೊ ರಬಾಡ ಕಳೆದ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಎದುರು ಅಮೋಘ ಬೌಲಿಂಗ್ ಮಾಡಿದ್ದರು. ಅವರಲ್ಲದೇ ಸ್ಪಿನ್ನರ್ ರಶೀದ್ ಖಾನ್, ವೇಗಿ ಪ್ರಸಿದ್ಧ ಕೃಷ್ಣ, ಜೇಸನ್ ಹೋಲ್ಡರ್ ಮತ್ತು ಅಶೋಕ್ ಶರ್ಮಾ ಅವರ ಬೌಲಿಂಗ್ ಎದುರಿಸಿ ನಿಲ್ಲುವುದು ಆರ್‌ಸಿಬಿ ಬ್ಯಾಟಿಂಗ್ ಪಡೆಗೆ ಸವಾಲಾಗಬಹುದು.

ಗುಜರಾತ್ ತಂಡವು ತನ್ನ ತವರಿನಂಗಳದಲ್ಲಿ ಆಡಿರುವ ಮೂರು ಪಂದ್ಯಗಳಲ್ಲಿ ಒಂದರಲ್ಲಿ ಮಾತ್ರ ಜಯಿಸಿದೆ.



ಗುಜರಾತ್ ಟೈಟನ್ಸ್ ತಂಡದ ನಾಯಕ ಶುಭಮನ್ ಗಿಲ್ ಹಾಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕ ರಜತ್ ಪಾಟೀದಾರ್ 'ಎಕ್ಸ್' ಚಿತ್ರ

ಬಲಾಬಲ	ಒಟ್ಟು ಪಂದ್ಯ 7
ಆರ್‌ಸಿಬಿ ಗೆಲುವು	4
ಗುಜರಾತ್ ಜಯ	3

ಇಂದಿನ ಪಂದ್ಯ

ಗುಜರಾತ್ ಟೈಟನ್ಸ್ V/s ರಾಯಲ್ ಚಾಲೆಂಜರ್ಸ್ ಬೆಂಗಳೂರು

ತಾಣ: ಅಹಮದಾಬಾದ್, ಆರಂಭ: ರಾತ್ರಿ 7.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್



ಆರ್‌ಸಿಬಿ ತಂಡದ ವಿರಾಟ್ ಕೊಹ್ಲಿ ಹಾಗೂ ಜೋಶ್ ಹೇಜಲ್‌ವುಡ್ ಪಿಟಿಐ ಚಿತ್ರ

ಡ್ರೆಸಿಂಗ್ ರೂಮ್‌ನಲ್ಲಿ ದಮ್ಮು ಎಳೆದ ಪರಾಗ್; ವಿವಾದದ ಹೊಗೆ

ನವದೆಹಲಿ (ಪಿಟಿಐ): ರಾಜಸ್ಥಾನ ರಾಯಲ್ಸ್ ನಾಯಕ ರಿಯಾನ್ ಪರಾಗ್ ಅವರು ಡ್ರೆಸಿಂಗ್ ರೂಮ್‌ನಲ್ಲಿ ಧೂಮಪಾನ ಮಾಡುತ್ತಿದ್ದ ದೃಶ್ಯ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಮುಲ್ಲನಪುರದಲ್ಲಿ ಮಂಗಳವಾರ ಪಂಜಾಬ್ ಕಿಂಗ್ಸ್ ವಿರುದ್ಧ ಐಪಿಎಲ್ ಪಂದ್ಯದ ವೇಳೆ ಅವರು ದಮ್ಮು ಎಳೆಯುತ್ತಿದ್ದ ದೃಶ್ಯ ಕಂಡುಬಂದಿದೆ.

ಭಾರತದಲ್ಲಿ ಇ-ಸಿಗರೇಟ್ ಉತ್ಪಾದನೆ, ಮಾರಾಟ, ವಿತರಣೆಯನ್ನು 2019ರಲ್ಲೇ ನಿಷೇಧಿಸಲಾಗಿದೆ. ಕಾನೂನಿನ ಪ್ರಕಾರ ಇದರ ಸೇವನೆಯಲ್ಲಿ ತೊಡಗಿದವರು (ಮೊದಲ ಬಾರಿಯ ತಪ್ಪಿಗೆ) ಒಂದು ವರ್ಷದವರೆಗೆ ಕಾರಾಗೃಹ ಶಿಕ್ಷೆ ಮತ್ತು/ ಅಥವಾ ₹1 ಲಕ್ಷ ದಂಡ ತೆರಬೇಕಾಗುತ್ತದೆ.

ಐಪಿಎಲ್‌ನಲ್ಲಿ ಬ್ಯಾಟರ್ ಆಗಿ ಪರಾಗ್ ಈ ಬಾರಿ ಪರದಾಡಿದ್ದಾರೆ. ತಂಡ 223 ರನ್ ಯಶಸ್ವಿಯಾಗಿ ಬೆನ್ನಟ್ಟಿದ್ದ ವೇಳೆ ಅವರು 16 ಎಸೆತಗಳಲ್ಲಿ 29 ರನ್ ಬಾರಿಸಿದ್ದರು.

ತಂಡದ ಬ್ಯಾಟಿಂಗ್ ವೇಳೆ ಡ್ರೆಸಿಂಗ್ ರೂಮ್‌ನಲ್ಲಿದ್ದ ಪರಾಗ್ ದಮ್ಮೆಳೆದುಕೊಳ್ಳುತ್ತಿರುವುದು ನೇರ ಪ್ರಸಾರದ ದೃಶ್ಯಾವಳಿಯಲ್ಲಿದೆ.

ಸಾಮಾಜಿಕ ಜಾಲತಾಣ ಮತ್ತು ಟಿವಿ ಕ್ಯಾಮೆರಾಗಳ ಹದ್ದುಗಣ್ಣಿನ ಈ ಯುಗದಲ್ಲಿ ಪರಾಗ್ ಅವರ ಕೃತ್ಯ ನಿರ್ಲಕ್ಷ್ಯದಿಂದ ಕೂಡಿದೆ ಎಂದು ಐಪಿಎಲ್ ಮತ್ತು ಬಿಸಿಸಿಐ ಅಧಿಕಾರಿಗಳು ತಿಳಿಸಿದ್ದಾರೆ.

'ಹಲವು ಆಟಗಾರರು ಇ-ಸಿಗರೇಟ್ ಸೇವನೆಯಲ್ಲಿ ತೊಡಗುತ್ತಾರೆ. ಆದರೆ ಡ್ರೆಸಿಂಗ್ ರೂಮ್‌ನಲ್ಲಿ ಧೂಮಪಾನ ಮಾಡುವುದಿಲ್ಲ. ಎಲ್ಲೆಡೆ ಕ್ಯಾಮೆರಾ ಕಣ್ಣುಗಳಿರುವಾಗ ಇಂಥ ಕೆಲಸಕ್ಕೆ ಯಾರೂ ಮುಂದಾಗುವುದಿಲ್ಲ. ಪರಾಗ್ ಸಿಕ್ಕಿಬಿದ್ದಿದ್ದಾರೆ. ಈಗ ಕ್ರಮ ಕೈಗೊಳ್ಳುವುದು ಬಿಸಿಸಿಐಗೆ ಅನಿವಾರ್ಯವಾಗಲಿದೆ' ಎಂದು ಐಪಿಎಲ್ ಉನ್ನತ ಮೂಲವೊಂದು ತಿಳಿಸಿದೆ.



ಪರಾಗ್ ದಮ್ಮೆಳೆದುಕೊಳ್ಳುತ್ತಿರುವುದು 'ಎಕ್ಸ್' ಚಿತ್ರ

ಈ ಬಗ್ಗೆ ರಾಜಸ್ಥಾನ ರಾಯಲ್ಸ್ ರಾಯಲ್ಸ್ ತಂಡದ ಅಧಿಕಾರಿಗಳು ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.

ರಾಯಲ್ಸ್ ತಂಡ ವಿವಾದಗಳಿಗೆ ಸಿಲುಕಿರುವುದು ಇದೇ ಮೊದಲಲ್ಲ. ತಂಡದ ಮ್ಯಾನೇಜರ್ ರೋಮಿ ಭಿಂದರ್ ಅವರು ಶಿಷ್ಟಾಚಾರ ಉಲ್ಲಂಘಿಸಿ ಡಗ್‌ಔಟ್‌ನಲ್ಲಿ ಮೊಬೈಲ್ ನೋಡುತ್ತಿದ್ದ ಕಾರಣಕ್ಕಾಗಿ ಒಂದು ಲಕ್ಷ ರೂಪಾಯಿ ದಂಡ ವಿಧಿಸಲಾಗಿತ್ತು.

ಖಾಸಗಿತನ–ಪ್ರಸ್ತಾಪ: ಈ ಬಾರಿಯ ಐಪಿಎಲ್ ಆರಂಭಕ್ಕೆ ಮೊದಲು ತಂಡದ ನಾಯಕರ ಸಭೆಯಲ್ಲಿ ಡ್ರೆಸಿಂಗ್ ರೂಮ್‌ನಲ್ಲಿ ಆಟಗಾರರ ಖಾಸಗಿತನದ ವಿಷಯ ಚರ್ಚೆಗೆ ಬಂದಿತ್ತು. ನೇರ ಪ್ರಸಾರದ ವೇಳೆ ಡ್ರೆಸಿಂಗ್ ರೂಮ್ ದೃಶ್ಯಗಳನ್ನು ಸೆರೆ ಹಿಡಿಯುವುದಕ್ಕೆ ಕೆಲವು ನಾಯಕರು ಆಕ್ಷೇಪ ವ್ಯಕ್ತಪಡಿಸಿದ್ದರು ಎಂದು ಐಪಿಎಲ್ ಮೂಲವೊಂದು ಪಿಟಿಐಗೆ ತಿಳಿಸಿದೆ.

'ಇದು ಡ್ರೆಸಿಂಗ್ ರೂಮ್‌ನಲ್ಲಿ ಇ-ಸಿಗರೇಟ್ ಸೇವನೆ ವಿಷಯಕ್ಕೆ ನಿರ್ದಿಷ್ಟವಾಗಿ ಸಂಬಂಧಿಸಿದ್ದಲ್ಲ. ಆಟಗಾರರ ಖಾಸಗಿತನ ಕಾಪಾಡುವ ಉದ್ದೇಶದಿಂದ ಆ ಚರ್ಚೆಯಾಗಿತ್ತು. ಆಟಗಾರರೂ ಪೂರ್ಣವಾಗಿ ಉಡುಪು ಧರಿಸಿರುವುದಿಲ್ಲ ಅಥವಾ ಕ್ಯಾಮೆರಾ ಎದುರಿಸಲು ಇಷ್ಟಪಡುವುದಿಲ್ಲ' ಎಂದು ತಿಳಿಸಿದೆ.

ಹೆಡ್, ಕ್ಲಾಸೆನ್ ಮಿಂಚು • ಮುಂಬೈಗೆ 6 ವಿಕೆಟ್ ಸೋಲು

ಸನ್‌ರೈಸರ್ಸ್ ಬ್ಯಾಟರ್‌ಗಳ ಅಬ್ಬರ

ಮುಂಬೈ (ಪಿಟಿಐ): ಸನ್‌ರೈಸರ್ಸ್ ಹೈದರಾಬಾದ್ ತಂಡದ ಬ್ಯಾಟರ್‌ಗಳ ಅಬ್ಬರದ ಆಟಕ್ಕೆ ಮುಂಬೈ ಇಂಡಿಯನ್ಸ್ ಬೌಲರ್‌ಗಳ ಬಳಿ ಉತ್ತರವಿರಲಿಲ್ಲ. ಹೀಗಾಗಿ, 243 ರನ್‌ಗಳ ಬೃಹತ್ ಮೊತ್ತ ಗಳಿಸಿದರೂ ಅದನ್ನು ಉಳಿಸಿಕೊಳ್ಳುವಲ್ಲಿ ಹಾರ್ದಿಕ್ ಪಾಂಡ್ಯ ನಾಯಕತ್ವದ ಮುಂಬೈ ವಿಫಲವಾಯಿತು.

ಸೇರಿಗೆ ಸವ್ವಾಸೇರು ಎನ್ನುವಂತೆ ಆಡಿದ ಸನ್‌ರೈಸರ್ಸ್ ತಂಡವು ಇನ್ನೂ 8 ಎಸೆತ ಬಾಕಿ ಇರುವಂತೆ 6 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿತು. ಸತತ ಐದನೇ ಗೆಲುವಿನೊಂದಿಗೆ ಪ್ಯಾಟ್ ಕಮಿನ್ಸ್ ಪಡೆ ಅಂಕಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೇರಿತು. ಈ ಸೋಲಿನೊಂದಿಗೆ ಐದು ಬಾರಿಯ ಚಾಂಪಿಯನ್ ಮುಂಬೈ ತಂಡದ ಪ್ಲೇ ಆಫ್ ಹಾದಿ ಮತ್ತಷ್ಟು ಕಠಿಣವಾಯಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಐಪಿಎಲ್ ಪಂದ್ಯದಲ್ಲಿ ಟಾಸ್ ಗೆದ್ದ ಆತಿಥೇಯ ತಂಡದ ನಾಯಕ ಹಾರ್ದಿಕ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಅವರ ನಿರ್ಧಾರವನ್ನು ಸಮರ್ಥಿಸಿಕೊಳ್ಳುವಂತೆ ಆಡಿದ ರಿಕೆಲ್ಟನ್ (ಔಟಾಗದೇ 123; 55ಎ, 4x10, 6x8) ಅಜೇಯ ಶತಕ ದಾಖಲಿಸಿದರು. ಅವರ ಅಮೋಘ ಆಟದ ಬಲದಿಂದ ಮುಂಬೈ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 243 ರನ್ ಗಳಿಸಿತು.

ದೊಡ್ಡ ಗುರಿ ಬೆನ್ನಟ್ಟಿದ ಸನ್‌ರೈಸರ್ಸ್ ತಂಡದ ಬ್ಯಾಟರ್‌ಗಳು ಆರಂಭದಿಂದಲೇ ಬಿರುಸಿನ ಆಟವಾಡಿದರು. ಆರಂಭಿಕರಾದ ಅಭಿಷೇಕ್ ಶರ್ಮಾ (45; 24ಎ, 4x4, 6x3) ಹಾಗೂ ಟ್ರಾವಿಸ್ ಹೆಡ್ (76; 30ಎ, 4x4, 6x8) ಕೇವಲ 8.4 ಓವರ್‌ಗಳಲ್ಲಿ 129 ರನ್ ಸೇರಿಸಿದರು. ಅವರಿಬ್ಬರ ನಿರ್ಗಮನದ ಬಳಿಕ, ದಕ್ಷಿಣ ಆಫ್ರಿಕಾದ ಹೆನ್ರಿಚ್ ಕ್ಲಾಸೆನ್ (ಔಟಾಗದೇ 65; 30ಎ, 4x7, 6x4) ಸಂದರ್ಭಕ್ಕನುಗುಣವಾಗಿ ಬ್ಯಾಟ್ ಬೀಸಿದರು. ನಿತೀಶ್ ಕುಮಾರ್ ರೆಡ್ಡಿ (21;17ಎ) ಜೊತೆಗೆ 80 ರನ್ ಸೇರಿಸಿದರು.



ಹೆನ್ರಿಚ್ ಕ್ಲಾಸೆನ್ ಪಿಟಿಐ ಚಿತ್ರ

ನಿತೀಶ್ ಔಟಾದ ನಂತರ ಕ್ರೀಸ್‌ಗೆ ಬಂದ ಸಲೀಲ್ ಅರೋರಾ ಕೇವಲ 10 ಎಸೆತಗಳಲ್ಲಿ ಅಜೇಯ 30 ರನ್ ಸಿಡಿಸಿದರು. ಅವರು 2 ಬೌಂಡರಿ, ಮೂರು ಸಿಕ್ಸರ್ ಹೊಡೆದರು.

ಅಲ್ಲಾಹ ಘಜನಫರ್ ಎರಡು ವಿಕೆಟ್ ಪಡೆದರೆ, ಜಸ್‌ಪ್ರೀತ್ ಬೂಮ್ರಾ ವಿಕೆಟ್ ಗಳಿಸುವಲ್ಲಿ ಮತ್ತೆ ವಿಫಲರಾದರು.

ಇದಕ್ಕೆ ಮೊದಲು, ದಕ್ಷಿಣ ಆಫ್ರಿಕಾದ 29 ವರ್ಷದ ರಿಯಾನ್ ರಿಕೆಲ್ಟನ್ ಅವರು ಅಕ್ಷರಶಃ ಮೆರೆದಾಡಿದರು. ಅವರೊಂದಿಗೆ ಇನಿಂಗ್ಸ್ ಆರಂಭಿಸಿದ ವಿಲ್ ಜ್ಯಾಕ್ಸ್ (46; 22ಎ) ಅರ್ಧಶತಕ ಅಂಚಿನಲ್ಲಿ ಎಡವಿದರು. ಆದರೆ ಇವರಿಬ್ಬರೂ ಮೊದಲ ವಿಕೆಟ್ ಜೊತೆಯಾಟದಲ್ಲಿ 93 ರನ್ ಸೇರಿಸಿದರು. ಈ ಅಡಿಪಾಯದ ಮೇಲೆ ದೊಡ್ಡ ಮೊತ್ತ ಪೇರಿಸುವ ಹೊಣೆಯನ್ನೂ ರಿಕೆಲ್ಟನ್ ನಿಭಾಯಿಸಿದರು. ರಿಕೆಲ್ಟನ್ ಸುಂದರವಾದ ಬ್ಯಾಟಿಂಗ್ ಮುಂದೆ ಬೌಲರ್‌ಗಳು ನಿರುತ್ತರರಾದರು. ಅನುಭವಿ ಬ್ಯಾಟರ್ ರೋಹಿತ್ ಶರ್ಮಾ ಅವರ ಗೈರುಹಾಜರಿಯಲ್ಲಿ ರಿಕೆಲ್ಟನ್ ಇನಿಂಗ್ಸ್ ಕಟ್ಟುವ ಹೊಣೆಯನ್ನು ಸಮರ್ಥವಾಗಿ ನಿಭಾಯಿಸಿದರು.

ಮಧ್ಯಮ ಕ್ರಮಾಂಕದಲ್ಲಿ ಮತ್ತೊಮ್ಮೆ ಸೂರ್ಯಕುಮಾರ್ ಯಾದವ್ ವೈಫಲ್ಯ ಮುಂದುವರಿಯಿತು. ತಿಲಕ್ ವರ್ಮಾ ಕೂಡ ಅಬ್ಬರಿಸಲಿಲ್ಲ. ಕೊನೆಯಲ್ಲಿ ಹಾರ್ದಿಕ್ 15 ಎಸೆತಗಳಲ್ಲಿ 31 ರನ್ ಸಿಡಿಸಿ ತಂಡದ ಮೊತ್ತ 240ರ ಗಡಿ ದಾಟುವಂತೆ ಮಾಡಿದರು.

ಗರಿಷ್ಠ ರನ್ ಚೇಸಿಂಗ್ (ಐಪಿಎಲ್‌ನಲ್ಲಿ)

ಗುರಿ	ಗೆಲುವು	ಎದುರಾಳಿ	ತಾಣ	ವರ್ಷ
265	ಪಿಬಿಕೆಎಸ್	ಡಿ ಸಿ	ದೆಹಲಿ	2026
262	ಪಿಬಿಕೆಎಸ್	ಕೆಕೆಆರ್	ಕೋಲ್ಕತ್ತ	2024
246	ಎಸ್‌ಆರ್‌ಎಚ್	ಪಿಬಿಕೆಎಸ್	ಹೈದರಾಬಾದ್	2025
244	ಎಸ್‌ಆರ್‌ಎಚ್	ಎಂ ಐ	ಮುಂಬೈ	2026

ಸ್ಕೋರ್ ಕಾರ್ಡ್

ಮುಂಬೈ ಇಂಡಿಯನ್ಸ್: 5ಕ್ಕೆ243 (20 ಓವರ್)
ಜ್ಯಾಕ್ಸ್ ಸಿ ಇಶಾನ್ ಬಿ ನಿತೀಶ್ 46 (22ಎ, 4x5, 6x3)
ರಿಯಾನ್ ರಿಕೆಲ್ಟನ್ ಔಟಾಗದೇ 123 (55ಎ, 4x10, 6x8)
ಸೂರ್ಯಕುಮಾರ್ ಸಿ ಅಭಿಷೇಕ್ ಬಿ ಮಾಲಿಂಗ 5 (5ಎ, 4x1)
ನಮನ್ ಸಿ ಹರ್ಷ ಬಿ ಪ್ರಫುಲ್ 22 (17ಎ, 4x3)
ಹಾರ್ದಿಕ್ ಸಿ ಕ್ಲಾಸೆನ್ ಬಿ ಸಕೀಬ್ 31 (15ಎ, 4x2, 6x2)
ತಿಲಕ್ ಸಿ ಕ್ಲಾಸೆನ್ ಬಿ ಪ್ರಫುಲ್ 7 (5ಎ, 6x1)
ರಾಬಿನ್ ಮಿನ್ಜ್ ಔಟಾಗದೇ 1 (1ಎ)
ಇತರೆ: 8 (ಲೆಗ್‌ಬೈ 1, ವೈಡ್ 7)
ವಿಕೆಟ್ ಪತನ: 1–93 (ವಿಲ್ ಜ್ಯಾಕ್ಸ್; 7.1), 2–110 (ಸೂರ್ಯಕುಮಾರ್ ಯಾದವ್; 8.3), 3–165 (ನಮನ್ ಧೀರ್; 13.4), 4–221(ಹಾರ್ದಿಕ್ ಪಾಂಡ್ಯ; 18.1), 5–232 (ತಿಲಕ್ ವರ್ಮಾ; 19.3)
ಬೌಲಿಂಗ್: ಪ್ಯಾಟ್ ಕಮಿನ್ಸ್ 4–0–39–0, ಪ್ರಫುಲ್ ಹಿಂಗೆ 4–0–54–2, ಇಶಾನ್ ಮಾಲಿಂಗ 4–0–29–1, ಹರ್ಷ ದುಬೆ 3–0–50–0, ಸಕೀಬ್ ಹುಸೇನ್ 3–0–39–1, ನಿತೀಶ್ ಕುಮಾರ್ ರೆಡ್ಡಿ 2–0–31–1

ಸನ್‌ರೈಸರ್ಸ್ ಹೈದರಾಬಾದ್: 4ಕ್ಕೆ249 (18.4 ಓವರ್‌ಗಳಲ್ಲಿ)
ಅಭಿಷೇಕ್ ಸಿ ಬೌಲ್ಟ್ ಬಿ ಘಜನಫರ್ 45 (24ಎ, 4x4, 6x3)
ಹೆಡ್ ಸಿ ಜಾಕ್ಸ್ ಬಿ ಹಾರ್ದಿಕ್ 76 (30ಎ, 4x4, 6x8)
ಇಶಾನ್ ಬಿ ಘಜನಫರ್ 0 (1ಎ)
ಹೆನ್ರಿಚ್ ಕ್ಲಾಸೆನ್ ಔಟಾಗದೇ 65 (30ಎ, 4x7, 6x4)
ನಿತೀಶ್ ಸಿ ಸೂರ್ಯಕುಮಾರ್ ಬಿ ಬೌಲ್ಟ್ 21 (17ಎ, 4x3)
ಸಲೀಲ್ ಅರೋರಾ ಔಟಾಗದೇ 30 (10ಎ, 4x2, 6x3)
ಇತರೆ: 12 (ಲೆಗ್‌ಬೈ 4, ವೈಡ್ 8)
ವಿಕೆಟ್ ಪತನ: 1–1–129 (ಅಭಿಷೇಕ್ ಶರ್ಮಾ; 8.4), 2–129 (ಇಶಾನ್ ಕಿಶನ್; 8.5), 3–133 (ಟ್ರಾವಿಸ್ ಹೆಡ್; 9.4), 4–213 (ನಿತೀಶ್ ಕುಮಾರ್ ರೆಡ್ಡಿ; 16.2)
ಬೌಲಿಂಗ್: ಟ್ರೆಂಟ್ ಬೌಲ್ಟ್ 4–0–41–1, ಜಸ್‌ಪ್ರೀತ್ ಬೂಮ್ರಾ 4–0–54–0, ವಿಲ್ ಜ್ಯಾಕ್ಸ್ 1–0–19–0, ಅಲ್ಲಾಹ ಘಜನಫರ್ 4–0–51–2, ಅಶ್ವಿನಿ ಕುಮಾರ್ 2–0–41–0, ಹಾರ್ದಿಕ್ ಪಾಂಡ್ಯ 3.4–0–39–1
ಪಂದ್ಯದ ಆಟಗಾರ: ಹೆನ್ರಿಚ್ ಕ್ಲಾಸೆನ್

ಸರ್ಕಾರದ ನಿಯಂತ್ರಣಕ್ಕೆ ಎಲ್‌ಎಲ್‌ಸಿ

ಕೊಲಂಬೊ (ಎಎಫ್‌ಪಿ): ಶ್ರೀಲಂಕಾ ಸರ್ಕಾರವು, ದೇಶದ ಕ್ರಿಕೆಟ್ ಮಂಡಳಿಯ ಆಡಳಿತವನ್ನು ತನ್ನ ಸುಪರ್ದಿಗೆ ಪಡೆದಿದೆ. ಮಂಡಳಿಯಲ್ಲಿ ಸಾಂಸ್ಥಿಕ ಸುಧಾರಣೆ ತರಲು 9 ಸದಸ್ಯರ ಹಂಗಾಮಿ ಆಡಳಿತ ಸಮಿತಿಯನ್ನು ನೇಮಕ ಮಾಡಿದೆ.

ಶ್ರೀಲಂಕಾ ಕ್ರಿಕೆಟ್ ಮಂಡಳಿಯು (ಎಲ್‌ಎಲ್‌ಸಿ) ದೇಶದ ಅತಿ ಶ್ರೀಮಂತ ಕ್ರೀಡಾ ಸಂಸ್ಥೆಯಾಗಿದೆ. ಆದರೆ ಭ್ರಷ್ಟಾಚಾರ ಮತ್ತು ದುರಾಡಳಿತದಿಂದ ನಲುಗಿದೆ.

ಶ್ರೀಲಂಕಾ ಕ್ರಿಕೆಟ್ ಮಂಡಳಿಯ ವ್ಯವಹಾರದಲ್ಲಿ ರಾಜಕೀಯ ಹಸ್ತಕ್ಷೇಪ ವಿರೋಧಿಸಿ, ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯು ಶ್ರೀಲಂಕಾದ ಮಂಡಳಿಯನ್ನು 2023–24ರ ಅವಧಿಯಲ್ಲಿ ಎರಡು ತಿಂಗಳು ಅಮಾನತು ಮಾಡಿತ್ತು.

ವಿರೋಧ ಪಕ್ಷದ ನೇತಾರ ಇರಾನ್ ವಿಕ್ರಮರತ್ನೆ ಅವರನ್ನು ಮಂಡಳಿಯ ತಾತ್ಕಾಲಿಕ ಸಮಿತಿಯ ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿದೆ. ಕ್ರಿಕೆಟ್ ತಂಡದ ಮಾಜಿ ನಾಯಕ ಕುಮಾರ ಸಂಗಕ್ಕರ, ಮಾಜಿ ಟೆಸ್ಟ್ ಆಟಗಾರರಾದ ಸಿದಾತ್ ವೆಟ್ಟಿಮುನಿ, ರೋಷನ್ ಮಹಾನಾಮ ಅವರೂ ಸಮಿತಿಯಲ್ಲಿ ಒಳಗೊಂಡಿದ್ದಾರೆ.

ನಾಲ್ಕು ಬಾರಿ ಶ್ರೀಲಂಕಾ ಕ್ರಿಕೆಟ್ ಅಧ್ಯಕ್ಷರಾಗಿದ್ದ ಶಮ್ಮಿ ಸಿಲ್ವ ಅವರು ಸರ್ಕಾರದ ಸೂಚನೆಯ ನಂತರ ಇತರ ಪದಾಧಿಕಾರಿಗಳೊಂದಿಗೆ ಮಂಗಳವಾರ ರಾಜೀನಾಮೆ ನೀಡಿದ್ದರು.

ಐಪಿಎಲ್ ಟೂರ್ನಿ ವೇಳೆ ಬ್ಯಾಟಿಂಗ್ ಸ್ನೇಹಿ ಪಿಚ್‌ಗಳನ್ನು ರೂಪಿಸುತ್ತಿರುವುದು ವ್ಯವಹಾರಿಕ ತಂತ್ರವೇ?

ಹೌದು ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಪಿಬಿಕೆಎಸ್	8	6	1	1	13	1.043
ಆರ್‌ಸಿಬಿ	8	6	2	0	12	1.919
ಎಸ್‌ಆರ್‌ಎಚ್	9	6	3	0	12	0.832
ಆರ್ ಆರ್	9	6	3	0	12	0.617
ಜಿ ಟಿ	8	4	4	0	8	- 0.475
ಸಿಎಸ್‌ಕೆ	8	3	5	0	6	- 0.121
ಡಿ ಸಿ	8	3	5	0	6	- 1.060
ಕೆಕೆಆರ್	8	2	5	1	5	- 0.751
ಎಂ ಐ	8	2	6	0	4	- 0.784
ಎಲ್‌ಎಸ್‌ಜಿ	8	2	6	0	4	- 1.106

ಆರೆಂಜ್ ಕ್ಯಾಪ್: ಅಭಿಷೇಕ್ ಶರ್ಮಾ, ಎಸ್‌ಆರ್‌ಎಚ್ (425 ರನ್)
ಪರ್ಪಲ್ ಕ್ಯಾಪ್: ಇಶಾನ್ ಮಾಲಿಂಗ, ಎಸ್‌ಆರ್‌ಎಚ್ (15 ವಿಕೆಟ್)

ಸೆಮಿಗೆ ಪಳಂಗಡ, ಕುಲ್ಲೇಟಿರ ತಂಡಗಳು

ಪ್ರಜಾವಾಣಿ ವಾರ್ತೆ

ನಾಪೋಕ್ಲು(ಕೊಡಗು ಜಿಲ್ಲೆ): ಪಳಂಗಡ, ಕುಲ್ಲೇಟಿರ, ಚೆಪ್ಪುಡಿರ ಹಾಗೂ ಪರದಂಡ ತಂಡಗಳು ಇಲ್ಲಿನ ಜನರಲ್ ಕೆ.ಎಸ್.ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಚೇನಂಡ ಕೊಡವ ಕೌಟುಂಬಿಕ ಹಾಕಿ ಟೂರ್ನಿಯಲ್ಲಿ ಸೆಮಿಫೈನಲ್ಸ್ ಪ್ರವೇಶಿಸಿವೆ.

ಬುಧವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ, ರಂಜನ್ ಅಯ್ಯಪ್ಪ ಅವರ 5 ಗೋಲುಗಳ ನೆರವಿನಿಂದ ಪರದಂಡ ತಂಡವು ಮೂಕೊಂಡ ವಿರುದ್ಧ 6–2ರ ಅಂತರದಿಂದ ಭರ್ಜರಿ ಗೆಲುವು ಪಡೆಯಿತು.

ಪಳಂಗಂಡ 3-2ರಿಂದ ಪೆಮ್ಮಂಡ ವಿರುದ್ಧ ಹಾಗೂ ಚೆಪ್ಪುಡಿರ 4-2ರಿಂದ ಕಂಬೀರಂಡ ವಿರುದ್ಧ ಜಯ ಸಾಧಿಸಿದವು.

ಮತ್ತೊಂದು ಪಂದ್ಯದಲ್ಲಿ ನಿಗದಿತ ಅವಧಿಯಲ್ಲಿ ಕುಲ್ಲೇಟಿರ ಮತ್ತು ನೆಲ್ಲಮಕ್ಕಡ ತಂಡಗಳು ಸಮಬಲ ಸಾಧಿಸಿದವು. ಟೈ ಬ್ರೇಕರ್‌ನಲ್ಲಿ ಕುಲ್ಲೇಟಿರ 2-0 ರಿಂದ ಜಯ ಸಾಧಿಸಿತು.

ಏ. 30ರಂದು ಬೆಳಿಗ್ಗೆ 10.30ಕ್ಕೆ ಪಳಂಗಡ ಮತ್ತು ಕುಲ್ಲೇಟಿರ ನಡುವೆ ಹಾಗೂ ಮಧ್ಯಾಹ್ನ 12.30ಕ್ಕೆ ಚೆಪ್ಪುಡಿರ ಮತ್ತು ಪರದಂಡ ನಡುವೆ ಸೆಮಿಫೈನಲ್ ಪಂದ್ಯಗಳು ನಡೆಯಲಿವೆ.

ಥಾಮಸ್ ಕಪ್ ಬ್ಯಾಡ್ಮಿಂಟನ್: ಸಿಂಗಲ್ಸ್ ಗೆದ್ದ ಆಯುಷ್, ಪ್ರಣಯ್

ಅಂತಿಮ ಲೀಗ್: ಚೀನಾಕ್ಕೆ ಮಣಿದ ಭಾರತ

ಹಾರ್ಸೆನ್ಸ್ (ಡೆನ್ಮಾರ್ಕ್), (ಪಿಟಿಐ): ಆಯುಷ್ ಶೆಟ್ಟಿ ಮತ್ತು ಎಚ್.ಎಸ್. ಪ್ರಣಯ್ ಅವರು ಹಿನ್ನಡೆಯಿಂದ ಚೇತರಿಸಿ ಅಮೋಘವಾಗಿ ಗೆದ್ದರೂ, ಭಾರತ ತಂಡವು ಥಾಮಸ್ ಕಪ್ ಫೈನಲ್ಸ್‌ನ 'ಎ' ಗುಂಪಿನ ಕೊನೆಯ ಲೀಗ್ ಪಂದ್ಯದಲ್ಲಿ ಚೀನಾ ಎದುರು 2–3 ಅಂತರದಿಂದ ಸೋಲನುಭವಿಸಿತು.

2022ರ ಚಾಂಪಿಯನ್ ಭಾರತ ತಂಡವು ಗುಂಪಿನಲ್ಲಿ ಮೊದಲೆರಡು ಪಂದ್ಯಗಳನ್ನು ಗೆದ್ದ ಕಾರಣ ಕ್ವಾರ್ಟರ್‌ಫೈನಲ್ ಸ್ಥಾನವನ್ನು ಈ ಮೊದಲೇ ಖಚಿತಪಡಿಸಿಕೊಂಡಿತ್ತು. ಗುಂಪಿನಲ್ಲಿ ಎರಡನೇ ಸ್ಥಾನ ಪಡೆದ ಭಾರತ ತಂಡಕ್ಕೆ, ಬಿ ಗುಂಪಿನ ಅಗ್ರಸ್ಥಾನಿ ಜಪಾನ್ ಎದುರಾಳಿಯಾಗುವ ಸಾಧ್ಯತೆಯಿದೆ.

ಬುಧವಾರ ಚೀನಾ ವಿರುದ್ಧ ಹಣಾಹಣಿಯ ಮೊದಲ ಸಿಂಗಲ್ಸ್‌ನಲ್ಲಿ ಅಗ್ರ ಸಿಂಗಲ್ಸ್ ಆಟಗಾರ ಲಕ್ಷ್ಯ ಸೇನ್ ಸೋತರು. ನಂತರ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಜೋಡಿ ಡಬಲ್ಸ್‌ನಲ್ಲಿ ಸೋತ ಮೇಲೆ ಭಾರತ ಒತ್ತಡಕ್ಕೆ ಸಿಲುಕಿತು.

ಇದರ ಮಧ್ಯೆಯೇ ಆಡಿದ ಆಯುಷ್ ಮೊದಲ ಗೇಮ್‌ನಲ್ಲಿ 17–21 ರಲ್ಲಿ ಚೀನಾದ ವೆಂಗ್ ಹಾಂಗ್ ಎದುರು ಸೋತರೂ, ಚೇತರಿಸಿಕೊಂಡು ಮುಂದಿನೆರಡು ಗೇಮ್‌ಗಳನ್ನು 21–13, 21–15ರಲ್ಲಿ ಪಡೆಯುವ ಮೂಲಕ ಪಂದ್ಯ ಗೆದ್ದು ಹಿನ್ನಡೆಯನ್ನು 1–2 ಕ್ಕೆ ತಗ್ಗಿಸಿದರು.



ಭಾರತದ ಆಯುಷ್ ಶೆಟ್ಟಿ 'ಎಕ್ಸ್' ಚಿತ್ರ

ಎರಡನೇ ಡಬಲ್ಸ್ ಪಂದ್ಯದಲ್ಲಿ ಹರಿಹರನ್ ಅಮ್ಸಕರುಣನ್– ಎಂ.ಆರ್. ಅರ್ಜುನ್ ಜೋಡಿ ಹೆಚ್ಚು ಹೋರಾಟ ತೋರದೇ 17–21, 13–21 ರಲ್ಲಿ ಹೆ ಜಿ ಟಿಂಗ್– ರೆನ್ ಷಿಯಾಂಗ್ ಯು ಜೋಡಿಗೆ ಮಣಿಯಿತು. ಇದರಿಂದ ಚೀನಾ 3–1ರಲ್ಲಿ ಗೆಲುವಿನ ಮುನ್ನಡೆ ಪಡೆಯಿತು.

ಪ್ರಣಯ್ ಕೊನೆಯ ಸಿಂಗಲ್ಸ್‌ನಲ್ಲಿ ಲು ಗುವಾಂಗ್ ಝು ಎದುರು ಹೋರಾಡಿ 20–22, 21–19, 21–11 ರಲ್ಲಿ ಜಯಪಡೆದರು. ಇದರಿಂದ ಸೋಲಿನ ಅಂತರ ಇನ್ನಷ್ಟು ಕಡಿಮೆಯಾಯಿತು.

ಕಳೆದ ತಿಂಗಳು ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್ಸ್‌ನಲ್ಲಿ ರನ್ನರ್ ಅಪ್ ಆಗುವ ಹಾದಿಯಲ್ಲಿ ಲಕ್ಷ್ಯ ಅವರು ವಿಶ್ವದ ಏಳನೇ ಕ್ರಮಾಂಕದ ಆಟಗಾರ ಲಿ ಶಿ ಫೆಂಗ್ ಅವರನ್ನು ಸುಲಭವಾಗಿ ಸೋಲಿಸಿದ್ದರು. ಆದರೆ ಅಲ್ಮೋರಾದ ಆಟಗಾರ ಮೊದಲ ಸಿಂಗಲ್ಸ್‌ನಲ್ಲಿ ಅದೇ ಲಯದಲ್ಲಿ ಆಡಲಾಗದೇ 19–21, 21–8, 12–21ರಲ್ಲಿ ಸೋಲನುಭವಿಸಿದ್ದರು.

ವಿಶ್ವದ ನಾಲ್ಕನೇ ಕ್ರಮಾಂಕದ ಡಬಲ್ಸ್ ಆಟಗಾರರಾದ ಸಾತ್ವಿಕ್–ಚಿರಾಗ್ ಜೋಡಿ ಸೋಲುವ ಮೊದಲು ತೀವ್ರ ಹೋರಾಟ ಪ್ರದರ್ಶಿಸಿದರು. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಗೆದ್ದ ಲಿಯಾಂಗ್ ವೀ ಕೆಂಗ್– ವಾಂಗ್ ಚಾಂಗ್ ಜೋಡಿಯ ಎದುರು ಐದು ಬಾರಿ ಮ್ಯಾಚ್ ಪಾಯಿಂಟ್ ಉಳಿಸಿತು. ಆದರೆ ಅಂತಿಮವಾಗಿ 13–21, 21–13, 24–26ರಲ್ಲಿ ನಿರಾಸೆ ಅನುಭವಿಸಿತ್ತು.

ಜನಾಂಗೀಯ ನಿಂದನೆ: ರೆಡ್ ಕಾರ್ಡ್ ಶಿಕ್ಷೆ ನಿಯಮ

ವ್ಯಾಂಕೂವರ್ (ಎಎಫ್‌ಪಿ): ಫುಟ್‌ಬಾಲ್ ವಿಶ್ವಕಪ್ ಪಂದ್ಯದ ಸಂದರ್ಭದಲ್ಲಿ ಎದುರಾಳಿ ಆಟಗಾರನ ವಿರುದ್ಧ ಘರ್ಷಣೆಯಾದಲ್ಲಿ ಬಾಯಿಗೆ ಕೈಅಡ್ಡವಿಟ್ಟು ಕೆಟ್ಟ ಬೈಗುಳ ಪ್ರಯೋಗ ಅಥವಾ ಜನಾಂಗೀಯ ನಿಂದನೆ ಮಾಡಿದರೆ ಅಂಥ ಆಟಗಾರನಿಗೆ ರೆಡ್ ಕಾರ್ಡ್ ನೀಡಲಾಗುವುದು ಎಂದು ಫಿಫಾ ಮಂಗಳವಾರ ತಿಳಿಸಿದೆ.

ಜನಾಂಗೀಯ ನಿಂದನೆಗೆ ತಡೆಹಾಕುವ ಪ್ರಯತ್ನವಾಗಿ ಈ ನಿಯಮ ತರಲಾಗಿದೆ. ವ್ಯಾಂಕೂವರ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಫುಟ್‌ಬಾಲ್ ಅಸೋಸಿಯೇಷನ್ ಬೋರ್ಡ್ (ಐಎಫ್‌ಎಬಿ) ಸಭೆಯ ನಂತರ ನಿಯಮ ಬದಲಾವಣೆಯನ್ನು ಫಿಫಾ ಖಚಿತಪಡಿಸಿದೆ. ಈ ವರ್ಷದ ಫುಟ್‌ಬಾಲ್ ವಿಶ್ವಕಪ್‌ನಿಂದ ಇದು ಜಾರಿಗೆ ಬರಲಿದೆ. ಶಿಕ್ಷೆ ವಿಧಿಸುವುದು ಆಯೋಜಕರ ವಿವೇಚನೆಗೆ ಬಿಡಲಾಗಿದೆ.

ಫೆಬ್ರುವರಿಯಲ್ಲಿ ಚಾಂಪಿಯನ್ಸ್ ಲೀಗ್ ಪಂದ್ಯದ ವೇಳೆ ಬೆನ್ಫಿಕಾ ಆಟಗಾರ ಗಿಯಾನ್ಲುಕಾ ಪ್ರೆಸ್ಟಿಯಾನಿ ಅವರು ರಿಯಲ್ ಮ್ಯಾಡ್ರಿಡ್ ತಾರೆ ವಿನಿಷಿಯಸ್ ಜೂನಿಯರ್ ಅವರನ್ನು 'ಕೋತಿ' ಎಂದು ನಿಂದಿಸಿದ್ದರು. ಆ ವೇಳೆ ಹೇಳಿದ್ದನ್ನು ಗೊತ್ತಾಗದಂತೆ ಕೈಯನ್ನು ಬಾಯಿಗೆ ಅಡ್ಡವಿಟ್ಟಿದ್ದರು. ದಂಡನೆಯಾಗಿ ಪ್ರೆಸ್ಟಿಯಾನಿ ಅವರಿಗೆ ಆರು ಪಂದ್ಯಗಳಲ್ಲಿ ಆಡದಂತೆ ನಿರ್ಬಂಧ ವಿಧಿಸಲಾಗಿತ್ತು.

ಅಂಪೈರ್ ನಿರ್ಧಾರ ವಿರೋಧಿಸಿ ಮೈದಾನ ತೊರೆಯುವ ಆಟಗಾರರಿಗೂ ಕೆಂಪುಕಾರ್ಡ್ 'ದರ್ಶನ ಮಾಡಿಸುವ' ನಿಯಮವನ್ನೂ ವಿಶ್ವಕಪ್‌ನಲ್ಲಿ ಹೊಸದಾಗಿ ಜಾರಿಗೊಳಿಸಲಾಗುತ್ತಿದೆ. ಆಯೋಜಕರ ವಿವೇಚನೆ ಅನುಸರಿಸಿ ರೆಫ್ರಿ, ಈ ರೀತಿಯ ಅಶಿಸ್ತು ತೋರಿಸುವ ಆಟಗಾರಿಗೆ ಕಾರ್ಡ್ ತೋರಿಸಬಹುದು.

ರೈಲು ಗಾಲಿ ಕಾರ್ಖಾನೆ ತಂಡ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲು ಗಾಲಿ ಕಾರ್ಖಾನೆ ಕ್ರೀಡಾ ಅಸೋಸಿಯೇಶನ್ ತಂಡವು ಕೆಎಸ್‌ಸಿಎ ಗುಂಪು 2, ಡಿವಿಷನ್ -1ರ ಲೀಗ್ ಕಮ್ ನಾಕೌಟ್ ಟಿ20 ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಬುಧವಾರ 50 ರನ್‌ಗಳಿಂದ ಕೆನರಾ ಬ್ಯಾಂಕ್ ತಂಡವನ್ನು ಮಣಿಸಿ, ಚಾಂಪಿಯನ್ ಆಗಿ ಹೊರಹೊಮ್ಮಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ರೈಲು ಗಾಲಿ ಕಾರ್ಖಾನೆ ತಂಡವು ನಿಗದಿತ ಓವರ್‌ಗಳಲ್ಲಿ 7 ವಿಕೆಟ್‌ಗೆ 182 ರನ್ ಪೇರಿಸಿತು. ಜಾಸ್ಪರ್ ಇ.ಜೆ. 51 ಎಸೆತಗಳಲ್ಲಿ ಅಜೇಯ 93 ರನ್ ಸಿಡಿಸಿದರು. ಅವರ ಇನಿಂಗ್ಸ್‌ನಲ್ಲಿ 7 ಬೌಂಡರಿ ಹಾಗೂ 5 ಸಿಕ್ಸರ್‌ಗಳಿದ್ದವು. ಆಲ್‌ರೌಂಡರ್ ಅಕ್ಷಯ್ ಸಿ.ಕೆ. 43 ರನ್ ಗಳಿಸಿದರು.

ಸವಾಲಿನ ಗುರಿ ಬೆನ್ನಟ್ಟಿದ ಕೆನರಾ ಬ್ಯಾಂಕ್ ತಂಡವು ಅಕ್ಷಯ್ (13ಕ್ಕೆ4) ಹಾಗೂ ಸಯ್ಯದ್ ಖಾಜಾ ಮೊಯಿನುದ್ದೀನ್ (11ಕ್ಕೆ3) ಅವರ ಪರಿಣಾಮಕಾರಿ ಬೌಲಿಂಗ್ ಎದುರು 19.1 ಓವರ್‌ಗಳಲ್ಲಿ 132 ರನ್‌ಗಳಿಗೆ ಸರ್ವಪತನವಾಯಿತು. ಕೃಷವ್ ಸೋಮಸುಂದರ್ (56; 44ಎ) ಹೊರತುಪಡಿಸಿ ಉಳಿದ ಬ್ಯಾಟರ್‌ಗಳು ವಿಫಲರಾದರು.

ಸಂಕ್ಷಿಪ್ತ ಸ್ಕೋರು: ರೈಲು ಗಾಲಿ ಕಾರ್ಖಾನೆ ಕ್ರೀಡಾ ಅಸೋಸಿಯೇಶನ್: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 182 (ಜಾಸ್ಪರ್ ಇ.ಜೆ. ಔಟಾಗದೇ 93, ಅಕ್ಷಯ್ ಸಿ.ಕೆ. 43; ನವೀನ್ ಎಂ.ಜಿ. 37ಕ್ಕೆ2, ಲವಿಶ್ ಕೌಶಲ್ 46ಕ್ಕೆ2). ಕೆನರಾ ಬ್ಯಾಂಕ್: 19.1 ಓವರ್‌ಗಳಲ್ಲಿ 132 (ಕೃಷವ್ ಸೋಮಸುಂದರ್ 56; ಅಕ್ಷಯ್ ಸಿ.ಕೆ. 13ಕ್ಕೆ4, ಎಸ್.ಕೆ. ಮೊಯಿನುದ್ದೀನ್ 11ಕ್ಕೆ3, ಮನ್ವಂತ್ ಕುಮಾರ್ ಎಲ್. 17ಕ್ಕೆ2).

ಕುಣಿಗಲ್‌ಗೆ ಬಿಟಿಸಿ ಸ್ಥಳಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೃದಯಭಾಗದಲ್ಲಿರುವ ಬೆಂಗಳೂರು ಟರ್ಫ್ ಕ್ಲಬ್ 70 ಕಿ.ಮೀ ದೂರದ ಕುಣಿಗಲ್‌ಗೆ ಸ್ಥಳಾಂತರಗೊಳ್ಳಲಿದೆ. ಹೊಸ ಜಾಗದಲ್ಲಿ ರೇಸ್ ಟ್ರ್ಯಾಕ್ ವಿನ್ಯಾಸಗೊಳಿಸಲು ಇಂಗ್ಲೆಂಡ್ ದೇಶದ ವಿಶ್ವಪ್ರಸಿದ್ಧ 'ಜಾಕಿ ಕ್ಲಬ್' ಒಲವು ತೋರಿದೆ.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಬಿಟಿಸಿ ಅಧ್ಯಕ್ಷ ಎಲ್. ಶಿವಶಂಕರ್, 'ರಾಜ್ಯ ಸರ್ಕಾರವು ಒಟ್ಟು 118 ಎಕರೆ ಜಮೀನನ್ನು ಬಿಟಿಸಿಗೆ ನೀಡಲಿದೆ. ಮುಂದಿನ ಎರಡು ವರ್ಷಗಳಲ್ಲಿ ಕ್ಲಬ್ ಸ್ಥಳಾಂತರಕ್ಕೆ ಸಿದ್ಧತೆಗಳು ನಡೆದಿವೆ. ಕುಣಿಗಲ್‌ನಲ್ಲಿ ಹೆಚ್ಚುವರಿಯಾಗಿ ನಾಲ್ಕು ಎಕರೆ ಜಮೀನು ನೀಡುವಂತೆಯೂ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದ್ದೇವೆ' ಎಂದರು.

ಈ ಸಂದರ್ಭದಲ್ಲಿ ಹಾಜರಿದ್ದ ಬಿಟಿಸಿ ಮಾಜಿ ಅಧ್ಯಕ್ಷ ಮತ್ತು ವ್ಯವಸ್ಥಾಪನ ಸಮಿತಿ ಸದಸ್ಯ ಉದಯ್ ಕೆ. ಈಶ್ವರನ್, 'ಇಂಗ್ಲೆಂಡ್‌ನ ಜಾಕಿ ಕ್ಲಬ್ ಅಧ್ಯಕ್ಷರು, ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಮತ್ತು ಇನ್ನುಳಿದ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿದ್ದೇವೆ. ಅವರು ಉಚಿತವಾಗಿ ಟ್ರ್ಯಾಕ್ ಪ್ರೊ ಬೊನೊ ವಿನ್ಯಾಸಗೊಳಿಸಿಕೊಡುವುದಾಗಿ ಹೇಳಿದ್ದಾರೆ' ಎಂದರು.

'ಕುಣಿಗಲ್‌ನಲ್ಲಿ ಟಿಪ್ಪು ಸುಲ್ತಾನ್ ಕಾಲದಲ್ಲಿ ಕುದುರೆ ತಳಿ ಅಭಿವೃದ್ಧಿ ಆರಂಭಿಸಲಾಯಿತು. ಈ ಊರಿನಲ್ಲಿ ಕುದುರೆಗಳ ತಳಿ ಸಂವರ್ಧನೆ, ತರಬೇತಿ ಮತ್ತು ಓಟಕ್ಕೆ ಪೂರಕವಾದ ಮಣ್ಣಿನ ರಚನೆ ಇದೆ' ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿದ್ದ ಸ್ಟೀವರ್ಡ್ ಶಂಕರ್ ಬಾಲು, 'ನೂತನ ಕಟ್ಟಡದ ಅಂದಾಜು ವೆಚ್ಚ ₹350-500 ಕೋಟಿ ಆಗಬಹುದು. ಅಲ್ಲಿ ಸಣ್ಣ ಗ್ರ್ಯಾಂಡ್‌ಸ್ಟ್ಯಾಂಡ್ ನಿರ್ಮಿಸಬಹುದು. ಆದ್ದರಿಂದ ನಾವು ನೋಡುತ್ತಿರುವ ಈ ಆರಂಭಿಕ ಅಂದಾಜುಗಳು ಆರಂಭದಲ್ಲಿ ಗಮನಾರ್ಹವಾಗಿ ಕಡಿಮೆಯಿರುತ್ತವೆ. ಹಂತಹಂತವಾಗಿ ಸೌಲಭ್ಯಗಳನ್ನು ವಿಸ್ತರಿಸುತ್ತ ಹೋಗಬಹುದಾಗಿದೆ' ಎಂದರು.

ನಾಳೆಯಿಂದ ಬೇಸಿಗೆ ರೇಸ್

ಬೆಂಗಳೂರು: ಗ್ಲಾಂಡರ್ಸ್ ಸಾಂಕ್ರಾಮಿಕ ರೋಗದ ಭಯ ದೂರವಾಗಿದ್ದು, ಬೆಂಗಳೂರು ರೇಸ್ ಕ್ಲಬ್‌ನಲ್ಲಿ ಮತ್ತೆ ಚಟುವಟಿಕೆಗಳು ಗರಿಗೆದರುತ್ತಿವೆ. ಶುಕ್ರವಾರ (ಮೇ 1)ದಿಂದ ಬೇಸಿಗೆ ರೇಸ್‌ಗಳು ಆರಂಭವಾಗಲಿದೆ. ಪ್ರಸಕ್ತ ಋತುವಿನಲ್ಲಿ ಒಟ್ಟು 28 ರೇಸ್ ದಿನಗಳನ್ನು ಏರ್ಪಡಿಸಲಾಗಿದೆ. ಕೊನೆಯ ರೇಸ್ ದಿನ ಜುಲೈ 31ರಂದು ಮುಕ್ತಾಯಗೊಳ್ಳಲಿದೆ ಎಂದು ಬಿಟಿಸಿ ಅಧ್ಯಕ್ಷ ಎಲ್.ಶಿವಶಂಕರ್ ಹೇಳಿದರು.



ಶಿವಶಂಕರ್

'ಝುವಾರೆ ಎಸ್. ಪೂನಾವಾಲ ಅವರ ಪ್ರಾಯೋಜಕತ್ವದ ಮತ್ತು ಬಿಟಿಸಿ ಕೊಡುಗೆ ಸೇರಿದಂತೆ ಡರ್ಬಿ ರೇಸ್ ಬಹುಮಾನದ ಮೊತ್ತ ₹5 ಕೋಟಿ ಇರಲಿದೆ. ಇದು ದೇಶದ ಡರ್ಬಿ ರೇಸ್‌ನಲ್ಲಿ ದಾಖಲೆಯ ಬಹುಮಾನದ ಮೊತ್ತವಾಗಿದೆ. ಝುವಾರೆ ಎಸ್ ಪೂನಾವಾಲ ಈ ಬೇಸಿಗೆ ರೇಸ್ ಮಾತ್ರವಲ್ಲದೆ ಮುಂದಿನ ಮೂರು ವರ್ಷಗಳ ಎಲ್ಲಾ ರೇಸ್ ಋತುವಿಗೆ ಪ್ರಾಯೋಜಕತ್ವ ನೀಡಲು ಸಿದ್ಧವಾಗಿದೆ' ಎಂದು ಶಿವಶಂಕರ್ ತಿಳಿಸಿದರು.

ಬೇಸಿಗೆ ಋತುವಿನ ಟ್ರೋಫಿಗಳು ಸೇರಿದಂತೆ ಒಟ್ಟು ಬಹುಮಾನದ ಮೊತ್ತವು ಸುಮಾರು ₹21.53 ಕೋಟಿ ಎಂದು ಅಂದಾಜಿಸಲಾಗಿದೆ. ಸುಮಾರು 634 ಕುದುರೆಗಳು ಈ ಬೇಸಿಗೆ ಋತುವಿನಲ್ಲಿ ಸ್ಪರ್ಧಿಸಲಿವೆ. ಡರ್ಬಿ ರೇಸ್ ಜುಲೈ 12ರಂದು ನಡೆಯಲಿದೆ.

ವೇಟ್‌ಲಿಫ್ಟಿಂಗ್: ಭಾರತಕ್ಕೆ ಮತ್ತೆ ನಾಲ್ಕು ಪದಕ

ನವದೆಹಲಿ (ಪಿಟಿಐ): ಭಾರತದ ಲಿಫ್ಟರ್‌ಗಳು, ಸಮೋವಾದ ಅಪಿಯಾದಲ್ಲಿ ನಡೆಯುತ್ತಿರುವ ಕಾಮನ್‌ವೆಲ್ತ್ ಯೂತ್, ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್ ಮತ್ತು ಯುನಿವರ್ಸಲ್ ಕಪ್ (ಸೀನಿಯರ್) ಕೂಟದಲ್ಲಿ ಸ್ಫೂರ್ತಿಯುತ ಪ್ರದರ್ಶನ ಮುಂದುವರಿಸಿದ್ದಾರೆ. ಮೂರನೇ ದಿನವಾದ ಬುಧವಾರ ಒಂದು ಚಿನ್ನ, ಮೂರು ಬೆಳ್ಳಿ ಪದಕಗಳನ್ನು ಗೆದ್ದುಕೊಂಡಿದ್ದಾರೆ.

ಬೆಲ್ಲಣ ಹಾರಿಕಾ ಅವರು ಕಾಮನ್‌ವೆಲ್ತ್ ಯೂತ್ ಮತ್ತು ಜೂನಿಯರ್ ಚಾಂಪಿಯನ್‌ಷಿಪ್ಸ್‌ನ 69 ಕೆ.ಜಿ. ತೂಕ ವಿಭಾಗದಲ್ಲಿ ಭಾರತಕ್ಕೆ ದಿನದ ಏಕೈಕ ಚಿನ್ನ ತಂದುಕೊಟ್ಟರು. ಅವರು ಸ್ನ್ಯಾಚ್‌ನಲ್ಲಿ 86 ಕೆ.ಜಿ., ಕ್ಲೀನ್ ಮತ್ತು ಜರ್ಕ್‌ನಲ್ಲಿ 111 ಕೆ.ಜಿ. ಸೇರಿದಂತೆ ಒಟ್ಟು 197 ಕೆ.ಜಿ. ತೂಕ ಎತ್ತಿದರು.

63 ಕೆ.ಜಿ. ವಿಭಾಗದಲ್ಲಿ ಕೆ.ತರಂಗಿಣಿ 179 ಕೆ.ಜಿ (79 + 100 ಕೆ.ಜಿ) ಮತ್ತು ಭೂಮಿಕಾ ಮೋಹಿತೆ ಒಟ್ಟು 195 ಕೆ.ಜಿ. (109 + 86 ಕೆ.ಜಿ) ತೂಕ ಎತ್ತಿ ಬೆಳ್ಳಿ ಪದಕಗಳನ್ನು ಗೆದ್ದುಕೊಂಡರು.

ಯುನಿವರ್ಸಲ್ ಕಪ್ ಟೂರ್ನಿಯಲ್ಲಿ ಅಭಿಷೇಕ್ ನಿಪಾಣೆ ಅವರು 88 ಕೆ.ಜಿ. ವಿಭಾಗದಲ್ಲಿ ಒಟ್ಟು 324 ಕೆ.ಜಿ. (140 + 184 ಕೆ.ಜಿ) ಬೆಳ್ಳಿ ಗೆದ್ದರು.

ಎರಡನೇ ದಿನ ಭಾರತ ನಾಲ್ಕು ಚಿನ್ನದ ಪದಕಗಳನ್ನು ಗಳಿಸಿತ್ತು.